EDITED AND PUBLISHED

Srimati Tirumalamba

AT THE

HITHAISHINI MATRU MANDIRAM,

NANJANGUD.

First Edition 1,000 Copies

Printed at the
CAXTON PRESS BRANCH,
Bangalore City.

1917

PRICE 1-4-0

ಶ್ರೀಯೈನ್ಮ



"ಉಲ್ಲಾ ಸಪಲ್ಲವಿತಪಾಲಿತ ಸಪ್ತಲೋಕೀ |
ನಿರ್ವಾಹಕೋರಕಿತನೇಮ ಕಟಾಕ್ಷಲೀಲಾಮ್ |
ಶ್ರೀರಂಗಹರ್ಮ್ಯತಲಮಂಗಳದೀಪರೇಖಾಮ್|
ಶ್ರೀರಂಗರಾಜಮಹಿಷೀಂ ಶ್ರಿಯಮಾಶ್ರಯಾಮಃ || "

|| ಶ್ರೀಃ ||

|| ಶ್ರೀ ಲಕ್ಷ್ಮೀ ಸಮೇತ ಶ್ರೀ ವೆಂಕಟೇಶ ಪ್ರಸನ್ನ ||

ಸಮರ್ಪಣೆ

ನನ್ನ

ಪೂಜ್ಯಪಾದರೂ, ಇತಿಕರ್ತವ್ಯತಾಜ್ಞಾನಲಾಭಕ್ಕೆ ಮುಖ್ಯಮಾರ್ಗದರ್ಶಕರೂ, ಪುತ್ರವತ್ಸಲರೂ,
ಆಶ್ರಿತಪಾಲನದಲ್ಲಿ ಬದ್ಧಕಂಕಣರೂ, ಪರಮಗುರುಗಳೂ ಆಗಿರುವ

ನನ್ನ

ಮಾತಾಪಿತೃದೇವರ ಚರಣಾರವಿಂದಗಳಲ್ಲಿ ; ಅವರ ಘನತರವಾದ ಆಶೀರ್ವಾದವನ್ನು ಹೊಂದಿ.

ಈ


“ ಪೂರ್ಣಕಲಾ ”

ನಾಮಕಗ್ರಂಥವನ್ನು

ಭಕ್ತಿಭಾವದಿಂದ ಅಂಕಿತಗೊಳಿಸಿ ಪ್ರಕಟಪಡಿಸಿರುವೆನು.

(ಗ್ರಂಥಕರ್ತ್ರಿ)

ಶ್ರೀಯುಕ್ತ ವೆಂಕಟಕೃಷ್ಣಯ್ಯಂಗಾರ್ಯರು, ಪ್ಲೀಡರ್.



(ನಂದಿನೀ ಕರ್ತ್ರಿಯ ಪೂಜ್ಯ ಪಿತೃದೇವರು, ಸಹಜಾತರು.)

ಶ್ರೀ|| ಸೌ|| ಲಕ್ಷ್ಮೀ ಅಮ್ಮನವರು.



(ನಂದಿನೀ ಕರ್ತ್ರಿಯ ಪೂಜ್ಯಮಾತೆಯವರು)

ಶ್ರೀ

ಶ್ರಿಯೈನಮಃ.

ಸತೀಹಿತೈಷಿಣೀ ಗ್ರಂಥಮಾಲಾ

(ತ್ರೈಮಾಸಿಕ)

"ಸ್ತೋತಾರಂ ತಮುಶಂತಿ ದೇವಿ ಕವಯೋ ಯೋ ವಿಸ್ತೃಣೀತೇ ಗುಣಾನ್ |
ಸ್ತೋತವ್ಯಸ್ಯ ತತಶ್ಚತೇ ಸ್ತುತಿಧುರಾ ತ್ವಯ್ಯೇವ ವಿಶ್ರಾಮ್ಯತಿ ||
ಯಸ್ಮಾದಸ್ಮದ ಮರ್ಷಣೀಯ ಫಣಿತಿ ಸ್ವೀಕಾರ ತಸ್ತೇ ಗುಣಾಃ |
ಕ್ಷಾಂತ್ಯೌದಾರ್ಯ ದಯಾ ದಯೋ ಭಗವತಿ ಸ್ತಾಂಪ್ರಸ್ನುವೀರನ್
[ಪ್ರಥಾನ್ ||"

ಸಂಪುಟ ೩] ನಳ ಸಂ—ಮಾರ್ಗಶಿರ [ಸಂಚಿಕೆ ೨

ಸವಿನಯ ನಿವೇದನ.

ವಿಶ್ವಸನೀಯರಾದ ಭಗಿನೀ ಬಾಂಧವರೇ !

"ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಉಕ್ತಿಯನ್ನು ಸಾರ್ಥಕಪಡಿಸಬೇಕೆಂದು, ಹಿತೈಷಿಣಿಯ ಪ್ರಯತ್ನ-ಉದ್ದೇಶಗಳನ್ನು ವಿಫಲಗೊಳಿಸಲು ಬಹುಮಂದಿ ವಿಘ್ನಪತಿಗಳು ಮುಂದೆ ಬಂದು ಹಲವು ಕಂಟಕಗಳನ್ನು ತಂದೊಡ್ಡಿ, ತಮ್ಮ ತಮ್ಮ ಶಕ್ತಿಗಳೆಲ್ಲವನ್ನೂ ಪ್ರದರ್ಶಿಸಿ, ಆರ್ಭಟಿಸಿ ಕಲಂಕವನ್ನು ಚಿಂತಿಸಿ, ದೋಷವನ್ನು ಆರೋಪಿಸಿ, ಸಂಶಯರೋಗಕ್ಕೆ ಪಕ್ಕಾಗಿ, ತಮ್ಮ ಅಮೋಘವಾದ ಕಾಲಧನವೆಲ್ಲವನ್ನೂ ಜನಸಮುದಾಯದಲ್ಲಿ ಹಿತೈಷಿಣಿಯ ವಿಷಯವಾದ ಅನಾದರ ಭಾವವನ್ನು ಹುಟ್ಟಿಸಬೇಕೆಂಬ ಅಸಾಧ್ಯ ಪ್ರಯತ್ನದಲ್ಲಿ ವಿನಿಯೋಗಿಸಿದರು. ಅವುಗಳೆಲ್ಲವನ್ನೂ ದಾಟಿ ಬರಲು ಸಾಕು-ಸಾಕೆಂದು ಬೇಸತ್ತಿಳಾದರೂ ಹಿತೈಷಿ

ಣೆಯು ತನ್ನ ಸಂಕಲ್ಪಿತ ಕಾರ್ಯವು ಭಂಗವಾಗಬಾರದೆಂದು ಭಾವಿಸಿ,– "ಪ್ರಾರಭ್ಯತೇ ನ ಖಲು ವಿಘ್ನಭಯೇನ ನೀಚೈಃ । ಪ್ರಾರಭ್ಯ ವಿಘ್ನ ವಿಹತಾ ವಿರಮಂತಿ ಮಧ್ಯಾಃ ॥ ವಿಘ್ನೈಃ ಸಹಸ್ರ ಗುಣಿತೈರಪಿ ಹನ್ಯಮಾನಾಃ । ಪ್ರಾರಬ್ಧ ಮುತ್ತಮಜನಾ ನಪರಿತ್ಯಜಂತಿ ॥" ಎಂಬ ನೀತಿಯನ್ನು ನೆನಪಿನಲ್ಲಿಟ್ಟು ಆರ್ಯಮಹನೀಯರ ಮಾರ್ಗವನ್ನು ಯತ್ಕಿಂಚಿತ್ತಾದರೂ ಅನುಸರಿಸಬೇಕೆಂದು ಭಾವಿಸಿ, ಮುಂದರಿದುದಾಯಿತು. ಸದ್ಗುರು ಸಹಾಯವು ಚನ್ನಾಗಿದ್ದುದರಿಂದ ವಿಘ್ನಗಳೆಲ್ಲವೂ ನಿವಾರಣವಾಗಿ, ನಿರ್ದಿಷ್ಟ ಫಲವನ್ನು ಕಾಣುವಂತಾಯಿತು.

ಆದರೆ, ಚಂದ್ರವದನೆಯಲ್ಲಿ ಹೇಳಿದ್ದಂತೆ ಪೂರ್ಣಕಲೆಯನ್ನು ಚಂದ್ರವದನೆಯಷ್ಟೇ ನಿಲ್ಲಿಸಲಾಗದೆ, ಪೂರ್ಣಪುಸ್ತಕವಾಗಿ ಮಾಡಬೇಕಾಯಿತು. ಕಾಗದಕ್ಕೆ ಕ್ಷಾಮವುಂಟಾಗಿರುವುದರಿಂದ ಇದರ ಉಪಯೋಗಕ್ಕೂ ಇದರಲ್ಲಿರುವ ನಾಲ್ಕಾರು ಭಾವಚಿತ್ರಗಳಿಗೂ ಇದರ ಪುಟಸಂಖ್ಯೆಗೂ ತಕ್ಕಂತೆ ಬೆಲೆಯನ್ನು ೧—೪—೦ ಕ್ಕೆ ಏರಿಸಬೇಕಾಯಿತು. ಇನ್ನು ಮುಂದಿನ ಪುಸ್ತಕಗಳೂ,–ಎಂದರೆ "ವಿದ್ಯಾವಿನೋದ, ಬ್ರಹ್ಮಚಾರಿಣೀ" ಗಳು ಕೂಡ ಹೀಗೆಯೇ ವಿಸ್ತೃತಗ್ರಂಥಗಳಾಗಿ ಹೊರಬೀಳುವುವು. ಭಗವತ್ಕೃಪೆಯಿದ್ದರೆ ಆವೆರಡು ಗ್ರಂಥಗಳೂ ಮಾರ್ಗಶಿರ–ಪುಷ್ಯಮಾಸದೊಳಗಾಗಿ ಹೊರಬೀಳುವುದೆಂದು ನಂಬಿರುವೆವು. ಮತ್ತು ಕಾಗದದ ಕ್ಷಾಮವು ಇಳಿದು ಸುಸ್ಥಿತಿಗೆ ಬರುವವರೆಗೆ, ನಮ್ಮ ಚಂದಾದಾರರಿಗೂ ಪುಸ್ತಕಗಳನ್ನು ಸಾಮಾನ್ಯಕ್ರಯಕ್ಕೆ ಕೊಡುವಂತೆಯೂ ಪ್ರತಿಯೊಂದು ಗ್ರಂಥಕ್ಕೂ ಚಂದಾದಾರರಿಗೆ ಮಾತ್ರ ನಾಲ್ಕಾಣೆಗೆ ಕಡಮೆಯಿಲ್ಲದ ಬಹುಮಾನ ಪುಸ್ತಕಗಳನ್ನೂ ಹಂಚುವಂತೆಯೂ ನಿಶ್ಚಯಿಸಿರುವೆವು.

ಈ ಪೂರ್ಣಕಲೆಯ ಮುದ್ರಣಕ್ಕೆ ಪ್ರಾರಂಭವಾದುದು ಮೊದಲು ಗ್ರಂಥಕರ್ತ್ರಿಗೂ, ಮುದ್ರಾಪಕರಿಗೂ ಉಂಟಾದ ಅನೇಕ ವಿಧವಾದ ಅನನುಕೂಲತೆಗಳಿಂದ ಗ್ರಂಥದಲ್ಲಿ ಅನೇಕ ತಪ್ಪುಗಳು ಬಿದ್ದು ಹೋಗಿದೆ

ಯಾಗಿ-ವಾಚಕರ ಅನುಕೂಲಕ್ಕಾಗಿ ಶುದ್ಧಾಶುದ್ಧವನ್ನು ಕೊಟ್ಟಿದೆ. ಅದರಲ್ಲಿ ಬಿಟ್ಟುಹೋಗಿರುವ ದೋಷಗಳನ್ನು ನಮ್ಮ ಸುಹೃದ್ಬಾಂಧವರೇ ಕ್ರಮಪಡಿಸಿ ಓದಿಕೊಳ್ಳಬೇಕಾಗುವದೆಂದು ಸೂಚಿಸುವೆವು.

ಕೇವಲ ಗುರುಕುಲವಾಸ, ಇಂದಿಯನಿಗ್ರಹ, ಬ್ರಹ್ಮಚರ್ಯೆ, ವಿದ್ಯಾಭ್ಯಾಸಗಳ ವಿಚಾರವನ್ನೇ ಪ್ರತಿಪಾದಿಸುತ್ತಿರುವ ಈ ಗ್ರಂಥವು ನಮ್ಮ ವಾಚಕವರ್ಗಕ್ಕೆ ಎಂತಹ ಅಭಿಪ್ರಾಯವನ್ನು ಕೊಡುತ್ತಿರುವುದೋ ತಿಳಿಯಬೇಕಾಗಿದೆ. ಏಕೆಂದರೆ, ಇದರಿಂದ ಸದಭಿಪ್ರಾಯವು ತೋರದೆ ದುರಭಿಪ್ರಾಯವೇ ಉಂಟಾಗುವುದಾದರೆ ಹಿತೈಷಿಣಿಯು ವಿಶ್ರಾಂತಿ ಸುಖವನ್ನನುಭವಿಸಬೇಕಾಗುವುದು. ಹಾಗಾದರೆ, ಹಿತೈಷಿಣಿಯ ಈವರೆಗಿನ ಒಂಭತ್ತು ಪುಸ್ತಕಗಳಲ್ಲಿ ಒಂದೂ ಬಿಡದೆ ಎಲ್ಲವೂ ಮೈಸೂರು-ಮದ್ರಾಸು-ಧಾರವಾಡದ ವಿದ್ಯಾಖಾತೆಯವರಿಂದ ಪಾಠ ಪುಸ್ತಕಗಳಾಗಿಯೂ, ಬಹುಮಾನ ಪುಸ್ತಕಗಳಾಗಿಯೂ, ಏರ್ಪಟ್ಟಿರುವಂತೆ ಇದೂ ಕೂಡ, ಅವರಿಗೆ ಸಂಗ್ರಾಹ್ಯವಾಗಿ ಕಂಡು ಬಂದು ಸ್ವೀಕರಿಸುವುದಾದರೆ ಆಗ ಗ್ರಂಥದ ಉದ್ದೇಶವೂ-ಲೇಖನ ಪರಿಶ್ರಮವೂ ಸಾರ್ಥಕವಾಗುವದರಲ್ಲಿ ಅಡ್ಡಿಯಿಲ್ಲ.

ಇರಲಿ, ಪ್ರಕೃತದಲ್ಲಿ ಈ ವಿಚಾರವಿಷ್ಟಕ್ಕೆ ನಿಲ್ಲಿಸಿ,-ನಮ್ಮ ಈ ಗ್ರಂಥ ಪ್ರಚಾರಕ್ಕೆ ಅತ್ಯಂತ ಸಹಾಯವನ್ನು ಮಾಡಿದ ಕ್ಯಾಕ್ಸ್ಟನ್ ಪ್ರೆಸ್ಸಿನವರಿಗೂ ಬ್ಲಾಕುಗಳನ್ನು ತಯಾರಿಸಿ ಸಕಾಲದಲ್ಲಿ ಒದಗಿಸಿಕೊಟ್ಟ ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನವರಿಗೂ, ಮದ್ರಾಸು ಗ್ರಾಫ್ ಟೋನ್ ಕಂಪೆನಿಯವರಿಗೂ, ಮತ್ತು ನಮಗೆ ಆಡಿಗಡಿಗೆ ಪ್ರೋತ್ಸಾಹವನ್ನುಂಟುಮಾಡಿದ ಸುಹೃದರಿಗೂ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಒಪ್ಪಿಸಿ, ಅವರೆಲ್ಲರಿಗೂ ಹೀಗೆಯೇ ಮುಂದೆಯೂ-ಹಿತೈಷಿಣೀ ನಂದಿನಿಯರ ವಿಷಯದಲ್ಲಿ ಸಹಜ ಸೌಹಾರ್ದಭಾವ

ದಿಂದ ಸಹಕರಿಸುತ್ತಿರುವಂತೆ ಭಗವತಿಯು ಅನುಗ್ರಹಿಸಲೆಂದು ಪ್ರಾರ್ಥಿಸಿ, ಮೇಲ್ಕಂಡವರ ನಿರಂತರ ಶ್ರೇಯೋಭಿವೃದ್ಧಿ ಚಿಂತನೆಯನ್ನು ಮಾಡುತ್ತಿರುವೆವೆಂದು ನಿವೇದಿಸಿ,-ನಮ್ಮೀ ಲೇಖನದಲ್ಲಿರಬಹುದಾದ ಮರ್ಯಾದಾತಿಕ್ರಮಣ ದೋಷಕ್ಕೆ ವಾಚಕರಲ್ಲಿ ಕ್ಷಮೆಯನ್ನು ಕೋರಿ, ಮುಂದಿನ ನಮ್ಮ ಮಾರ್ಗವನ್ನು ಸುರಕ್ಷಿತವಾಗಿ ಮಾಡೆಂದು ಮಾತೃದೈವದಲ್ಲಿ ಪ್ರಾರ್ಥಿಸುತ್ತ ಸದ್ಯಕ್ಕೆ ಲೇಖನಿಯನ್ನು ಪೆಟ್ಟಿಗೆಯಲ್ಲಿರಿಸುವೆವು.

ಇತಿ ಹಿತೈಷಿಣೀ.

ಅಸಾಧು ಸಾಧು ಪತ್ರಂ

(ಅರ್ಥವ್ಯತ್ಯಾಸವಾಗುವ ಮತ್ತು ಸ್ಥಳಪಲ್ಲಟವಾಗಿರುವ ದೋಷಗಳನ್ನು ಮಾತ್ರವೇ ಇಲ್ಲಿ ತೋರಿಸಿದೆ. ಇನ್ನು ಅಲ್ಲಲ್ಲಿ ಬಿಟ್ಟುಹೋಗಿರುವ ವಿರಾಮಚಿಹ್ನೆ, ಆಶ್ಚರ್ಯಚಿಹ್ನೆ, ಪ್ರಶ್ನಾರ್ಥಕಚಿಹ್ನೆ, ಆವರಣಚಿಹ್ನೆ-ಇತ್ಯಾದಿ ದೋಷಗಳನ್ನು ವಾಚಕರೇ ಸರಿಪಡಿಸಿಕೊಂಡು ಓದಬೇಕೆಂದೂ, ದ್ವಿತೀಯಮುದ್ರಣದಲ್ಲಿ ಸರಿಪಡಿಸಿಕೊಳ್ಳುವೆವೆಂದೂ ನಿವೇದಿಸಿದೆ—)

ಪುಟ	ಪಙ್ಕ್ತಿ	ಅಸಾಧು	ಸಾಧು
೧೧	೧	ದುಃಖ್ಖ	ದುಃಖ
೧೧	೨	ಸಾಕಾ!	ಸಾಕ್ಷಾ
೧೨	೧೩	ರಕ್ತಾಂಕ್ಷಿಯಲ್ಲಿ	ರಕ್ತಾಕ್ಷಿಯಲ್ಲಿ!
೧೫	೧೧	ಆದ್ಯನಂತ	ಆದ್ಯಂತ
೧೮	೧೬	ತಲೆದೋಗಿ	ತಲೆದೂಗಿ
೨೦	೧೭	ಏನನ್ನಾದರೂ ಕಳು ಹಿರುವಳೆ ?	ಏನನ್ನಾದರೂ ಹೇಳಿ ಕಳುಹಿರುವಳೆ ?
೩೮	೨	ಜ್ಞಾನಾಧಿದೇವಿ	ಜ್ಞಾನಾಧಿದೇವೀ
೪೦	೯	ಮಲಗಿದಳು	ಮಲಗಿದ್ದಳು.
೪೩	೨೩	ಮುಖ	ಮುಖ್ಯ
,	೨೪	ಶ್ರವ	ಶ್ರಮ

ಪುಟ	ಪಙ್ಕ್ತಿ	ಅಸಾಧು	ಸಾಧು
೪೪	೧೬	ಕೌತುಕದಿಂದು	ಕೌತುಕದಿಂದ
೪೬	೨೨	ಅವನಾರೆಂದರೇ	ಅವನಾರೆಂದರೆ,
೪೮	೨೨	ಮಾಡುವನ	ಮಾಡುವವ
೪೯	೧	ಆತಂಕು	ಆತಂಕ
,,	೧೧	ನಾನಿನು	ನಾನಿನ್ನು
೫೩	೬	ನೋಡ	ನೋಡು
೫೮	೨	ಕೆಡಿಸಿಕೊಳು	ಕೆಡಿಸಿಕೊಳ್ಳು
,,	೩	ಆತ್ಮಾನಂದ್ಧ	ಆತ್ಮಾನಂದ
೬೭	೧೭	ಒಬ್ಬೊಬ್ಬರ	ಒಬ್ಬೊಬ್ಬರು
೬೮	೨	ಸ್ವದೇಶವಾತ್ಸಲನಾ	ಸ್ವದೇಶವಾತ್ಸಲ್ಯ
೭೨	೩	ನಾವೀನು	ನಾವೇನು
೭೪	೧	ಆ ಆತಂತ	ಆತಂಕ
೮೫	೩	ಪೂರ್ಣಕಲಾ	(ಇದನ್ನು ಬಿಟ್ಟುಬಿಡಬೇಕು)
೮೬	೧೨	ಸಾದರಾಥಿತ್ಯಕ್ಕೆ	ಸಾದರಾತಿಥ್ಯಕ್ಕೆ
೮೭	೧೩	ಕಲಾಭ್ಯರ್ತಿ	ಕಲಾಭ್ಯರ್ಥಿ
೮೮	೧೦	ವಿಚಾರದಲ್ಲ	ವಿಚಾರದಲ್ಲಿ
೯೦	೧೭	ದಿದ್ದನಲ್ಲವೆ	ದಿದ್ದನಲ್ಲದೆ
,,	೧೮	ಆತಸು	ಆತನು
೯೨	(ಅಡಿಟಿಪ್ಪಣಿ ಸಾಲು ೬)	ಸುಖಾನು ಭವನ್ನು	ಸುಖಾನುಭವವನ್ನು

೯೮ ೧೫ನೇ ಸಾಲಿನ "ತಳ್ಳಬೇಕೆಂಬುದೋ?" ಎಂಬವಾಕ್ಯಕ್ಕೆಮುಂದೆ,

ಮುಂದಿನ ಸಾಲಿನಲ್ಲಿರುವ—"ಅವರಿಗೆ ಈಗ ಸಲ್ಲುತ್ತಿರುವ ಅಧಿಕರವನ್ನು ಕೀಳಬೇಕೆಂಬುದೋ? ಎಂಬಿಷ್ಟುವಾಕ್ಯವನ್ನು ಸೇರಿಸಿಕೊಳ್ಳಬೇಕು.

೯೯	೨೩	ಸಧವೆಯಾಗಿರುವ	ಸಧವೆಯರಾಗಿರುವ

ಪುಟ	ಪಙ್ಕ್ತಿ	ಅಸಾಧು	ಸಾಧು
೧೦೦	೧	ನಿರ್ಲಜತಿ	ನಿರ್ಲಜ್ಜೆ
,,	೧೪	ಸತಿ	ಪತಿ
೧೦೨	೧	ಹೊಳಿದ	ಹೊಳೆದ
೧೦೪	೬	ಷಷ್ಟ	ಷಷ್ಠ
೧೧೧	೮	ಕಾತುಕವೇಕು	ಕಾತುಕವೇಕೆ
,,	೯	ನಾನ ?	ನಾನು
,,	೧೫	ಆಗ್ರಹ	ಆಗ್ರಹ
,,	೧೭	ಸಾಫಲ್ಯ	ಫಲ
೧೧೨	೯	ಮರ್ವಾಂಶಿಕ	ಮರ್ಮಾಂತಿಕ
೧೧೬	೧೦	ರ್ಬಂಧ	ನಿರ್ಬಂಧ
೧೧೯	೩	ನಾನಿದೆಲ್ಲವನೂ	ನಾನಿದೆಲ್ಲವನ್ನೂ
೧೨೦	೧೦	ಕಲ್ಯಾಣವಮ್ನು	ಕಲ್ಯಾಣವನ್ನು
೧೨೬	೨೨	ಮಧು—	ಕುಮುದಮಿತ್ರ
೧೨೭	೧೮	ಹಿಂತೆಗೆಯ:ುತ್ತೇನೆಂದ	ಹಿಂತೆಗೆಯುತ್ತೇನೆಂದುಸ
೧೪೧	೧೬	ಹೊಂದಿದರೆಂದು	ಹೊಂದಿದಿರೆಂದು
೧೪೩	೨೨	ವಿತ್ರಾಂತಿ	ವಿಶ್ರಾಂತಿ
೧೪೭	೧೦–೧೧	ಜಾಗ–ೂಕ	ಜಾಗ–ರೂಕ
೧೪೮	೯	ಮಾಣವಾದ	ಮಾಣವಾಗಿ
,,	೧೧	ಅಥವಾ	ಅಥವಾ
೧೪೯	೩	ಆಶಿಸುತ್ತೇನೆ	ಆಶಿಸುತ್ತೇವೆ
೧೫೦	೧೪	ನಿರೀಕ್ಷಿಗೆ	ನಿರೀಕ್ಷೆಗೆ
೧೫೧	೧೪	ಮನಸ್ಸಮಾಧಾನಮಾಡು	ಮನಸ್ಸಮಾಧಾನವಾಗು
೧೫೨	೨೬	ಪೂರ್ಣಮಾ	" ಪೂರ್ಣಕಲಾ "
೧೫೩	೧೫	ತಿರುಗಿದಿತು	ತಿರುಗಿದ್ದಿತು.
೧೫೭	೧೮	ಶಾತಿನಿಕೇತನ	ಶಾಂತಿನಿಕೇತನ
೧೫೨	೨೦	ಕು. — ಮಿ. —	ಕುಮುದೆ
೧೬೪	೧	ಮಧುಮಿತ	ಮಧುಮಿತ್ರ

ಪುಟ	ಪಙ್ಕ್ತಿ	ಅಸಾಧು	ಸಾಧು
೧೬೬	೧೩	ಉಪಕು	ಉಪಕ್ಕೃ
೧೬೮	೧೫	ತಾರಾಕಾಂತನ್ನು	ತಾರಾಕಾಂತನು
೧೬೬	೧೯	ಭಾಷ್ಪವನ್ನು	ಬಾಷ್ಪವನ್ನು
೧೬೯	೧	ಶ್ಯಿಷರ	ಶಿಷ್ಯರ
೧೭೨	೨೦	ನಿಂತಿದ್ದನು	ಕುಳಿತಿದ್ದನು
೧೭೩	೧೧–೧೨	ಕಳಿತಿದ್ದನು	ಕುಳಿತಿದ್ದನು
೧೭೬	೮	ನೆನಗೆ	ನನಗೆ
೧೭೬	೧೬	ಇಬ	ಇಬ್ಬ
೧೭೬	೧೭	ವ್ಯಾಕಲ	ವ್ಯಾಕುಲ
೧೭೬	೨೩	ಪ್ರಭಾಕರನನ್ನು	ಪ್ರಭಾಕರರನ್ನು
೧೭೭	೧೪	ನ್ಯಾಯನಿಷುರ	ನ್ಯಾಯನಿಷ್ಠುರ
೧೮೧	೧೯	ಮಹಿಳೆಯರೆ	ಮಹಿಳೆಯರ
೧೮೬	೬	ಈ ನನ್ನ ಹಣವು	ಈ ನಿನ್ನ ಹಣವು
೧೮೭	೧೪	ಕರೆದೊಯು	ಕರೆದೊಯ್ಯು
೧೮೯	೭	ಅಭಿಸಂಪಾನ	ಅಭಿಸಂಧಾನ
೧೯೬	೨೩	ನಿನ	ನಿನ್ನ
೧೯೭	೮	ಅತುರದಿಂದ	ಆತುರದಿಂದ
೧೯೯	೧೨	ನಿನಗೆ ಉದ್ಧಾರ	ನೀನು ಉದ್ಧಾರ
೨೦೩	೧೨	ವಚನಭ್ರಷ್ಠ	ವಚನಭ್ರಷ್ಟ
೨೦೩	೧೪	ಭ್ರಷ್ಠತೆ	ಭ್ರಷ್ಟತೆ
೨೦೪	೩–೪	ಭ್ರಷ್ಠನಾಗ	ದಭ್ರಷ್ಟನಾಗದೆ
೨೧೮	೨೨	ಮಂಚದ ಮೇಲೆ	ಮಂಚದ ಮೇಲೇ
೨೨೨	೧೮	ಕಲಾಧವವರ	ಕಲಾಧವರ
೨೨೩	೨೫	ಜನ್ನನಲ್ಲಿಯೇ	ಜನ್ನದಲ್ಲಿಯೇ
೨೩೯	೨೧	ಅಕ್ಷಯಕ	ಅಕ್ಷಯರು

ಶ್ರೀ

ಪ್ರಸ್ತಾವನೆ.

ಸುಹೃದರೇ !

ಸದ್ಗುರು ಕೃಪೆಯಿಂದ "**ಪೂರ್ಣಕಲಾ**" ನಾಮಕ ಗ್ರಂಥ ಭಾಗದ ಲೇಖನಕ್ರಿಯೆಯು ಇಂದಿಗೆ ಸಾಂಗವೆನಿಸಿತು; ಮುಂದಿನ ಭಾಗವೂ ಕೂಡ, ಆ-ಗುರುವರರ ಪರಮಾನುಗ್ರಹದಿಂದ ತಕ್ಕಷ್ಟು ಜಾಗ್ರತೆಯಾಗಿ ಯೇ ಪೂರ್ಣವಾಗುವುದೆಂದು ನಂಬಿರುವೆನು.

ಈ ಗ್ರಂಥಲೇಖನಾರಂಭಕ್ಕೆ ಮೊದಲು, ಕೇವಲ ಕಾದಂಬರಿಯಾಗಿ ಹೊರಬೀಳುವಂತೆ ಯೋಚಿಸಿದ್ದಿತಾದರೂ, ಲೇಖನಾರಂಭವಾದ ಮೇಲೆ, "ಪೂರ್ಣಕಲಾ" ನಾಮದಿಂದ ಸಕಲ ಕಲ್ಯಾಣ ಗುಣನಿಲಯನಾದ ಪರ ಮಾತ್ಮನನ್ನು ತಿಳಿಯುವ ದಿವ್ಯಜ್ಞಾನಲಾಭಕ್ಕೆ ಸಾಧನರೂಪಗಳಾದ ಗುಣಗಳ ಸ್ವರೂಪ-ವರ್ತನ-ಸ್ವಭಾವಗಳನ್ನು ನಿರೂಪಿಸುವ ಪ್ರಬಂಧರೂ ಪವಾಗಿ ಗುರುಸನ್ನಿಧಾನದಲ್ಲಿ ಸಮರ್ಪಕವಾಗಿ ಪ್ರಚುರಿಸುವಂತೆ ಭಗವ ತ್ಪ್ರೇರಣೆಯಾದುದರಿಂದ, ಒಂದೊಂದು ಗುಣಭಾಗವನ್ನೂ ಒಂದೊಂದು ಪಾತ್ರರೂಪದ ಕಲೆಯಾಗಿಯೂ, ಆ ಕಲೆಗಳಲ್ಲಿ ಒಂದೊಂದರ ಸ್ವಭಾ ವವೂ ಬೇರೆಬೇರೆಯಾಗಿದ್ದು ಆತ್ಮೋನ್ನತಿಗೆ ಬೇಕಾದ ಸಹಾಯ ಸಂಪ ತ್ತಿಯನ್ನು ಒದಗಿಸುವ ರೀತಿಯನ್ನು ತೋರಿಸುವಂತೆಯೂ, ಆ ಗುಣಗ ಳನ್ನೆಲ್ಲಾ ವಶೀಭೂತವಾಗಿ ಮಾಡಿಕೊಳ್ಳುವ ಭಕ್ತಿ-ಸ್ನಿಗ್ಧಗುಣಗಳನ್ನೇ ಪ್ರಧಾನ ಪಾತ್ರಗಳಾಗಿಯೂ ಭಾವಿಸಿ ಈ ಗ್ರಂಥವನ್ನು ಬರೆದಿರುವುದು. ಈ ಮೇಲಿನ ಜ್ಞಾನಪ್ರಕಾಶಕ್ಕೆ ಆತಂಕವನ್ನುಂಟುಮಾಡಬರುವ ರಜಸ್ತ ಮೋಗುಣಗಳ-ತೃಷ್ಣಾಲೋಭಗಳೇ ಈ ಗ್ರಂಥದಲ್ಲಿ ಉಕ್ತವಾಗಿರುವ ಪ್ರತಿಕೂಲಪಾತ್ರಗಳಾಗಿ ವಿವರಿಸಿರುವುದು. ಆ ಪಾತ್ರಗಳ (ರಕ್ತಾಕ್ಷಿ-ನಿಶೆ-) ವಿಚಾರವು ಈ ಗ್ರಂಥಕ್ಕೆ ಅಷ್ಟಾಗಿ ಅವಶ್ಯಕವೆಂದು ಹೇಳುವಂತಿ ಲ್ಲವೆಂದೊ-ದುಷ್ಟ ಪಾತ್ರಗಳ ವಿಚಾರವು ಈ ಗ್ರಂಥಕ್ಕೇ ಲಾಂಛನಾಸ್ಪದ ವೆಂದೋ-ಅಥವಾ ಆ ಪಾತ್ರಸ್ವಭಾವವರ್ಣನಾಭಾಗವು ಅವ್ಯವಸ್ಥಿತರ

ಹೃದಯವನ್ನು ವಿಕಲ್ಪಕ್ಕೆ ತಿರುಗಿಸಬಹುದೆಂದೋ-ನಮ್ಮ ಬಂಧು ಭಗಿನಿಯರಲ್ಲಿ ಅಪೇಕ್ಷಿಸುವವರಿದ್ದರೆ-ಅಂತಹವರಲ್ಲಿ ನಮ್ಮ ನಿವೇದನವಿಷ್ಟು, ಒಂದು ಶುದ್ಧವಸ್ತುವಿನ ಉತ್ಕೃಷ್ಟಗುಣವನ್ನು ಸ್ಪಷ್ಟಪಡಿಸಬೇಕಾದರೆ, ಅದಕ್ಕೆ ವಿರುದ್ಧಸ್ವಭಾವದ ವಸ್ತುವಿನಲ್ಲಿರುವ ಕೆಟ್ಟಗುಣಗಳನ್ನೂ ಅದರ ದೆಸೆಯಿಂದಾಗಬಹುದಾದ ಬಾಧಕಗಳನ್ನೂ ತೋರಿಸಲೇ ಬೇಕಾಗುವಂತೆಯೂ, ಬೆಳಕಿನ ಉಪಯೋಗವನ್ನು ತಿಳಿಯಬೇಕಾದರೆ ಕತ್ತಲೆಯ ಪ್ರಾಬಲ್ಯವನ್ನು ತಿಳಿದಿರಬೇಕಾದಂತೆಯೂ ಆ ಪಾತ್ರಗಳೆರಡರ ವಿಚಾರವನ್ನೂ ಇದರಲ್ಲಿ ವ್ಯಕ್ತಗೊಳಿಸಿರುವುದು. ಇದಕ್ಕೂ ಅವರಿಗೆ ವಿರೋಧಾರ್ಥವೇ ಕಂಡುಬಂದರೆ ಅಂತಹರಲ್ಲಿ ನಾವು ವಿಜ್ಞಾಪಿಸಲಾರೆವು.

ಈ ಗ್ರಂಥದಲ್ಲಿ ಬಂದಿರುವ ಪಾತ್ರಗಳಿಗೆ ಕೊಟ್ಟಿರುವ ಹೆಸರುಗಳು ಕೂಡ ಆ-ಆ ಪಾತ್ರಗಳ ಗುಣ-ಸ್ವಭಾವ-ವರ್ತನಗಳಿಗೆ ಅನ್ವಯಿಸುವಂತಹುದಾಗಿರುವುದಲ್ಲದೆ, ಅನ್ಯದೇಶೀಯರ ಹೆಸರನ್ನು ರೂಢಿಗೆ ತಂದು, ಅನ್ಯದೇಶದವರ ಆಚಾರವಿಚಾರಗಳನ್ನು ಅನುಕರಣಕ್ಕೆ ತಂದು, ಅವರಂತಾಗಲು ಕುಣಿಯಬೇಕೆಂಬ ಅಭಿಲಾಷೆಯೇನೂ ಇಲ್ಲ. ಇದಲ್ಲದೆ ನನ್ನ ಇತರ ಪುಸ್ತಕಗಳಲ್ಲಿ ಬಂದಿರುವ ಹೆಸರುಗಳೂಕೂಡ, ಕೆಲವು ಪಾತ್ರಗಳ ಸ್ವಭಾವಗಳನ್ನು ಅನುಸರಿಸುವಂತಹವೂ, ಮತ್ತೆ ಕೆಲವು ಹೆಸರುಗಳು, ನಮ್ಮ ಪೂರ್ವಜರಿಂದ ಆದರಿಸಲ್ಪಟ್ಟವುಗಳೂ, ಇನ್ನು ಕೆಲವು ಭಗವನ್ನಾಮಾಂಕಿತಗಳೂ ಆಗಿರತಕ್ಕವುಗಳಾಗಿವೆ. ಅಂತಹ ಹೆಸರುಗಳನ್ನು ಕೊಡುವುದರಿಂದ ವಾಚಕರ ಮನಸ್ಸಿಗೆ ಕೌತುಕಪ್ರದವಾಗಿಯೂ-ಶ್ರದ್ಧೆಯನ್ನುಂಟುಮಾಡುವಂತಹವಾಗಿಯೂ ಇರುವುವೆಂದು ಭಾವಿಸಿ ಹಾಗೆ ಬರೆದಿದೆ. ಇದನ್ನೂ ರೂಢಿಬಾಹಿರವೆಂದು ನಿಂದಿಸಿ, ವಿಪರೀತಾರ್ಥಕಲ್ಪನೆಯಿಂದ ಶಂಕಾಪವಾದವನ್ನು ಹೊರೆಯಿಸುತ್ತಿರುವ ನಮ್ಮ ಬಂಧುವರ್ಗಕ್ಕೆ ನಾವು ಹೇಳುವುದೇನಿದೆ? "ಲೋಕೋಭಿನ್ನರುಚಿಃ". ಕುತರ್ಕಿಗೆ ಕಮಲಾಕಾಂತನಲ್ಲಿಯೂ ಕಲಂಕವೇ ಕಾಣುವುದು, ಸಂಶಯಗ್ರ

ಸ್ತನಿಗೆ ಸ್ವಸ್ವರೂಪದಲ್ಲಿ ಕೂಡ ನಿಶ್ಚಯ ಜ್ಞಾನವಿರುವುದಿಲ್ಲ. ಇಂತ ಹರು ಇತರರನ್ನು ನಂಬಬೇಕೆಂದರೆ ಹೇಗೆ? "**ಭಾವನೆಯೆಂತಿಹುದಂತೆ ಫಲಂಗಳ್**'' ಇಷ್ಟಕ್ಕೆ ಪ್ರಸ್ತಾವನೆಯು ನಿಂತಿರಲಿ, ಉಳಿದ ಭಾಗವು ಮುಂದೆ ಬರುವುದು.

ಆದರೆ ಸುಹೃದರೆ, ಒಂದು ವಿಜ್ಞಾಪನೆ—ಈ ಗ್ರಂಥದಲ್ಲಿ ನನ್ನ ಅಜ್ಞಾತದೋಷದಿಂದ ಅಲ್ಲಿಗಲ್ಲಿಗೆ ನ್ಯೂನಾತಿರಿಕ್ತಗಳು ಕಂಡುಬರುವುದಾದರೆ ಅದು ಅಲ್ಪಮತಿಯ ಆತ್ಮಕೃತಿಬದ್ಧವೆಂದು ತಿಳಿದು ಎಚ್ಚರಿಸಬೇಕಲ್ಲದೆ ಹೆಸರನ್ನು ಮರೆಯಿಸಿಕೊಂಡು, ಅಲ್ಲಸಲ್ಲದ ಕುತರ್ಕಗಳಿಂದ ಆಲಾಪಿಸಬಾರದು. ಇನ್ನು ಈ ಗ್ರಂಥದಿಂದ ಜಗತ್ತಿಗೆ ಏನಾದರೂ ಅಲ್ಪಸ್ವಲ್ಪ ಉಪಯೋಗವು ಕಂಡುಬರುವುದಾಗಿದ್ದರೆ, ಅದರಿಂದ ಏನಾದರೂ ಯಶಸ್ಸುಂಟಾಗುವುದಾಗಿದ್ದರೆ ಅವೆಲ್ಲವೂ ನನ್ನ ಈ ಲೇಖನ ಕಾರ್ಯಕ್ಕೆ ಪ್ರೇರಕರೂ—ಪ್ರೋತ್ಸಾಹಕರೂ ಆಗಿರುವ ನಮ್ಮ ಪ್ರಧಾನಗುರುಗಳ ಶ್ರೀ ಪಾದಸನ್ನಿಧಿಯಲ್ಲಿಯೂ ಮತ್ತು ಬಾಲ್ಯವಿದ್ಯಾಗುರುಗಳಾಗಿ, ನನಗೆ ನೈತಿಕಶಿಕ್ಷಣವನ್ನಿತ್ತು-ಇಂದಿನ ಈ ಆತ್ಮ ಸಂತೋಷಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಆ ನಮ್ಮ ಗುರುವರರ ಸನ್ನಿಧಿಯಲ್ಲಿಯೂ ಸಮರ್ಪಿಸಲ್ಪಡುವುದೆಂದೂ, ಆ ಪರಮಗುರುಗಳಲ್ಲಿ ಈ ನಿಶ್ಚಲಭಕ್ತಿಯೇ ಚಿರಕಾಲದವರೆಗೆ ಇರುವಂತೆಯೂ ಆ ಗುರುಜನರ ಆಶೀರ್ವಾದಪ್ರಭಾವದಿಂದ ದೇಶಸೇವೆ, ಭಾಷಾಸೇವೆ ಗುರುಸೇವೆ, ಸಮಾಜಸೇವೆ, ಪ್ರಭುಸೇವಗಳನ್ನು ಮಾಡಿ, ಕೃತಾರ್ಥತೆಹೊಂದುವಂತೆಯೂ, ಆ ಜಗದ್ಗುರುವಾದ ಸರ್ವೇಶ್ವರನೇ ಕೃಪೆಗೈಯಲೆಂದು ಸರ್ವಕಾಲವೂ ಪ್ರಾರ್ಥಿಸುತ್ತಿರುವೆನು.

ಮಾತೃಮಂದಿರಂ,
ನಂಜನಗೂಡು.

ಇತಿ—ಶ್ರೇಯಃಕಾಂಕ್ಷಿಣಿ
ವಿದ್ಯಾರ್ಥಿನಿ-

॥ श्रीः ॥

सर्वसहायैवम :

ಶ್ರೀ ಲಕ್ಷ್ಮೀ ಹಯಗ್ರೀವ ಪ್ರಸನ್ನಃ.

ಪೂರ್ಣಕಲಾ.

"ವ್ಯಾಖ್ಯಾಸ್ವರೂಪಾ ಯಾ ದೇವಿ | ವ್ಯಾಖ್ಯಾಧಿಷ್ಠಾತೃದೇವತಾ ||
ಭ್ರಮಸಿದ್ಧಾಂತರೂಪಾಯಾ|ತಸ್ಯೈವಾಣ್ಯೈನಮೋನಮಃ||೧೨||"
"ಸ್ಮೃತಿಶಕ್ತಿ-ಜ್ಞಾನಶಕ್ತಿ-ಬುದ್ಧಿಶಕ್ತಿ-ಸ್ವರೂಪಿಣೀ ||
ಪ್ರತಿಭಾ ಕಲ್ಪನಾಶಕ್ತಿ | ರ್ಯಾಚ ತಸ್ಯೈನಮೋನಮಃ ||೧೪||"

ಪ್ರಥಮ ಪರಿಚ್ಛೇದ

(ಪಾನಸಂಭ್ರಮ)

ಪ್ರಭಾಸನಗರದ ಘನವಿದ್ಯಾಶಾಲೆಯ (College) ವಿದ್ಯಾರ್ಥಿ ಭವನದ (Students' Home) ಹಿಂದಿನ ಆನಂದೋದ್ಯಾನದಲ್ಲಿ, ಇಂದಿನ ಸಂಭ್ರಮವೇ ಸಂಭ್ರಮವು! ಸಂಭ್ರಮವನ್ನು ನೋಡಿ ನಲಿಗಾಡ

---

* ಈ ಶ್ಲೋಕಗಳು, ಕಲ್ಕತ್ತೆಯ ಧರ್ಮಪ್ರಚಾರಗ್ರಂಥಾವಲಿ-ಸಂಖ್ಯೆ ೧. (ಶ್ರೀ ಭೂಪೇಂದ್ರನಾಥಸಾನ್ಯಾಲಪ್ರಣೀತ) "ದಿನಚರ್ಯಾ" ಎಂಬ ಗ್ರಂಥದಿಂದ ತೆಗೆದುದು. [ಪುಟ. ೧೨೩--೧೨೪. ಸರಸ್ವತೀಸ್ತೋತ್ರಂ] ಇದೇ ಗ್ರಂಥವೂ, ಮತ್ತು ಇದರ ಜತೆಯಲ್ಲಿ ನಮಗೆ ಬಂದಿರುವ "ಜ್ಞಾನೋದಯ" "ಜ್ಞಾನದೀಪಿಕಾ" "ವಿಚಾರಪ್ರಕಾಶ" ಇತ್ಯಾದಿಗ್ರಂಥಗಳೂ ನಮ್ಮ ಆರ್ಯಧರ್ಮ ಪ್ರಸಾರಕ್ಕೆ ಅತ್ಯಂತ ಸಹಕಾರಿಗಳಾಗಿರುವದರಿಂದ ಇವುಗಳಲ್ಲಿಯ ಸಾರಾಂಶವನ್ನು ಕಾಲಾನುಕ್ರಮವಾಗಿ ಕನ್ನಡಿಸಿ ನಮ್ಮ ಸೋದರಿಯರ ಮುಂದಿಡಬೇಕೆಂದಿರುವೆವು.

(ಸಂ. ಸ|| ಪ||)

ಬೇಕೆಂದು ನಮ್ಮ ನಿಶಾಕಾಂತನಾದ ಚಂದ್ರನು, ಪೂರ್ಣಕಲೆಯೊಡನೆ ತಲೆದೋರಿ, ಸಂಭ್ರಮವನ್ನು ಹೆಚ್ಚಿಸುತ್ತಿರುವನು. ಇಂದಿನ ಸಂಭ್ರಮಕ್ಕೆ ಮಧುಮಿತ್ರನೇ ಪ್ರಧಾನಪಾತ್ರನು. ಮಧುಮಿತ್ರನ ಸಹಚರರೇ ಉಪಪಾತ್ರಗಳು ಅಥವಾ ಪಾನಸಂಭ್ರಮದಲ್ಲಿ ಪ್ರೋತ್ಸಾಹಕರು.

ಮಧುಮಿತ್ರನು ಮಿತ್ರರೊಡಗೂಡಿ ಉದ್ಯಾನದ ಮಲ್ಲಿಗೆಯ ಮಂಟಪದಲ್ಲಿ ಕುಳಿತು, ಸಂಭ್ರಮಕಾರ್ಯಕ್ಕೆ ಅಭಿಮುಖನಾಗಿದ್ದನು. ವೇಳೆಯು ಅಷ್ಟೇನೂ ಹೆಚ್ಚಾಗಿಲ್ಲ; ರಾತ್ರಿ ಹತ್ತುಗಂಟೆಯಷ್ಟೆ ! ಪೂರ್ಣಚಂದ್ರೋದಯ ; ಅದರಲ್ಲಿಯೂ ಶರತ್ಕಾಲವುಬೇರೆ. ಕೇಳಬೇಕೇ-ಇಂದಿನ ಈ ಸಂಭ್ರಮವೆಷ್ಟೆಂಬುದನ್ನು ! ಅದೇನುಹೇಳುವಿರಿ—ಬಾಂಧವರೇ ?

" ಏನಿದು ! ಸರಿರಾತ್ರಿಯಲ್ಲಿ —ಇಲ್ಲಿ—ಹೀಗೆಕುಳಿತು ಮಾಡುತ್ತಿರುವದೇನು ? ಇವರಾರು ? ಎಂತಹ ನಿಶಾಚರರು ? "

" ಅದೇಕಿಷ್ಟು ಆಗ್ರಹಿಸುವಿರಿ-ಬಾಂಧವರೇ ! ಇವರೇ ನಮ್ಮ ಇಂದಿನ ಕಥಾನಕದಲ್ಲಿ ಹೆಸರ್ಗೊಂಡ ತರುಣ ವಿದ್ಯಾರ್ಥಿಗಳು !! ಇವರಲ್ಲಿ ಮಾಡುವದೆಂದರೆ, ಸಾಕ್ಷಾತ್-ವಾರುಣೀ ಪೂಜಾ ಮಹೋತ್ಸವವನ್ನು ನೆರವೇರಿಸುವುದು. " ಇದೆಂತಹ ವಿನೋದವು ? ವಿದ್ಯಾರ್ಥಿಗಳು ! ವಾರುಣೀಪೂಜಾ.. ...... !! ' ಅಸಂಬದ್ಧಪ್ರಲಾಪವೇಕೆ ? "

" ಹೋ ! ತಾಳಿರಿ ? ಬಾಂಧವರೇ ! ಸ್ವಲ್ಪ ನಿಧಾನಿಸಿರಿ ! ನಾವೇನೂ ಅಸಂಬದ್ಧಪ್ರಲಾಪಿಗಳಾಗಿಲ್ಲ. ಈಕಾಲದ, ಈನಾಗರಿಕ (?) ಯುಗದ, ಸಭ್ಯಸಮಾಜ (?) ದಲ್ಲಿ ನಡೆವ ವಿಚಾರಗಳಲ್ಲಿ ಒಂದೆರಡರಂತೆ ತೆಗೆದೆತ್ತಿಡುವದುಮಾತ್ರ ನಮ್ಮ ಗುರಿ ! ಇಲ್ಲದ ಸಲ್ಲದ ಹೊಲ್ಲೆಹವನ್ನು ಸೂಲ್ಲಿಸಬೇಕೆಂಬುದು ನಮ್ಮ ಮತವಲ್ಲ. ಅದೇನುಮತ್ತೆ ? " ಇದಾವ ಭಾಷಣದರೀತಿ ? ತುದಿಮೊದಲಿಲ್ಲದ ಸಂತೆಯ ಸುದ್ದಿಯಂತೆ, ಅದೆಲ್ಲಿಯ

ವಿಷಯವನ್ನೊ ತೆಗೆದೆತ್ತಿಯಾಡಿ, ಮಿದುಳನ್ನು ಹಾರಿಸುವ ಹೊಸಬಗೆಯ ಕೊಂಕು ಬಿಂಕಗಳೇಕೆ ? ಸಹಜರೀತಿಯಲ್ಲಿ, ಸಜ್ಜನಸಮ್ಮತವಾದ ನುಡಿಯಲ್ಲಿ ಹೇಳಿದರಾಗದೋ ? '' ಇದಲ್ಲವೇ ನಿಮ್ಮ ಆಕ್ಷೇಪವು ? ಸುಸ್ಸ್ರದರೇ ! ತಾಳ್ಮೆಯಿರಲಿ ; ವಿಚಾರ ವಿಮರ್ಶೆಯಲ್ಲಿ ಹೆಚ್ಚು ಗಮನವಿರಲಿ! ನೋಡಿರಿ. ಬಾಂಧವರೇ ! ನಡೆನೋಡಿಹೇಳಿರಿ ? ಈಕಾಲದ ಮಹಿಮೆಯಾವುದು ? ಈ ವರ್ತಮಾನಯುಗವೇ ಅಡಿಮೇಲಾಗಿರುವ ತ್ರಿಶಂಕುಸ್ವರ್ಗವಾಗಿದೆ ! ಇದರಲ್ಲಿ ನಾವು ಮಾಡುವದಾದರೂ ಏನು ? ಎಲ್ಲೆಲ್ಲಿ ನೋಡಿದರೂ ನವನಾಗರಿಕ ಮಹಾಜನರ ಗುಂಪು ! ಅವರ ಭಾಷಣದ ಆಡಂಬರವೇ ಆಡಂಬರವು ! ಹೆಚ್ಚೇಕೆ?—ನಮ್ಮ ಪೂರ್ವಪದ್ಧತಿಗಳನ್ನು ಬಿಟ್ಟದ್ದೂ, ಪಾಶ್ಚಾತ್ಯ ಪದ್ಧತಿಗಳನ್ನು-ಅದುತಮಗೆ ಗಹನವೂ, ಕಂಟಕಿತವೂ, ಅಸ್ಪೃಶ್ಯವೂ, ಅನುಚಿತವೂ, ಆದುದೆಂದು ತಿಳಿದೂ-ಅಂತಹ ಅನ್ಯಮಾರ್ಗಾನುಸಂಧಾನವನ್ನು ಅನುಕಾರಣಮಾಡಿದದ್ದೂ-ನಾವೇ ನಾಗರಿಕರೆಂಬ ವಿಪರೀತಪ್ರಜ್ಞೆಯು, ನಾಲ್ಕೆಂಟುಕಡೆಯಲ್ಲಿಯೂ ಸುತ್ತಿಮುತ್ತಿರುವದು. ಈ ಬಗೆಯ ಐಂದ್ರಜಾಲದ ಬೆಳಕಿನ ಮೋಹಿಸೀ ವಿಲಾಸದ ದೆಸೆಯಿಂದ ನಮ್ಮ ಆರ್ಯಧರ್ಮದ, ಆರ್ಯಸಂಪ್ರದಾಯದ, ಆ ನಮ್ಮ ಪೂರ್ವಾಚಾರದ ಸಂಬಂಧವಾದ ತೇಜಸ್ವಿತೆಯು ಅನ್ಯಾಕ್ರಾಂತವಾಗಿ ಹೋಗಿ, —ನಮ್ಮವರ ವಿಷಯದಲ್ಲಿ, ನಮ್ಮ ನಮ್ಮ ನಿಜಸ್ಥಿತಿ, ಗತಿ, ವಿಚಾರಗಳಲ್ಲಿ, ನಮಗೇ ಸಂಶಯವನ್ನುಂಟುಮಾಡುವ ದುರ್ವಿಪಾಕವು ಪ್ರಾಪ್ತವಾಗಿದೆ. ಇಂತಹ ದುರ್ವಿಪಾಕದಲ್ಲಿ ಸಿಕ್ಕಿ ತೊಡುಕಾಡುತ್ತಿರುವರಲ್ಲಿ ಆರಾದರೂ ಮೆಲ್ಲನೆ ಕಣ್ದೆರೆದು, ಅರೆಬಾಯಿಬಿಟ್ಟು, ಹಿರಿಯರ ಉಪದೇಶಮಾರ್ಗವನ್ನು ಕುರಿತು ಇಲ್ಲವೇ ಅವರ ನಡವಳಿಯನ್ನು ಕುರಿತು, ಒಂದೆರಡು ಮಾತನ್ನು ಹೇಳಿದರೂ ಸಾಕು ; ಅಂತಹರಮೇಲೆ, ಸಾಸಿರಗಟ್ಟಳೆ ಮೇಘನಾದರ ಭೀಕರಗದಾಪ್ರಹಾರಗಳು ಮೇಲೆ ಮೇಲೆ ಬೀಳ

ಬರುವವು. ಸಾಲದುದಕ್ಕೆ, ರಾವಣನೆಯು ರಾಕ್ಷಸನಸಾಯಾ ಜಾಲಗಳ ಹೂಂಕಾರ ಚೇಂಕಾರಗಳಂತೂ ಹೇಳುವಂತಿಲ್ಲ. ಇಂತಿರುವ ಸಮಯ ದಲ್ಲಿ ನಾವಾವ ರೀತಿಯಿಂದ ನಮ್ಮ ಆಶಯುವನ್ನು ಹೊರಗೆಡಹುವುದು ? ಮಾಯೆಗೆ ಮಾಯೆ ; ಜಾಲಕ್ಕೆ ಜಾಲ ; ಮಂತ್ರಕ್ಕೆ ಮಂತ್ರ ; ತಂತ್ರ ಕ್ಕೆ ತಂತ್ರ ; ಇವಲ್ಲವೇ ಎದುರಾಳಿಗಳಾಗಿನಿಂತು, ನಿಜಾಶಯುವನ್ನು ಸಾಧಿಸಬೇಕು ? ಹಾಗಿದ್ದರೆ, ಕನಲುವದೇಕೆ ?

ಮಧುಮಿತ್ರನ ವಯುಸ್ಸು ೨೦ಕ್ಕೆ ಮಾರಿಲ್ಲ. ರೂಪವು ಬಾಹ್ಯಾಡಂಬರಕ್ಕೆ ತಕ್ಕಂತೆಯೇ ಇದ್ದಿತು. ಎಂದರೆ ಮೊದಲೇ ಸುಸ್ವರೂಪಿ; ಮೇಲೆ ಯೌವನ; ಸಾಲದುದಕ್ಕೆ ಧನಸಂಪತ್ತಿಯೂ ಪುಷ್ಟೀಕರಿಸುತ್ತಿರುವವು. ಇನ್ನೂ ಹೇಳಬೇಕೆ?

ಮಿತ್ರನ ಜನ್ಮಸ್ಥಳವು ಪ್ರಭಾಸನಗರಕ್ಕೆ ಸೇರಿದ ಒಂದುಹಳ್ಳಿ. ಈತನಿಗೆ ಬಾಲ್ಯದಲ್ಲಿಯೇ ಪಿತೃವಿಯೋಗವಾಯಿತು. ಈಗ ಇವನಿಗಿರುವ ಬಳಗವೆಂದರೆ, ಹೆತ್ತತಾಯಿ,-ಗಂಡನಿಲ್ಲದ--ದಿನಗಳೆದ--ಮುದಿತಾಯಿ' ಅವಳೊಬ್ಬಳೇ ! ಮಿತ್ರನತಾಯಿಯ ಹೆಸರು ಸತೀಮಣಿ. ಸತೀಮಣಿಯು ಶ್ರೀಮಂತರ ಮನೆತನದಲ್ಲಿಹುಟ್ಟಿದ ಸುಶಿಕ್ಷಿತ ಸ್ತ್ರೀಶಿರೋಮಣಿಯೆನ್ನಿಸಿದವಳು. ಇವಳ ಪತಿಯುಕೂಡ ಧನಿಕರಲ್ಲಿ ಅಗ್ರಗಣ್ಯನೂ, ಉದಾತ್ತ ಪುರುಷರಲ್ಲಿ ಪ್ರಸಿದ್ಧನೂ ಆಗಿದ್ದನು. ಸತೀಮಣಿಗೆ ಆದ ಮಕ್ಕಳೆಲ್ಲರೂ ಹೋಗಿ, ಉಳಿದವನು ಮಧುಮಿತ್ರನೊಬ್ಬನೇ ! ಪತಿರಹಿತೆಯಾದಬಳಿಕ ಶೋಕಸಂತಪ್ತಳಾದ ಸತೀಮಣಿಯು, ಒಬ್ಬನೇ ಮಗನಾಗಿರುವ ಮಧುಮಿತ್ರನೇ ತನ್ನ ಎರಡನೆ ಪ್ರಾಣವೆಂದೂ, ಈತನ ಶ್ರೇಯೋಭಿವೃದ್ಧಿಯೇ, ತನ್ನ ಪತಿಯ ಸುಕೃತದ ಸಾರ್ಥಕ್ಯತೆಯೆಂದೂ ನಂಬಿ, ತನ್ನೊಡಲ ಅಳಲನ್ನು ನುಂಗಿ, ಮಗನ ಏಳಿಗೆಗಾಗಿ ಮಾಡಬೇಕಾದ ಕೆಲಸಗಳನ್ನು ಇಷ್ಟಾದರೂ ಪಾಲುಮಾರದೆ ನಡೆಯಿಸುತ್ತಿದ್ದಳು.

ಎಷ್ಟಾದರೇನು ? ಮಧುಮಿತ್ರನ ದಾರಿಯೇ ವಕ್ರವಾಯ್ತು. ಗಂಡನಿಲ್ಲದ, ಇತರ ಬಂಧು ಮಿತ್ರ ಸಹಾಯಕರಾರೂ ಇಲ್ಲದ, ಏಕಾಂಗಿಯಾಗಿದ್ದ ತನ್ನ ತಾಯಿಯಲ್ಲಿ ಈತನು ಕೇವಲ ಲಾಘವಬುದ್ಧಿಯಿಂದ ನಡೆಯುತ್ತಿದ್ದನಲ್ಲದೆ, " ತಾಯಿ " ಎಂಬ ವಸ್ತುವು ಸಕಲಕ್ಕೂ ಶ್ರೇಷ್ಠವೆಂದು ಇವನ ಬಾಲ್ಯಬುದ್ಧಿಗೆ ಇಷ್ಟಾದರೂ ಹೊಳೆಯಲಿಲ್ಲ. ಹೇಗೆ ಹೊಳೆಯಬೇಕು ? ಮಕ್ಕಳಿಗೆ ತಾಯಿಯರಲ್ಲಿ ಮೊದಲೇ ಸಲಿಗೆ ಹೆಚ್ಚು ! ಮೇಲೆ, ಆದ ಮಕ್ಕಳೆಲ್ಲರನ್ನೂ ಕಳೆದುಕೊಂಡು ತನ್ನೊಬ್ಬನಲ್ಲಿಯೇ ಪ್ರಾಣವಿಟ್ಟಿರುವ ತಾಯಿಯೆಂದರೆ, ಆದರಲ್ಲಿಯೂ, ಸರ್ವಸ್ವತಂತ್ರದಿಂದ ವರ್ತಿಸಬಹುದಾದಷ್ಟು ಸಂಪತ್ತಿಯಲ್ಲಿದ್ದ ತನ್ನ ತಾಯಿಯಲ್ಲಿ, ಇವನು ಮತ್ತೆ ಹೇಗೆ ನಡೆಯಬೇಕು ? ' ತಾನು ಹೇಗೆ ನಡೆದರೂ, ಎಷ್ಟು ಕಾಡಿದರೂ, ತಮ್ಮಮ್ಮನು ತನ್ನನ್ನು ದಂಡಿಸುವಳಲ್ಲ ! 'ಎಂಬುದು ಇವನ ಮನಸ್ಸಿನಲ್ಲಿ ಬಲವಾಗಿ ನಿಂತಿರುವದು. '' ಸತೀಮಣಿಯು ಸುಶಿಕ್ಷಿತಸ್ತ್ರೀಯಾಗಿದ್ದುದು ನಿಜ. ಆದರೆ, ಮಗನು ದುಶ್ಚೇಷ್ಟೆಗಳನ್ನು ಮಾಡಿದುದು ಕಂಡುಬಂದಾಗಲಾದರೂ ಇವಳು ಅವನನ್ನು ಕಠಿಣ ವಾಕ್ಯದಿಂದ ದಂಡಿಸುವ ಸಾಹಸವನ್ನು ಮಾತ್ರ ಹೊಂದಿರಲಿಲ್ಲ. ಮಗನಲ್ಲಿ ಇವಳು ಪ್ರೀತಿಪುರಸ್ಸರವಾದ ದೀನವಾಣಿಯಿಂದ ಹೇಳುತ್ತಿದ್ದ ಬುದ್ಧಿವಾದಗಳು, ಬಂಡೆಯ ಮೇಲೆ ಸುರಿಯುವ ಮಳೆಯಂತೆಯೇ ಆಗುತ್ತಿದ್ದವು. ಮಧುಮಿತ್ರನು ಹಳ್ಳಿಯಲ್ಲಿದ್ದುದರಿಂದ ಹಳ್ಳಿಯ ಪುಂಡುಹುಡುಗರ ಗುಂಪಿನಲ್ಲಿಯೇ ಹೆಚ್ಚಾಗಿ ಆಡುತ್ತಿದ್ದನು. ಸಹವಾಸವೇ ಸದ್ಗತಿ ದುರ್ಗತಿಗಳಿಗೆ ಕಾರಣವೆಂಬಂತೆ, ಹಳ್ಳಿಹುಡುಗರ ಪುಂಡುತನವು ಇವನಿಗೂ ಕ್ರಮ ಕ್ರಮವಾಗಿ ಬಂದಿತು.

ಹೀಗೆ ತನ್ನಲ್ಲಿ ಭಯವಿಲ್ಲದೆ, ಮತ್ತೊಬ್ಬರ ಆತಂಕವಿಲ್ಲದೆ, ಆಟಪಾಟಗಳಲ್ಲಿ ಕಾಲ ಕಳೆಯುತ್ತಿದ್ದ ಮಗನನ್ನು ನೋಡಿ ನೋಡಿ ಸತೀಮ

ಣೆಯು ಕೊರಗುತ್ತಿದ್ದಳು. ಮಗನು ದಾರಿಗೆ ಬಂದಾನೆಂಬ ಇವಳ ನಿರೀಕ್ಷೆಯು ನಿಷ್ಫಲವಾಗುವಂತೆ ತೋರಿತು. ಇವನು, ವಿದ್ಯಾಭ್ಯಾಸಂಗಕ್ಕೆಂದು ಕೇಳಿ ತೆಗೆದುಕೊಳ್ಳುತ್ತಿದ್ದ ಹಣವು, ಇವನ ತಿಂಡಿ, ಕೂಟ, ಕುಣಿತ, ಕುಡಿತಗಳಿಗೇ ಸಾಲದೆ, ನಡುನಡುವೆ ತಾಯಿಯು ಕಾಣದಂತೆ ಕದ್ದುಕೊಂಡುಹೋಗಿ ದುಂದುವೆಚ್ಚಮಾಡುತ್ತ ಬಂದನು. ಎಷ್ಟುಕಾಲ ಹೀಗೆ ನಡೆದೀತು ? ಪಾಪ ! ಸತೀಮಣಿಯು ತನ್ನ ಧೌರ್ಭಾಗ್ಯಕ್ಕೆ ಎಣೆಯೇ ಇಲ್ಲವೆಂದು ತಿಳಿದು ಅನೆಷ್ಟು ಸಂಕಟಪಟ್ಟಿರಬಹುದೋ ಹೇಳುವಂತಿಲ್ಲ. ಮಗನನ್ನು ಒಳ್ಳೆಯದಾರಿಗೆ ತಿರುಗಿಸೆಂದು ದೇವರನ್ನು ಎಷ್ಟೋ ಬಗೆಯಿಂದ ಪ್ರಾರ್ಥಿಸಿದಳು; ಫಲವಾಗಲಿಲ್ಲ ! ಕಡೆಗೆ ತನ್ನ ಬಳಿಯಲ್ಲಿದ್ದರೆ ಮಗನು ದಾರಿಗೆ ಬರಲಾರನೆಂಬುದು ಇವಳ ಅನುಭವಕ್ಕೆ ಬರಲು, ಮಗನನ್ನು ಮತ್ತಾರವಶದಲ್ಲಿ ಬಿಡಬೇಕೆಂದು ಯೋಚಿಸಿದಳು. ವಿಚಾರಮಾಡುವಲ್ಲಿ, ಪ್ರಭಾನಗರದ ವಿದ್ಯಾಶಾಲೆಯ ಅಧ್ಯಕ್ಷನಾದ ಶ್ರೀಸಚ್ಚಿದಾನಂದವಿಜ್ಞಾನಭಾಸ್ಕರಭಟ್ಟಾಚಾರ್ಯನು, ಶಿಷ್ಯವತ್ಸಲನೂ, ಸನ್ಮಾರ್ಗದರ್ಶಕನೂ, ದಕ್ಷನೂ ಆಗಿರುವನೆಂದು ತಿಳಿದು, ಮಗನನ್ನು ಕರೆತಂದು ಸಚ್ಚಿದಾನಂದನ ವಶಕ್ಕೊಪ್ಪಿಸಿ, ಮಗನ ವಿದ್ಯಾಭ್ಯಾಸಂಗವು ಸಾಂಗವೆನ್ನಿಸುವವರೆಗೂ ತನ್ನಬಳಿಗೆ ಬಿಡದೆ, ಆತನನ್ನು ಆವ ಬಗೆಯ ನಿರ್ಬಂಧದಲ್ಲಿಟ್ಟು ದಾರಿಗೆ ತರಬಹುದೆಂದು ತೋರುವದೋ ಆಬಗೆಯಿಂದ ಶಿಕ್ಷಣವನ್ನು ಕೊಡುವ ಎಲ್ಲಾ ಭಾರವನ್ನೂ ಸಚ್ಚಿದಾನಂದನಿಗೇ ವಹಿಸಿ, ಮಗನ ಶ್ರೇಯೋಭಿವೃದ್ಧಿಗಾಗಿ ತಾನಲ್ಲಿರದೆ ಹಳ್ಳಿಯಲ್ಲಿ ವಾಸಿಸುತ್ತಿದ್ದಳು.

ಸಚ್ಚಿದಾನಂದ ವಿಜ್ಞಾನಭಾಸ್ಕರಾಚಾರ್ಯನು ತನಗೆ ಒಪ್ಪಿಸಲ್ಪಟ್ಟ ಮಧುಮಿತ್ರನ ವಿಷಯದಲ್ಲಿ ಅತ್ಯಂತ ವಾತ್ಸಲ್ಯವನ್ನಿಟ್ಟಿದ್ದರೂ, ಅದನ್ನು ಹೊರಗೆಡಹದೆ, ಕುಮಾರನ ಬುದ್ಧಿಶಕ್ತಿ, ಜ್ಞಾನಶಕ್ತಿ, ವಾಕ್ಶಕ್ತಿ,

ಜ್ಞಾಪಕಶಕ್ತಿಗಳನ್ನು ಹೆಚ್ಚಿಸುವವಿಷಯದಲ್ಲಿ ತನ್ನ ದಕ್ಷತೆಯನ್ನು ತೋರಿಸುತ್ತಿದ್ದನು.

ಮಧುಮಿತ್ರನು ಸ್ವಭಾವತಃ ಸೂಕ್ಷ್ಮಬುದ್ಧಿಯುಳ್ಳವನು ಅಲ್ಲದೆ ಅವನಲ್ಲಿ ವಾಗ್ವೈಖರಿಯು ತಕ್ಕಮಟ್ಟಿಗೆ ಚೆನ್ನಾಗಿಯೇ ಇದ್ದಿತು. ಆದುದರಿಂದ ತಾಯಿಯು ತನ್ನನ್ನು ಕರೆತಂದೀತನಲ್ಲಿ ಒಪ್ಪಿಸಿದುದರಿಂದ, ತನ್ನ ದುರುಳತನವು ಈತನಿಂದ ಹೇಗಾದರೂ ಖಂಡಿಸಲ್ಪಟ್ಟೇಪಡುವದೆಂಬುದನ್ನು ಇವನು ಸುಲಭವಾಗಿ ತಿಳಿದನು. ಗುರುಮುಖೋಲ್ಲಾಸಕ್ಕಾಗಿ ಈತನು ತನ್ನ ಹಳ್ಳಿಹುಡುಗರ ದುರುಳತನವನ್ನು ಬಿಟ್ಟು, ಪಾಠಪ್ರವಚನಗಳಲ್ಲಿ ತನಗಿದ್ದ ಬುದ್ಧಿಶಕ್ತಿಯನ್ನು ಪ್ರಕಟಪಡಿಸುತ್ತ ಬಂದನು. ಜ್ಞಾಪಕಶಕ್ತಿಯೆಂಬುದು ಇವನಲ್ಲಿ ಬಲವಾಗಿದ್ದುದರಿಂದ, ಗುರುವಿನ ನಿರ್ಬಂಧಕ್ಕೊಳಪಟ್ಟು, ಆತನ ಕಾಟಕ್ಕಾಗಿ ಹೇಳಿಕೇಳುವ ಪಾಠಗಳುಕೂಡ ಇವನಿಗೆ ಮರೆಯುತ್ತಿರಲಿಲ್ಲವಾದುದರಿಂದ ಗುರುಹೃದಯದಲ್ಲಿ, ಈತನು ದಾರಿಗೆಬಂದು-ಬರುತ್ತಿರುವನೆಂಬ ಭರವಸೆಯನ್ನು ಹುಟ್ಟಿಸಿತು.

ಕಲಿತ ಬುದ್ಧಿಯನ್ನು ಬಿಡುವದೆಂದರೆ ಬಲುಕಷ್ಟವಲ್ಲವೆ ? ಮಧುಮಿತ್ರನಿಗೆ ತನ್ನ ಆಟ, ಪಾಟ, ಕೂಟ, ನೋಟಗಳಿಗೆ ಸಾಕಷ್ಟು ಅವಕಾಶವಿಲ್ಲದಿದ್ದುದರಿಂದ ರಾತ್ರಿವೇಳೆಯಲ್ಲಿ ಕದ್ದು ವಿದ್ಯಾರ್ಥಿಮಂದಿರದಿಂದ ಹೊರಬಿದ್ದು ಹೋಗಿ ವಿಹರಿಸಿ ಬರುತ್ತಿದ್ದನು. ಹಳ್ಳಿಯ ಮಕ್ಕಳ ಒಡನಾಟವು ಬಿಟ್ಟುಹೋದರೂ, ಇವನಿಗೆ ನಾಗರಿಕ ಜನಾಂಗಕ್ಕೆ ಸೇರಿದವರೆಂಬ ಮಹಾಜನರ ಒಡನಾಟವೂ, ಅವರ ಮಕ್ಕಳ ಗೆಳೆತನವೂ ಅದಕ್ಕೆ ತಕ್ಕಂತೆ,—ಎಂದರೆ ನಾಗರಿಕತೆಯ ಗಂಧವೆನ್ನಿಸುವಂತೆಮಾಡಿ ತೋರಬೇಕಾದ ಮೋಜುಗಾರಿಕೆಯೂ [ಜೋಕು] ಕ್ರಮವಾಗಿ ಇವನಲ್ಲಿ ತೋರಿಬಂದವು. ಇಷ್ಟೆಲ್ಲವೂ ಆದಬಳಿಕ, ಇನ್ನು ಚಂಚಲಚಿತ್ತಕ್ಕೆ ವಿಷಯ

ಚಾಪಲ್ಯವುಂಟಾಗುವದೇನೂ ಅತಿಶಯವಲ್ಲವಷ್ಟೆ. ಸಾಕು, ಇಷ್ಟ ರಿಂದ ಮಧುಮಿತ್ರನು ವಕ್ರಮಾರ್ಗದಲ್ಲಿ ಕಾಲಿಟ್ಟನೆಂದೂ, ಆ ದಾರಿಯಲ್ಲಿ ಇವನಿಗೆ ಸಹಚರರಾಗಿ ಅನೇಕರು ಸೇರಿದ್ದರೆಂದೂ ಹೇಳಿದರೆ ಸಾಕು ! ಇನ್ನು ವಿವರವಿಷ್ಟಕ್ಕೆ ಸಾಕಾಗಿರಲಿ.

ಮಧುಮಿತ್ರನು ಬಳಿಯಲ್ಲಿದ್ದ ಅನುಗಾಮಿಯ ಕೊರಳಮೇಲೆ ತನ್ನ ತೋಳನ್ನಿರಿಸಿ, ಉತ್ಸಾಹದಿಂದ ಹೇಳಿಡನು;— ' ಪ್ರಿಯಮಿತ್ರ ! ನಳಿನೀಕಾಂತ ! ಈದಿನ ನನಗಂತೂ ಬಲು ಬೇಸರವುಂಟಾಗಿ ಹೋಗಿದೆ. ಎಷ್ಟುಹೊತ್ತಿಗೆ ಅಧ್ಯಕ್ಷರು ಮಲಗುವರೆಂದು ಕಾದಿದ್ದೆ ; ಅವರಿಂದು ಇಷ್ಟುಬೇಗ ಮಲಗುವರೆಂದು ನನಗೆ ತಿಳಿದಿರಲಿಲ್ಲವಾದುದರಿಂದ ನನಗೀ ವರೆಗೆ ಒಂದು ಗಳಿಗೆ ಒಂದು ಯುಗದಂತೆಯೇ ಆಗಿತೋರುತ್ತಿದ್ದಿತು. "

ನಳಿನೀಕಾಂತ !—" ಆದೇನಿಂದು ನಿನಗಿಷ್ಟು ಬೇಸರಿಕೆ ? "

ಮಧು—" ಮತ್ತೇನು ? ಮಧ್ಯಾಹ್ನವೆಲ್ಲಾ ಬರಿಯ ಪರೀಕ್ಷೆ ಯಲ್ಲಿಯೇ ಹೊತ್ತು ಕಳೆದುಹೋಯಿತು. ವಿಶ್ರಾಂತಿಗೆ, ವಿನೋದಕ್ಕೆ-ಒಂದು ನಿಮಿಷವೂ ದೊರೆಯಲಿಲ್ಲ. ಮಿದುಳೇ ಹಾರಿಹೋಗುವಂತಿದೆ! ಇದಲ್ಲದೆ ಈದಿನ ವೇನು ಸಾಮಾನ್ಯದಿನವೇ ?

ನಳಿನೀ:— ಯಾರೆಂದವರು ? ನೋಡು !(ಮಂಟಪದ ಮೂಲೆಗೆ ಕೈತೋರಿಸಿ)—ಎಲ್ಲವೂ ಸಿದ್ಧವಾಗಿದೆ. ಈ ದಿನ ವೇ ನಮ್ಮ ವಾರುಣೀ ಪೂಜೆಗೆ ವಾರ್ಷಿಕೋತ್ಸವವು ! ಮೊದಲೇ ನಿನಗೆ ಸೂಚಿಸಿದ್ದೆನಷ್ಟೆ ! ಎಲ್ಲರಿಗೂ ಆಹ್ವಾನವು ಹೋಗುವುದೆಂದು ?

ಮಧು:—ನಿಜನಿಜ ಅದೇನಾಯ್ತು ? ಬಂದಿರುವರೊ ? ಬರುವರೋ ? ಹೇಗೆ ?

ನಳಿನೀ:—ಈದಿನ ನಮ್ಮ ಸಂಘದವರಲ್ಲಿ ಬಹುಮಂದಿ ತಪ್ಪಿಸಿಕೊಂಡಿರುವರು. ಅವರಿಗೆ ಎಂದೂ ಇಲ್ಲದ ನೆವಗಳುಂಟಾಗಿರುವುದು. ನಾಲ್ಕಾರುಮಂದಿ ಮಾತ್ರ ಬಂದಿರುವರು.

ಮಧು:—ಬರದವರು ಹಾಳಾಗಲಿ ! ಎಲ್ಲಿ ನಾವೇ ಉತ್ಸವವನ್ನು ಮುಗಿಸುವ ನಡೆ.

ನಳಿನೀಕಾಂತನು ಮಧುಮಿತ್ರನ ಕೈಹಿಡಿದು ಕರೆತಂದು, ಮಂಟಪದ ಮೂಲೆಯಲ್ಲಿ ಸಾಲುಸಾಲಾಗಿರಿಸಿದ್ದ ವಿವಿಧ ಮದ್ಯಪಾತ್ರೆಗಳ ಮುಂದೆ ನಿಲ್ಲಿಸಿ ಹೇಳಿದನು " ಆರಂಭಿಸು ! ಮಿತ್ರಾ ! ಜಾಗ್ರತೆಪಡಿಸು !! ನೀನು ಆಗರ್ಭಶ್ರೀಮಂತನು, ಮೇಲೆ ನಮ್ಮ ರಕ್ತಾಕ್ಷಿಯ ಪೂರ್ಣಾನುಗ್ರಹವು ಬೇರೆ ನಿನ್ನ ಸಂಪತ್ತಿಯನ್ನು ಬಲಪಡಿಸುತ್ತಿದೆ. ಸಂಪನ್ನನಾದ ನಿನ್ನ ಉದಾರಹಸ್ತದಿಂದಲೇ ಉತ್ಸವಕ್ಕೆ ಆರಂಭವಾಗಲಿ !

ಮಧು—ಉಬ್ಬಿನಿಂದ—ನಳಿನೀಕಾಂತನ ಬೆನ್ನುತಟ್ಟಿ,—' ಭಳಿರೇ ನಳಿನೀಕಾಂತ ! ಮೇಲುಮಾತಾಡಿದೆ ! ಆದರೆ ನೋಡು ; ನಿನ್ನ—ರಸಿಕಾಗ್ರೇಸರನಾದ ನಿನ್ನ—ಸಹಾಯವು ನನಗೆ ದೊರೆಯದಿದ್ದರೆ, ಈ ಸಿನ್ನ ವಿಚಾರಣೆಗೆ ಒಳಪಟ್ಟ ಈ ಉದ್ಯಾನದಲ್ಲಿ, ನನ್ನ ಪ್ರವೇಶಕ್ಕವಕಾಶವಿತ್ತೆ? ರಕ್ತಾಕ್ಷಿಯ ಪ್ರೇಮಭಿಕ್ಷೆಯಾದರೂ ಲಭಿಸುತ್ತಿತ್ತೇ ? ನನ್ನ ಇಂದಿನ ಇಷ್ಟರ ಪ್ರತಿಷ್ಠೆಗೆಲ್ಲಕ್ಕೂ ನೀನೇ ಕಾರಣನು. ಇದೋ ನೋಡು ; ನಿನ್ನ ಆಜ್ಞೆಯನ್ನು ಈಗಲೇ ನೆರವೇರಿಸುವೆನು. ಆದರೆ, — (ನಾಲ್ಕುಕಡೆಯನ್ನೂ

ನೋಡಿ)—ಆದರೆ,—ಹೊರಗೆ ಸರಿಯಾದವರು ಕಾವ
ಲಿರುವರೋ ? ಹೇಗೆ ?

ನಳಿನೀ—ಅದಕ್ಕೆ ತಕ್ಕ ಏರ್ಪಾಟು ನಡೆದಿದೆ ! ಈದಿನ ತೋಟ
ದ ಕಾವಲುಗಾರರಿಗೆ ಹಬ್ಬವೆಂದೂ, ಅವರು ತೋಟದಲ್ಲಿ
ತಮ್ಮ ದೇವರನ್ನು ಪೂಜಿಸಲು ಅವಕಾಶವನ್ನು ಕೊಡ
ಬೇಕೆಂದೂ ಹೇಳಿ, ಅಧ್ಯಕ್ಷರ ಅನುಮತಿಪಡೆದು ಬಂದಿ
ರುವೆನು. ಮತ್ತು ಕಾವಲಿನವರನ್ನು ಇಲ್ಲಿಯೇ ಇರು
ವೆನು.

ಮಧು—ಆತುರದಿಂದ “ ಸಾಕು, ಹಾಗಿದ್ದರೆ—ಆರಂಭ
ಸಿರಿ ; ಬನ್ನಿರಿ! ಮಿತ್ರರೇ ನೀವುಗಳು ಬನ್ನಿರಿ !!” ಎಂದು
ತನ್ನೆರಡು ಕೈಗಳನ್ನೂ ನೀಡಿ ಸಡಗರದಿಂದ—‘ ಹೇ,
ದೇವಿ ! ಪಾವನೇ! ಭಯನಿವಾರಿಣೀ! ಶೋಕಾಪಹಾರಿಣೀ!
ಕೃತಾರ್ಥಪಡಿಸುವವಳೇ ! ಭಕ್ತಮಂದಾರಿಣೀ ! ಪರಮಾನಂದ
ಸ್ವರೂಪಿಣೀ! ಸುಂದರಿಯು ಚಿತ್ತಾಕರ್ಷಣೇ—ಜಗನ್ಮೋ
ಹಿನೀ !!! ಜನನೀ —ಇದೊ ಇದೋ—ನಿನಗಿದೋ ಈ
ದೀನರ ಕೋಟಿ ಕೋಟಿ ವಂದನೆಗಳು.

ದೇವಿ ! ಸರ್ವಾಂತರ್ಯಾಮಿಯಾದ ನಿನ್ನ ಸೇವಾನುಭವ ಯಾರಿಗ ಲಭಿಸುವದೋ,—ಯಾರು ನಿನ್ನ ಸೇವೆಯಲ್ಲಿ ನಿರತರಾಗುವರೋ,—ಅವರೇ ಇಹಲೋಕದಲ್ಲಿ—ಏಕೆ— ಈ ವಿಶ್ವಪ್ರಪಂಚದಲ್ಲಿ—ಧನ್ಯರು ! ನಿನ್ನ ಸಾಕ್ಷಾತ್ಕಾರ ಲಾಭವು ಯಾರಿಗುಂಟಾಗುವದೋ, ಅವರೇ ಕೃತಾರ್ಥರು, ಅವರೇ ಸಿದ್ಧರು ! ನಿನ್ನನ್ನು ಮರೆಯೊಕ್ಕವರನ್ನು ಮತ್ತಾವ ಚಿಂತೆಗಳೂ ಸೋಕಲಾರವು. ನೀನಿರುವೆಡೆಯಲ್ಲಿ ತಾಪವಿಲ್ಲ, ಭಯವಿಲ್ಲ, —ಯಾತನೆಯು ಮಾತೇ ಇರುವದಿಲ್ಲ ! ?

ಹೇ, ದೇವಿ ! ನೀನೇ ಸೌಖ್ಯಕ್ಕೆ ಮಾತೃಮಂದಿರ ! ನೀನೇ ದುಃಖ್ಯ ರಾಶಿಗೆ ಸಮಿಾರ!! ಸಂತೋಷಕ್ಕೆ ಸಾರ !!! ನಿನ್ನ ದಿವ್ಯರೂಪ ಸಾಕಾ ! ತ್ಕಾರಲಾಭವನ್ನು ಹೊಂದದ ಮಾನವ ಜನ್ಮವನ್ನು ಕುರಿತು ಧಿಕ್ಕಾರ ನಿನ್ನನ್ನು ನಿಂದಿಸುವ ಅರಸಿಕವಾದ ಮೂರ್ಖನ ಜೀವನಕ್ಕೆ ಧಿಕ್ಕಾರ!! ಭಗವತೀ— ಹೇ ಸುರಾದೇವಿ! ನಿನ್ನ ಪ್ರಸಾದದಿಂದಲೇ ಅಸುರರೆಲ್ಲರೂ ಅಜೇಯರೆನ್ನಿಸಿ, ನಿರ್ಜರವ್ರಾತ (ದೇವಗಣ) ವನ್ನು ಅಡಿಗಡಿಗೂ ಪರಿ ಭವಗೊಳಿಸುತ್ತಿರುವರು !!! ನಿನ್ನನ್ನು ತಿರಸ್ಕರಿಸಿದುದರಿಂದಲೇ ಸುರರು ಅಲ್ಲಿಗಲ್ಲಿಗೆ ಸ್ಥಾನಭ್ರಷ್ಟರಾಗಿ ದಿಕ್ಕೆಟ್ಟು—ಹಾರಾಡುವಂತಾಗುತ್ತಿರುವರು ತಾಯಿ! ನಾವಿದೋ ನಿನ್ನ ದಾಸಾನುದಾಸರು. ಅನುಗ್ರಹಿಸು ! ವರ ಪ್ರದಾತೆಯಾದ ನೀನು ಎಂದೆಂದಿಗೂ ನಮ್ಮನ್ನು ಬಿಟ್ಟು ಹೋಗಲಾಗ ದೆಂದು ಬೇಡುತ್ತಿರುವೆವು. ದಯೆಪಾಲಿಸು ! ದೇವಿ! ದಯೆಪಾಲಿಸು !! ಎಂದು ಹೇಳುತ್ತ ಹೇಳುತ್ತ—ಕಲಶವನ್ನು ಕೈಕೊಂಡು ಸಹಚರರ ಕೈಯಲ್ಲಿಯೂ ಇರಿಸಿ, ತಾನೂ ತೆಗೆತೆಗೆದು, ಪಾನಸಂಭ್ರಮದಲ್ಲಿ ನಿಸ್ಸೀ ಮಪಾಂಡಿತ್ಯವನ್ನು ಪ್ರಕಟಿಸಿದನು. ಕ್ಷಣದಲ್ಲಿ ಪೂರ್ಣಕುಂಭಗಳು ಶೂನ್ಯ—ಭಗ್ನ—ಕುಂಭಗಳಾಗಿ ಉದ್ಯಾನದ ಬೇಲಿಯ ಕಡೆಯಲ್ಲೀಡಾಡ ಲ್ಪಟ್ಟವು.

ವಾರುಣೀದೇವಿಯು, ತನ್ನನ್ನು ಏಕಾಗ್ರತೆಯಿಂದ ಸೇವಿಸಿದ ಭಕ್ತ ರಲ್ಲಿ ಸಂಪೂರ್ಣ ಅನುಗ್ರಹವನ್ನೂ ತೋರಿಸಿದಳು. ಎಲ್ಲರೂ— ದೇವಿ ಯ ಆವೇಶದಿಂದ ಪರವಶರಾಗುತ್ತ ಬಂದರು;-ಪಾರವಶ್ಯತೆಯಿಂದ ಗಾನ ಮಾಡ ತೊಡಗಿದರು. ಮಧುಮಿತ್ರ-ನಳಿನೀಕಾಂತರು ಒಬ್ಬರನ್ನೊಬ್ಬರು ಬಿಗಿದಪ್ಪಿ ವಿಕೃತಕಂಠದಿಂದ ಹಾಡಿದರು.

ರಾಗಾ— (ಎಂದಿಗಾನುದೊತಂದೆ)

ರಸಿಕಜನಾ ನಂದದಾಯಿನಿ ಮನ್ಮನೋಮೋಹಿನಿ ||ಪ|| ಪುಸಿಯ ನಾಡೆನೆನ್ನಮಾತೆ ನೀನೇವಾರುಣೀ ||ಅ|| ವರದೆಯೆನ್ನ ಶಿರದಮೇಲೆ ವರದ ಹಸ್ತವಂ | ಇರಿಸಿ, ವರವ-ಕರುಣಿಸೆನ್ನುವೆ,—ಮರೆಯದೀಕ್ಷಣಂ ||೨|| ಶಕ್ತಿದಾತೆ ಭಕ್ತಗೊಲಿದು ರಕ್ತಾಕ್ಷಿಸಂಗದೊಳ್ | ರಕ್ತಹೃದಯಕರ್ಥಸಿದ್ಧಿಯನಿತ್ತು ಮುದದೊಳು ||೩|| ಕಾಮನಿಲಯೆ ಪ್ರೇಮನಿಧಿಯೆ ಕಾಯೆ ಎನ್ನತಾಯೆ || ಕಾಮಿನಿಯುಕರೆದುತಾರೆ (ನಾಂ) ತಡೆಯಲಾರೆ ||೪||

ಹೇಳುತ್ತಹೇಳುತ್ತ ಮಧುಮಿತ್ರನು ಉನ್ಮತ್ತನಂತಾಗಿ, ನಳನೀಕಾಂತನನ್ನು ಬಿಗಿದು ವಿಕಾರಸ್ವರದಿಂದ ‹ ಪ್ರಿಯೆ! ಪ್ರಿಯತಮೆ ! ರಕ್ತಾಕ್ಷಿ! ಬಂದೆಯೆ ! ಭಲೆ! ಸಮಯಕ್ಕೆ ಸರಿಯಾಗಿ ಬಂದೆ ! ಆ-ಆ-ಆ— ಭಲೆ ! ಆನಂದ !........... ....

ನಳನೀ—ಬಿಡಿಸಿಕೊಳ್ಳುತ್ತ 'ಮಿತ್ರಾ ! ನಾನು ನಾನು--ನಳನೀಕಾಂತ; ರಕ್ತಾಕ್ಷಿಯಲ್ಲ ! ನಾನು ಬೀಳುತ್ತೇನೆ, ಹಾ! ಬಿಟ್ಟುಬಿಡು—ಅಯ್ಯೋ ಬಿಗಿಯಬೇಡ.

ಮಧುಮಿತ್ರ—ಕಣ್ತೆರದು ನೋಡಿ ಕೈಬಿಟ್ಟು, " ಹೋಗು— ' ನೀನಲ್ಲ—ಹೋಗು " ಎಂದು ಹೇಳಿ—ತತ್ತರಿಸುತ್ತ ಮುಂದಕ್ಕಡಿಯಿಟ್ಟು ತೊದಲು ನಾಲಿಗೆಯಿಂದ— " ಮನೋಹರೆ ! ಮನೋಹರೆ!! ಕೈಹಿಡಿ ! ಕಾಪಾಡು! ...."

ಮಧುಮಿತ್ರನು ಈ ಯವಸ್ಥೆಯಲ್ಲಿ ಒದ್ದಾಡುತ್ತಿದ್ದಾಗಲೇ ಉದ್ಯಾನದ ಉತ್ತರಪಾರ್ಶ್ವದಿಂದ--ಕಿನ್ನರಸ್ವರದಿಂದ--ಗಾನವು ಕೇಳಬಂದು ನಳಿನೀಕಾಂತ ಮಧುಮಿತ್ರರ ಕಿವಿಯನ್ನು ಕೊರೆದುಕೊಂಡು ಹೋಯಿತು.

ಇಬ್ಬರೂ ಆಲಿಸಿದರು. ಗಾನವು ಸ್ಪಷ್ಟವಾಗಿ ಕೇಳಿಸದಿದ್ದರೂ ಅದರ ಪಲ್ಲವವು ಹೀಗೆಂದು ತಿಳಿದಿತು.

" ಜಯಜಯ ಜನನೀ ಜಗದುಜ್ಜೀವಿನಿ—ಜಯಜಯ ಗೀರ್ವಾಣೀ|| "

ಮಧು—ಕೌತುಕದಿಂದ ಕೇಳಿದನು—" ಪ್ರಿಯಮಿತ್ರ! ಇದಾರ ಕಮನೀಯಕಂಠವು ? "

ನಳಿನೀ—ಮಿತ್ರಾ! ಇದೇ, ನಮ್ಮ ಗುರುಪುತ್ರಿಯಾದ ಪೂರ್ಣ ಕಲೆಯ ಕಮನೀಯಕಂಠ !!! "

ಮಧು—' ಏನು ಏನು ! ಗುರುವಿಗೆ ಮಕ್ಕಳು ಇರುವರೆ ?

ನಳಿನೀಕಾಂತ—ಅಭಿನವಶಾರದೆಯಾದ ಸುಕುಮಾರಿಯೊಬ್ಬಳು ಮಾತ್ರವೇ !—

ಮಧು—ಹಾಗಾದರೆ ಅವಳ ವಯಸ್ಸು ?

ನಳಿನೀ—ಸುಮಾರು ಹದಿನಾಲ್ಕು.

ಮಧು—ಅವಳ ಕೈಹಿಡಿದಿರುವ ಧನ್ಯಪುರುಷನೊ ?

ನಳಿನೀ—ಇನ್ನೂ ಅವಳ ಕೈಹಿಡಿಯುವ ಧನ್ಯರೇ ಹುಟ್ಟಿರಲಾರರು !

ಮಧು—ಅದೇನೆನ್ನುವೆ ?—ವಿವರಿಸಬಾರದೆ ?

ನಳಿನೀ—ಮಿತ್ರ ! ಅವಳ ಸರಲವೂ, ನಿಷ್ಕಪಟವೂ, ಪವಿತ್ರ ಪ್ರೇಮಮಯವೂ ಆದ ಅವಲೋಕನವೊಂದೇ ಮಾನವ ಜನ್ಮಧಾರಣೆಗೆ ಸಾರ್ಥಕ್ಯವನ್ನುಂಟುಮಾಡಬಲ್ಲುದು· ಇನ್ನಾಕೆಯ ಸಂಸರ್ಗಲಾಭವು.........

ಮಧು—ಮಿತ್ರನೇ ! ತಲೆತಿರುಗುತಿದೆ. ಹಿಡಿ, ಹೆಚ್ಚು ಹೇಳಬೇಡ. ರಕ್ತಾಕ್ಷಿಯ ಹಂಬಲವು ಸಾಕಾಗಿರಲಿ ! ಮಿ

ತ್ರನೆ—ದಯೆಯಿಟ್ಟು, ನನಗಾದೇವಿಯ ಸಹವಾಸಲಾಭ
ವನ್ನುಂಟುಮಾಡಿ ಕಾಪಾಡು ?

ನಳಿನೀ—ಹಾ ! ಏನು ! ಏನು !! ಸಹವಾಸ ? ಬಾಯಿಮಾತಲ್ಲ! ಉಸಿರೆತ್ತುವೆ ! ಭದ್ರ ! ಅವಳು ಸಾಮಾನ್ಯಮಾನವಿಯಲ್ಲ !!!

ಮಧು—ಇರಲಿ, ದೈವಿಕಮೂರ್ತಿಯೇ ಆಗಿರಲಿ; ಅವಳ ದರ್ಶನವಾದರೂ—

ನಳಿನೀ—ಅದಕ್ಕೇನೂ ಕಷ್ಟವಿಲ್ಲ, ಇಷ್ಟರಲ್ಲಿಯೇ ನೀನವಳನ್ನು ನೋಡುವೆ ! ನಡೆ, ರಕ್ತಾಕ್ಷಿಯು ಕಾದಿರಬಹುದು.

(ಇಬ್ಬರೂ ಹೊರಟುಬಿಟ್ಟರು. ಪಾನಸಂಭ್ರಮವು ಇಷ್ಟಕ್ಕೆ ಕೊನೆಗಂಡಿತು.).

ದ್ವಿತೀಯ ಪರಿಚ್ಛೇದ

(ಅಕ್ಷಯಕುಮಾರನ ವಿಚಾರಕ್ಷಮತೆ).

ಹೇ ವಾಗ್ದೇವಿ ! ಯಾವನಿನ್ನ ದಯೆಯುಂಟಾಗದಿದ್ದರೆ, ಮಾನವನು, ಮೂಕ, ಉನ್ಮತ್ತ, ಅಂಧ, ಬಧಿರರಂತೆ ನಿಷ್ಪ್ರಯೋಜಕನಾಗುವನೋ, ಯಾವ ನಿನ್ನ ದಯೆಯನ್ನೇ ದೇವ-ದಾನವ, ಮಾನವ, ಯಕ್ಷ, ಗಂಧರ್ವ, ಸಿದ್ಧ, ವಿದ್ಯಾಧರರಾದಿ ಸಮಸ್ತರೂ ಆಶ್ರಯಿಸಿ, ಜೀವಿಸುತ್ತಿರುವರೋ,—ಯಾವ ನಿನ್ನ ಅಮೋಘವಾದ ಪ್ರಸಾದ ಬಲದಿಂದಲೇ ಪಾಮರನು ಪಂಡಿತೋತ್ತಮನಾಗಿ ಪರಿಗಣಿಸಲ್ಪಡುವನೋ, ಯಾವ ನಿನ್ನ ಮಹಿಮಾನುಭವದಿಂದಲೇ, ಆ ಭಗವಂತನ ಸ್ವರೂಪ ಸಾಕ್ಷಾತ್ಕಾರಲಾಭವುಂಟಾಗಬೇಕಾಗಿರುವದೋ, ಅಂತಹ, ಅತ್ಯದ್ಭುತವಾದ, ಅಜರಾಮರವಾದ, ಆದ್ಯನಂತರಹಿತವಾದ, ಅಮೃತಧಾರಾಪೂರ್ಣವಾದ ಕೃಪಾಕಟಾಕ್ಷವು,--ನಮ್ಮಲ್ಲಿ ಅಕ್ಷಯವಾಗಿ ವರ್ಷಿಸಲ್ಪಡುತ್ತಿರಲಿ !! ನಿನ್ನನ್ನೇ ಆಶ್ರಯಿಸಿ ಜೀವಿಸುತ್ತಿರುವ ಈ ನಮ್ಮ ಗುರುಕುಲವಾಸದ ಪರಮೋತ್ಕೃಷ್ಟ ತಪಶ್ಚರ್ಯೆಯಲ್ಲಿ, ನಮ್ಮನ್ನು ಕೃತಾರ್ಥರನ್ನಾಗಿಮಾಡು. ದುಸ್ಸಹವಾಸ, ದುರಾಶೆ, ದುರ್ಮಾರ್ಗಪ್ರವರ್ತನೆಗಳಿಂದ ನಮ್ಮನ್ನು ಪಾರುಮಾಡಿ, ನಮ್ಮ ಆರ್ಯಭೂಮಿಯ, ಆರ್ಯಧರ್ಮದ, ಆರ್ಯಕೀರ್ತಿಯ ಸಾರವನ್ನು ಸಂಗ್ರಹಿಸಿ, ಧೀರಾಗ್ರೇಸರರೆನ್ನಿಸುವಂತೆ ಅನುಗ್ರಹಿಸು ...... "

ವಿದ್ಯಾರ್ಥಿಮಂದಿರದ ಮುಂದಿನ ಕಿರುಮನೆಯಲ್ಲ ಕುಳಿತಿದ್ದ ವಿದ್ಯಾರ್ಥಿಕುಲಮಂಡನನಾದ ಯುವಕನೊಬ್ಬನು, ಮೇಲೆ ಹೇಳಿದಂತೆ

ಏಕಾಗ್ರತೆಯಿಂದ ಸರಸ್ವತೀದೇವಿಯನ್ನು ಕುರಿತು ಧ್ಯಾನಿಸುತ್ತಿದ್ದನು. ಯುವಕನ ವಯಸ್ಸು ಇಪ್ಪತ್ತೆರಡುವರ್ಷದೊಳಗಿರಬೇಕು. ಆದರೂ ಈತನ ಮುಖದಲ್ಲಿ ಹೊರಹೊಮ್ಮುತಿದ್ದ ಉಜ್ವಲ ಮತ್ತು ಶಾಂತಿದಾಯಕವಾದ ತೇಜಸ್ಸಿನಿಂದಲೇ ಈತನು, ಜಿತೇಂದ್ರಿಯನೆಂದೂ, ಸತ್ಯಪರಾಕ್ರಮಿಯೆಂದೂ, ವಿಚಾರತತ್ಪರನೆಂದೂ ಚೆನ್ನಾಗಿ ತಿಳಿಯಬಹುದು.

ಯುವಕನು ಒಬ್ಬನೇ ಕುಳಿತು ಚಿಂತನೆಮಾಡುತ್ತಿದ್ದನು. ಕಿರುಮನೆಯ ಕದವು ತೆಗೆದಿದ್ದಿತು. ಹೊತ್ತು, ರಾತ್ರಿ ಹನ್ನೊಂದು ಗಂಟೆಗೆ ಮೀರಿರಲಿಲ್ಲವಾದರೂ, ವಿದ್ಯಾರ್ಥಿಮಂದಿರವು ನಿಶ್ಶಬ್ದವಾಗಿ, ಶಾಂತತೆಗೆ ಜನ್ಮಸ್ಥಾನವೆಂಬಂತೆ ತೋರುತ್ತಿದ್ದಿತು. ಚಿಂತನೆಯಲ್ಲಿ ಕುಳಿತಿದ್ದ ಯುವಕನು ಒಮ್ಮೆ ತಲೆಯೆತ್ತಿ ನಿಟ್ಟುಸಿರಿಟ್ಟು, ಗಲ್ಲದಮೇಲೆ ಕೈಯಿರಿಸಿ ಅನುಕಂಪಿತ ಸ್ವರದಿಂದ ' ಇದೂ ಭಗವದ್ವಿಲಾಸವೇ ? ಹೀಗಾಗಬೇಕೆಂಬುದೂ ಅವನ ಸಂಕಲ್ಪವೇ ? ಕಷ್ಟ ! ಕಷ್ಟ !! ಮಕ್ಕಳು ದುರ್ಮಾರ್ಗಿಗಳಾದರೆ ಹೆತ್ತತಾಯಿಯ ದುಃಖವು ಅದೆಷ್ಟಾಗಿರಬೇಕು ? ಪಾಪ! ಸತೀಮಣಿಯ ದೌರ್ಭಾಗ್ಯವನ್ನೇನೆಂದು ಹೇಳಬೇಕು ? ಹೆತ್ತಮಕ್ಕಳೆಲ್ಲರನ್ನೂ ಅಪಮೃತ್ಯುವಿಗೊಪ್ಪಿಸಿ, ಜೀವನಸರ್ವಸ್ವನಾದ ಪತಿಯನ್ನೂ ಕಳೆದುಕೊಂಡು, ಈ ಏಕಮಾತ್ರಪುತ್ರನ ಅಭ್ಯುದಯದಿಂದ ತನ್ನ ಕಷ್ಟವೆಲ್ಲವನ್ನೂ ಕೊನೆಗಾಣಿಸಲಾದೇನೆಂದು ನಂಬಿರುವಳು, ನಿರಪರಾಧಿನಿಯೂ, ಭಗವದ್ಭಕ್ತಿಪರಾಯಣೆಯೂ ಆಗಿರುವ ಆ ಸಾಧ್ವೀಮಣಿಯೂ ಹೀಗೆ ಚಿರದುಃಖಿನಿಯಾಗಿರಬೇಕೆಂದರೆ,—ಹೇಳುವದೇನು ? ದುರುಳನಾದ ಮಧುಮಿತ್ರನಿಗೆ ಜ್ಞಾನೋದಯವಾಗುವುದಿನ್ನೆಂದಿಗೆ ? ಕಷ್ಟಕಷ್ಟ ! ಹೀಗೆಯೇ ಇದ್ದರೆ ಇನ್ನು ಮಿತಿಮೀರುವದರಿಂದ ಬಹುಕಷ್ಟ !!! ಭಗವತಿ ! ಜ್ಞಾನಾಧಿಷ್ಠಾತ್ರೀದೇವಿ ! ಕೃಪೆಮಾಡು! ಗುರುಕುಲವಾಸಕ್ಕಾಗಿ ಒಪ್ಪಿಸಲ್ಪಟ್ಟಿರುವ ಮಧುಮಿತ್ರಕುಮಾರನಿಗೆ, ಅಷ್ಟುಮಾತ್ರವಾಗಿಯಾದರೂ

ಜ್ಞಾನವನ್ನುಂಟುಮಾಡು ! ದೇವಿ ! ನೋಡಿದೋ—ನಮ್ಮ ಗುರುದೇವರು ನಿನ್ನನ್ನೇ ಅನನ್ಯಭಾವದಿಂದ ಆರಾಧಿಸುತ್ತಿರುವರು. ಪವಿತ್ರ ಹೃದಯರಾಗಿರುವ ನಮ್ಮ ಗುರುವರ್ಯರ ಪ್ರತಿಷ್ಠೆಗೆ ಕುಂದುತಾರದೆ ನೋಡಿಕೊಳ್ಳುವುದು ನಿನ್ನ ಕೆಲಸವಲ್ಲವೆ ? ತಾಯಿ ! ಆ ದೇವರಶಿಷ್ಯವರ್ಗವು ಸನ್ಮಾರ್ಗಪ್ರವರ್ತಕರಾಗಿ, ವಿವೇಕಿಗಳೆನ್ನಿಸಿದರಲ್ಲವೆ, ಅವರ ಶ್ರಮಕ್ಕೂ, ವಾತ್ಸಲ್ಯಕ್ಕೂ, ಸಾರ್ಥಕ್ಯತೆಯು ? ಹೀಗಿದ್ದು ನೀನು ಉಪೇಕ್ಷಿಸಿರುವುದೇಕೆ ?

ಭಗವತಿ ! ನೋಡು ನೋಡು ! ಮಧುಮಿತ್ರನ ದೆಸೆಯಿಂದ ಈ ನಮ್ಮ ವಿದ್ಯಾರ್ಥಿಭವನಕ್ಕೂ, ನಮ್ಮ ವಿದ್ಯಾಪೀಠಕ್ಕೂ ಅಪವಾದ ವುಂಟಾಗುವುದರಲ್ಲಿದೆ ! ಮಿತ್ರನ ದುರ್ಬೋಧನೆಯಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಅನೇಕರು ಕೆಟ್ಟದಾರಿಯಲ್ಲಿ ಕಾಲಿಡುವಂತಾಗಿದೆ. ಇಷ್ಟಾಗಿಯೂ ನಿನ್ನ ಮನಸ್ಸಿಗೆ ಬರದಿರುವುದು ನಮ್ಮ ದುರದೃಷ್ಟವಲ್ಲವೇ ? (ಎಂದು ಹೇಳುತ್ತಿದ್ದಂತೆಯೇ ಧಿಗ್ಗನೆದ್ದು ಕುಳಿತು) " ಹಾ ! ಏನೆಂದೆ ? ತಾಯಿ ! ಏನು ಹೇಳಿದೆ ? ಮಧುಮಿತ್ರನಿಂದುಂಟಾಗುವ ಅಪವಾದವು, ಕಲಾಧವ-ಪೂರ್ಣಕಲೆಯರಿಂದ ಹಾರಿಹೋಗುವುದು !!! '' ಸಾಧು : ಸಾಧು !! ಭಗವತಿ !! ಸತ್ಯವನ್ನೇ ಹೇಳಿದೆ. ಕಲಾಧವ ಕುಮಾರನಿಂದ ನಮ್ಮ ವಿದ್ಯಾರ್ಥಿಭವನಕ್ಕೆ ಅತ್ಯಂತ ಸನ್ಮಾನವೇ ವುಂಟಾಗುವುದು ನಿಜ. ನಿನ್ನ ಪುತ್ರರತ್ನನಿಚಯದಲ್ಲಿ ಕಲಾಧವನು ನಾಯಕರತ್ನವಾಗಿಯೂ, ನಮ್ಮ ಪೂರ್ಣಕಲೆಯು ನಾಯಕೀರತ್ನವಾಗಿಯೂ ಕಣ್ಗೊಳಿಸುತ್ತಿರುವರೆಂಬುದು ನಿಜ. ಆದರೆ, ನೋಡಬಾರದೇ ದೇವಿ ! ಒಂದುಭಾಗದ ಅಂಗವು ಪುಷ್ಟವಾಗಿಯೂ ಮತ್ತೊಂದು ಭಾಗದ ಅಂಗವು ಕೃಷವಾಗಿಯೂ ಕಾಣುತ್ತಿದ್ದರೆ ಶೋಭಿಸುವುದೇ ? ಹಾಗಲ್ಲವೇ, ನಮ್ಮ ವಿದ್ಯಾಪೀಠ, ವಿದ್ಯಾರ್ಥಿಭವನಗಳವಾಡು ? "

ಯುವಕನ ವಿಚಾರವಿಮರ್ಶೆಯು ಇನ್ನೂ ನಡೆಯುತ್ತಿದ್ದಾಗಲೇ ನಡುವೆ, ಆತನ ಹಿಂದಿನಿಂದ "ಭಲೆ ! ಅಕ್ಷಯಕುಮಾರ ! ಭಲೆಭಲೆ !! ಭಲೆ !!! ವಿದ್ಯಾರ್ಥಿಕುಲಮಂಡನನೇ ನೀನು !! ಸಿದ್ಧಪುರುಷರಲ್ಲಿ ನೀನೇ ಅಗ್ರಣಿ ! ಬ್ರಹ್ಮಚರ್ಯನಿಷ್ಟರಲ್ಲಿ ನೀನೇ ಪ್ರಧಾನಪುರುಷನು. ಧನ್ಯ ! ಕುಮಾರ ! ವಾಗ್ದೇವಿಯೊಲ್ಮೆಗೆ ಪಾತ್ರನಾಗಿರುವ ನೀನೇ ಧನ್ಯ ಧನ್ಯ!!! ಎಂದು ಆರೋ ಹೇಳಿದಂತೆ ಕೇಳಿಸಿತು

ಅಕ್ಷಯಕುಮಾರನು ಚಕಿತನಾಗಿ ತಿರುಗಿ ನೋಡಿದನು. ತನ್ನ ಹಿಂದೆ ತನ್ನೆರಡು ಕೈಗಳನ್ನು ಕಟಿಪ್ರದೇಶದಲ್ಲಿರಿಸಿಕೊಂಡು, ತಲೆದೂಗುತ್ತ ನಿಂತಿದ್ದ ವೃದ್ಧಪರಿಚಾರಕನನ್ನು ಕಂಡನು. ಆದರದಿಂದೆದ್ದು ನಿಂತು ವೃದ್ಧನ ಕೈಹಿಡಿದು ಕುಳ್ಳಿರಿಸಿಕೊಂಡು, ತಾನೂ ಕುಳಿತು ಕೇಳಿದನು. "ಶಾಂತಿನಾಥ ! ಇದೇನಿಷ್ಟು ಅವಸರದಲ್ಲಿ ಬಂದೆ ?"

ಶಾಂತಿ —"ಕುಮಾರ ! ಅವಸರದ ಕೆಲಸವಿದ್ದುದರಿಂದಲೇ ಬಂದೆನು."

ಅಕ್ಷಯ—"ಅದೇನಷ್ಟರ ಅಗತ್ಯದ ಕೆಲಸವು ? ಇಷ್ಟು ಹೊತ್ತಿನಲ್ಲಿ ?"

ಶಾಂತಿ—ತಲೆದೂಗಿ—"ಇದೆ"

ಅಕ್ಷಯ—ಆತುರದಿಂದ "ಗುರುಗಳು ಆರೋಗ್ಯದಲ್ಲಿರುವರಷ್ಟೆ ?"

ಶಾಂತಿ—ಇದೇನು ಹೀಗೆ ಕೇಳುವೆ ? ಮಗುವೆ ! ಗುರುಗಳಿಗೆ ನೀನು ಅನ್ಯನಂತೆಯೂ, ಗುರುದರ್ಶನವು ನಿನಗೆ ಅಪೂರ್ವವಾಗಿರುವಂತೆಯೂ ತಿಳಿದೆಯೇನು ? ನೀನು ಗುರುವನ್ನು ನೋಡಿಬಂದು ಎಷ್ಟುಹೊತ್ತಾಯಿತು? ಈ

ಒಂದೆರಡು ಗಳಿಗೆಯೊಳಗಾಗಿ ಇಷ್ಟು ಕಾತರ ಪಡಬೇಕಾದುದೇನು ? ''

ಅಕ್ಷಯ:—ಹಾಗಲ್ಲ, ಶಾಂತಿನಾಥ ! ಗುರುದೇವರು ನನಗೆ ಕೇವಲ ಆತ್ಮೀಯ ಬಂಧುವಾಗಿರುವುದು ನಿಜ ;ಆದ ಮಾತ್ರದಿಂದೇನು ? ಸಾಮಾನ್ಯ ಬಂಧುಭಾವನೆಯಲ್ಲಿ ರಲಾದೀತೇ ?ಇಂತಹ ಗುರುದೇವರ ದರ್ಶನವು ಅವಿಚ್ಛಿನ್ನವಾಗಿ ಲಭಿಸುತ್ತಿರಬೇಕೆಂಬ ಕಾಮನೆಯು ಅದಾವ ಸಚ್ಛಿಷ್ಯನಲ್ಲಿಲ್ಲ ? ಇಷ್ಟರಮೇಲೆ,—ಗುರುಗಳ ಜ್ಞಾನ ಭಾಂಡಾಗಾರವು ಬಲವಾಗಿದ್ದ ಮಾತ್ರಕ್ಕೆ,—ಕೇವಲ ಲೋಕಹಿತ ಕಾರ್ಯದಲ್ಲಿಯೇ ಸವೆದಿರುವ ಅವರಭೌತಿಕ ದೇಹದ ವಿಚಾರದಲ್ಲಿ ಭಯವಿಲ್ಲವೆಂದೇ ?

ಶಾಂತಿ—ತಲೆದೂಗಿ '' ಸಾಧು ! ಸಚ್ಛಿಷ್ಯರತ್ನ ! ಸಾಧು ಸಾಧು !! ''

ಅಕ್ಷಯ—ಕೌತುಕದಿಂದ ‹‹ ಇದೇಕೆ ಹೀಗೆ ಹೇಳುವೆ ! ಶಾಂತಿನಾಥ ! ಇದೇನಿಷ್ಟು ಹೊಗಳಿಕೆ ? ನಾನಾರು?ಎಷ್ಟರವನು ? ಯಾವ ಘನಕಾರ್ಯವನ್ನು ಮಾಡಿದೆನೆಂದು ಹೊಗಳಬೇಕು ?

ಶಾಂತಿ—ಕಣ್ಣೀರು ತುಂಬಿ ಗದ್ಗದಸ್ವರದಿಂದ ‹‹ ಕುಮಾರ ! ನೀನು–ನೀನಾರೆಂದರೆ–ಏನುಹೇಳಲಿ ? ಮಾತಾಪಿತೃವಿಹೀನನಾಗಿ ಏಕಮಾತ್ರ ಬಂಧುವಾಗಿದ್ದ ಭಗಿನಿಯನ್ನು ಕಳೆದುಕೊಂಡು, ಭಗಿನಿಯ ಭರ್ತಾರನಲ್ಲಿ ಆಶ್ರಯವನ್ನು ಹೊಂದಿ,ಕೇವಲ ಶಿಷ್ಯವೃತ್ತಿಯಲ್ಲಿರುವ ಕುಮಾ

ರನಲ್ಲವೇ ? ನನ್ನ ಕುಮಾರ ! ನಾನು ಅಕ್ಕರೆಯಿಂದ ಬೆಳೆಸಿದ ಹಣವು ಗುರುವಿಂದಾಗಿದ್ದರೂ, ಪ್ರೀತಿ—ಶರೀರ ಶ್ರಮಗಳಿಂದ ಬೆಳೆಯಿಸಿದ, ನನ್ನ ಮುದ್ದುಮಗನೆಂದೇ ನಂಬಿರುವ ನಿನ್ನನ್ನು ಹೊಗಳುವುದಕ್ಕೆ ನನಗೂ ಅಡ್ಡಿಯೇ ? ನಿನ್ನಲ್ಲಿರುವ ಈ ಅಮೋಘವಾದ ಸದ್ಗುಣಗಳಲ್ಲಿ ಒಂದೊಂದೇ ಗುಣಗಳು ಸಾಕಾಗದೇ ನನ್ನ ಹೊಗಳಿಕೆಗೆ ? ನನ್ನ ಚಿಣ್ಣ ! ಇಂತಹ ಸುಪುತ್ರನಿಂದ ಸೇವೆಯನ್ನು ತೆಗೆದುಕೊಳ್ಳಲು ಆ ನಿರ್ಭಾಗ್ಯರ ಹಣೆಯಲ್ಲಿ ಬರೆದಿರಲಿಲ್ಲ ; ಅವರು ಹೋದರು ! ದೇವರು ಆ ಭಾಗ್ಯವನ್ನು ನನಗೆ ದಯಪಾಲಿಸಿದನಲ್ಲ-ಅಷ್ಟೇಸಾಕು.

ಅಕ್ಷಯ—ಆತುರತೆಯಿಂದ ಶಾಂತಿನಾಥನ ಹೆಗಲಮೇಲೆ ಕೈಯಿರಿಸಿ “ಅಪ್ಪ ! ಉಳಿದಮಾತು ಆಮೇಲಾಗಲಿ, ಮೊದಲು ಹೇಳು ; ಗುರುಗಳೇನಾದರೂ ಬರಹೇಳಿದರೆ ? ”

ಶಾಂತಿ—ಇಲ್ಲ. ಅವರು ಮಲಗಲಿಕ್ಕೆಂದು ಸಿದ್ಧಪಡಿಸಿಕೊಳ್ಳುತಿದ್ದರು.

ಅಕ್ಷಯ—ಹಾಗಿದ್ದರೆ ನೀನಿಲ್ಲಿಗೆ ಬಂದುದೇಕೆ ? ಕುಮಾರಿಯು ಏನನ್ನಾದರೂ ಕಳುಹಿರುವಳೇನು ?

ಶಾಂತಿ—“ ನಿಜ. ನಿನ್ನಲ್ಲಿ ವಿಚಾರಮಾಡತಕ್ಕುದಿದೆಯಂತೆ, ಈಗಲೇ—ಬರಬಹುದಾಗಿದ್ದರೆ-ಇನ್ನೂ ನೀನು ಮಲಗದಿದ್ದರೆ, ದಯೆಯಿಟ್ಟು ಬಂದುನೋಡಬೇಕಂತೆ ”

ಅಕ್ಷಯ—ಇಷ್ಟು ಹೊತ್ತಿನಲ್ಲಿ ವಿಚಾರ ಮಾಡುವಷ್ಟರ ಅಗತ್ಯದ ವಿಚಾರವೇನು ?

ಶಾಂತಿ—ನಾನೇನು ಬಲ್ಲೆನು. ಸುಕುಮಾರಿಗೆ ನಿದ್ದೆ ಬಾರದೆ. ಅವುದೋ ಒಂದು ವಿಶೇಷವಿಚಾರವು ನೆನಪಿಗೆ ಬೇರೆ ಬಂದು ತವಕ ಗೊಳಿಸುತ್ತಿದೆಯಂತೆ. ನಾಳೆಗೆಂದರೆ ನಾಳೆಯ ವ್ಯಾಸಂಗಕ್ಕೆ ತಡೆಮಾಡೀದಂತಾದೀತಂತೆ. ಇದಕ್ಕೇನು ಹೇಳುವೆ ?

ಅಕ್ಷಯ—ತಲೆದೂಗಿ ಬರುವೆನಿರಲಿ, ನೀನಿಲ್ಲಿಗೆ ಬರುವಾಗ ತೋಟದ ಕಡೆಗೇನಾದರೂ ಗಮನಿಸಿದ್ದೆಯಾ ?

ಶಾಂತಿ—ಆಹಾ ! ನಾನುಗಮನಿಸದೆ ಬರುವದುಂಟೇ ? ಏಕೆ ? ಅಲ್ಲಿನ ಸಂಭ್ರಮವನ್ನು ಕುರಿತೋ ?

ಅಕ್ಷಯ—ಅಹುದು, ಅಲ್ಲಿ ಆರಾರಿದ್ದವರೆಂದು ತಿಳಿದಿರುವೆಯೊ?

ಶಾಂತಿ—ನಾನು ಅಷ್ಟುದೂರಹೋಗಲಿಲ್ಲ, ನಳಿನೀಕಾಂತನು ಗುರುಸಮ್ಮುಖದಲ್ಲಿ ನಿವೇದಿಸುತ್ತಿದ್ದುದನ್ನು ಕೇಳಿದ್ದೆನಾದುದರಿಂದ ಅಲ್ಲಿ ತೋಟದ ಕಾವಲುಗಾರರು ಮತ್ತು ಅವರ ಸಹಚರರು ಸೇರಿರಬೇಕು. ಏಕೆ ?

ಅಕ್ಷಯ—ಆ ವಿಚಾರವಿರಲಿ,ಮಧುಮಿತ್ರನ ನಡವಳಿಕೆಯ ವಿಷಯದಲ್ಲಿ ನೀನೇನನ್ನಾದರೂ ಬಲ್ಲೆಯೊ ?

ಶಾಂತಿ—ಬಲ್ಲೆನು,—ಎಲ್ಲವನ್ನೂ ತಿಳಿಯದಿದ್ದರೂ-ಅಷ್ಟಿಷ್ಟಾಗಿ ತಿಳಿದಿರುವೆನು.

ಅಕ್ಷಯ—ಅವನನ್ನು ಕುರಿತು ನೀನಿಷ್ಟಾದರೂಚಿಂತಿಸುವುದಿಲ್ಲವೆ?

ಶಾಂತಿ—ಮಗುವೆ ? ಎಲ್ಲರೂ ನಿನ್ನಂತೆಯೋ ಇರುವರೇನು ? ಕಾಲವೇ ಪ್ರತಿಕೂಲವಾಗಿ ತಿರುಗಿದೆ. ಇದಕ್ಕಾಗಿ ಚಿಂತೆಪಡುವದೇಕೆ ? ಚಿಂತೆಗೆ ಕುಳಿತರೆ ಕೊನೆಯೂ

ಇರುವುದೋ ?—ಒಬ್ಬಿಬ್ಬರಿಗೆ ಚಿಂತಿಸಿದರೆ ಸಾಕೋ? ಕುಮಾರ್ಗದಲ್ಲಿ ಬಿದ್ದರೆ ಅವನೇ ಕೆಟ್ಟನು. ನೀನೇಕೆ ಇಷ್ಟುತಪಿಸುತ್ತಿರುವೆ ?

ಅಕ್ಷಯ—ಹಾಗೆ ಹೇಳಬಹುದೆ—ಶಾಂತಿನಾಥ? ಅವನಿಲ್ಲಿಗೆ ಬಾರದೆಯೇ ಇದ್ದಿದ್ದರೆ, ಅವನ ಚಿಂತೆಯು ನನಗಾಗುತ್ತಿರಲಿಲ್ಲ. ಒಂದೇ ಗುರುಕುಲವಾಸದಲ್ಲಿ, ಒಂದೇ ಛತ್ರಛಾಯೆಯಲ್ಲಿ—ಉಪಜೀವಿಸುತ್ತಿರುವ ನಾವು, ಪರಸ್ಪರ ಹಿತೇಚ್ಛುಗಳಾಗಿರಬೇಡವೇ ? ತನ್ನ ಸಂಗಡಿಗನೆನ್ನಿಸಿ, ತನ್ನೊಡನೆ ವ್ಯಾಸಂಗಿಸುವಂತೆ ಗುರುಮುಖದಿಂದ ನಿಯಮಿಸಲ್ಪಟ್ಟಿರುವವನು ಕುಮಾರ್ಗದಲ್ಲಿಬಿದ್ದರೂ ಸುಮ್ಮನಿರಲೇ ?

ಶಾಂತಿ—ನಿಜ; ಅವನ ದುರ್ವೃತ್ತವನ್ನು ಕುರಿತು ಸಂತಾಪವಾಗುತ್ತದೆ. ಮತ್ತು ಅವನ ದೆಸೆಯಿಂದ ನಿಮಗೂ, ನಿಮ್ಮ ಗುರುವಿಗೂ, ಕಡೆಗೆ ಈ ವಿದ್ಯಾನಿಲಯಕ್ಕೂ-ಅಪವಾದವು ಸಂಭವಿಸಬಹುದೆಂದು ಕೂಡ ಶಂಕೆಯುಂಟಾಗುತ್ತದೆ. ಆದರೂ ನಾವು ಮಾಡುವದೇನು? ಹುಟ್ಟುಸುಳಿಯನ್ನು ಬೋಳಿಸಿದರೆ ಹೋದೀತೇ ?

ಅಕ್ಷಯ—ಹಾಗೆಂದು ಸುಮ್ಮನಿರುವದಲ್ಲ. ನಮ್ಮ ಶಕ್ತಿವಂಚನೆಯಿಲ್ಲದೆ, ಮನಸ್ಸಾಕ್ಷಿಯಾಗಿ ಅವರ ಹಿತವನ್ನು ಕೋರುವದು ನಮ್ಮ ಕರ್ತವ್ಯವು

ಶಾಂತಿ—ಕೋರುವದಕ್ಕೆ ತಡೆಮಾಡಿದೇನು ? ಕುಮಾರ ! ಹಿತವನ್ನು ಕೋರುವೆನೆಂದು ನಿನ್ನಂತೆ ಹಗಲಿರುಳೂ ದೇಹಸ್ಮರಣೆಯಿಲ್ಲದೆ ಕೊರಗುತ್ತಿರಬೇಕೇ ?

ಅಕ್ಷಯ—ನಾನು ಕೊರಗಲಿಲ್ಲ, ಭಗವಂತನಲ್ಲಿ ಪ್ರಾರ್ಥಿಸುತ್ತಿರುವಾಗ ಸ್ವಲ್ಪ ಆವೇಶದಿಂದ ಹಾಗೆ ಹೇಳಿರಬಹುದು.

ಶಾಂತಿ—ಹಾಗಿದ್ದರೆ ಸಂತೋಷ. ಆ ದುರುಳನು ಈಗಲೇ ದಾರಿಗೆ ಬರುವನೆಂದು ನಂಬಬೇಡ. ಇನ್ನೂ ತಲೆತಗಲಬೇಕು ; ಆ ಬಳಿಕ ಬುದ್ಧಿ ಬರಬೇಕು.

ಅಕ್ಷಯ—ತಲೆತಗಲಬೇಕೆಂದು ಸುಮ್ಮನಿರುವದು ಸುಹೃತ್ತುಗಳ ಲಕ್ಷಣವಲ್ಲ. ಇರಲಿ ಶಾಂತಿನಾಥ ! ನೀನುಬರುವಾಗ ಕಲಾಧವನೇನು ಮಾಡುತ್ತಿದ್ದನು ನೋಡಿಬಂದೆಯಾ ?

ಶಾಂತಿ—ಅವನೊಬ್ಬನೇ ಕುಳಿತು, ಅವುದೋ ವಿಚಾರವಿಮರ್ಶೆಯಲ್ಲಿ ತೊಡಕಿದ್ದಂತೆ ತಿಳಿದೆನು.

ಅಕ್ಷಯ—ಧಿಗ್ಗನೆದ್ದು—ಹಾಗಿದ್ದರೆ ನಾನೀಗಲೇ ಆ ನನ್ನ ದೇಶಭಕ್ತಾಗ್ರಣಿಯನ್ನು ನೋಡಿ, ಆ ಬಳಿಕ ಕುಮಾರಿಯ ಬಳಿಗೆ ಬರುವೆನು, ನೀನು ಹೋಗು.

ಶಾಂತಿ—ಅದೇಕೆ ? ಹಾಗೆಯೇ ಬಂದರಾಗದೇ ? ಆತನನ್ನು ನೋಡಿಬರಲು ಹೋದರೆ ಬೇಗ ಬರಲಾದೀತೇ ?

ಅಕ್ಷಯ—ಬೇಗಬರುತ್ತೇನೆ. ನನಗಾತನನ್ನ ಈಗಲೇ ಕಂಡು ಮಾತನಾಡಬೇಕೆಂಬ ಆತುರವುಂಟಾಗಿದೆ. ಅದನ್ನು ತಡೆಗಟ್ಟಲು ನಿನ್ನಿಂದಾಗುವದಿಲ್ಲ. ನೀನುಹೋಗಿ ಸುಕುಮಾರಿಗೆ ದಯೆಯಿಟ್ಟು ಅವರೆಗೆ ಕ್ಷಮಿಸಬೇಕೆಂದು ಹೇಳು''

ಎಂದು ಹೇಳಿ ಹೊರಟುಬಿಟ್ಟನು. ಶಾಂತಿನಾಥನೂ—ಧನ್ಯ ! ಪುಣ್ಯಾಪುರುಷ ! ನೀನೇಧನ್ಯ !! ನಿನ್ನ ಮಾನವ ಜನ್ಮಧಾರಣೆಗೆ ಧನ್ಯತೆ ! ಇನ್ನು ಹೋಗಿ ಸುಕುಮಾರಿಯನ್ನು ಕಾಣುವೆನು'' ಎಂದು ಹೇಳುತ್ತ ಹೊರಟುಹೋದನು.

||ಶ್ರೀಃ||

ಶ್ರೀಯೈನಮಃ

ತೃತೀಯಪರಿಚ್ಛೇದ.

(ಕಲಾಧವನ ಕರ್ತವ್ಯನಿಷ್ಠೆ)

“ ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ||
ಚಕ್ಷುರುನ್ಮೀಲಿತಂಯೇನ ತಸ್ಮೈಶ್ರೀಗುರುವೇನಮಃ ||೧||
ಅಖಣ್ಡಮಣ್ಡಲಾಕಾರಂ ವ್ಯಾಪ್ತಂಯೇನ ಚರಾಚರಂ ||
ತತ್ಪದಂ ದರ್ಶಿತಂಯೇನ ತಸ್ಮೈ ಶ್ರೀ ಗುರುವೇನಮಃ ||೩||
ಜ್ಞಾನಶಕ್ತಿ ಸಮಾರೂಢಂ ತತ್ವಮಾಲಾ ವಿಭೂಷಿತಂ ||
ಭುಕ್ತಿಮುಕ್ತಿಪ್ರದಾತಾರಂ ತಸ್ಮೈಶ್ರೀಗುರುವೇನಮಃ ||೭||
ಆನಂದಮಾನಂದಕರಂ ಪ್ರಸನ್ನಂ ಜ್ಞಾನಸ್ವರೂಪಂ ನಿಜಬೋ
ಧಯುಕ್ತಂ | ಯೋಗೀಂದ್ರಮೀಡ್ಯಂ ಭವರೋಗವೈದ್ಯಂ
ಶ್ರೀಮದ್ಗುರುಂ ನಿತ್ಯಮಹಂ ಭಜಾಮಿ ||೧೨|| ”

(ದಿನಚರ್ಯ್ಯಾ, ಪುಟ ೧೨೯—೧೩೦)

ಹೇ ಗುರುದೇವ ! ಈ ದೀನಾತಿದೀನ ಭಕ್ತನಲ್ಲಿ ನಿನ್ನ ಅನುಗ್ರಹವು ಅನವರತವೂ ವರ್ಷಿಸಲ್ಪಡುತ್ತಲಿರುವದಷ್ಟೆ. ಈ ಅನುಗ್ರಹದಿಂದ ನಾನು ಅರ್ಥಸಿದ್ಧಿಯನ್ನೂ ಹೊಂದುವೆನಲ್ಲವೆ. ?

“ ಸಂದೇಹವಿಲ್ಲದೆ ಅರ್ಥಸಿದ್ಧಿ ! ಕಲಾಧವಕುಮಾರ ! ಸಾಧು; ನಿನ್ನ ಶಿಷ್ಯವೃತ್ತಿಯೇ ಸಾಧು. ಭಲೆ ! ಭಕ್ತಾಗ್ರಗಣ್ಯ ! ಭಗವತೀ ಭಾರತಮಾತೆಗೆ ನೀನಲ್ಲವೇ ಸತ್ಪುತ್ರರತ್ನ ? ಸಾರ್ಥಕವು. ಈ ನಿನ್ನ ದೇಹಧಾರಣವೇ ಸಾರ್ಥಕ್ಯವು ” !!!

ಮೇಲೆ ಹೇಳಿದ ಸ್ತೋತ್ರವು, ವಿದ್ಯಾರ್ಥಿಮಂದಿರದಲ್ಲಿ—ಅಕ್ಷಯಕುಮಾರನ ಕಿರುಮನೆಯ ಸಮೀಪದ ಕಿರುಮನೆಯೊಳಗೆ ಶಯ್ಯಾಗತನಾಗಿ ಕುಳಿತು, ದೃಢಭಕ್ತಿ ಭರವಸೆಯಿಂದ ಕಣ್ಣುಗಳನ್ನು ಮುಚ್ಚಿ ಕೈನೀಡಿ ಪ್ರಾರ್ಥಿಸುತ್ತಿದ್ದ ಹದಿನೆಂಟುವರ್ಷವಯಸ್ಸುಳ್ಳ ಉಜ್ವಲತೇಜೋಮೂರ್ತಿಯ ಬಾಯಿಂದ ಹೊರಡುತ್ತಿದ್ದಿತು. ಮೂರ್ತಿಯ ಮುಂದೆ ಉತ್ಸಾಹಗೊಂಡು ಕೈನೀಡಿ ನಿಂತಿದ್ದ ಅಕ್ಷಯಕುಮಾರನೇ—ಪ್ರಾರ್ಥನೆಗೆ ಉತ್ತರವನ್ನು ಕೊಟ್ಟವನು.

ಅಕ್ಷಯನ ಧ್ವನಿಯನ್ನು ಕೇಳಿದ ಕಲಾಧವನು ಬೆಜ್ಜರಗೊಂಡು ಥಟ್ಟನೆ ಕಣ್ದೆರೆದು ನೋಡಲು, ಸ್ನೇಹವೇ ಮೂರ್ತಿಭವಿಸಿದಂತೆ ನಿಂತಿದ್ದ ಮಿತ್ರನನ್ನು ಕಂಡು ಆನಂದ ಪಾರವಶ್ಯತೆಯಿಂದ ಅಕ್ಷಯಕುಮಾರನನ್ನು ಎಳೆದಪ್ಪಿ ಬಳಿಯಲ್ಲಿ ಕುಳ್ಳಿರಿಸಿಕೊಂಡು, ಕಂಪನಸ್ವರದಿಂದ ಕೇಳಿದನು. ಪ್ರಿಯಮಿತ್ರ ! ಇದೇನಿಂದು ಭಟ್ಟಾರಕನಾಗಿ ಬಂದಿರುವೆ? ನಿನ್ನ ಇಂದಿನ ಪಾಂಡಿತ್ಯಪ್ರದರ್ಶನಕ್ಕೆ ಕಾರಣವೇನು ?

ಅಕ್ಷಯ—ಕಾರಣವೇನೆಂದು ಕೇಳುವೆಯಾ ? ಭೂಮಿಯ ಬೃಹಸ್ಪತ್ಯಾಚಾರ್ಯನೂ, ಅಭಿನವ ಕಾಲಿದಾಸನೂ ಆಗಿರುವ ನಿನ್ನ ಸಂದರ್ಶನದ ಪ್ರಭಾವವೇ ಸಾಲದೋ ? ಇದರ ಪ್ರಭಾವಕ್ಕೆ ಲುಬ್ಧನಾಗಿರುವದರಿಂದಲೇ ನಾನು ನಿನ್ನಲ್ಲಿಗೆ ಭಟ್ಟಾರಕನಾಗಿ ಬಂದೆನಲ್ಲವೊ ?

ಕಲಾ—ಅಣ್ಣಾ ! ಅಷ್ಟು ಹೊಗಳಿಕೆಗೆ ನಾನು ಅರ್ಹನಲ್ಲ. ಬೃಹಸ್ಪತ್ಯಾಚಾರ್ಯರ ಸನ್ಮಾನಕ್ಕೆ ನಮ್ಮ ಗುರುದೇವರೇ ಪಾತ್ರರು ; ನಾನಲ್ಲ. ಕವಿತಾಮಾನಿನಿಯ ಸುಮಧುರವಾದ ಅಧರಾಮೃತದ ಸವಿಯನ್ನು ಚನ್ನಾಗಿ ತಿಳಿದಿರುವ ನೀನಲ್ಲದೆ, ಅಭಿನವ ಕಾಳಿದಾಸನು ನಾನೆಂತಾಗುವೆನು ?

ಅಕ್ಷಯ—ಹಾಗೋ ! ಆದರೆ ಸಂತೋಷ ! ನಮ್ಮ ಗುರುವೇ ಸುರಗುರು,—ನಾನೇ ಕಾಳಿದಾಸ-ಒಪ್ಪಿದೆಯೋ? ಹಾಗಿದ್ದರೆ ಹಿಡಿ; 'ವಿದ್ಯಾರ್ಥಿಕುಲಮಂಡ' ನೆಂಬ ಬಿರುದನ್ನು.

ಕಲಾ—ಅದುಹೇಗೆ ? ಅರ್ಥಕ್ಕೆ ಸರಿಯಾದ ಪಾತ್ರವನ್ನು ನೋಡಬೇಡವೇ ?"ವಿದ್ಯಾರ್ಥಿ" ಎಂಬ ಶಬ್ದದ ಅರ್ಥವನ್ನು ಗ್ರಹಿಸುವದಕ್ಕಾದರೂ ಶಕ್ತಿಯಿಲ್ಲದ ನನಗೆ "ವಿದಾರ್ಥಿ ಕುಲಮಂಡನ" ನೆಂಬ ಬಿರುದೇ ? ಚನ್ನಾಗಿದೆ !

ಅಕ್ಷಯ—ಚೆನ್ನಾಗಿಯಿಲ್ಲದೆ ಮತ್ತೇನು? ಕಾಳಿದಾಸನ ಬಾಯಿಂದ ಹೊರಬಿದ್ದುದು ಅದೆಂದಿಗೂ ಸುಳ್ಳಾಗಿರಬಾರದಷ್ಟೆ?

ಕಲಾ—ತಲೆದೂಗಿ, "ಸರಿ ಸರಿ ! ಒಪ್ಪಿದೆನು. ಆದರೆ, ಕವಿಸಾರ್ವಭೌಮ!—ಅಭಿನವಕಾಳಿದಾಸ—ಮಹೋದಯ !! ಪ್ರಸನ್ನನಾಗಿ ನನ್ನನ್ನು ಆಶೀರ್ವದಿಸು ?

ಅಕ್ಷಯ—ನಗುತ್ತ "ಆಹಾ ! ಅಪ್ರಾರ್ಥಿತನಾಗಿಯೇ ನಿನಗೆ ಪ್ರಸನ್ನನಾಗಿ ಬಂದಿರುವೆನು. ಇಷ್ಟು ದೈನ್ಯವೇಕೆ?ಕೇಳು, ಆವಾವ ವರವನ್ನು ಕೋರುವೆಯೋ—ಕೇಳು. ಸರಸ್ವತಿಯು ಕೊಡುವಳು.

ಕಲಾ—ಕೈಜೋಡಿಸಿ "ಹಾಗಿದ್ದರೆ ಅನುಗ್ರಹಿಸಬೇಕು. ನನ್ನ ಈ ಸಂಕುಚಿತಹೃದಯವು ಭಕ್ತಿಜ್ಞಾನ ಪ್ರಭಾವದಿಂದ ವಿಸ್ತೃತವೂ, ಪ್ರಕಾಶವೂ ಆಗಬೇಕು. ಅಂತಹ ದಿವ್ಯ ಸ್ಥಾನದಲ್ಲಿ ನನ್ನ ಪರದೈವಸ್ವರೂಪರಾದ ಗುರುಗಳ ಮತ್ತು ನನ್ನ ಆಜನ್ಮದಾತಾರರ ಮೂರ್ತಿಗಳನ್ನು ಪ್ರತಿಷ್ಠಿಸಿ, ಅನವರತವೂ ನಾನು, ಅವರ ಸೇವಾರೂಪದ

ಕೈಂಕರ್ಯ (ನಿತ್ಯನೈಮಿತ್ತಿಕವೃತ್ತಿ) ದಲ್ಲಿ ತತ್ಪರನಾಗಿರಬೇಕು. ಮತ್ತು ಈ ನನ್ನ ಪ್ರಥಮ ಆಶ್ರಮವಾದೀ ಬ್ರಹ್ಮಚರ್ಯೆಯ, ಈ ಗುರು ಕುಲವಾಸವೆಂಬ ಅಮೋಘವಾದ ತಪಶ್ಚರ್ಯೆಯಲ್ಲಿ ನಾನು ಕೃತಾರ್ಥತೆಯನ್ನು ಹೊಂದುವಂತಾಗಬೇಕು. ಇಷ್ಟಾದರೆ ಸಾಕು?

ಅಕ್ಷಯ—ಇಷ್ಟೇ ಸಾಕೋ ? ಇನ್ನೂ ಬೇಕೋ ?

ಕಲಾ—'ಸಾಕು, ಈ ಮೂರುವರವೇ ನನಗೆ ಅನಂತಾನಂತವು.'

ಎಂದು ಹೇಳಿ, ಅಕ್ಷಯಕುಮಾರನ ಕೊರಳಮೇಲೆ ಕೈಯಿರಿಸಿ,—" ಅಣ್ಣಾ ! ಇಷ್ಟಕ್ಕೆ ವಿನೋದವು ಸಾಕು. ಬಂದುದೇನೆಂಬುದನ್ನು ತಿಳಿಯಹೇಳು "

ಅಕ್ಷಯ—ಬಂದುದೇ ? ಪ್ರಣಯ ಪ್ರೇರಣೆಯಿಂದ !!

ಕಲಾ—ಏನು ? ನಿನಗೂ ಪ್ರಯಣವೇ ?

ಅಕ್ಷಯ—ಏಕಾಗಬಾರದು ? ನಿನಗೂ—ಎಂದರೆ, ನಾನೇನು ಮನುಷ್ಯನಲ್ಲವೋ ? ಪ್ರಣಯೋತ್ಪತ್ತಿಯಾಗುವ ಪರಮಾಣುಗಳು ನನ್ನಲ್ಲಿ ಇಲ್ಲವೋ ?

ಕಲಾ—ನಾನು ನಂಬಲಾರೆನು ! ವಿದ್ಯಾರ್ಥಿಯೂ, ಬ್ರಹ್ಮಚರನಿಷ್ಠನೂ ಆಗಿರುವ ನಿನ್ನಲ್ಲಿ ಪ್ರಣಯವೆಂದರೆ ನಾನ್ಸ್ರೆ ನಂಬಲಾರೆನು. ಹೇಳು—ಅಣ್ಣಾ ! ಬಿಚ್ಚಿಹೇಳು. ಬಂದುದೇಕೆ ?

ಅಕ್ಷಯ—ವಿದ್ಯಾರ್ಥಿಯಾದ ಮಾತ್ರದಿಂದಲೇ ಪ್ರಣಯ ವುತ್ಪತ್ತಿಯಾಗಬಾರದೆಂದೋ ?—ಕೇಳು, ನಾನು ಬಂದುದು ಪ್ರಣಯ ಪ್ರೇರಣೆಯಿಂದಲೇ ! ಪ್ರಣಯ ದೇವತೆಯ ಸಂದರ್ಶನಲಾಭಕ್ಕಾಗಿಯೇ ಇಲ್ಲಿಗೆ ಬಂದುದು.

ಕಲಾ—ಮತ್ತೆ ಮತ್ತೆಯೂ ಈ ಕೊಂಕುನುಡಿಯೇಕೆ ? ಸ್ಪಷ್ಟ ವಾಗಿ ಹೇಳು;ನಿನ್ನ ಪ್ರಣಯದೇವತೆಯು ಎಲ್ಲಿರುವಳು ? ಅವಳನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಲು ನನ್ನ ಸ ಹಾಯವೇನನ್ನಾದರೂ ಬಯಸಿಬಂದೆಯಾ ?—

ಅಕ್ಷಯ—ಅಹಹಾ ; ಹಾ !! ಒಳ್ಳೆ ನಿಪುಣನಯ್ಯಾ ನೀನು !!! ನನ್ನ ಪ್ರಣಯದೇವತೆಯನ್ನು ನೀನು ಕಾಣದವನಲ್ಲವೇ? ಭಲೆ ! ಆಗಲಿ, ಕೇಳು ; ಹೇಳುವೆನು. ನನ್ನ ಪ್ರಣಯ ದೇವತೆಯು ನಿನ್ನಲ್ಲಿಯೇ, ನಿನ್ನ ಹೃದಯಾಂಗಣದಲ್ಲಿಯೇ ವಸಿಸಿರುವಳು. ಅವಳ ಪ್ರಸನ್ನತೆಯನ್ನುಂಟುಮಾಡಿ ಕೊಡಲು ನಿನ್ನ ಸಹಾಯವೇ ಬೇಕಾಗಿರುವುದು. ಹಾಗೂ ಅದಾವಳೆಂದು ಕೇಳುವೆಯೋ ? ಅವಳೇ ತ " ಅಚಲಭಕ್ತಿ !!! "

ಕಲಾ—ಅಕ್ಷಯಕುಮಾರನನ್ನಪ್ಪಿ ಪ್ರಿಯಮಿತ್ರ ! ಇಷ್ಟು ಹೇ ಳುವದಕ್ಕೆ ಎಷ್ಟು ಆಟಗಳನ್ನು ತೋರಿಸಿದೆ ? ಸರಿಸರಿ ನಿನ್ನ ಅಕ್ಷಯಕುಮಾರನೆಂಬ ಹೆಸರು ಅನ್ವರ್ಥವಾಗಿರು ವದೆಂದು ಪ್ರಕಟಿಸಬೇಕೆಂದೇ ಮಾಡಿದೆಯಲ್ಲವೆ ?

ಅಕ್ಷಯ—ಹಾಗೆಂದೇ ಭಾವಿಸು, ಮುಳಿಗಿ ಹೋದುದೇನು ? ನೀನಾದರೂ "ಪ್ರಣಯ" ವೆಂಬುದಕ್ಕೆ ನಿಜವಾದ "ಆಕಾಂಕ್ಷೆ" ಎಂದು ಭಾವಿಸದೆ ಕೇವಲ ರೂಢ್ಯರ್ಥ ವನ್ನೇ ಹಿಡಿದು ಜಡತೆಯನ್ನು ಪ್ರಕಟಿಸಿದೆ.

ಕಲಾ—ತಲೆದೂಗೆ ಸಂಭ್ರಮದಿಂದ " ಸರಿಸರಿ ಸ್ಪಷ್ಟಪಟ್ಟಿತು. ಕ್ಷಮಿಸು ! ಇನ್ನು ನನ್ನಲ್ಲಿ ಇಂತಹ ಜಡತೆಯನ್ನು ನೋಡಲಾರೆ "

ಅಕ್ಷಯ—ಹೋಗಲಿ, ಈವರೆಗೆ ನೀನೇನುಮಾಡುತ್ತಿದ್ದೆ ?

ಕಲಾ—ಗುರುಚರಣಧ್ಯಾನಮಾಡುತ್ತಿದ್ದು, ಬಳಿಕ ನನ್ನ ಈಗಿನ ಕರ್ತವ್ಯ ಚಕ್ರವನ್ನು ಸುಲಲಿತವಾಗಿ ನಡೆಯಿಸುವ ಸಾಧನವನ್ನು ಕಂಡು ಹಿಡಿಯುತ್ತಿದ್ದೆ.

ಅಕ್ಷಯ—ಆವ ಆಧಾರದಿಂದ ?

ಕಲಾ—ನಮ್ಮ ಸನಾತನ ಧರ್ಮರಹಸ್ಯವನ್ನು ಸದುದಾಹರಣೆಗಳಿಂದ ಪ್ರತಿಪಾದಿಸುತ್ತಿರುವ "ದಿನಚರ್ಯಾ" ಎಂಬ ರನ್ನಗನ್ನಡಿಯ ಆಧಾರದಿಂದ!

ಅಕ್ಷಯ—ಸರಿಯೆ;ನಿನ್ನ ಗುರಿ, ಯಾವ ವಿಚಾರಕ್ಕೆ ಸೇರಿದುದು?

ಕಲಾ—ಮತ್ತಾವುದಕ್ಕೆ ಸೇರಬೇಕು ? ಮೊದಲು ನಮಗೆ ಬೇಕಾದುದು " ಬ್ರಹ್ಮಚರ್ಯೆ !" ಬ್ರಹ್ಮಚರ್ಯೆಯ ಸಾರ್ಥಕತೆಗೆ ಅವಶ್ಯಕವಾದುದು. ಚಿತ್ತ ಶಕ್ತಿ,-ಆತ್ಮ ವಿಚಾರಗಳು. ಇನ್ನುಳಿದುವುಗಳೆಲ್ಲವೂ ಅದರ ಉಪಕರಣಪ್ರಾಯಗಳಾಗಿರುವುವು. ಅವುಗಳನ್ನು ಆವಾವಕಾಲಗಳಲ್ಲಿ ಹೇಗೆ ಹೇಗೆ ಉಪಯೋಗಿಸಬೇಕೆಂದು ಆರ್ಯರು ನಿರೂಪಿಸಿರುವರೋ, ಅದನ್ನು ಕುರಿತು, ಮಾನಸಿಕ ಕಾರ್ಯಪ್ರವರ್ತನೆಯಿಂದ ಅದನ್ನು ಉಪಯೋಗಿಸಿ,ಅದರ ಅನುಭವವು ಇಂತಹದೆಂದು ಗ್ರಹಿಸುತ್ತಿದ್ದೆನು.

ಅಕ್ಷಯ—ಸರಿ ಸರಿ ! ನೀನೇನು ಒಳ್ಳೇ ವೇದಾಂತಿಯೇ ಆಗುತ್ತಿರುವೆ?ನರಗಳಿನ್ನೂ ಬಲಿತಿಲ್ಲ,ಮಿದುಳಿಗೆ ತಕ್ಕಷ್ಟು ಬಲವೂ ಬಂದಿಲ್ಲ, ಈಗಲೇ ನಿನಗಿಷ್ಟು ಚಿಂತನೆಯಾದರೆ, ಗತಿ?

ಕಲಾ—ಕಿರುನಗೆಯಿಂದ "ಅಣ್ಣಾ ! ವೇದಾಂತಿಯಾಗುವುದು ಪುಣ್ಯಾತ್ಮರಪಾಲಿಗೆ ಮಾತ್ರ ಸೇರಿದುದು. ನಮ್ಮಂತಹ

ಪಾಮರರಿಗೆ ಅಂತಹ ಸುಕೃತವೆಲ್ಲಿಯದು ಇರಲಿ, ಈ ಚಿಂತನೆಯು ಕೂಡದೆಂದರೆ ಮತ್ತೆ ಚಿಂತನೆಗೆ ಕಾಲವಾವುದು ? ಆ ಶ್ಲೇಷ್ಮವ್ಯಾಧಿಯಿಂದ ಜೀರ್ಣವಾದ ಕರಣಪಟುತ್ವಗಳ ಚಲನ ವಲನಗಳ ಶಕ್ತಿಯನ್ನು ಕಳೆದುಕೊಂಡ ಆ ಜೀವನ್ಮೃತಾವಸ್ಥೆಯೇ ನಮ್ಮ ಚಿಂತನೆಗೆ ಕಾಲವೇನು ? ಎಳೆಯ ಮಿದುಳಿಗೆ ಬಲವು ಬರಬೇಕೆಂದಗಲಲ್ಲೆ ಚಲ್ಲಾಟಗಳಲ್ಲಿ ಬಿಟ್ಟರೆ, ಆ ಬಳಿಕ ನಮ್ಮಿಚ್ಛೆಗೆ ಬರುವುದುಂಟೇ ? ಅದರಲ್ಲಿ ಚಿಂತನಾಶಕ್ತಿಯು ಅಷ್ಟಿಷ್ಟಾದರೂ ಹತ್ತುವದೆಂದು ಭಾವಿಸಿದೆಯಾ ?

ಅಕ್ಷಯ—ತಮ್ಮ, ನಾನು ನಿನ್ನ ಆತ್ಮವಿಚಾರಕ್ಕಾಗಲಿ, ಬ್ರಹ್ಮಚರ್ಯ ವ್ರತಾಚರಣಕ್ಕಾಗಲಿ, ವಿರುದ್ಧಾಚಾರಿಯಾಗಿ ಬರಲಿಲ್ಲ. ಚಿಂತನೆಯೇ ಮಾನವನ ಸ್ವರೂಪ-ಸ್ವಕರ್ತವ್ಯಗಳನ್ನು ಬೋಧಿಸುವ ಮುಖ್ಯ ಸಾಮಗ್ರಿ. ಆದರೆ ನೋಡು !—ಪ್ರಕೃತಿಧರ್ಮಕ್ಕೂ, ಕಾಲಧರ್ಮಕ್ಕೂ ತಕ್ಕಂತೆ ಮಿತವಾಗಿ ಚಿಂತನಮಾಡುವುದು ಶ್ರೇಯಸ್ಕರವಲ್ಲದೆ, ಹಗಲೆನ್ನದೆ—ಇರುಳೆನ್ನದೆ ಹೀಗೆ ಮಿತಮೀರಿ ಚಿಂತಿಸುವುದೊಳ್ಳೆಯದಲ್ಲ.

ಕಲಾ—ಇದೇನು, ಹೀಗೆ ಹೇಳುವೆ ? ವಿದ್ಯಾರ್ಥಿಯಾದವನು ಚಿಂತನದಲ್ಲಿಯೇ ಸ್ವಸ್ಥಚಿತ್ತನಾಗಿರದೆ ಮತ್ತೆ ಹೇಗಿರಬೇಕು ? "ವಿದ್ಯಾತುರಾಣಾಂ ನಸುಖಂ ನನಿದ್ರಾ" ಎಂದಿದೆಯಲ್ಲವೆ ?

ಅಕ್ಷಯ—ಇದೆ, ಇದ್ದರೇನು? ವಿದ್ಯಾರ್ಥಿಯಾದವನು ಹಗಲಲ್ಲಿ ಉಪವಾಸವನ್ನೂ, ರಾತ್ರಿಯಲ್ಲಿ ಜಾಗರಣವನ್ನೂ

ಮಾಡಬೇಕೆಂದು ಅದು ಬೋಧಿಸುವುದಿಲ್ಲ. ಮಿತಿಮೀರಿ ನಿದ್ರಿಸುವುದಾಗಲೀ, ಕಾಲಾಕಾಲವೆನ್ನದೆ ಆಹಾರ ವ್ಯವಹಾರಗಳಲ್ಲಿ ಬೆರೆವುದಾಗಲೀ ಕೂಡದೆಂಬುದೇ ಅದರ ಅರ್ಥವು. ವಿದ್ಯಾರ್ಥಿಯು ತನ್ನ ಶಾಸ್ತ್ರವ್ಯಾಸಂಗ ಮತ್ತು ಅಭ್ಯಾಸಗಳಿಗೆ ತಕ್ಕಷ್ಟು ಸಾತ್ವಿಕಾಹಾರಗಳನ್ನು ಸಕಾಲದಲ್ಲಿ ತೆಗೆದುಕೊಳ್ಳುವುದೂ, ಸಕಾಲದಲ್ಲಿ ಸರಿಯಾದ ವ್ಯಾಯಾಮದಿಂದ ಅಂಗಗಳಿಗೆ ಉತ್ಸಾಹವನ್ನುಂಟುಮಾಡುವುದೂ ಮುಖ್ಯವೆಂದು ನಮ್ಮ ಆರ್ಯರೇ ಹೇಳಿಲ್ಲವೊ ? ಹಾಗೆಯೇ ನೋಡು ; ರಾತ್ರಿಯಲ್ಲಿ ಹೀಗೆ ನಿರ್ಜನ ಮತ್ತು ನಿಶ್ಶಬ್ದವಾದೆಡೆಯಲ್ಲಿ ಚಿತ್ತೈಕಾಗ್ರತೆಯಿಂದ ವಿಪರೀತವಿಚಾರದಲ್ಲಿ ಮಗ್ನನಾಗುವುದು ಎಷ್ಟರಹಾನಿಯನ್ನುಂಟುಮಾಡುವದೆಂದು ಬಲ್ಲೆಯಾ !

ಕಲಾ.—ಅಣ್ಣಾ ! ನೀನು ನನ್ನ ಹಿತಕ್ಕಾಗಿಯೇ ಇಷ್ಟು ದೂರ ಹೇಳುವೆಯೆಂದು ನಾನು ಬಲ್ಲೆ — ಆದರೂ ಕೇಳು ! ನಾಲ್ಕಾರು ಜನರ ಸಂದಣಿಯಲ್ಲಿ ಸೇರಿ, ಅವರೊಡನೆ ಸಂಭಾಷಣಾದಿ ವಿನೋದಗಳಿಂದ–ಎಂದರೆ, ಮನೋವಿಕಲ್ಪ ಹೇತುಗಳಾದ ದುರ್ವ್ಯಾಪಾರದಲ್ಲಿ ನಿದ್ದೆ ಕೆಡುವುದರಿಂದ ಸ್ವರೂಪನಾಶ, ಆಯುಃಕ್ಷೀಣಗಳಾಗುವದೆಂದು ಬಲ್ಲೆನು. ನನ್ನ ಜಾಗರವೆಂದರೆ ಅಂತಹದಲ್ಲ. ಕೇವಲ ಇತಿಕರ್ತವ್ಯತಾವಿಜ್ಞಾನ ಲಾಭಕ್ಕಾಗಿ ಮಾಡುವ ನನ್ನೀಚಿಂತನೆಯಿಂದ ಮಿದುಳಿಗೆ ಅಪಾಯವಾಗುವ ಕಾರಣವಿಲ್ಲ. ಹೇಗೆನ್ನುವೆ ? ತಾಪವಿಲ್ಲದೆ ಮಿದುಳು ಸುಡುವುದಿಲ್ಲ; ತಾಪವು ಮಾನವನ ಇಂದ್ರಿಯ ಚಾಪಲ್ಯ—ಅಶೋತ್ತ

ರಗಳಿಂದಲೇ ಹುಟ್ಟುವುದು. ನನ್ನ ಮನಸ್ಸು ಅಂತಹ ತಾಪಕ್ಕೆಡೆಗೊಡುವಂತಿಲ್ಲ. ಸದ್ಗುರು ಕೃಪೆಯಿಂದಲೂ ಸಾಧುಜನಾಗ್ರಣಿಯಾದ ನಿನ್ನ ಸತ್ಸಹವಾಸದಿಂದಲೂ ಶಾಂತಿದಾಯಕವಾದ ಈ ಪವಿತ್ರಸ್ಥಲನಿವಾಸದಿಂದಲೂ ನನ್ನಮನಸ್ಸಿಗೆ ಯಥೇಷ್ಟವಾದ ಶಾಂತಿಯು ದೊರೆತಿದೆ. ಶಾಂತಿಪ್ರಭಾವದಿಂದ ಮಾಡುವ ಚಿಂತನೆಗೆ ಈವೇಳೆಯೇ ಸಕಾಲವೂ, ಮನೋಲ್ಲಾಸಪ್ರದವೂ ಆಗಿರುವುದರಿಂದ ಇಂತಹ ಸುಮುಹೂರ್ತದಲ್ಲಿ ನನ್ನ ದಿನಚರ್ಯೆಯ ಪ್ರತಿಯೊಂದು ಕಾರ್ಯಕಲಾಪವನ್ನೂ ಮಗುಚಿಹಾಕಿ, ಅದರಲ್ಲಿ ಕೊರತೆಗಳೇನಾದರೂ ಇದ್ದರೆ ಹೇಗೆಂದು ವಿಚಾರಮಾಡಿ ನೋಡುವುದೂ, ಆ ಬಳಿಕ ಮುಂದಿನ ದಿನದ ಆಚರಣೆಯ ಪಟ್ಟಿಯನ್ನು ಗೊತ್ತುಮಾಡಿಕೊಳ್ಳುವುದೂ, ಇದಾದ ಬಳಿಕ ಸ್ಥಾಯಿಯಾದ ಮನಸ್ಸನ್ನು ವಿಶ್ರಾಂತಿ ಹೊಂದಿಸಲು ಸುಖವಾಗಿ ನಿದ್ರಿಸುವುದೂ ನನ್ನರಾತ್ರಿಯ ಕಟ್ಟಳೆಯಾಗಿದೆ.

ಅಕ್ಷಯ—ಸಂಭ್ರಮದಿಂದ ಕಲಾಧವನನ್ನಪ್ಪಿಕೊಂಡು— "ಮೆಚ್ಚಿದೆ, ಮಿತ್ರ ! ನಿನ್ನ ಅಮೃತೋಪಮವಾದ ಈ ಉತ್ತರಕ್ಕೆ ಮೆಚ್ಚಿದೆ. ಅತಿಯಾಗಿ ನೊಂದಿದ್ದ ಮನಸ್ಸನ್ನು ಸ್ವಲ್ಪಮಟ್ಟಿಗಾದರೂ ಆಹ್ಲಾದಪಡಿಸಬೇಕೆಂಬ ಉದ್ದೇಶದಿಂದ ನೆನೆದಂತೆಯೇ ನಿನ್ನಲ್ಲಿಗೆ ಓಡಿಬಂದೆನು. ಈಗಲೀಗ ಶಾಂತಿಯುಂಟಾಯಿತು."

ಕಲಾ—ಕೌತುಕದಿಂದ "ನಿನ್ನಮನಸ್ಸಿಗೆ ಅಷ್ಟು ಖತಿಯಾಗಲು ಕಾರಣವೇನು ?"

ಅಕ್ಷಯ:—ಕಾರಣವು ಮತ್ತಾವುದೂ ಇಲ್ಲ. ಮಧುಮಿತ್ರನ ದುರ್ನಡೆತೆಯನ್ನು ಕುರಿತಾದಹಿಂತೆ !

ಕಲಾ:—ಆದೇನೂ ಹೊಸದಲ್ಲವಷ್ಟೆ; ಇಂದೇಕೆ ಇಷ್ಟುವ್ಯಾಕುಲ ಪಡಬೇಕು ?

ಅಕ್ಷಯ:—ಹೊಸದಲ್ಲ ; ಆದರೂ ಕಲಾಧವಕುಮಾರ ! ಅವನೊಬ್ಬನ ದುರ್ಮಂತ್ರದಿಂದ ನಮ್ಮ ವಿದ್ಯಾರ್ಥಿಭವನದ ವಿದ್ಯಾರ್ಥಿಗಳಲ್ಲಿ ಎಷ್ಟುಮಂದಿ ಮೋಹಿತರಾಗಿ ಹೋಗಿದ್ದಾರೆಂದುಬಲ್ಲೆ ?

ಕಲಾ:—ನಿಜ ; ಈಗಾಗಲೇ ನಾಲ್ಕನೇ ಒಂದುಪಾಲು, ಅವನ ದುರ್ಮಂತ್ರದಿಂದ ಮುಗ್ಧವಾಗಿ ಹೋಗಿದೆ. ಹೀಗಾಗಬಾರದೆಂದು ನಾನೂ ಎಷ್ಟೆಷ್ಟೋ ಹೆಣಗಾಡಿ ನೋಡಿದೆನು ; ಫಲವಾಗಲಿಲ್ಲ. ಕಡೆಗೆ ಅವನಲ್ಲಿ ಸಂಭಾಷಣೆ-ಸಹವಾಸಗಳನ್ನೇ ಬಿಟ್ಟು ಬಿಟ್ಟೆನು. ಇದಕ್ಕಾಗಿಯೇ ನಿನ್ನನ್ನೂ ಎಷ್ಟೋಬಾರಿ ಎಚ್ಚರಿಸಿದ್ದೆನು.

ಅಕ್ಷಯ:—ಕುಮಾರ ! ನೀನು ಬಿಟ್ಟುದರಿಂದ ನಷ್ಟವೇನೂ ಆಗಲಿಲ್ಲ ನಾನೂ ನಿನ್ನಂತೆ ಉದಾಸೀನವನ್ನು ವಹಿಸುವುದರಿಂದ ನಮ್ಮ ಶಾಲೆಗೂ, ವಿದ್ಯಾಪೀಠಕ್ಕೂ, ಕಡಗೆ ನಮ್ಮ ಗುರುಗಳಿಗೂ ಹಾನಿತಟ್ಟಬಹುದೆಂದು ಶಂಕೆ, ನನಗಿದೆ. ಇದಕ್ಕಾಗಿ ಮಾಡಬೇಕಾದ ಕೆಲಸವೆಷ್ಟಿದ್ದರೂ ಮಾಡಲು ಬೇಸರಿಸುವನಲ್ಲ.

ಇಷ್ಟರಲ್ಲಿಯೇ ಶಾಂತಿನಾಥನು ಬಂದು, ಕಲಾಧವನ ಕಿರುಮನೆಯೊಳಹೊಕ್ಕು ಅಕ್ಷಯಕುಮಾರನ ಮುಂದೆನಿಂತನು. ಕಲಾಧವಕುಮಾರನು ಶಾಂತಿನಾಥನನ್ನು ಕುರಿತು “ ಇದೇನು ಶಾಂತಿನಾಥ ! ಇಷ್ಟು

ಹೊತ್ತಿನಲ್ಲಿ ಬಂದೆಯೇಕೆ ? ನಾವಿನ್ನೂ ಎಚ್ಚರವಾಗಿ ಮಾತನಾಡುತ್ತಿದ್ದುದರಿಂದ ನಿಷೇಧಿಸಲು ಬಂದೆಯೊ ?

ಶಾಂತಿ:—ನಾನು ಬಂದುದು ಅದಕ್ಕಲ್ಲವಾದರೂ, ಬಂದು, ನಿಷೇಧಿಸದೆ ಹೋಗುವುದಿಲ್ಲ.

ಕಲಾ:—ಕುತೂಹಲದಿಂದ 'ಅದಾವಕೆಲಸಕ್ಕಾಗಿ ಬಂದೆ ?'

ಶಾಂತಿ:—ಅಕ್ಷಯಕುಮಾರನನ್ನು ಕರೆದೊಯ್ಯಲು ಬಂದೆನು.

ಕಲಾ:—ಎಲ್ಲಿಗೆ ? ಏತಕ್ಕೆ ?

ಶಾಂತಿ:—ನಮ್ಮ ಗುರುಪುತ್ರಿಯು ಈಗಲೇ ಕರೆತರಹೇಳಿ ಕಳುಹಿರುವಳು.

ಅಕ್ಷಯ:—ಓಹೋ ! ಮರೆತಿದ್ದೆನು. (ಪಕ್ಕಕ್ಕೆ ತಿರುಗಿ) ಕಲಾಧವಕುಮಾರ ! ಇನ್ನು ನನಗಪ್ಪಣೆಯೋ ?

ಕಲಾ:—ಅಣ್ಣಾ ! ಸ್ವಲ್ಪತಾಳು, ಗುರುಪುತ್ರಿಯ ವಯಸ್ಸೆಷ್ಟು? ಗುರುವಿಗೆ ಮಕ್ಕಳೆಷ್ಟುಮಂದಿ ?

ಅಕ್ಷಯ:—ಗುರುಪುತ್ರಿಗೆ ಈಗ ಹದಿನಾಲ್ಕನೆಯ ವರುಷವು ನಡೆಯುತ್ತಿದೆ. ಅವಳೊಬ್ಬಳೇ ಮಗಳು. ಏಕೆ, ನೀನೀವರೆಗೂ ಅವಳನ್ನು ನೋಡಲಿಲ್ಲವೇ ?

ಕಲಾ:—ನೋಡಬೇಕಾದ, ಕೇಳಬೇಕಾದ ಅಗತ್ಯವಿಲ್ಲ. ಗುರುಸಮ್ಮುಖದಲ್ಲಿ ಎಷ್ಟೋಮಂದಿ ಬಾಲ-ಬಾಲಕಿಯರೂ, ಅನಾಥ-ಅನಾಥೆಯರೂ ಆಶ್ರಿತರಾಗಿದ್ದಾರೆ. ಅವರೆಲ್ಲರ ಪರಿಚಯವನ್ನೂ ಮಾಡಿಕೊಳ್ಳಬೇಕಾದ ಅಗತ್ಯವೇನಿದೆ !

ಅಕ್ಷಯ:—ಅದುಸರಿಯೆ, ಈಗ ನೀನೂ ನನ್ನೊಡನೆ ಬರುವೆಯೊ?

ಕಲಾ:—ನಾನೇಕೆಬರಲಿ ? ಗುರುಪುತ್ರಿಯ ಬಳಿಯಲ್ಲಿ, ಅದೂ ಇಷ್ಟುಹೊತ್ತಿನಲ್ಲಿ ಅಂತಹ ಕಾರ್ಯಗೌರವವು ನನಗೇನು ?

ಅಕ್ಷಯ:—ಹಾಗಿದ್ದರೆ ನಾನು ಹೊರಡಬಹುದೆ ?

ಕಲಾ:—ನಿನಗೂ ಅದೇಮಾತು—ಅಣ್ಣ ! ಇಷ್ಟುಹೊತ್ತಿನಲ್ಲಿ ಅಲ್ಲಿಗೆ ಹೋಗುವುದು ಸರಿಯಲ್ಲ. ಜನರ ಕಲುಷ ದೃಷ್ಟಿಯು ಬೀಳುವುದಾದರೆ ಕಷ್ಟ !

ಶಾಂತಿ:—ಕಲಾಧವಕುಮಾರ ! ನಮ್ಮ ಅಕ್ಷಯಕುಮಾರನು ಗುರುಪುತ್ರಿಗೆ ಹೊರಗಿನವನೆಂದು ತಿಳಿದಿರುವೆಯಾ ? ಈತನು ತನ್ನ ಬಾಂಧವ್ಯವಿಂತಹದೆಂದು ಈವರೆಗೆ ಯಾರೊಡನೆಯೂ ಹೇಳಿಲ್ಲ. ಆದರೆ ಈಗ ನಾನು ನಿನ್ನ ಸಂಶಯ ನಿವಾರಣೆಗಾಗಿ ಹೇಳುವೆನು ಕೇಳು. ನಮ್ಮ ಗುರುಪುತ್ರಿಯಾದ ಪೂರ್ಣಕಲೆಯು ಅಕ್ಷಯಕುಮಾರನ ಸಾಕ್ಷಾತ್ ಅಕ್ಕನಮಗಳು. ಎಂದರೆ ಗುರುವು ಈತನಿಗೆ ಭಾವಂದಿರೇ ಆದರು. ಕುಮಾರನಿಗೆ ತಾಯಿತಂದೆಗಳು ಬಾಲ್ಯದಲ್ಲಿಯೇ ಗತಿಸಿದರು. ಅಕ್ಕನು ಚಿಕ್ಕಮಗುವಾಗಿದ್ದ ಇವನನ್ನು ತನ್ನ ಮಗನೆಂದೇ ಅಕ್ಕರೆಯಿಂದ ಸಾಕಿ ಈತನೊಡನಾಡಿ, ಬೆಳೆವಂತೆ ಪೂರ್ಣಕಲೆಯನ್ನು ಹೆತ್ತು ಇಬ್ಬರನ್ನೂ ಬಿಟ್ಟುಹೋದಳು. ಆ ತಾಯಿಯನ್ನು ಸ್ಮರಿಸಿದ ದಿನವೇ ಸುದಿನವು. ಅಂತಹ ಸ್ವರ್ಗೀಯ ಮೂರ್ತಿಯ ಸಹಚರ್ಯೆಗೆ ಜನ್ಮಾಂತರದ ಸುಕೃತವಿರಬೇಡವೇ ? ನಮ್ಮ ಗುರುಗಳು ಪತ್ನೀವಿಯೋಗಾನಂತರ ಮತ್ತೆ ವಿವಾಹ ಬಂಧನಕ್ಕೊಳಗಾಗದೆ, ಇಂದ್ರಿಯ ಸಂಯಮದಲ್ಲಿ ನಿರತರಾದರು. ತಮ್ಮ ಅಖಂಡವಾದ ಸಂಪತ್ತಿಯೆಲ್ಲವನ್ನೂ ವಿದ್ಯಾದಾನಕ್ಕಾಗಿ ವಿನಿಯೋಗಿಸಲು ನಿಶ್ಚಯಿಸಿ ಈಶಾಲೆ -ವಿದ್ಯಾರ್ಥಿಭವನಗಳನ್ನು ನಿರ್ಮಿಸಿದರು. ಅನೇಕರು

ಇವರ ಪಾರಮಾರ್ಥಿಕ ಬುದ್ಧಿಗೆ ಪ್ರೋತ್ಸಾಹಕರಾಗಿ ಉದಾರಹಸ್ತದಿಂದ ಸತ್ಕಾರ್ಯಕ್ಕೆ ಸಹಾಯಕರಾಗಿ ನಿಲ್ಲಲು ಸಿದ್ಧರಾದರು. ಇವರಲ್ಲಿ ಹಲವರು ಅನಾಥರು ಬಂದು ಆಶ್ರಯವನ್ನು ಹೊಂದಿ—ಹೊಂದುತ್ತಿರುವರು. ಹೆಚ್ಚೇಕೆ ಕುಮಾರ ! ನಾನು ಮೊದಲಿಂದಲೂ ಇವರ ಅನ್ನದಿಂದಲೇ ಬೆಳೆದವನು. ಗುರುಪತ್ನಿಯು ಗತಿಸಿದುದು ಮೊದಲು ಈ ಮಕ್ಕಳನ್ನು ಈ ಎರಡು ತೊಡೆಗಳ ಲ್ಲಿಯೂ ಆಡಿಸಿ ಪಾಡಿಸಿದವನೇ ನಾನು ! ಇವರಿಬ್ಬರೂ ಭಿನ್ನೋದರರಾಗಿದ್ದರೂ ಏಕೋದರರಂತೆಯೇ ಇರತಕ್ಕ ವರು ! ಮತ್ತೇನು ಹೇಳಲಿ ! ಕುಮಾರ ! ಪೂರ್ಣಕಲೆ ಓದುಬರೆಹಗಳನ್ನು ಮತ್ತು ಇತರ ಪ್ರಾಪಂಚಿಕ ವಿಚಾ ರವನ್ನು ತಂದೆಗೂ ಹೆಚ್ಚಾಗಿ ಈತನೇ ತಿಳಿಸುವನು ನಿನಗೀತನ ಸಿಜಾಂಶ ವಿಂತಹದೆಂದು ತಿಳಿದಿರಲಿಲ್ಲವಾಗಿ ಶಂಕಿಸಿದೆ.

ಕಲಾ:—ಶಾಂತಿನಾಥ ! ನನಗಿದೊಂದೂ ತಿಳಿದಿರಲಿಲ್ಲವೆಂಬುದು ನಿಜ;—ಹಾಗಾದರೂ ಕೇಳು ! ಅಕ್ಷಯಕುಮಾರನು ವಿದ್ಯಾರ್ಥಿ,—ಅವನು ವಿದ್ಯಾರ್ಥಿಗಳ ಬಳಿಯಲ್ಲಿಯೇ ಹೆಚ್ಚು ಕಾಲವನ್ನು ಕಳೆಯುತ್ತಿರುವನು. ಇಂತಹ ವಿದ್ಯಾರ್ಥಿಯು ಇಷ್ಟುಹೊತ್ತಿನಲ್ಲಿ ತಾನಿದ್ದಸ್ಥಳವನ್ನು ಬಿಟ್ಟು, ಅತ್ತಿತ್ತಹೋಗುವುದು ; ಅದರಲ್ಲಿ ಹೆಂಗಸರಿದ್ದ ಲ್ಲಿಗೆ ಹೋಗುವುದು, ಜನಗಳ ಶಂಕೆಗೆಕಾರಣವಾದೀತು. ದೋಷದೃಷ್ಟಿಗಳು ತಾಯಿ ಮಕ್ಕಳ, ಒಡಹುಟ್ಟಿದವರ- ವಿಚಾರದಲ್ಲಿಯೇ ಆರೋಪಿಸುವರು. ಹೀಗಿರುವುದರಿಂದ

ಗುರುಪುತ್ರಿಯ ಕೋಮಲಚಿತ್ತಕ್ಕೆ ಆಯಾಸವನ್ನುಂಟು ಮಾಡುವ ವಿಚಾರದಲ್ಲಿ, ಅದೆಷ್ಟು ಅಗತ್ಯವಾಗಿರಲಿ, ಆದರಿಂದ ಎಷ್ಟು ಲಾಭವಾಗಿರಲಿ, ನಮ್ಮಂತಹ ವಿದ್ಯಾರ್ಥಿಗಳಿಗೆ ತಕ್ಕುದಲ್ಲ ! ಇದೇ ನನ್ನ ಅಭಿಪ್ರಾಯವು.

ಅಕ್ಷಯ:—ಶಾಂತಿನಾಥ ! ಕುಮಾರನಮಾತು ಸತ್ಯವು ! ಆದರೆ ಅತ್ತೆಕುವರಿಯ ಮಾತನ್ನು ತೆಗೆದು ಹಾಕುವುದಕ್ಕೂ ಮನಸ್ಸಿಲ್ಲ. ಕುಮಾರನ ಇಷ್ಟಕ್ಕೆ ವಿರೋಧವಾಗಿ ಕೆಲಸ ಮಾಡುವುದಕ್ಕೂ ಸಮ್ಮತವಿಲ್ಲ, ಏನುಮಾಡಲಿ ?

ಶಾಂತಿ:—ಅಕ್ಷಯಕುಮಾರ ! ನೀನೇನೂ ಶಂಕಿಸಬೇಕಾಗಿಲ್ಲ. ಇದೊಂದುಬಾರಿಗೆ ಕುಮಾರಿಯಮಾತನ್ನು ಮನ್ನಿಸು. ಸುಕುಮಾರಿಯು ಇಂದು ಭೀತಳಾಗಿರುವಳು. ಕಾರಣವು ತಿಳಿಯದು. ತಂದೆಯೊಡನೆ ಹೇಳಲು ಸಂಕುಚಿತಳಾಗಿರುವಳು. ಅವಳೊಬ್ಬಳೇ ಇರುವಳೆಂದು ತಿಳಿಯಬೇಡ. ಆವಳ ಅಜ್ಜಿಯೂ ಒಳಿಯಲ್ಲಿರುವಳು. ನಿನ್ನೊಡನೆ ನಾನೂ ಬರುವೆನು, ದಯೆಯಿಟ್ಟು ಹೊರಟು ಬಾ.

ಅಕ್ಷಯ:—ಕಲಾಧವನ ಮುಖವನ್ನು ನೋಡಿ, 'ಈಗೇನು ಮಾಡಲಿ ? ಕುಮಾರ !'

ಕಲಾ:—ಅನಿವಾರ್ಯಪ್ರಸಂಗವೆಂದು ತೋರುತ್ತಿದೆ, ಹೊರಡು ! ಆದರೆ, ನಾನು ನಿನ್ನನ್ನು ತಡೆದೆನೆಂದು ಗುರುಪುತ್ರಿಯು ನನ್ನ ವಿಷಯವಾಗಿ ಆಗ್ರಹಿಸದೆ ಯುಕ್ತವೆಂದು ತಿಳಿದು ಮನ್ನಿಸಬೇಕೆಂದು ತಿಳಿಸು ! (ಅಕ್ಷಯ ಕುಮಾರನು ಕಲಾಧವನ ಕರ್ತವ್ಯನಿಷ್ಠೆಗೆ ತಲೆದೂಗಿ, ಶಾಂತಿನಾಥನೊಡನೆ, ಪೂರ್ಣಕಲೆಯ ಬಳಿಗೆ ಹೊರಟುಹೋದನು. ಕಲಾಧವನೂ ವಿಚಾರಾನಂತರದಲ್ಲಿ ವಿಶ್ರಾಂತಿಗಾಗಿ ವಿದ್ಯಾಂಗನೆಯನ್ನು ಉಪಾಸಿಸಲುದ್ಯುಕ್ತನಾದನು.)

||ಶ್ರೀ||

ಚತುರ್ಥ ಪರಿಚ್ಛೇದ

"ಯಯಾವಿನಾ ಜಗತ್ಸರ್ವಂ ಶಶ್ವತ್ ಜೀವನ್ಮೃತಂ ಭವೇತ್
ಜ್ಞಾನಾಧಿದೇವಿ ಯಾ ತಸ್ಯೈ ಸರಸ್ವತ್ಯೈ ನಮೋನಮಃ ||೯||
"ಯಯಾವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ |
ವಾಗಧಿಷ್ಠಾತ್ರೀ ಯಾ ದೇವೀ ತಸ್ಯೈವಾಣ್ಯೈನಮೋನಮಃ ||೧೦|| "

(ದಿನಚರ್ಯಾ, ಪುಟ ೧೨೮)

(ಪೂರ್ಣಕಲೆಯ ದೈವಭಕ್ತಿ, ಪ್ರೇಮ ಗೌರವಗಳು ಮತ್ತು ಆಪ್ತಾಲೋಚನೆ.)

ರಾಗ— ಹಿಂದೂಸ್ತಾನಿ. (ಒಟುವಾಯ್ಯುಂದನ)

"ಜಯ ಜಯ ಜನನೀ ಜಗದುಜ್ಜೀವಿನಿ ಜಯ ಜಯ ಗೀರ್ವಾಣಿ ||ಪ||
ಜಯ ಬ್ರಹ್ಮಾನಂದದಾಯಿನಿ | ಜಯ ಬ್ರಹ್ಮಾಣಿ ||ಅ||
ಆವಳ ಕೃಪೆಯಿಂ ಜೀವಿಪೆವೊ, ಮತ್ತಾವಳವ್ಯಾಪನೆಯಿಂ ||
ದೈವಿಕಗುಣ ಸಂಭಾವಿತರಪ್ಪೆವೊ | ಭಾವಿಪೆನಾದೇವಿಯನಾಂ ||೧||
ಉಡುವುದು ತೊಡುವುದು ಕೊಡುವುದು ಹಿಡಿವುದು ನಡೆವುದದಾರಿಂದಂ|
ನುಡಿವೆಣ್ಣೆನಿಸಿದಳಾವಳೋ ಆನವಳೆಡೆವಿಡದೆರೆವೆಂ || ಜಯ ಜಯ||೨||
ಕಾಯೆನಗರಿವಂ, ಕಾಯಕೆ ಬಲಮಂ | ಮಾಯೆಯ ಬಿಡಿಸೆನ್ನಂ ||
ಕಾಯಜಪಿತ ಶೇಷಾದ್ರೀಶನ ನೆನೆವಾಸನ್ಮತಿಯೆಂದುಂ ||ಜಯ|| ೩ ||"

"ಭಗವತಿ ! ಬ್ರಹ್ಮಾಣಿ! ಭಕ್ತಮಂದಾರಿಣಿ! ಪರಮಕಲ್ಯಾಣಿ!! ಕೃಪೆಮಾಡು ! ಆವ ನಿನ್ನ ಕೃಪೆಯಿಂದಲೇ, ಚರಾಚರಾತ್ಮಕವಾದೀ ಪ್ರಪಂಚವು ಜೀವಸುತ್ತಿರುವುದೋ, ಆವ ನಿನ್ನ ಪ್ರೇರಣೆಯಿಂದಲೇ ಆವ ನಿನ್ನ ಅದ್ಭುತಶಕ್ತಿವ್ಯಾಪನೆಯಿಂದಲೇ ಜಗತ್ತು, ಚಲನ, ವಲನ, ಸಂ

ಭಾಷಣ, ಸಂಗ್ರಹಣಾದಿ ವ್ಯಾಪಾರಗಳಿಂದ ವೈಭವಗೊಳ್ಳುವದೋ, ಆ ನಿನ್ನ ಪರಮಕಾರುಣ್ಯಾಮೂರ್ತಿಯನ್ನು ನನ್ನ ಹೃತ್ಪೀಠದಲ್ಲಿ ಪ್ರಕಾಶ ಗೊಳಿಸು ! ಹೇ ದೇವಿ ! ವಾಗ್ದೇವಿ ! ಕ್ಷಣಮಾತ್ರದ ನಿನ್ನ ವಿಯೋಗ ದಿಂದ ಮಾನವನು ಮೂಕ, ಬಧಿರ, ಅಂಧ, ಉನ್ಮತ್ತನಂತಾಗುವನೋ, ಆವ ನಿನ್ನ ವರಪ್ರಸಾದಬಲದಿಂದಲೇ ತ್ರಿಲೋಕವನ್ನೂ ಜಯಿಸುವಂತಹ ಪ್ರತಿಭಾಸಂಪನ್ನನೆನ್ನಿಸುವನೋ, ಆ ನಿನ್ನ ಸುಮನೋಹರಸ್ವರೂಪವನ್ನು ನನ್ನರಸನೇಂದ್ರಿಯದಲ್ಲಿ ಸರ್ವದಾ ನೆಲೆಗೊಳಿಸಿ ಅನುಗ್ರಹಿಸುತ್ತಿರು.''

• "ಹೇ ಜನನೀ ! ಚೈತನ್ಯದಾಯಿನಿ !! ಯಾವ ಆ ನಿನ್ನ ಪ್ರತಿಭಾ ಸಂಪನ್ನತೆಯನ್ನೇ ಸುರ, ನರ, ಮುನಿ, ದನುಜ, ಸಿದ್ಧ, ವಿದ್ಯಾಧರರಾದಿ ಸಮಸ್ತರೂ ಪ್ರಾರ್ಥಿಸುತ್ತಿರುವರೋ, ಆವನಿನ್ನ ಪ್ರಣಯಸಹಾಯ ದಿಂದಲೇ ಸೃಷ್ಟ್ಯಾರನ ಸೃಷ್ಟಿರಚನಾಕಾರ್ಯವು ಕೌತುಕಯುಕ್ತವಾಗಿ ಪರಿ ಶೋಭಿಸುವುದೋ, ಆವ ನಿನ್ನ ದಿವ ಸ್ವರೂಪಕ್ಕೆ ಜನ್ಮಸ್ಥಾನವೆನ್ನಿಸಿದ ಸಾಕ್ಷಾತ್ ವಿರಾಡ್ರೂಪನ ವದನವು ಸುಧಾಮಯವೆಂದು ಪ್ರಸಿದ್ಧಿ ಹೊಂದಿರುವುದೋ, ಆ ನಿನ್ನ ಕೃಪಾಪರಿಪೂರ್ಣವಾದ ದಿವ್ಯರೂಪ ಸಾಕ್ಷಾತ್ಕಾರಲಾಭದಿಂದ ಈ ನಿನ್ನ ಅಣುಮಾತ್ರದ ಅಣುಗಿಯನ್ನು ಕೃತಾರ್ಥಳನ್ನಾಗಿ ಮಾಡು ! ತಾಯೇ ! ಕೈನೀಡಿ ಬೇಡುವೆನು. ಕೃಪೆ ಮಾಡು, ಮಾಡು ! ''

ಮೇಲೆಹೇಳಿದ ವಾಗ್ದೇವತಾಸ್ತುತಿ, ಸಂಪ್ರಾರ್ಥನೆಗಳು, ಶಾಲಾ ಧ್ಯಕ್ಷರಾದ ಶ್ರೀಯುಕ್ತ ಜ್ಞಾನಾನಂದಭಾಸ್ಕರಭಟ್ಟಾಚಾರ್ಯರ ಮನೆಯ ಮಾಳಿಗೆಯ ಮೇಲಿನ ಕಿರುಮನೆಯಲ್ಲಿ, ನೆಲದಮೇಲೆ ಮೊಣಕಾ ಲೂರಿ, ದೈನ್ಯಭಾವದಿಂದ ಕೈಜೋಡಿಸಿ, ಊರ್ಧ್ವಮುಖಿಯಾಗಿ ಕುಳಿತು ಪ್ರಾರ್ಥಿಸುತ್ತಿದ್ದ ಓರ್ವ ಹದಿನಾಲ್ಕು ವರ್ಷದ ಕೋಮ

ಬಾಲೆಯ ಕಮನೀಯಕಂಠದಿಂದ ಹೊರಡುತ್ತಿದ್ದವು. ಹೊತ್ತು ಆಗಲೇ ರಾತ್ರಿ ಹನ್ನೆರಡಕ್ಕೆ ಹತ್ತಿರವಾಗುತ್ತಿದ್ದಿತು. ಬಾಲೆಯು ಇನ್ನೂ ಮಲ ಗಿರಲಿಲ್ಲ. ಕಣ್ಣೀರು ಸುರಿಸುತ್ತಾ, ನಡನಡುವೆ ನಿಟ್ಟುಸಿರು ಬಿಡುತ್ತ ಕೀರ್ತನೆಮಾಡುತ್ತಿದ್ದಳು. ಬಾಲೆಯ ಮುಂದೆಯೇ ಒಂದು ದೀಪಸ್ತಂ ಭವೂ, ಮುಂದೆಯೇ ಶಾರದಾದೇವಿಯ ಚಿತ್ರಪಠವೂ ಪ್ರಕಾಶಿಸುತ್ತಿ ದ್ದವು. ಚಿತ್ರಪಟದಮುಂದೆ ಕೆಲವು ಪುಸ್ತಕಗಳೊಳಕೊಂಡಿದ್ದ ಪೆಟ್ಟಿ ಗೆಯೂ ಇರಿಸಲ್ಪಟ್ಟಿದ್ದಿತು. ಬಾಲೆಯು ಕುಳಿತಿದ್ದುದಕ್ಕೆ ಇದಿರಾಗಿಯೇ ಕಿರುಮನೆಯ ಒಂದು ಮೂಲೆಯ ಕಡೆಯಲ್ಲಿ ಒರ್ವ ವೃದ್ಧಳು ಗಾಢ ನಿದ್ರೆಯಲ್ಲಿ ಮಲಗಿದ್ದಳು.

ಸುಕುಮಾರಿಯು ಭಕ್ತಿಪಾರವಶ್ಯತೆಯಿಂದ ಕುಳಿತು ಧ್ಯಾನಮಾ ಡುತ್ತಿರುವಾಗಲೇ ಮಲಗಿದ್ದ ಮುದುಕಿಯು ಧಿಗ್ಗನೆದ್ದುನೋಡಿ, ಗಾಬರಿ ಗೊಂಡೆದ್ದು ಬಂದು, ಪ್ರೇಮವ್ಯಂಜಕಸ್ವರದಿಂದ ಪೂರ್ಣಕಲೆಯ ತಲೆಯ ಮೇಲೆ ಕೈಯಿರಿಸಿ ಕೇಳಿದಳು.

"ಇನ್ನೂ ಮಲಗಿಲ್ಲವೇ? ನನ್ನ ಕಂದಾ? ರಾತ್ರಿ ಇಷ್ಟುಹೊತ್ತಾ ಗಿದ್ದೂ ಇನ್ನೂ ಮಲಗಲಿಲ್ಲವೇ? ಹೀಗೆ ನಿದ್ದೆಗೆಟ್ಟರೆ ಹೇಗೆ,-ಮಗುವೇ ? ಎಳೆಮಿದುಳಿಗೆ ಈಗಲೇ ಇಷ್ಟೊಂದು ಚಿಂತೆಯಾದರೆ ಗತಿಯೇನು !

ಬಾಲೆ:—ಎಚ್ಚರಿಕೆಹೊಂದಿ, ಏನೆಂದೆಯಜ್ಜೀ ? ನಿದ್ದೆಗೆಟ್ಟೆನೆಂದೆ ಯಾ? ನಾನೇನುಮಾಡಲಿ? ಇಂದು ನನಗೇನೋ ನಿದ್ದೆಯ್ರೇ ಬಾರದಂತಾಗಿದೆ,--ಕಣ್ಣುಬಿಗಿದರಲ್ಲವೇ, ಮಲಗುವದು?

ವೃದ್ಧೆ:—ಆತುರದಿಂದ "ಅದೇಕೆ ನಿದ್ದೆಬಾರದು ? ಮಲಗಿದ್ದ ರಲ್ಲವೇ, ನಿದ್ದೆಬರುವದೂ ಇಲ್ಲದುದೂ ತಿಳಿಯಬೇಕು?"

ಬಾಲೆ:—ನಿಜ; ಆದರೆ ಕೇಳು, ಅಜ್ಜೀ ! ಅದೇನು ಕಾರಣದಿಂ ದಲೋ ನಾನರಿಯೆನು, ನನಗಿಂದು ಎಂದೂ ಇಲ್ಲದ

ದುಃಖವುಂಟಾಗಿ ಅಳುವುದಕ್ಕಾಗಲೀ ಮಲಗುವದಕ್ಕಾಗಲೀ ಆಗದಂತಾಗಿ ಹೋಗಿದೆ.

ವೃದ್ಧೆ—ಕಂಪಿತಸ್ವರದಿಂದ 'ಮಗುವೆ ? ಸುಮ್ಮನೇ ಅತ್ತರೆ, ನಿಮ್ಮಮ್ಮನು ಎದ್ದುಬರುವಳೇ ? ಎಂದೋ ಕಾಲವಾಗಿ ಹೋದ ತಾಯಿಯನ್ನು ನೆನೆನೆನೆದು, ಹೀಗೆ ಅತ್ತು ಅತ್ತು ಮೈಯನ್ನು ಗಾಸಿಮಾಡಿಕೊಳ್ಳಬಾರದು !'

ಬಾಲೆ—ಅಜ್ಜೀ ! ಅದಲ್ಲ-ಅದಲ್ಲ ! ನನ್ನ ದುಃಖಕ್ಕೆ ಕಾರಣವು ಅದೇನೂ ಅಲ್ಲ. ನಾನು ನಮ್ಮ ಅಮ್ಮನನ್ನು ನೆನೆದು ಅಳುತ್ತಿಲ್ಲ.

ವೃದ್ಧೆ—ಹಾಗಾದರೆ, ಮತ್ತೇಕೆ ವಿಚಾರಮಾಡುತ್ತಿರುವೆ ?

ಬಾಲೆ—ಅಜ್ಜೀ ! ಮಾವನನ್ನು ಬರಹೇಳಿ ಕಳಿಸಿದ್ದೆ ; ಆತನಿನ್ನೂ ಬರಲಿಲ್ಲ. ಈವರೆಗೆ ಆತನು ನನ್ನ ಮಾತನು ಅದೆಂದೂ ತೆಗೆದುಹಾಕಿರಲಿಲ್ಲ. ಇಂದು······

ವೃದ್ಧೆ—ಇಷ್ಟುಹೊತ್ತಿನಲ್ಲಿ ಅಷ್ಟುರ ಅಗತ್ಯವೇನಿದೆ?

ಬಾಲೆ—ಉಗುಳುನುಂಗುತ್ತ 'ಅಜ್ಜೀ! ನಿನಗೊಂದೂ ತಿಳಿಯದು. ನನಗಿಂದು ಮಿದುಳೆಲ್ಲಾ ಹಾರುವಂತೆ ಏನೇನೋ ಆಗಿ ಹೋಗಿದೆ ! ಹೀಗಾದುದೇಕೆಂದು ವಿಚಾರಮಾಡುವ ಆತುರವು ನನಗೆ ಅತಿಯಾಗಿದೆ. ಇದಕ್ಕಾಗಿ ಶಾಂತಿನಾಥನನ್ನೇ ಕಳುಹಿದ್ದೆನು. ಆತನಿನ್ನೂ ಬರಲಿಲ್ಲ.'

ವೃದ್ಧೆ—ಸರಿ ರಾತ್ರಿಯಲ್ಲಿ, ಆತನಿಲ್ಲಿಗೆ ಹೇಗೆಬರುವನು-ಪೂರ್ಣ?

ಬಾಲೆ / ಪೂರ್ಣಕಲೆ } ಕಣ್ಣುಗಳನ್ನು ಅರಳಿಸಿ ''ಬರಬಾರದೇಕೆ-ಅಜ್ಜಿ ? ಮಾವನೂ ಇಲ್ಲಿಗೆ ಬರಲಾಗದೇನು ? ನನ್ನೊ

ಡನೆ ಮಾತನಾಡುವುದಕ್ಕೂ ಆವನಿಗೆ ಅಡ್ಡಿಯೇ? ತಾಯಿಯುಬೇರೆ; ಮಾವನುಬೇರೆಯೇ?

ವೃದ್ಧೆ—ಹಾಗಲ್ಲ,-ಮಗು! ಮಾವನೂ ತಾಯಿಯೂ ಒಂದೇ ಆದರೂ ನೋಡು!-ನಿನ್ನ ಮಾವನಿನ್ನೂ ಪ್ರಾಯಸಮರ್ಥನು; ವಿದ್ಯಾರ್ಥಿ; ಮತ್ತು ನಿಮ್ಮಪ್ಪನ ಶಿಷ್ಯಮಂಡಲಿಯಲ್ಲಿ ಮುಖ್ಯನು. ಹೀಗಿದ್ದು, ಆತನಿಲ್ಲಿಗೆ ಇಷ್ಟುಹೊತ್ತಿನಲ್ಲಿ ಬಂದು, ವಯಸ್ಸಾದ ನಿನ್ನೊಡನೆ ಪ್ರಸಂಗಿಸುವುದು ಸರಿಯಾಗಿ ಕಾಣುವುದಿಲ್ಲ. ಏಕೆನ್ನುವೆ? ಪ್ರಕೃತಿಸ್ವಭಾವವೇ ವಿಚಿತ್ರವು! ಆದರಮೇಲೆ ಜನರ ದೋಷ-ಕಲಂಕ-ದೃಷ್ಟಿಯೂ ಬೀಳಬಹುದು. ಹಾಗಾಗುವದಾದರೆ ನಿಮ್ಮಪ್ಪನಿಗೆ......

ಪೂರ್ಣ—ಅಷ್ಟಕ್ಕೇ ತಡೆದು, 'ಸಾಕು ಸಾಕು! ಅಜ್ಜೀ! ಏನೇ ನನ್ನೋ ಹೇಳುವೆ? ನಮ್ಮ ಮಾವನು ನನ್ನೊಡನೆ ಮಾತನಾಡುವದಕ್ಕೆ ವೇಳೆ-ಕಾಲ-ಸಮಯಗಳನ್ನೂ ನೋಡಬೇಕೋ? ನಮ್ಮಪ್ಪನಿಗೆ ಕೊರತೆಯಾಗುವುದೋ? ನಾನು ನನ್ನ ಒಡನಾಡಿಯವರಾದ ಶಾರದೆ, ಕುಮುದೆಯರಂತೆಯೇ ಹೆರವರ ಮಕ್ಕಳಾದೆನೇನು?'

ವೃದ್ಧೆ—ಗುರುಭಾವನೆಯಲ್ಲಿ ನೋಡುವದಾದರೆ-ಪೂರ್ಣಕಲೆ! ನೀನು ಅಕ್ಷಯಕುಮಾರನಿಗೆ ಪ್ರಧಾನ ಗುರುಪುತ್ರಿ, ಶಾರದೆಯು ಸಹಾಯೋಪದೇಶಕನ ಸುಕುಮಾರಿ. ಕುಮುದೆಯೂ ಹಾಗೆಯೇ ಸರಿ. ದೇಹಬಾಂಧವ್ಯವು ಈ ವೇಳೆಯಲ್ಲಿ ಪ್ರಾಧಾನ್ಯವಲ್ಲವೆ-ತಾಯಿ!

ಪೂರ್ಣ—''ಅದೆಲ್ಲವೂ ಹಾಗಿರಲಿ, ಆತನು ಬರುವವರೆಗೂ

ನನಗೆ. . ." ಹೀಗೆ ಹೇಳುತ್ತಿದ್ದಂತೆಯೇ ತಲೆಯೆತ್ತಿ ಒಮ್ಮೆ ಕಿರುಮನೆಯ ಬಾಗಿಲಕಡೆಗೆ ನೋಡಿದಳು ; ಸಂಭ್ರಮ ದಿಂದೆದ್ದು ನಿಂತು ಕೂಗಿ ಹೇಳಿದಳು. "ಇದೇನಿದು–ಮಾವ ! ಹೊಸಬಗೆಯವನಾದೆ ? ಬದಲಾಯಿಸಿ ಬಿಟ್ಟೆಯಾ ? ಅಲ್ಲಿಯೇ ನಿಂತು ಸುಮ್ಮನೆ ಬೆರಗಾಗಿ ನೋಡುವುದೇನು ? " ಹೊರಗಡೆಯಲ್ಲಿ ಚಿತ್ರ ಪುತ್ಥಳಿಯಂತೆ ನಿಂತು ನೋಡುತ್ತಿದ್ದ ಅಕ್ಷಯನು ಕಿರುಮನೆಯೊಳಹೊಕ್ಕು ಪೂರ್ಣಕಲೆಗೆ ಮುಂದೆ, ವೃದ್ಧೆಗೆ ಬಲಗಡೆಗೆ, ಕುಳಿತು ವಿನೀತಭಾವದಿಂದ "ಅಜ್ಜೀ ! ನಾನು ಬಂದಿರುವೆನು.—"

ವೃದ್ಧೆ—ಅಕ್ಷಯಾ ! ನೀನು ಬಂದು ಎಷ್ಟು ಹೊತ್ತಾಯಿತು ?

ಅಕ್ಷಯ—ನಾನಾಗಲೇ ಬಂದೆನು. ನಿಮ್ಮ ಉಪದೇಶವನ್ನು ಕೇಳುತ್ತ ಹಾಗೆಯೇ ನಿಂತಿದ್ದೆನು.

ವೃದ್ಧೆ—ಅಣ್ಣಾ ! ನಾನೇನೋ ಹೇಳಿದೆನು. ಆದರೆ, ನೀನದನ್ನು ಬೇರೆಯಾಗಿ ತಿಳಿದು ಕೋಪಿಸಬಾರದಪ್ಪ. ಅದೆಲ್ಲವೂ ನಿನಗೆ. . .

ಅಕ್ಷಯ—ಅಜ್ಜೀ ! ನ್ಯಾಯವಾದ ಮಾತಿಗೆ ನಾನೇಕೆ ಕೋಪಿಸುವುದು ! ಅದು ನನ್ನ ಹಿತಕ್ಕೋಸ್ಕರವೇ ಹೇಳಿದುದೆಂದು ಬಲ್ಲೆನು, ನಿಜ ; ನಾನು ಕೂಡ ಇಲ್ಲಿಗೆ ಬರಲು ಹಿಂತೆಗೆಯುತ್ತಿದ್ದುದು, ಈ ಕಾರಣಕ್ಕಾಗಿಯೇ !!!

ವೃದ್ಧೆ—ಸಂಭ್ರಮದಿಂದ 'ಚಿರಂಜೀವಿಯಾಗು! ಅಣ್ಣಾ, ವಿಚಾರ ವಿಮರ್ಶೆಯೂ, ತಾಳ್ಮೆಯೂ ಆರಲ್ಲಿರುವದೋ ಅವರೇ ಮಾನವವರ್ಗದಲ್ಲಿ ಗಣ್ಯರು. ಅದರಲ್ಲಿಯೂ ಮುಖ್ಯವಾಗಿ, ವಿದ್ಯಾರ್ಥಿಯಾದವನಿಗೆ ತಾಳ್ಮೆಯೂ, ಶ್ರಮ

ಸಹಿಷ್ಣುತೆಯೂ, ಮುಂದಾಲೋಚನೆಯೂ ಚೆನ್ನಾಗಿರಬೇಕು. ಅದಿಲ್ಲದಿದ್ದರೆ ಅವನ ಮುಂದಿನ ಉನ್ನತಿಯ ಮಾರ್ಗವೇ ಮುಚ್ಚಿಹೋಗುವುದು.

ಪೂರ್ಣ—ಆತುರದಿಂದ ''ಅಜ್ಜೀ ! ಈ ನಿನ್ನ ಉಪದೇಶವನ್ನು ನಾಳೆಯವರೆಗೂ ತಡೆದಿರು. ತತ್ವಕ್ಕೆ ಕುಳಿತರೆ ಮಾವನಿಗೆ ಮತ್ತಾವದೂ ಬೇಕಾಗುವುದಿಲ್ಲ. ದಯೆಯಿಟ್ಟು ಈಗ ನೀನು ನನ್ನಮಾತಿಗೆ ಅವಕಾಶವನ್ನು ಕೊಡು.''

ಅಕ್ಷಯ—ಕಿರುನಗೆಯಿಂದ "ತಾಯೀ ! ಇದೇಕಿಷ್ಟು ಬೇಸರಗೊಳ್ಳುವೆ ? ತತ್ವವು ನಿನಗೆ ಬೇಕಾಗದಿರಲು ಹೇತುವೇನು ?''

ಪೂರ್ಣ—ಮಾವ ! ನನಗೆ ತತ್ವವು ಬೇಡವೆಂದು ಹೇಳುವದಿಲ್ಲ. ಆದರೆ, ನೀನೇಹೇಳು?—ತಲೆಯ ಮಿದುಳೇ ಹಾರುವ ಸ್ಥಿತಿಯಲ್ಲಿರುವಾಗ ತತ್ವ ಬೋಧೆಯು ಮಿದುಳಿಗೆ ಹತ್ತುವ ಬಗೆಯಾದರೂ ಹೇಗೆ ? ಮನಸ್ಸು ನೆಮ್ಮದಿಯಾಗಿದ್ದರಲ್ಲವೇ—ಮಿಕ್ಕ ತತ್ವ—ಸತ್ವ—ಎಲ್ಲವೂ ?

ಅಕ್ಷಯ—ಕೌತುಕದಿಂದ 'ಪೂರ್ಣ ! ಏನು ಹೇಳಿದೆ ? ಮಿದುಳು ಹಾರುವ ಸ್ಥಿತಿಯೆಂದೆಯಾ ? ಏಕೆ ! ಏತರಿಂದ ಹಾಗಾಗಿದೆ? ದೇಹಸ್ಥಿತಿಯು ಆರೋಗ್ಯವಾಗಿದೆಯಷ್ಟೆ ?'

ಪೂರ್ಣ—ಉಗುಳುನುಂಗಿ ' ಅಪ್ಪ ! ದೇಹಸ್ಥಿತಿ ಆರೋಗ್ಯವೇ ಆಗಿದೆ. ಆದರೆ ಮನಸ್ಸು ಮಾತ್ರ ಕೆಟ್ಟುಹೋಗಿದೆ !'

ಅಕ್ಷಯ—ಕಾರಣ ?

ಪೂರ್ಣ— ಕಾರಣವನ್ನು-ಇಷ್ಟೇಸರಿಯೆಂದು ಹೇಳಲಾರೆ. ಮುಖ್ಯವಾಗಿ ನೀನಿಂದು ತೋರಿಸಿದ ಉಪೇಕ್ಷೆಯು ಕೂಡ ಅದಕ್ಕೆ ಸೇರಿದುದೇ—

ಅಕ್ಷಯ—ಖಿನ್ನಭಾವದಿಂದ ಪೂರ್ಣಕಲೆಯ ಮುಂದೆ ಕುಳಿತು "ತಾಯಿ! ನಾನು ನಿಧಾನಿಸಿದ ಮಾತ್ರಕ್ಕೆ ನಿನಗೆ ಇಷ್ಟರ ದುಗುಡವೇ?

ಪೂರ್ಣ—ಕಂಪಿತಸ್ವರದಿಂದ 'ಮಾವ! ತಾಯಿಯ ಬಳಿಯಲ್ಲಿ ಸರಸ ಸಲ್ಲಾಪ ಸುಖವನ್ನು ಅನುಭವಿಸುವದಕ್ಕಂತೂ, ನನಗೆ ಪುಣ್ಯವಿಲ್ಲ. ತಂದೆಯಮಾತೆಂದರೆ, ಅವರು ಸಾಕ್ಷಾತ್ ಪರಮಾತ್ಮನ ಪ್ರತಿನಿಧಿ ಸ್ವರೂಪರೇ ಆಗಿರುತ್ತಾರೆ. ಇನ್ನು ನನ್ನ ದುಃಖವೆನ್ನು ನಾನು ಸಲಿಗೆಯಿಂದ ಹೇಳಿಕೊಳ್ಳುವದಾರಲ್ಲಿ? ನೀನು ಮತ್ತು ನಮ್ಮ ಅಜ್ಜಿ— ಇಬ್ಬರಲ್ಲದೆ ನನಗೆ ಮತ್ತಾರು? ಅಜ್ಜಿಯು ಕೈಕಾಲುತ್ರಾಣಗುಂದಿದವಳು. ಅಲ್ಲದೆ ಅರುಳುಮರುಳು,- ನಾನೊಂದೆಂದರೆ, ತಾನೊಂದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿರುವಳು. ನೀನಾದರೆ ಹೀಗೆ!' —(ಮುಂದೆ ಮಾತಿಲ್ಲದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು.)

ಅಕ್ಷಯ—ಕಂಬನಿದುಂಬಿ ಅನುಕಂಪಿತಸ್ವರದಿಂದ 'ಪೂರ್ಣಕಲಾ! ದುಃಖವನ್ನು ತಡೆದುಕೊ. ನಾನು ನಿನ್ನನ್ನು ಸ್ವಪ್ನದಲ್ಲಿಯೂ ಉಪೇಕ್ಷಿಸುವುದಿಲ್ಲ. ತಾಯಿ! ನಾನು ಆಗಲೇ ಬರುತ್ತಿದ್ದೆನು. ಆದರೆ ನನ್ನ ಮಿತ್ರರಲ್ಲಿ ಮುಖ್ಯನಾಗಿರುವ "ಕಲಾಧವ"ನೆಂಬುವನೊಡನೆ ಮಾತನಾಡುತ್ತ ಕುಳಿತೆನಾದುದರಿಂದ ನಿಧಾನವಾಯಿತು.'

ಪೂರ್ಣ—ಕಣ್ಣೊರಸಿಕೊಂಡು 'ಅವನೇನಾದರೂ ನಿನ್ನನ್ನು ಹೋಗಬೇಡವೆಂದು ತಡೆದನೇ? ನೀನಾಗಿ ಅಲ್ಲಿ ಮಾತಿಗೆ

ನಿಂತರೆ ಆವನೇನುಮಾಡುವನು ?

ಅಕ್ಷಯ—ಇಲ್ಲ, ತಾಯಿ ! ನಾನು ಸುಮ್ಮನೆ ನಿಲ್ಲಲಿಲ್ಲ. ಈ ದಿನ ನನಗೂ ಕಾರಣಾಂತರಗಳಿಂದ ಮನಸ್ಸಿಗೆ ವ್ಯಾಕುಲವುಂಟಾಗಿತ್ತು. ಅದನ್ನು ಹೋಗಲಾಡಿಸಿಕೊಳ್ಳಲಿಕ್ಕಾಗಿ ಆತನಲ್ಲಿಗೆ ಹೋದೆನು. ಆತನ ಸ್ಫೂರ್ತಿದಾಯಕಗಳಾದ ಸಂಭಾಷಣೆಗಳಿಂದ ನನಗೆ ಆಯಾಸವು ಪರಿಹಾರವಾದುದು ಮಾತ್ರವಲ್ಲ—ಅತ್ತಿತ್ತ ಗಮನವೂ ಇಲ್ಲದೆ ಹೋಯಿತು !!

ಪೂರ್ಣ—ಹಾಗಾಗಿರಬಹುದೆಂದೇ ನಾನು ಶಾಂತಿನಾಥನನ್ನು ಮತ್ತೆ ಕಳುಹಿದೆನು. ಆಗಲೂ ನೀನು ಬರುವಗಕ್ಕೆ ಅನುಮಾನಿಸಿದೆಯಲ್ಲವೆ !

ಅಕ್ಷಯ—ತಾಯಿ ! ನಾನು ಅನುಮಾನಿಸಲಿಲ್ಲ. ಅಜ್ಜಿಯ ಮಾತಿನಂತೆಯೇ ಕಲಾಧವಕುಮಾರನೂ ಹೇಳಿ, ನನ್ನನ್ನು ಇಷ್ಟು ಹೊತ್ತಿನಲ್ಲಿ ಹೋಗುವುದು ಕ್ಷೇಮಕರವಲ್ಲವೆಂದು ತಡೆದನು. ಆದರೂ ಆವನಿಗೆ ತಕ್ಕಮಟ್ಟಿಗೆ ಸಮಾಧಾನವನ್ನು ಕೊಟ್ಟು, ನಾಳೆಯಿಂದ ರಾತ್ರಿವೇಳೆಯಲ್ಲಿ ಸಂಭಾಷಣೆಗೆ ನಿಲ್ಲುವದಿಲ್ಲವೆಂದು ಭರವಸೆಯಿತ್ತು, ಹೊರಟುಬಂದೆನು.

ಪೂರ್ಣ—ತಲೆಯೆತ್ತಿ ವಿಸ್ಮಯದಿಂದ 'ಆದೇಕೆ ತಡೆದನು ಆವನಾರು ?'

ಅಕ್ಷಯ—ಏಕೆ ತಡೆದನೆಂದರೆ, ಅಜ್ಜಿಯು ಹೇಳಿದ ಕಾರಣವನ್ನೇ ಆತನೂ ಹೇಳಿದನು. ಅವನಾರೆಂದರೆ ನನ್ನ ಪ್ರಾಣಾಧಿಕ ಮಿತ್ರನು, ನಿನ್ನ ಪಿತೃದೇವರ ಶಿಷ್ಯಮಣಿಯು,

ವಿದ್ಯಾರ್ಥಿ ಕುಲಮಂಡನನೂ, ಮತ್ತೂ ಲೋಕರಂ
ಜಕನೂ ಆದ ಕಲಾಧವಕುಮಾರನೆಂಬ ವಿದ್ಯಾರ್ಥಿಯು!

ಪೂರ್ಣ—ಓಹೋ ಕೇಳಿಬಲ್ಲೆನು ! ಶಾರದೆಯ ತಂದೆಯು ಆತನನ್ನು ಸದ್ವೃತ್ತನೆಂದು ಹೇಳಿರುವದನ್ನೂ, ಕುಮುದೆಯ ತಂದೆಯು ಆತನನ್ನು ಭೀರು, ಲಜ್ಜಾಧೀನ, ಅರಸಿಕ ಇತ್ಯಾದಿ ಹಲವು ಬಗೆಯಾದ ಅಪಹಾಸ್ಯಗಳಿಂದ ತೆಗೆದೆತ್ತಿಯಾಡಿರುವುದನ್ನೂ ಕೇಳಿರುವೆನು. ಅಷ್ಟಲ್ಲದೆ ನಾನು ಅವನನ್ನು ನೋಡಿಲ್ಲ.

ಅಕ್ಷಯ—ನೋಡುವೆ, ಇಷ್ಟರಲ್ಲಿ ಅವನನ್ನು ನೋಡುವೆ!- ಮಗು ! ಆತನು ಸಾಮಾನ್ಯಮಾನವನೆಂದು ತಿಳಿಯಬೇಡ. ದೇವತಾ ಪ್ರಸಾದಕ್ಕೆ ಸಂಪೂರ್ಣಪಾತ್ರನಾದವನೆಂದುತಿಳಿ. ಹಾಗಿಲ್ಲದಿದ್ದರೆ ಮಾತಾಪಿತೃಗಳೇ ಮೊದಲಾದ ಸಮಸ್ತ ಬಂಧುವರ್ಗವೂ ಗತಿಸಿಹೋಗಲು ಅನಾಥನಾಗಿ ಬಂದು, ಗುರುಸನ್ನಿಧಿಯಲ್ಲಿ ಆಶ್ರಯ ಹೊಂದಿದ ಈತನು. ಹೀಗೆ ಲೋಕರಂಜಕನಾಗುವ ಸ್ಥಿತಿಗೆ ಬರುತ್ತಿರಲಿಲ್ಲ. ತಾಯಿ ! ಶಾರದೆಯ ತಂದೆಯು ಕುಮುದೆಯ ತಂದೆಯಂತೆ ಈಗಿನ ಬ್ರಹ್ಮೋಸಮಾಜದವರ ನಾಸ್ತಿಕವಾದಕ್ಕೂ, ಭ್ರಾಂತಿವಿಲಾಸದ ಕ್ಷಣಿಕ ಜೀವನಕ್ಕೂ ಬೆರೆದುಹೋಗುವವರಲ್ಲ. ಅವರು. ನಮ್ಮ ಗುರುದೇವರ ಮುಖ್ಯ ಅನುಗಾಮಿಯಾಗಿದ್ದು, ನಮ್ಮ ಸನಾತನ ಧರ್ಮದಲ್ಲಿಯೂ, ಆರ್ಯಸಂಪ್ರದಾಯಾನುಷ್ಠಾನದಲ್ಲಿಯೂ, ಪೂರ್ವಜರ ಉಪದೇಶ ಮಾರ್ಗಾನುಕರಣದಲ್ಲಿಯೂ ತಕ್ಕಮಟ್ಟಿಗೆ ನಿರತರಾಗಿರುವರು. ಆದ

ರಿಂದಲೇ, ಕರ್ತವ್ಯ ತತ್ಪರನೂ, ಧರ್ಮ ಭೀರುವೂ, ಮಾನನಿಧಿಯೂ, ಆತ್ಮವಿಚಾರ ವಿಮರ್ಶಕನೂ ಆಗಿರುವ ಕಲಾಧವನನ್ನು ಅತ್ಯಧಿಕವಾಗಿ ಗೌರವಿಸುತ್ತಿರುವರು. ಕುಮುದೆಯ ತಂದೆಯು ತನ್ನ ಇಷ್ಟದಂತೆ ಈತನು ನಡೆದುಕೊಳ್ಳುವದಿಲ್ಲವೆಂಬ ಒಂದೇಕಾರಣದಿಂದ ಹೀಗೆ ದೂರುತ್ತಿರಬಹುದು. ಆದರೇನು ? ಲೋಕಲೋಚನನೂ, ಕರ್ಮ ಸಾಕ್ಷಿಯೂ, ತ್ರಿಕಾಲ ವಂದ್ಯನೂ, ಜಗಜ್ಜೀವನನೂ ಆದ ಆ ಭಗವಾನ್‌ಭಾಸ್ಕರನನ್ನೇ ಬಗೆಬಗೆಯಾಗಿ ದೂರುವ ಭ್ರಾಂತಜೀವನಗಳಿಗೆ ಕಲಾಧವನ ವಿಷಯದಲ್ಲಿ ಅಪಲಪಿಸುವುದೊಂದು ಅತಿಶಯವೇ ?

ವೃದ್ಧೆ—ತಲೆದೂಗಿ "ಅಹುದಪ್ಪಾ-ಅಹುದು! ದೂಷಕರ ಸ್ವಭಾವವೇ ಹಾಗೆ. ದೂಷಕನಿಗೂ ಮೂಷಕಕ್ಕೂ ಭೇದವೇನು ? ಮೂಷಕವು ಚಿಂದಿಯನ್ನೇ ಹುಡುಕುತ್ತಿರುವದು. ದೂಷಕನು ಪರದೂಷಣಕ್ಕೆ ಛಿದ್ರವನ್ನೇ ನೋಡುತ್ತಿರುವನು,-ಸ್ವಲ್ಪ ಅವಕಾಶ ದೊರೆತರೆಸಾಕು. ತನ್ನ ಮೊನೆಯಾದ ನಾಲಿಗೆಯನ್ನು ತೆರದುಬಿಡುವನು, ಎಂದು ಪಂಡಿತರು ಹೇಳಿರುವರು. ಆದಕ್ಕೇ ಅಲ್ಲವೇ, ಅಣ್ಣ !-ನಾನು ನಿನ್ನನ್ನು ಇಷ್ಟುಹೊತ್ತಿನಲ್ಲಿ ಇಲ್ಲಿ ಮಾನಾಡುತ್ತಿರಬಾರದೆಂದುದು ?

ಪೂರ್ಣ—ಖತಿಯಿಂದ "ಅಜ್ಜಿ ! ಇದೊಂದು ದಿನ ಕ್ಷಮಿಸಿ ಅವಕಾಶಕೊಡು ! ನಾವು ಅಕಾರ್‍ಯವನ್ನು ಮಾಡುವವರಲ್ಲವಾದರೂ, ಹಿರಿಯರ ಮನಸ್ಸಿಗೆ ಅತೃಪ್ತಿಕರವಾ

ಗಿಯೂ, ನಮ್ಮ ಪುರೋವೃದ್ಧಿಗೆ ಆತಂಕವಾಗುವ ಬಾಗಿಯೂ ತೋರುವ ಕೆಲಸವನ್ನು ನಾವು ಮಾಡಬೇಕೆಂದಿಲ್ಲ. ಇನ್ನು ನೀನು ಧೈರ್ಯವಾಗಿರು.

ವೃದ್ಧೆ--ಪೂರ್ಣಕಲೆಯನ್ನು ಬಿಗಿದಪ್ಪಿ ಮುತ್ತಿಟ್ಟು "ಮಗುವೆ! ನೀನು ನನ್ನ ಮಗನಿಗೆ ತಕ್ಕ ಮಗಳೇ ಸರಿ! "ಅಪುತ್ರಸ್ಯಗತಿರ್ನಾಸ್ತಿ" ಎಂದು ಶಾಸ್ತ್ರವು ಹೇಳುತ್ತಿದ್ದರೂ, ನಾನಾವಿಧವಾದ ವಿಷಯಲಂಪಟರೋಗಕ್ಕೆ ತುತ್ತಾಗಿ ಸಾಯುವ ಪುತ್ರರಾಗುವುದಕ್ಕೆ ಪ್ರತಿಯಾಗಿ ಉಭಯಕುಲರಂಜನೆಯಾದ ನಿನ್ನಂತಹ ಪುತ್ರಿಕಾರತ್ನವೊಂದೇ ಸಾಕಲ್ಲವೇ "ಪುತ್ರಾಶ್ಚೈತ ಗುಣಾಪುತ್ರೀ" ಎಂಬದನ್ನು ಸಾರ್ಥಕಪಡಿಸುವುದಕ್ಕೆ? ತಾಯಿ! ನಾನಿನ್ನು ಕುಳಿತಿರಲಾರೆನು; ಹೋಗಿ ನಿಶ್ಚಿಂತಳಾಗಿ ಮಲಗುವೆನು. ನೀನು ಕೂಡ ಹೆಚ್ಚು ಹೊತ್ತು ನಿದ್ದೆ ಕೆಡದೆ ಬೇಗ ಬಂದು ಮಲಗು" (ಅಕ್ಷಯ ಕುಮಾರನನ್ನು ಕುರಿತು) "ಅಪ್ಪ! ಅಕ್ಷಯ! ವಿವೇಕಿಯಾದ ನಿನಗೆ ನಾನು ಹೇಳಬೇಕಾದುದೇ ಇಲ್ಲ. ಆದರೂ ಇದೊಂದು ಮಾತು. ಹಗಲೆಲ್ಲಾ ಪಾಠಪ್ರವಚನಾದಿ ವಿದ್ಯಾಭ್ಯಾಸದಿಂದ ಆಯಾಸ ಹೊಂದಿರುವ ಶರೀರಕ್ಕೂ, ಮನಸ್ಸಿಗೂ, ರಾತ್ರಿಯಲ್ಲಿ ತಕ್ಕಷ್ಟು ವಿಶ್ರಾಂತಿಯಿರಬೇಕು. ಹೆಚ್ಚು ಹೊತ್ತು ನಿದ್ದೆಗೆಡುವುದರಿಂದ ಅದೇ ಒಂದು ಕೆಟ್ಟ ಪದ್ಧತಿಯಾಗಿ ತಿರುಗಿ, ಕಡೆಗೆ ನಿದ್ದೆಬಾರದೆಯೇ ಅದೊಂದು ಜಾಡ್ಯದಂತೆ ಪರಿಣಮಿಸುವದು. ಇದನ್ನು ಹೇಳಿದರೆ ಪೂರ್ಣಕಲೆಯು ಲಕ್ಷ್ಯಕೊಡುವದಿಲ್ಲ

ನೀನಾದರೂ ಬುದ್ಧಿಗಲಿಸಿ, ಬೇಗ ಮಲಗುವಂತೆ ಮಾಡು ವುದು ಒಳ್ಳೆಯದು.

ಅಕ್ಷಯ—ಅಜ್ಜೀ ! ಈವರೆಗೆ ಕಲೆಯು ಅಷ್ಟುಮಟ್ಟಿಗೆ ತಿಳಿದವಳಾಗಿರಲಿಲ್ಲ. ಇನ್ನು ಮುಂದೆ ಹಾಗೆಯೇ ಮಾಡುವಳು. ನೀವಿನ್ನು ನಿಶ್ಚಿಂತರಾಗಿ ಮಲಗಬಹುದು.

ವೃದ್ಧೆಯು ತಲೆದೂಗುತ್ತ ಮೆಲ್ಲನೆದ್ದು ಹೋಗಿ ಮೊದಲಿನಂತೆಯೇ ಕಿರುಮನೆಯ ಮೂಲೆಯ ಕಡೆಯಲ್ಲಿದ್ದ ಹಾಸಿಗೆಯ ಮೇಲೆ ಮುಸುಕಿಟ್ಟು ಮಲಗಿದಳು.

ಅಕ್ಷಯ--ತಾಯಿ ! ಯಾವ ಕೆಲಸಕ್ಕಾಗಿ ಕರೆಯಿಸಿದೆ ?

ಪೂರ್ಣ— ಮಾವ ! ನಿಮ್ಮ ಸಂಗಡಿಗರಲ್ಲಿ ‹‹ಕಲಾಭ್ಯರ್ಥಿ'' ಎಂಬುವನಿದ್ದಾನೆಯೊ !

ಅಕ್ಷಯ—ಕುತೂಹಲದಿಂದ ‹‹ಏಕೆ ?''

ಪೂರ್ಣ—ಉಡಿಯಲ್ಲಿರಿಸಿಕೊಂಡಿದ್ದ ಪತ್ರವೊಂದನ್ನು ತೆಗೆದು ಅಕ್ಷಯಕುಮಾರನ ಕೈಯಲ್ಲಿರಿಸಿ ‹‹ಮಾವ ! ಇದನ್ನು ನೀನು ನಿಧಾನವಾಗಿ ಓದಿನೋಡಿ ಉತ್ತರವೇನು ಕೊಡಬೇಕೆಂಬುದನ್ನು ತಿಳಿಸಬೇಕು. ಧ್ಯಾನಾನಂತರ ನಿದ್ದೆ ಮಾಡಲು ಪ್ರಯತ್ನಿಸುತ್ತಿದ್ದ ನನ್ನ ಮುಂದೆ ಇದೇಗವಾಕ್ಷದಿಂದ ಈ ಪತ್ರವು ಬಂದು ಬಿದ್ದಿತು. ಇದಕ್ಕಾಗಿಯೇ ನಾನು ನಿನ್ನನ್ನು ಇಷ್ಟು ಬಲಾತ್ಕಾರದಿಂದ ಬರಹೇಳಿದೆನು. ಈ ಸಂಗತಿಯು ಅಜ್ಜಿಗೆ ತಿಳಿದರೆ ಗಲಭೆಯಾದೀತೆಂದು ಬಾಯ್ದೆರೆಯಲಿಲ್ಲ''

ಅಕ್ಷಯ—‹‹ಇರಲಿ, ಪೂರ್ಣಕಲಾ ! ಈ ಕಾಗದಕ್ಕೆ ನಾನು ನಾಳೆಯೇ ಸರಿಯಾದ ಉತ್ತರವನ್ನು ಬರೆದು ತಂದು, ಮುಂದಿನ ವಿಚಾರವನ್ನು ಹೇಳುವೆನು, ಇನ್ನು ನೀನು ಮಲಗು, ನಾನು ಹೋಗುವೆನು.''

ಎಂದು ಉತ್ತರನಿರೀಕ್ಷೆಯಿಲ್ಲದೆ ಹೊರಟುಹೋದನು. ಪೂರ್ಣಕಲೆಯೂಬಂದು ಅಜ್ಜಿಯ ಬಳಿಯಲ್ಲಿದ್ದ ಹಾಸಿಗೆಯ ಮೇಲೆ ಮಲಗಿದಳು.

||ಶ್ರೀ||

ಪಂಚಮ ಪರಿಚ್ಛೇದ.

"ಪೂರ್ಣಕಲೆಯ ಅನನ್ಯವಾದ ಪಿತೃಭಕ್ತಿ, ಮಾತೃಪ್ರೇಮ, ಗೌರವ; ಭಾಸ್ಕರಾಚಾರ್ಯರ ದೈವಿಕಪ್ರೇಮ, ಪುತ್ರಸ್ನೇಹ, ಶಿಷ್ಯವಾತ್ಸಲ್ಯ;—ಕಲಾಧರನ ಗುರುತರವಾದ ಗುರುಪದಸೇವಾನಿಷ್ಠೆ; ಮತ್ತು ಕರ್ತವ್ಯಜಾಗ್ರತೆ-ಇತ್ಯಾದಿ."

"ಅಪ್ಪಾ! ಇದೊ, ನಮಸ್ಕಾರಮಾಡುತ್ತೇನೆ!"

"ವತ್ಸೆ! ಭಗವತ್ಕೃಪೆಯು ನಿನ್ನನ್ನು ಸಂರಕ್ಷಿಸಲಿ, ಬಾ, ಕುಳಿತುಕೋ. ಇಷ್ಟೇಕಿಂದು, ಇಷ್ಟು ಆತುರದಿಂದ ಎಲ್ಲರಿಗೂ ಮೊದಲೆದ್ದುಬಂದೆ?" "ಕನಸಕಂಡೆದ್ದು ಕಳವಳಗೊಂಡೋಡಿಬಂದೆನು, ಅಪ್ಪಾ! ದೇಹಸ್ಥಿತಿಯು ಪೂರ್ಣಾರೋಗ್ಯದಲ್ಲಿರುವದಷ್ಟೆ?"

"ಮಗು! ಇದೇಕೆ ಕಂಠಸ್ವರವು ಹೀಗೆ ನಡುಗುತ್ತಿರುವದು? ಇದೇನು, ಕಣ್ಣಿನಲ್ಲಿ ನೀರು! ತಾಯಿ! ಇಷ್ಟರ ಭೀತಿಗೂ ಕಾರಣವಾದ ಆ ಕನಸೆಂತಹದು-ಹೇಳು, ಕೇಳುವ?"

ಈ ಮೇಲೆ ಹೇಳಿದ ಉತ್ತರ ಪ್ರತ್ಯುತ್ತರಗಳು, ಭಾಸ್ಕರಭಟ್ಟಾಚಾರ್ಯರ ಅನುಷ್ಠಾನ ಮಂದಿರದಲ್ಲಿ, [ಜಪತಪಾದಿ ಆಹ್ನಿಕಗಳನ್ನು ಮಾಡಲು ಗೊತ್ತಾದ ಮನೆ.] ಕೃಷ್ಣಾಜಿನದಮೇಲೆ ಕುಳಿತಿದ್ದ ಭಾಸ್ಕರಾಚಾರ್ಯರಿಗೂ, ಅವರ ಬಳಿಯಲ್ಲಿ ನಮ್ರಭಾವದಿಂದ ತಲೆಬಾಗಿ ಕೈಜೋಡಿಸಿ ಕುಳಿತಿದ್ದ ಪೂರ್ಣಕಲೆಗೂ ನಡೆಯುತ್ತಿದ್ದುವು. ಪೂರ್ಣಕಲೆಯ ಮುಖವು ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದಳೆಂಬುದನ್ನು ಸೂಚಿಸುವಂತೆ ಬಾಡಿ, ಬಸವಳಿದು ಬೆಳ್ಳಗಾಗಿದ್ದಿತು.

ಭಾಸ್ಕರಾಚಾರ್ಯರು ಆಹ್ನಿಕದಿಂದ ಇದೇ ಬಹಿರ್ಮುಖರಾಗಿದ್ದುದರಿಂದ ಇನ್ನೂ ಕೃಷ್ಣಾಜಿನದಿಂದ ಎದ್ದಿರಲಿಲ್ಲ. ಅಷ್ಟರಲ್ಲಿಯೇ ಆತುರದಿಂದ

ಬಂದೆರಗಿದ ಮಗಳ ಬಾಡಿದ ಮೊಗದಾವರೆಯನ್ನು ನೋಡಿ, ಶಂಕೆಗೊಂಡು ಮೇಲಿನ ಪ್ರಶ್ನೆಯನ್ನು ಹಾಕಿದರು. ಆದರೆ, ಸುಕುಮಾರಿಯು ಅವರ ಪ್ರಶ್ನೆಗೆ ಆವೇಳೆಯಲ್ಲಿ ಉತ್ತರವನ್ನು ಕೊಡುವಷ್ಟರ ಸಮಾಧಾನ ಸ್ಥಿತಿಯಲ್ಲಿದ್ದಂತೆ ಕಾಣಲಿಲ್ಲ. ಭಟ್ಟಾಚಾರ್ಯರು ಒಂದೆರಡು ನಿಮಿಷದವರೆಗೆ ನಿರೀಕ್ಷಿಸಿ, ಉತ್ತರವು ದೊರೆಯಲಿಲ್ಲವೇಕೆಂದು ಮಗಳ ಮುಖವನ್ನು ದೃಷ್ಟಿಸಿನೋಡಿದರು;—ವಿಸ್ಮಯ ಭಯ ಕೌತುಕಗಳಿಂದ ಮತ್ತೆ ಕೇಳಿದರು;—"ತಾಯಿ ; ಹೇಳಲಾರೆಯಾ ? ನಿನಗೇನಾಗಿದೆ ? ಏಕೆ ಅಳುತ್ತಿರುವೆ ?"

ಪೂರ್ಣ—ಬಹುಕಷ್ಟದಿಂದ—ಉಗುಳುನುಂಗಿ,—'ಅಪ್ಪಾ ! ಮಗಳು ತಬ್ಬಲಿಯಾಗುವಂತೆ ಅಮ್ಮನು ಮಾಡಿದ ಮೋಸವನ್ನೇ ಮಾಡಿ ಹೋಗುವದಿಲ್ಲವೆಂದು,—ಎಂದು ಹೇಳಿ ಮುಂದೆ ಹೇಳಲಾರದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು.

ಭಾಸ್ಕರ—ಅನುಕಂಪಿತಸ್ವರದಿಂದ—' ವತ್ಸೆ ! ನಿರೋಧಿಸು' ರೋದನವನ್ನು ಇಷ್ಟಕ್ಕೆ ನಿರೋಧಮಾಡಿ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡು. ಹೇಳು, ನಿನಗೇನಾಗಿದೆ ? ಏಕೆ ಅಳುತ್ತಿರುವೆ ?

ಪೂರ್ಣ—ಕಷ್ಟದಿಂದ ಅಳುವನ್ನು ತಡೆದು, —'ಅಪ್ಪಾ ! ಅಳುವದನ್ನು ಕೈಯಲ್ಲಾಗುವ ಮಟ್ಟಿಗೂ ತಡೆಯುತ್ತೇನೆ. ಆದರೆ ನನಗೆ ಭರವಸೆಯನ್ನು ಕೊಡು. ನಿನ್ನ ಪ್ರಕೃತಿ, ದೇಹಸ್ಥಿತಿಗಳು ನಿತ್ಯದಂತೆ ಆರೋಗ್ಯವಷ್ಟೆ ?

ಭಾಸ್ಕರ—ವಿಸ್ಮಯಕೌತುಕದಿಂದ-"ಆರೋಗ್ಯದಲ್ಲಿಯೇ ಇದ್ದೇನಲ್ಲವೇ ತಾಯಿ ? ನೋಡು; ನಿತ್ಯದಂತೆಯೇ, ನಿತ್ಯನೈ

ಮಿತ್ತಿಕವನ್ನು ಮಾಡುತ್ತಿರುವೆನು. ಏತರಿಂದ ಇಷ್ಟು ದುಗುಡಪಟ್ಟು ಕೇಳುವೆ ?

ಪೂರ್ಣ:—ಸ್ವಲ್ಪಸಮಾಧಾನಹೊಂದಿ;—'ಅಪ್ಪಾ ! ನನಗೊಂದು ಭಯಂಕರವಾದ ಸ್ವಪ್ನವುತೋರಿ, ರಾತ್ರಿಯೆಲ್ಲಾ ಬಹು ಕಷ್ಟಕ್ಕೆ ಗುರಿಯಾಡಿತ್ತು. "ಎಷ್ಟುಹೊತ್ತಿಗೆ ಬೆಳಗಾಗುವದು;—ಎಷ್ಟುಹೊತ್ತಿಗೆ ನಿನ್ನನ್ನು ನೋಡುವೆನು" ಇದೇ ನನ್ನ ರಾತ್ರಿಯ ಚಿಂತನೆಯಾಗಿದ್ದಿತು.

ಭಾಸ್ಕರ:—ಮುಗುಳುನಗೆಯಿಂದ—"ಕನಸು ಕಂಡಮಾತ್ರಕ್ಕೆ ಹೀಗೆ ಕಾತರಳಾಗುವದೇ—ಮಗು ? "

ಪೂರ್ಣ:—ಕಂಪಿತಸ್ವರದಿಂದ—'ಕನಸು ಅಂತಹ ಭೀತಿಜನಕವಾಗಿದ್ದಿತು.

ಭಾಸ್ಕರ:—ಅದೆಂತಹ ಕನಸು, ಅಷ್ಟು ಭೀತಿಜನಕವಾದುದು !

ಪೂರ್ಣ:—ಅದಾವನೋ ಕುಡುಕನೊಬ್ಬನು ಒಂದು ಮಲಗಿದ್ದ ನನ್ನನ್ನು ಎಬ್ಬಿಸಿ, "ನಿನ್ನ ತಂದೆಯು ಮೃತನಾದನು. ಮೊದಲೇ ರಾಯಿಯಿಲ್ಲದ ತಬ್ಬಲಿಯಾಗಿದ್ದ ನಿನ್ನನ್ನು ಸತ್ಪಾತ್ರನಿಗೆ ಒಪ್ಪಿಸುವ ಯೋಚನೆಯನ್ನೂ ಮಾಡದೆ, ಹೀಗೆ ತಾನೂಸತ್ತು ನಿನ್ನನ್ನು ಮುಳಿಗಿಸಿದನು. ಇನ್ನು ನಿನಗೆ ಬೇರೆ ರಕ್ಷಕರು ಯಾರೂ ಇಲ್ಲ. ನಿನ್ನ ಮುಂದಿನ ದುಃಖಜೀವಿತವನ್ನು ನೋಡಲಾರದೆ ನಾನೇ ನಿನ್ನ ರಕ್ಷಕನಾಗಲು ಬಂದೆನು. ನನ್ನೊಡನೆ ಎದ್ದು ಹೊರಟು ಬಾ," ಎಂದು ಹೇಳಿದಂತಾಯಿತು. ರಾತ್ರಿಯೆಲ್ಲಾ ಅಮ್ಮನನೆನಪೂ, ನಿನ್ನಮೇಲಿನ ಶಂಕಾತಂಕವೂ ಒಟ್ಟಿ

ಗಿ ಮನಸ್ಸಿಗೆಹತ್ತಿ ನನ್ನನ್ನು ಸುಡುತ್ತಿದ್ದಿತು. ಈ ವಿಚಾರವನ್ನು ಅಜ್ಜಿಗೆ ಹೇಳಿದೆನು. ಅವಳಿಂದ ಸರಿಯಾದ ಉತ್ತರವು ದೊರೆಯಲಿಲ್ಲ.

ಭಾಸ್ಕರ—ಅವ್ವ ನೇನುಹೇಳಿದಳು ?

ಪೂರ್ಣ—ಹೇಳುವದೇನು—" ನೀನು ರಾತ್ರಿ ಹೊತ್ತು ಮಾರಿ ಮಲಗಿದುದರಿಂದ ಮಿದುಳುದುಡಿದು ಹಾಗೆ ವಿಕಾರವಾದ ಕನವರಿಕೆಯನ್ನುಂಟುಮಾಡಿರುವದು. ಇದೇನೂ ವಿಚಾರ ಪಡುವಂತಹ ಸ್ವಪ್ನವಲ್ಲ. " ಎಂದಳು.

ಭಾಸ್ಕರ—ತಲೆದೂಗಿ—' ಸರಿಯಾಗಿಯೇ ಹೇಳಿರುವಳು ; ಮಗು ! ಕೇಳು ; ಮಾನವದೇಹದಲ್ಲಿ,—ಚಿಂತನ—ಸ್ಮರಣ-ಮನನಾದಿಗಳಿಗೆಂದು ಒಂದು ಧಾತುವೇರ್ಪಟ್ಟಿರುವದು. ಅದಕ್ಕೆ ಸಂಬಂಧಿಸಿದಂತೆಯೇ ಸ್ವಪ್ನನಾಡಿಯೂ ಇರುವದು. ಅದು ಮಾನವನ ಮನೋಧರ್ಮಕ್ಕೆ ತಕ್ಕಂತೆ ಅಡಿಗಡಿಗೆ ಅವರ ಚಿಂತನೆಗೆ ಬರುವ ವಿಚಾರವನ್ನು ದೃಶ್ಯಗೊಳಿಸುವುವು. ಇದನ್ನೇ ರಾತ್ರಿ ನಿದ್ದೆಯ ಮಬ್ಬಿನಲ್ಲಿ ಕಂಡರೆ ಕನಸೆಂದೂ, ಎಚ್ಚರಿಕೆಯಲ್ಲಿ ಕಂಡರೆ ಬುಧ್ಧಿಭ್ರಮಣೆ ಅಥವಾ ಚಿತ್ತವಿಕಾರವೆಂದೂ ಹೇಳುವರು. ಇದಕ್ಕೇಕನವರಿಕೆಯೆಂದೂ ಹೇಳುವರು. ನೀನು ಮಲಗುವದಕ್ಕೆ ಮೊದಲು ಅವುದೋ ವಿಚಾರವಾಗಿ, ಮುಖ್ಯ ನಿನ್ನ ದೇಹಸಂಬಂಧವಾದ ಯೋಜನೆಯಲ್ಲಿ ಚಿಂತಿಸುತ್ತಿದ್ದೆಯೆಂದೂ, ಅದೇ ಚಿಂತನೆಯೇ ಉದ್ರೇಕಹೊಂದಿ, ಬುದ್ಧಿ, ಮೇಧಾ, ಜ್ಞಾನೇಂದ್ರಿಯ

ಗಳನ್ನು ಚದರುವಂತೆಮಾಡಿ, ಸ್ವಪ್ನನಾಡಿಯನ್ನು ಕಲಕಿ ಹೀಗೆ ಭಯೋತ್ಪಾದಕದೃಶ್ಯವನ್ನುಂಟುಮಾಡಿರಬೇಕೆಂದೂ ಭಾವಿಸುತ್ತೇನೆ ! ಅಹುದಲ್ಲವೇ-ಮಗು ? ರಾತ್ರಿ ನೀನು ಬಹಳ ಹೊತ್ತು ಎಚ್ಚರದಲ್ಲಿದ್ದೆಯಲ್ಲವೆ ?

ಪೂರ್ಣ—ಮೆಲ್ಲನೆ--' ಅಹುದು, ಅಪ್ಪಾ ! ರಾತ್ರಿ, ಹನ್ನೆರಡುಗಂಟೆಯುವರೆಗೂ ನಿದ್ದೆ ಬರಲಿಲ್ಲ '

ಭಾಸ್ಕರ—ತಲೆದೂಗಿ,—''ನೋಡಿದೆಯೋ ? ಅದೇ ಈ ನಿನ್ನ ಕನವರಿಕೆಗೆ ಮೂಲ ! ಅತಿಯಾಗಿ ನಿದ್ದೆ ಮಾಡುವುದೂ ಇಲ್ಲವೆ—ನಿದ್ದೆಗೆಟ್ಟು ಕುಳಿತಿರುವದೂ—ಇವೆರಡೂ ಮೇಲಿನ ಬುದ್ಧಿಭ್ರಮಣೆಗೆ ಕಾರಣವು. ನಮ್ಮ ವಿದ್ಯಾರ್ಥಿಗಳಲ್ಲಿ ಕೆಲವರು ಅತಿಯಾಗಿ ನಿದ್ದೆ ಮಾಡುವವರಾಗಿದ್ದರೆ, ಹಲವರು, ಹಲವು ವಿಚಾರಗಳಿಂದ ಮತಿಭ್ರಮಕ್ಕೆಡೆಯಾಗಿ ನಿದ್ರೆಯನ್ನು ನಿರಾಕರಿಸಿ, ವಿಶ್ರಾಂತಿಸುಖವನ್ನು ವೃಥಾ ಕೆಡಿಸಿಕೊಳ್ಳುತ್ತಿರುವರು. ವಿಚಾರಮಾಡುವದಾದರೆ ಇವೆರಡೂ ಆರೋಗ್ಯಕ್ಕೆ ಪ್ರತಿಕೂಲಾಚರಣೆಗಳೇ ಸರಿ. ಇದಕ್ಕೆ ನಿನಗೆ ದೃಷ್ಟಾಂತರವು ಬೇಕಾದರೆ ಹೇಳುವೆನು, ಕೇಳು ! ಮಗು—ದುರ್ವ್ಯಸನದಲ್ಲಿದ್ದು ಒದ್ದಾಡುವ ಕಾಮುಕರಿಗೆ, ಕುಡುಕರಿಗೆ, ಚೋರರಿಗೆ, ಕೊಲೆಪಾತಕರಿಗೆ, ರಾತ್ರಿಯಲ್ಲಿ ನಿದ್ದೆಮಾಡುವದೇ ಭಯಂಕರವಾಗಿ ತೋರುತ್ತದೆ. ಕಣ್ಣುಮುಚ್ಚಿದರೆಂದರೆ, ಅವರಿಗೆ ಅವರ ಹೃದಯವನ್ನೇ ಆಕ್ರಮಿಸಿಕೊಂಡಿರುವ ದುರಾಚಾರರೋಗವು ಪುರುಷಾಕರದಿಂದ

ಮುಂದೆ ನಿಂತಂತಾಗಿ, ಅವರನ್ನು ಅವರ ಕರ್ಮಫಲಾನುಭವಕ್ಕಾಗಿ ಶಿಕ್ಷಿಸುವಂತೆಯೇ ಭಾಸವಾಗುತ್ತದೆ. ಇದರ ಭೀತಿಯಿಂದಲೇ ಅವರು ರಾತ್ರಿಯನ್ನು ದ್ಯೂತ, ಪಾನ, ವೇಶ್ಯಾರಾಧನೆಗಳೇ ಮೊದಲಾದ ಹಲವು ವ್ಯಾಪಾರಗಳಿಂದ ಕಳೆದುಕೊಳ್ಳುತ್ತಾರೆ.

ಪೂರ್ಣ—ತಲೆಯೆತ್ತಿ—' ಅಪ್ಪ ! ಅತಿಯಾಗಿ ನಿದ್ದೆಗೆಡುವದಂತೂ ಆರೋಗ್ಯಕ್ಕೆ ಪ್ರತಿಕೂಲವೆಂದು ಹೇಳಿದೆ. ಆದರೆ, ಅತಿಯಾಗಿ ನಿದ್ರಿಸುವವನಿಗೂ ಬಾಧಕವೇಕೆ ? ಅವನಿಗೆ ಬುದ್ಧಿಮಾಂದ್ಯವಾಗಲು ಕಾರಣವೇನು ? '

ಭಾಸ್ಕರ— ತಾಯಿ ! ತನ್ನ ವಯಃ ಪ್ರಮಾಣಕ್ಕೆ ತಕ್ಕಷ್ಟು, ಆಹಾರ—ಪಾನೀಯ ನಿದ್ರೆಗಳನ್ನು ಹೊಂದುವುದು ಪ್ರತಿಮಾನವನಿಗೂ ನಿಯಮವಾಗಿದೆ. ಇದರಲ್ಲಿ ಆಹಾರ—ಪಾನೀಯಗಳ ವಿಚಾರವಾಗಿ ಯಾರು ಬೋಧಿಸಲಿ• ಯಾರು ಬೋಧಿಸದಿರಲಿ—ತನ್ನ ವಯಃಪ್ರಮಾಣಕ್ಕೆ ತಕ್ಕಷ್ಟನ್ನೂ—ಕೆಲವು ಸಂದರ್ಭದಲ್ಲಿ, ಅದಕ್ಕೆ ದ್ವಿಗುಣವಾದಷ್ಟನ್ನೂ ತೆಗೆದುಕೊಳ್ಳುವದು ವಾಡಿಕೆಯಾಗಿಹೋಗಿದೆ. ಹಾಗೆ ತೆಗೆದುಕೊಂಡ ಆಹಾರವು ಪಚನವಾಗುವಂತೆ ತನ್ನ ಶಕ್ತಿಗೆ, ತನ್ನ ಅವಯವೀಕರಣಗಳಸಾರ್ಥಕ್ಯತೆಗೆ ಬೇಕಾದಷ್ಟು ಕಷ್ಟಕಾರ್ಯಗಳನ್ನು ಮಾಡಬೇಕೆಂಬ ವಿಧಿಯು ತನ್ನ ಪಾಲಿಗೆ ಬಂದಿದ್ದರೂ, ಅದನ್ನು ಕಟ್ಟಿಟ್ಟು, ಸೋಮಾರಿತನದಿಂದ, ಮಲಗುವದಾದರೆ, ಮೊದಮೊದಲು ಎಂದರೆ, ಒಂದೆರಡು ತಿಂಗಳ ಪರಮಾ

ವಧಿ,—ಅವರಿಗೆ ಆ ಅತಿರೇಕ ನಿದ್ರೆಯಿಂದ ಕೆಡಕು ಅ ಷ್ಟಾಗಿ ಕಾಣದಿದ್ದರೂ, ಕ್ರಮ ಕ್ರಮವಾಗಿ, ಅವರಿಗೆ ಆಹಾರವು ಜೀರ್ಣವಾಗದೆ, ದೇಹಪಟುತ್ವವನ್ನು ಕುಗ್ಗಿಸಿ, ಜಡರೋಗವನ್ನುಂಟುಮಾಡುವದು. ಬರಬ ರುತ್ತ ಅದೇ ಬಲವಾಗಿ ಆತನನ್ನು ನಾನಾಬಗೆಯ ಉಪ ರೋಗಗಳಿಗೂ ಗುರಿಮಾಡಿ, ಕಡೆಗೆ ಆ ನಿದ್ರೆಯನ್ನೇ ದ್ವೇಷಿಸುವಂತಹ ಭಯಂಕರ ಪರಿಣಾಮವನ್ನೂ ಹೊಂದ ಬಹುದು.

ಪೂರ್ಣ—ಅಪ್ಪಾ ! ನಾನು ಹಾಗೆಂದೂ ಅತಿಯಾಗಿ ನಿದ್ದೆ ಯನ್ನು ಮಾಡುವದಾಗಲೀ, ನಿದ್ದೆಗೆಟ್ಟು ಕುಳಿತಿದ್ದು ದಾಗಲೀ ಇಲ್ಲ. ಆದರೆ ನಿನ್ನೆರಾತ್ರಿ, ನನಗೆ ನಿದ್ದೆಬರ ಲಿಲ್ಲ.

ಭಾಸ್ಕರ—ಮಗು ! ಹಾಗಿದ್ದರೆ ನಿನಗೆ ನಾನು ಹಿಂದೆ ಹೇಳಿದ ಚಿಂತೆಯೇ ಉಂಟಾಗಿರುವಂತೆ ಭಾವಿಸುವೆನು. ಹಾಗೆ ಚಿಂತಿಸುವ ಕಾರಣವಿಲ್ಲ—ತಾಯಿ ! ನಾನು, ನಿನ್ನ ವಿಷಯವಾಗಿ ಉಪೇಕ್ಷಿಸಿರುವೆನೆಂದು ತಿಳಿಯ ಬೇಡ ! ನಿನ್ನ ಮುಂದಿನ ಸುಖ, ಸೌಭಾಗ್ಯ, ಸಂಪದಗಳ ಉತ್ಕರ್ಷತೆಗೆ ಬೇಕಾದ ಅನುವನ್ನು ಕಲ್ಪಿಸುವದೇ ನನ್ನ ಪರಮೋದ್ದೇಶವಾಗಿದೆ. ಅದನ್ನೇ ನಾನು ನನ್ನ ಪ್ರತಿದಿನದ ಕರ್ಮಾಚರಣೆಯಲ್ಲಿಯೂ ಪ್ರಥಮಪಾಠದಂತೆ ಮನನ ಮಾಡಿಕೊಳ್ಳುತ್ತಿರುವೆನು. ಆದರೂ ಮಾಡುವದೇನು? ಕಲಾ ! ನಮ್ಮ ಹಿರಿಯರ ಮತ್ತು ಇತರ ಸಾಮಾಜಿಕರ

ಆಚಾರದಂತೆ ಕೇವಲಸಮಾಜಶಾಸನವೆಂಬ ಭೀತಿಯನ್ನೇ ಮುಂದುಮಾಡಿ, ಆತುರದಿಂದ ಸುಖವನ್ನು ಕೆಡಿಸಿಕೊಳ್ಳು ವದಕ್ಕೆ ನನಗೆ ಸಮ್ಮತವಿಲ್ಲ, ಎಂದರೆ ನನ್ನ ಆತ್ಮಾನಂದ ಬ್ರಹ್ಮಾನಂದಗಳ ಮೂಲಸ್ತಂಭವೇ ನಿನ್ನ ಸುಖಸಂತೋಷಗಳಾಗಿರುವಲ್ಲಿ, ಅದಕ್ಕೆ ಬಾಧೆತಟ್ಟುವಂತೆ ಮಾಡು ವದು ನನಗೆ ಒಪ್ಪುವದಿಲ್ಲ. ಇದರಿಂದಲೇ ನಿನ್ನನ್ನು ಇಂದಿನವರೆಗೂ, ಹೀಗೆ ಒಂಟಿಯಾಗಿರುವಂತೆ ಮಾಡಿ, ಆ ವಿಚಾರವಾಗಿ ತಾಯಿಯ ನಿಷ್ಠುರವನ್ನು ಕೂಡ ಸಹಿಸು ತ್ತಿರುವೆನು. ಮಗು! ನನಗೆ ತಾಯಿಯೇ ಪರದೇವತೆ, ನೀನೇ ಆನಂದಲಾಭಕ್ಕೆ ಸಾಧನವಸ್ತು. ನಿನ್ನನ್ನು ಸತ್ಪಾತ್ರನಿಗೆ ಸಕಾಲದಲ್ಲಿ ಒಪ್ಪಿಸಿ, ಸುರಕ್ಷಿತವಾಗಿರು ವಂತೆ ಭದ್ರಪಡಿಸಿಬಿಟ್ಟೆನಾದರೆ, ನನ್ನ ಮಾನವಜೀವಿತದಲ್ಲಿ ಮೂರುಪಾಲಿನ ಕರ್ತವ್ಯವು ನೆರವೇರಿದಂತಾದೀತು! ಇನ್ನು ಸಾಕು. ಪೂರ್ಣಕಲಾ! ನಿನ್ನ ಮನಸ್ಸಿನಲ್ಲಿ ಶಂಕೆಯೆದ್ದಿದ್ದರೂ ಬಿಟ್ಟುಬಿಡು. ನಾನು ಒಂದುವೇಳೆ ಆಕಸ್ಮಿಕ ಮರಣಕ್ಕೆ ಗುರಿಯಾದರೂ, ನಿನ್ನನ್ನು ಒಬ್ಬಳನ್ನೇಬಿಟ್ಟು ಹೋದೇನೆಂದೆಣಿಸಬೇಡ. ನಿನ್ನ ಭವಿಷ್ಯತ್ಸುಖಸಾಧನಗಳನ್ನು ನಿರ್ಬಾಧಿಕಸ್ಥಿತಿಯಲ್ಲಿ ನಡೆಯಿಸುವಂತೆ ಮಾಡಲು, ನಿನಗೆ ನಿನ್ನ ಮಾವನೇ ತಾಯಿಯೂ, ತಂದೆಯೂ, ಅಣ್ಣನೂ, ಮಾವನೂ, ಹಿತಬೋಧಕನೂ ಆಗಿ ನಿಲ್ಲುವನೆಂದು ಧೈರ್ಯದಿಂದಿರು.

ಪೂರ್ಣ—ಕಂಬನಿದುಂಬಿ—'ಅಪ್ಪಾ! ಅಂತಹ ಅಭದ್ರವಾಕ್ಯಗಳನ್ನು ಹೇಳಬೇಡ! ತಾಯಿಯ ಸವಿನುಡಿಗಳನ್ನು

ಕೇಳಿ, ಆ ತಾಯಿಯ ಪ್ರೇಮ-ದಯೆಗಳ ಲಾಲನೆ ಪಾಲನೆಗಳಿಂದ ಉಂಟಾಗುವ ಸ್ವರ್ಗಸುಖವನ್ನು ಹೊಂದುವ ಭಾಗ್ಯವಂತೂ ನನ್ನ ಪಾಲಿಗೆ ದೂರವಾಯಿತು ! ಇನ್ನು ಆ ತಾಯಿಯ, ಪ್ರೇಮ-ದಯೆಗಳೆಲ್ಲವೂ ನಿನ್ನಲ್ಲಿಯೇ ಬಂದುಸೇರಿ ನೀನೇ ಲಾಲನೆ ಪಾಲನೆಗಳಲ್ಲಿ ತಾಯಿಯಾಗಿಯೂ,- ವಿದ್ಯಾಬುದ್ಧಿ, ಶಿಕ್ಷಣಾಭ್ಯಾಸಗಳಲ್ಲಿ, ತಂದೆಯೂ ಗುರುವೂ ಆಗಿಯೂ,-ಹಾಗೆಯೇ, ಆಪತ್ತಿನಿಂದ ಬಿಡಿಸಿ ಕಾಪಾಡುವ ದೇವರಾಗಿಯೂ ಇರುತ್ತೀಯೆ. ಇಂತಹ ನಿನ್ನನ್ನು ....?

ಮುಂದೆ ಹೇಳಲಾರದೆ ಪೂರ್ಣಕಲೆಯು ಹಾಗೆಯೇ ಕುಳಿತು ಅಳತೊಡಗಿದಳು. ಅದೇವೇಳೆಯಲ್ಲಿಯೇ ಶಾಂತಿನಾಥನು ಬಂದು, ಭಾಸ್ಕರಭಟ್ಟಾಚಾರ್ಯನಿಗೆ ಕೈಮುಗಿದು,—ಪ್ರಭೋ ! ಪಾದಸೇವೆಗಾಗಿ ಶಿಷ್ಯಮಣಿ— ಕಲಾಧವಕುಮಾರನು ಬಂದು, ಹೊರಗೆ ಕಾದಿರುವನು." ಎಂದು ವಿಜ್ಞಾಪಿಸಿದನು.

ಭಾಸ್ಕರ—ಸಂತೋಷದಿಂದ—" ಅಭ್ಯಂತರವೇನು ? ಇಲ್ಲಿಗೇ ಬರಹೇಳು ?"

ಶಾಂತಿ—ಆತನು ಪಾದವಂದನೆಗೆ ಇಲ್ಲಿಗೆ ಬರಬೇಕೆಂದು ಬಂದವನಾದರೂ, ಸುಕುಮಾರಿಯು ಬಳಿಯಲ್ಲಿರುವದನ್ನು ಕೇಳಿ, ಹೊರಗೆ ನಿಂತು ಕಾದಿರುವನು.

ಭಾಸ್ಕರ—ವಿಸ್ಮಯದಿಂದ,—" ಸುಕುಮಾರಿಯು ಇಲ್ಲಿದ್ದ ಮಾತ್ರಕ್ಕೆ ಭಯವೇನು ?"

ಶಾಂತಿ—ಕುಮಾರಿಯು ಪ್ರಸ್ತಾಪಿಸುತ್ತಿರುವಾಗ ತಾನು ಬರುವದು ತನ್ನ ವಿದ್ಯಾರ್ಥಿ ಧರ್ಮಕ್ಕೆ ವಿರೋಧವೆಂದೂ, ಅಂತಹ ಉದ್ಧತವೆನಿಸುವ ಕಾರ್ಯವು ಶಿಷ್ಯವೃತ್ತಿಯಲ್ಲಿರಬೇಕಾದ ತನಗೆ ಸಹಜವಲ್ಲವೆಂದೂ, ಗುರುದೇವರು ತಮ್ಮ ಆಹ್ನಿಕಗಳನ್ನು ಮುಗಿಯಿಸಿಕೊಂಡು, ಕಾಲಕ್ಷೇಪದ ಅಂಗಳಕ್ಕೆ ಬರುವವರೆಗೂ ಇಲ್ಲಿ ಕಾದಿರುವೆನೆಂದೂ ಹೇಳುವನು.

ಭಾಸ್ಕರ—ಸಂತೋಷದಿಂದ—"ಸಾಧು! ಸಾರ್ಥಕನಾಮಸಂಶೋಭಿತ! ಸಾಧುಸಾಧು ?" ಎಂದು ಸಾಧು ವಾದನೆ ಮಾಡಿದ ಬಳಿಕ ಬಾಗಿಲಕಡೆಗೆ ತಿರುಗಿ ಗಟ್ಟಿಯಾಗಿ ಕೂಗಿದರು. "ವತ್ಸಾ! ವತ್ಸಾ! ಕಲಾಧವ! ಕಲಾಧವ ಕುಮಾರ!! ನನ್ನ ಆಜ್ಞೆಯಾಗಿದೆ; ಇತ್ತಬಾ. ನಾನೇ ನಿನ್ನನ್ನು ಇಲ್ಲಿಗೆ ಬರಹೇಳಿದಾಗ ನೀನು ವಿ..." ಗುರುವಾಕ್ಯವು ಪೂರೈಸುವುದರೊಳಗಾಗಿಯೇ ಕಲಾಧವ ಕುಮಾರನು ಬಂದು ಕಿರುಮನೆಯ ಕದದ ಬಳಿಯಲ್ಲಿ ಕೈಕಟ್ಟಿನಿಂತು, ತಲೆಬಾಗಿ, ಭಯ ವಿನಯದಿಂದ ನಿವೇದಿಸಿದನು—"ಗುರುದೇವ! ಆಜ್ಞಾಧಾರಕನು ಇಲ್ಲಿಯೇ ಕಾದಿರುವನು."

ಭಾಸ್ಕರ—ಕೈನೀಡಿ, ವಾತ್ಸಲ್ಯದಿಂದ—'ವತ್ಸಾ! ಸಮೀಪಕ್ಕೆ ಬಾ,-ಪೂರ್ಣಕಲೆಯು ನಿನಗೆ ಪರಕೀಯಳೆಂದು ತಿಳಿಯಬೇಡ! ಅವಳಲ್ಲಿ ನನಗೆ ಎಷ್ಟು ವಾತ್ಸಲ್ಯವಿರುವುದೋ, ಅಷ್ಟೇ ವಾತ್ಸಲ್ಯವು ನಿನ್ನಲ್ಲಿಯೂ, ಅಕ್ಷಯ ಕುಮಾರ

ನಲ್ಲಿಯೂ ಇರುವುದು. ಪೂರ್ಣಕಲೆಯನ್ನು ಇನ್ನು ಮುಂದೆ ನೀನು ನಿನ್ನ ಒಡನಾಡಿಯೆಂದೂ, ಆತ್ಮೀಯ ಳೆಂದೂ, ಸಹಾಧ್ಯಾಯನಿಯೆಂದೂ, ತಿಳಿದು, ಧಾರಾ ಳವಾಗಿ ವರ್ತಿಸುತ್ತಿರಬಹುದಲ್ಲದೆ, ಅವಳ ಶಿಕ್ಷಣಪ್ರಸಾ ರದಲ್ಲಿ ಕಾಲೋಚಿತವಾಗಿ ಸಮಾಧಾನಕರವಾದ ಸೂಚ ನೆಗಳನ್ನೂ ಕೊಡಬಹುದೆಂದು ನನ್ನ ಅಪ್ಪಣೆಯಾಗಿದೆ ಇನ್ನೂ ಸಂಕೋಚಪಡುವೆಯೇಕೆ ? ....''

ಪೂರ್ಣಕಲೆಯು ಎದ್ದು ಸರಿದುನಿಂತು, ಕಲಾಧವನನ್ನು ಆಪಾದಮಸ್ತಕ ಪರ್ಯಂತರವೂ ದೃಷ್ಟಿಸಿನೋಡಿ, ಶಾಂತಿ ನಾಥನನ್ನು ಕರೆದು ಮೆಲ್ಲನೆ ಕೇಳಿದಳು,—ಈತನೇ ರಾ ತ್ರಿ ನಮ್ಮ ಮಾವನನ್ನು ತಡೆದಾತನಲ್ಲವೆ ? ಈತನನ್ನಲ್ಲ ವೆ—ಮಾವನು ಹೊಗಳುತ್ತಿರುವುದು ? '

ಶಾಂತಿ—ಅಹುದಹುದು ಈತನನ್ನೇ ! ಈ ಪುಣ್ಯಮೂರ್ತಿ ಯನ್ನೇ !!

ಪೂರ್ಣಕಲೆಯು ತಂದೆಯ ಹಿಂದುಗಡೆಯಲ್ಲಿ ಹೋಗಿ ನಿಂತು ಕೌತುಕ ವಿಸ್ಮಯಗಳಿಂದ ಕಲಾಧವನನ್ನು ನೋಡುತ್ತಿದ್ದಳು. ಕಲಾ ಧವನು ಮೊದಲೇ ಸಂಕುಚಿತ ಪ್ರಕೃತಿಯಾಗಿದ್ದನು ; ಸಾಲದುದಕ್ಕೆ ಗುರುಗಳ ಆಶ್ವಾಸನವೂ, ಗುರುಪುತ್ರಿಯ ಪ್ರಶ್ನೆಗಳೂ, ಮತ್ತು ಅವಳಾ ವಿಸ್ಮಯ-ಕೌತುಕವೀಕ್ಷಣವೂ ಇವನನ್ನು ಭಯಕಂಪಿತನನ್ನಾಗಿ ಮಾ ಡಿತು. ಕಲಾಧವನು ಬರಬರುತ್ತಾ ತಲೆಯನ್ನು ನೆಲದವರೆಗೂ ಬಾಗಿ ಮೆಲ್ಲನೆ ಮೆಲ್ಲನೆ ಬಂದು,—ಗುರುಸಮ್ಮುಖದಲ್ಲಿ ನಿಂತು—

'' ಮನ್ನಾಥಃ ಶ್ರೀಜಗನ್ನಾಥೊ ಮದ್ಗುರುಃ ಶ್ರೀಜಗದ್ಗುರುಃ |

ಮಮಾತ್ಮಾ ಸರ್ವಭೂತಾತ್ಮಾ ತಸ್ಮೈ ಶ್ರೀ ಗುರುವೇನಮಃ ||೯||"
" ನಿತ್ಯಶುದ್ಧಂ ನಿರಾಭಾಸಂ, ನಿರಾಕಾರಂ ನಿರಂಜನಂ |
ನಿತ್ಯಬೋಧಂ ಚಿದಾನಂದಂ, ಗುರುಬ್ರಹ್ಮನಮಾಮ್ಯಹಮ್||೧೦||''

ಎಂದು ಹೇಳುತ್ತಾ ಗುರುಚರಣಗಳಿಗೆ ಸಾಷ್ಟಾಂಗ ದಂಡಪ್ರಣಾಮಮಾಡಿದನು.

ಭಾಸ್ಕರ—ಬಳಿಯಲ್ಲಿದ್ದ ಕೈಗೋಲಿನಿಂದ ಕುಮಾರನ ತಲೆಯನ್ನು ಸವರಿ, ಮಮತೆಯಿಂದ " ಸುಕುಮಾರ ! ಸಚ್ಚಿದಾನಂದ ಪರಬ್ರಹ್ಮನೇ ನಿನ್ನಲ್ಲಿ ಅನುಗ್ರಹಿಸುವನು ಏಳು ! ಶ್ರದ್ಧಾಳುವಾದ ನೀನು, ಉತ್ತರೋತ್ತರಾಭಿವೃದ್ಧಿಯಿಂದ ಕುಲದೀಪಿಕನೆನ್ನಿಸುವದರಲ್ಲಿ ಸಂಶಯವಿಲ್ಲ-''

ಕಲಾ—ಎದ್ದು ಕೈ ಜೋಡಿಸಿ ನಿಂತು ಆನಂದಾತಿಶಯದಿಂದ ಕಂಪಿಸುತ್ತ 'ಸದ್ಗುರುಕೃಪೆಯಿದ್ದರೆ ಅಸಾಧ್ಯವಾವುದು?'

ಭಾಸ್ಕರ—ವತ್ಸಾ ! ಇದೇನು, ನಿನ್ನ ಮುಖಭಾವವು ನಿನ್ನನ್ನು ವಿಚಾರಗ್ರಸ್ತನನ್ನಾಗಿ ಮಾಡಿರುವಂತೆ ಸೂಚಿಸುತ್ತಿದೆ ?

ಕಲಾ—ಮತ್ತೇನೂ ಇಲ್ಲ. ಎಂದಿನಂತೆಯೇ ಪಾದಸೇವೆಗೆಂದು ಕಾಲಕ್ಷೇಪದ ಅಂಗಳದಲ್ಲಿ ದೇವರ ಆಗಮನ ನಿರೀಕ್ಷೆಯಲ್ಲಿದ್ದೆನು. ಆದರೆ, ದೇವರು ಇನ್ನೂ ಅಲ್ಲಿಗೆ ಚಿತ್ತೈಸದಿದ್ದುದರಿಂದ ದೇಹಸ್ಥಿತಿ ವಿಚಾರವೇನಾಗಿರಬಹುದೋ ಎಂಬ ಭೀತಿಯುಂಟಾಗಿ, ಹೊರಟು ಬಂದೆನು. ಇದು ಹೊರತು ಮತ್ತಾವ ವಿಚಾರವೂ ಇಲ್ಲ.

ಭಾಸ್ಕರ— ಸುಕುಮಾರ ! ಒಂದೆರಡು ಗಳಿಗೆ ತಡವಾದ ಮಾತ್ರಕ್ಕೇ ಇಷ್ಟು ಭಯವೇ !

ಕಲಾ—ಗುರುದೇವ ! ಅನನ್ಯಶರಣ್ಯಾ ಭಾವದಿಂದ ಆರನ್ನು ಆ ಶ್ರಯಿಸಿ, ಜೀವಿಸುತ್ತಿರುವೆವೋ,—ಅವರ ವಿಚಾರದಲ್ಲಿ ಅಷ್ಟಕ್ಕಷ್ಟಕ್ಕೂ, ವಿರಹಭೀತಿಯೂ ಶಂಕಾತಂಕಗಳೂ ಅಡಿಗಡಿಗೆ ಉಂಟಾಗುವುದು ಮಾನವಸಾಮಾನ್ಯಕ್ಕೆ ತಪ್ಪಿದುದಲ್ಲವಷ್ಟೆ ?

ಭಾಸ್ಕರ—ತಲೆದೂಗಿ—ಒಪ್ಪಿತು. ಸುಕುಮಾರ ! ನಿನ್ನ ಸದುತ್ತರವು ಮನಸ್ಸಿಗೆ ಚನ್ನಾಗಿ ಒಪ್ಪಿಕೆಯಾಯಿತು. ಇರಲಿ, ಕುಮಾರ ! ಅಕ್ಷಯಕುಮಾರನು ನನ್ನನ್ನು ಸ್ನಾನಕ್ಕೆ ಮೊದಲೇನೋಡಿ ಹೋಗಿದ್ದನಲ್ಲವೆ ?—ಆತ ನಿಂದ ನಿನಗೆ ನನ್ನ ಪ್ರಕೃತಿ ಕ್ಷೇಮವಾರ್ತೆಯು ತಿಳಿ ದು ಬರಲಿಲ್ಲವೇನು ? '

ಕಲಾ—ಅಕ್ಷಯಕುಮಾರನು ತಿಳಿದಿರಬಹುದು. ಆದರೆ, ಆತ ನು ಎದ್ದು ಬಂದೊಡನೆಯೇ ನನಗೆ ಆತನ ದರ್ಶನಲಾ ಭವು ದೊರೆದಿತ್ತಲ್ಲದೆ, ಶ್ರೀ ಪಾದಸೇವೆಯನ್ನು ಮಾಡಿ ಬಂದ ಬಳಿಕೆ ನನಗಾತನನ್ನು ಕಾಣಿಸಿಕೊಳ್ಳುವ ಅವ ಕಾಶವೊದಗಲಿಲ್ಲ.

ಭಾಸ್ಕರ—ವಿಸ್ಮಯದಿಂದ—" ಕಾರಣವೇನು ? "

ಕಲಾ—ಶ್ರೀಪಾದವಂದನಾನಂತರದಲ್ಲಿ ಆತನು ತನ್ನ ಪ್ರಾತಃ ಕಾಲದ ಜಪ—ತಪಾನುಷ್ಠಾನದಲ್ಲಿ ತೊಡಕುವದರಿಂದ ಆ ವೇಳೆಯಲ್ಲಿ ನಾನು ಕಾಣಿಸಿಕೊಳ್ಳುವುದು ನಿಯಮ ಭಂಗಕ್ಕೆ ಹೇತುವಾಗಿ ಪರಿಣಮಿಸುವದೆಂದು ಹೋ

ಗಲಿಲ್ಲ. ಅಲ್ಲದೆ, ನನಗಾದರೂ, ಆತನೊಡನೆ ವಿಚಾರ ವಿಮರ್ಶೆಗೆ ತೊಡಕುವದರಿಂದ ಹೊತ್ತು ಗೊತ್ತಾಗದೆ ಹೋಗಿ, ಪ್ರಾತಃಕೃತ್ಯಗಳು ನಿಂತು ಹೋಗುವವೆಂಬ ಭೀತಿಯೂ ಇರುವದು. ಈ ಕಾರಣದಿಂದ ಹಾಸಿಗೆಯಿಂದೆದ್ದು ಬಂದೊಡನೆಯೇ ಒಬ್ಬರಿಗೊಬ್ಬರು ಕುಶಲಪ್ರಶ್ನೆಯನ್ನು ಮಾಡಿ, ಸುಪ್ರಭಾತವನ್ನು ಕೋರಿ ಆ ಬಳಿಕ, ನಮ್ಮ ನಮ್ಮ ಕೆಲಸಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೋಗುವೆವು. ಪ್ರಾತಃಕೃತ್ಯಗಳೆಲ್ಲವೂ ನೆರವೇರಿದ ಮೇಲೆಯೇ ನಮಗೆ ನಮ್ಮ ಪರಸ್ಪರ ಸಂದರ್ಶನ ಲಾಭವುಂಟಾಗಬೇಕು !

ಭಾಸ್ಕರ—ತಲೆದೂಗಿ—" ವತ್ಸಾ ! ನಿನ್ನ ಪ್ರೀತಿಯೊಂದು ಮಾತುಗಳೂ ನನ್ನ ಸಂತೋಷವನ್ನು ಹೆಚ್ಚಿಸತಕ್ಕವುಗಳಾಗಿವೆ. ನಿನ್ನಂತಹ ಗುರುಭಕ್ತಿಯುತನಾದ ಶಿಷ್ಯನನ್ನು ಪಡೆಯಬೇಕಾದರೆ ಜನ್ಮಾಂತರದ ಸುಕೃತವೇ ಸಹಕರಿಸಬೇಕು !

ಕಲಾ—ಲಜ್ಜಿತನಾಗಿ—'ಗುರುದೇವರ ಬಾಯಿಂದಲೇ ಈ ಅಲ್ಪನ ವಿಷಯವಾಗಿ ಇಷ್ಟು ಶ್ಲಾಘನೆಯು ಬರುವುದಾದರೆ

ಭಾಸ್ಕರ—ಏಕಾಗಬಾರದು ? ಬಾಧಕವೇನದರಲ್ಲಿ—ಮಗು ? ಮಕ್ಕಳು ಗುಣವಂತರಾದರೆ ತಾಯ್ತಂದೆಗಳ ಆನಂದಕ್ಕೆ ಪಾರವುಂಟೇ ? ಸುಗುಣಾರಾಮನಾದ ಸುಕುಮಾರನನ್ನು ನೋಡಿಯೂ, ಅಭಿನಂದಿಸದ ತಾಯ್ತಂದೆಗಳಾದರೂ ಇರುವರೋ ? ಮಕ್ಕಳಲ್ಲಿ ಶ್ರೇಷ್ಠ ನಡತೆಗಳನ್ನು ಕಂಡು,

ಅವುಗಳನ್ನು ಶ್ಲಾಘಿಸಿ, ಅವರ ಸದಾಚರಣೆಗೆ ಉತ್ತೇಜನವನ್ನು ಕೊಡುವಂತೆ ನಮ್ಮ ಪೂರ್ವಜರ ಆದರ್ಶವೃತ್ತಗಳನ್ನು ಮುಂದಿಟ್ಟು ಅದರೊಡನೆ ಪ್ರೋತ್ಸಾಹವನ್ನುಂಟುಮಾಡುವ ಹಿತಸೂಚನೆಗಳನ್ನು ಕೊಡುವುದೇ ಅವರ ಕರ್ತವ್ಯವಲ್ಲವೆ ? ಸುಕುಮಾರ ! ಶಿಷ್ಯರನ್ನು ಶ್ಲಾಘಿಸುವುದು ಈ ಕಾಲಕ್ಕೆ ಸರಿಯಾದುದೇನೆಂದು ನೀನು ಕೇಳುವೆ ? ದೇಹಸಂಬಂಧವಾಗಿ ಜನಿಸಿದ ಸಂತಾನವನ್ನು ಆತ್ಮಜರೆಂದೂ, ಇತರರನ್ನು ಆಶ್ರಿತ, ಅನುಗಾಮಿ, ಅಂತೇವಾಸಿ, ಶಿಷ್ಯ, ಇತ್ಯಾದಿಯಾಗಿ ಹಲವು ಶಬ್ದಗಳಿಂದ ಪೋಷ್ಯವರ್ಗಕ್ಕೆ ಸೇರಿದವರೆಂದೂ, ಕರೆವುದು ವಾಡಿಕೆಯಾಗಿದೆ. ಆದರೆ ನನಗೆ ನನ್ನ ಅಂತೇವಾಸಿಗಳು ಬೇರೆ, ಆತ್ಮಜರು ಬೇರೆ, ಎಂಬ ಭೇದ ಭಾವನೆಯುಂಟಾಗಿಲ್ಲ. ದೇಹವು ಸ್ಥಿರವಲ್ಲ ; ಕ್ಷಣಿಕಭ್ರಾಂತಿಯನ್ನೇ ನಂಬಿ, ಜೀವಿಸುತ್ತಿರುವ ಈ ಮಾನವ ಜೀವಿತದಲ್ಲಿ, ನೀರಿನ ಗುಳ್ಳೆಗಳಂತೆ ತೋರಿಹಾರುವ ಈ ನಶ್ವರದೇಹವನ್ನೇ ಪ್ರಧಾನವಾಗಿ ಭಾವಿಸುವುದೂ, ಅದಕ್ಕೆ ಸಂಬಂಧಪಟ್ಟ ಪಶು, ವಿತ್ತ, ಕ್ಷೇತ್ರ, ಪುತ್ರ, ದಾರಾದಿಗಳೇ ತನ್ನ ಪರಿವಾರವೆಂದೂ, ಉಳಿದವರು ಪರಕೀಯರೆಂದೂ ಭಾವಿಸಿ, ಮೂರ್ಖಭಾವನೆಯಿಂದ ತನ್ನ ಸುಖದ ದಾರಿಯನ್ನು, ತನ್ನ ಪ್ರತಿಷ್ಠೆಗೆ ಬೇಕಾದ ಮಾರ್ಗವನ್ನು, ಮಾತ್ರವೇ ನೋಡಿಕೊಳ್ಳುವುದು ನನ್ನ ಶೀಲವಲ್ಲ ! ಇದನ್ನು ನಾನೇನೂ ಹೇಳಿಕೊಳ್ಳಬೇಕಾಗಿಲ್ಲ. ಎಂದರೆ, ಇದು ನನ್ನ

ಒಬ್ಬನ ಪವಿತ್ರಸಂದೇಶವೆಂದು ಮಾತ್ರ ತಿಳಿಯಬೇಡ. ನಮ್ಮ ಆರ್ಯಮಹನೀಯರು ತಮ್ಮ ಔರಸಪುತ್ರರಲ್ಲಿ, ಸಂದರ್ಭಾನುಸಾರವಾಗಿ ಆಗ್ರಹವನ್ನು ಪ್ರಕಟಿಸಿದರೂ, ತಮ್ಮಲ್ಲಿ ಗುರುಕುಲವಾಸಕ್ಕಾಗಿ ಬಂದ ಶಿಷ್ಯರನ್ನು ತಮ್ಮ ಪ್ರಾಣಕ್ಕೂ ಹೆಚ್ಚಾಗಿ ಭಾವಿಸಿ ರಕ್ಷಿಸುತ್ತ ಬಂದರು!!! ಆದುದರಿಂದಲೇ ನಮ್ಮ ಆರ್ಯಸಂಪ್ರದಾಯದಲ್ಲಿ, ಈ ಗುರುಕುಲವಾಸ, ಶಿಷ್ಯವೃತ್ತಿ, ಬ್ರಹ್ಮಚರ್ಯನಿಷ್ಠೆಗಳೆಂಬ ಮಾನವನ ಪ್ರಾಥಮಿಕ ಅಭ್ಯಾಸಯೋಗಕ್ಕೆ ಇಷ್ಟು ಪ್ರಾಶಸ್ತ್ಯವುಂಟಾಗಿದೆ. ಈ ತತ್ತ್ವವನ್ನು ತಿಳಿದು ನಾನು ಮತ್ತೆ ಹೇಗೆ ವರ್ತಿಸಬಹುದು-ಹೇಳುವೆಯಾ ?

ಕಲಾ——ಮತ್ತೂ ಹೆಚ್ಚಿದ ಲಜ್ಜೆಯಿಂದ 'ಉತ್ತರವನ್ನು ಕೊಡಲು ಈ ಬಾಲಕನು ಅಸಮರ್ಥನು! ಆದರೂ ಈತನಲ್ಲಿ ಸ್ತುತ್ಯರ್ಹವಾದ ಗುಣವಾವುದಿರುವುದೋ ತಿಳಿಯದು ?'

ಭಾಸ್ಕರ——ತಲೆದೂಗಿ ಕಲಾಧವನನ್ನೇ ನೋಡುತ್ತ——'ಸುಕುಮಾರಾ! ಗುಣವೆಂದರೆ, ಶ್ಲಾಘನೆಗೆ ತಕ್ಕುದಾದ ಗುಣವೆಂದರೆ, ಮತ್ತಾವುದೆಂದು ಹೇಳುವೆ ? ಸಹನಶೀಲತೆ, (ಶ್ರಮಸಹಿಷ್ಣುತೆ) ವಿಧೇಯತೆ, ಸತ್ಯತೆ, ಶಾಂತತೆ, ಸಾರಾಸಾರ ವಿಚಾರತತ್ಪರತೆಗಳೇ ಮೊದಲಾದ ಈ ಗುಣಗಳ ಒಂದೊಂದು ಗುಣವೇ ವಿದ್ಯಾರ್ಥಿಯ ಸಚ್ಚರಿತೆಯನ್ನು ಸೂಚಿಸುವ ಸ್ತುತ್ಯರ್ಹವಾದ ಗುಣಗಳಲ್ಲವೇನು ? ಇವುಗಳಿಂದಲೇ ಅಲ್ಲವೇ,——ನಮ್ಮ ಪೂರ್ವಜ

ರಾದ ಮಹರ್ಷಿಗಳೂ, ರಾಜರ್ಷಿಗಳೂ, ಕೃತಾರ್ಥತೆ (ಅರ್ಥಸಿದ್ಧಿ) ಯನ್ನು ಹೊಂದಿದುದು ?

ಕಲಾ—ನೆಲವನ್ನೇ ನೋಡುತ್ತ-'ಗುರುದೇವರು ಸರಿದೋರಿದಂತೆ ನಡೆಯಿಸಬಹುದು. ಮುಖ್ಯವಾಗಿ ಈ ದೀನ-ಶರಣಾಗತನ ಅಭ್ಯುದಯಕ್ಕೆ ಬೇಕಾಗುವ ಸನ್ಮಾರ್ಗಾವಲಂಬನವು ಶ್ರೀಪಾದಸೇವೆಯಿಂದಲೇ ದೊರೆಯಬೇಕಾಗಿರುವುದೆಂಬುದೇ ನನ್ನ ನಂಬಿಕೆಯು ! ಪರಮಾತ್ಮನ ಮತ್ತು ಆ-ಪರಮಾತ್ಮನ ಅಂಶರೂಪರಾಗಿರುವ ತಮ್ಮ ಆಶೀರ್ವಾದವು ಸಹಕರಿಸುತ್ತಿದ್ದು ಎಚ್ಚರಿಸಬೇಕೆಂಬುದೇ ನನ್ನ ಪ್ರಾರ್ಥನೆಯು.'

ಭಾಸ್ಕರ—ವತ್ಸ ! ವಿಹಿತ ಮಾರ್ಗದಲ್ಲಿಯೇ ಸಂಚರಿಸುತ್ತಿರುವ ನಿನಗೆ ಶ್ರೇಯೋಭಿವೃದ್ಧಿಯಾಗಲು ಅಭ್ಯಂತರವಾಗಲೀ, ಕರ್ತವ್ಯಜಾಗ್ರತನಾಗಿಯೇ ಇರುವ, ಸ್ವಭಾವತಃ ಧೀರಪುರುಷನಾದ ನಿನಗೆ, ಬೋಧಿಸಬೇಕಾದ ಹಿತಬೋಧೆಯಾಗಲೀ ಏನೂ ಇಲ್ಲ. ಆದರೂ ಇಷ್ಟು ಹೇಳಬಲ್ಲೆನು; ಕೇಳು-ವಿದ್ಯಾರ್ಥಿಗಳಲ್ಲಿ ಪರಸ್ಪರ ಐಕಮತ್ಯವು ಚನ್ನಾಗಿರಬೇಕು. ಐಕಮತ್ಯವಿಲ್ಲದಿದ್ದರೆ ಒಬ್ಬೊಬ್ಬರು ಒಂದೊಂದು ವಕ್ರಮಾರ್ಗಕ್ಕೆ ತಿರುಗಲು ಅವಕಾಶವುಂಟಾಗುತ್ತದೆ. ಹಾಗೆ ಭಿನ್ನಭಿನ್ನ ಮತಗಳುಂಟಾದರೆ ಅವರ ಅಭ್ಯಾಸದ ಶ್ರಮಕ್ಕೂ, ಕಾಲಕ್ಕೂ, ದ್ರವ್ಯವ್ಯಯಕ್ಕೂ ಸಾಫಲ್ಯವುಂಟಾಗದೆ ಹಾನಿತಟ್ಟುತ್ತದೆ. ಐಕಮತ್ಯವುಂಟಾಗಿದ್ದರೆ, ಪರಸ್ಪರ ಹಿತೇಚ್ಛೆಯುಂಟಾಗಿ

ಸಹಜಸೌಭ್ರಾತೃತ್ವ (ಸೋದರಭಾವ) ವು ದೃಢೀಕರಿಸಿ ಸ್ವಸ್ವರೂಪಜ್ಞಾನ, ಸ್ವದೇಶವಾತ್ಸಲ್ಯ, ಸ್ವಧರ್ಮಾನು ಷ್ಠಾನತತ್ಪರತೆ, ಸ್ವಾವಲಂಬನ, ಸ್ವಾತಂತ್ರ್ಯಜೀವ ನೋದ್ಯೋಗಗಳೆಂಬ ಪಂಚಪ್ರಾಣಗಳ ಸಹಾಯದಿಂದ, ದೇಶಮಾತೆಗೆ ಸತ್ಪುತ್ರರೆನ್ನಿಸುವಂತಹ ಸದುದ್ಯಮವನ್ನು ಕೈಕೊಳ್ಳುವರಾಗುವಿರಿ. ಇದು ಚೆನ್ನಾಗಿ ನೆನಪಿನಲ್ಲಿ ರಲಿ ! ಕುಮಾರ ! ನಿಮ್ಮ ಸಹಾಧ್ಯಾಯಿಗಳಲ್ಲಿ ದುರ್ವ್ಯ ಸನಿಗಳಾದವರು ಇದ್ದಾರೆಂದು ತಿಳಿದುಬಂದರೆ, ನೀವು, ಅವರನ್ನು ನಿಮ್ಮ ಸದ್ವೃತ್ತಗಳ ಪರಮಾದರ್ಶದಿಂದ ವಿವೇಕ ಮಾರ್ಗಕ್ಕೆ ತಿರುಗಿಸಿಕೊಳ್ಳಲು ಪ್ರಯತ್ನಿಸು ವದೂ, ರೋಗ ಮತ್ತು ಆಪದಗಳಲ್ಲಿ ಸಿಕ್ಕಿ ನರಳುವವ ರಲ್ಲಿ ಅನುಕಂಪನವನ್ನು ತೋರಿ, ಅವರನ್ನು ಆದರೋಪ ಚಾರದಿಂದ ಆಪ್ಯಾಯನಗೊಳಿಸುವುದೂ, ಬುದ್ಧಿಚಾಪ ಲ್ಯದಿಂದ, ಪಾಠಪ್ರವಚನಾದಿಗಳಲ್ಲಿ ಮರವೆಯುಂಟಾಗಿ, ಪಶ್ಚಾತ್ತಾಪಪಡುತ್ತಿರುವವರಲ್ಲಿ ಸಹೃದಯವನ್ನು ಹೊಂದಿ ಸಮಯೋಚಿತ ಸೂಚನೆಗಳಿಂದ ಎಚ್ಚರಿಸು ವುದೂ, ಇವೇ ಮೊದಲಾದ ಸದ್ವೃತ್ತಗಳು ವಿದ್ಯಾರ್ಥಿ ಗಳಲ್ಲಿ ಪ್ರಾಮುಖ್ಯವಾದ ಗುಣಗಳಾಗಿರುವುವು. ಕು ಮಾರ! ನೀನಿನ್ನು ನಡೆ ! ನಿನ್ನ ವ್ಯಾಸಂಗವನ್ನು ಗಮ ನಿಸು. (ಮಗಳನ್ನು ನೋಡಿ) ' ಮಗು ! ಪೂರ್ಣ ಕಲೆ ! ನೀನು, ಇನ್ನು ಅಜ್ಜಿಯ ಬಳಿಗೆ ನಡೆ ! ನಿನ್ನ ಮಡಿ,ದೇವತಾರ್ಚನೆಗಳಿಗೆ ಹೊತ್ತುವಿಾರುತ್ತದೆ. ಎಂದು

ಹೇಳಿ,ಕೃಷ್ಣಾಜಿನವನ್ನು ಬಿಟ್ಟು ಎದ್ದು ನಿಂತು "ಶಾಂತಿ ನಾಥ ! ಸುಕುಮಾರಿಯು ಪೂಜಾಕಾರ್ಯಕ್ಕೆ ಇನ್ನು ಅಣಿಮಾಡಿ ಕೊಡು ; ನಡೆ ! ನಾನಿನ್ನು ಕಾಲಕ್ಷೇಪಕ್ಕೆ ಹೊರಡುವೆನು." ಎಂದು ಹೇಳಿ ಆ ಸ್ಥಳದಿಂದ ಹೊರ ಹೊರಟನು. ಕಲಾಧವನು, ಮತ್ತೊಮ್ಮೆ ಗುರುವಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಅನುಮತಿ ಪಡೆದು ತನ್ನ ನಿಯಮಿತಸ್ಥಾನಕ್ಕೆ ಹೊರಟುಹೋದನು. ಪೂರ್ಣಕಲೆಯು, ಸಂತೋಷ - ಆಶ್ಚರ್ಯಗಳಿಂದ ತನ್ನಲ್ಲಿಯೇ ವಿಚಾರಮಾಡುತ್ತ ಶಾಂತಿನಾಥನೊಡನೆ ಅಂತ ಗೃಹಕ್ಕೆ ನಡೆದಳು.

" ಪ್ರಿಯ ಭಗಿನೀ-ಬಾಂಧವರೇ !

ಹೇಳಿರಿ—ದಯೆಯಿಟ್ಟು ತಿಳಿಯಹೇಳಿರಿ ? ಸಚ್ಚಿದಾನಂದಭಾಸ್ಕರಭಟ್ಟಾಚಾರ್ಯನಲ್ಲಿರುವ ಶಿಷ್ಯವಾತ್ಸಲ್ಯವು, ಈಗಿನ ನಮ್ಮ ವಿದ್ಯಾಬೋಧಕ, ಶಿಕ್ಷಣ,ಉಪದೇಶಕರೆಂಬ ಗುರುಗಳಲ್ಲಿ ಎಷ್ಟುಮಟ್ಟಿಗಿರಬಹುದು ? ಎಷ್ಟುಮಂದಿ ಶಿಷ್ಯರನ್ನು ಪುತ್ರವಾತ್ಸಲದಿಂದ ಕಾಪಾಡುವವರಾಗಿರಬಹುದು ? ಅದೇನು ಹೇಳುವಿರಿ ?

"ಯದ್ಭಾವ್ಯಂ ತದ್ಭವತು"-"ಭಾವನೆಯಂತಿಪ್ಪದಂತೆ ಫಲಂ" " ಶಿಷ್ಯನ ಗುರುಭಕ್ತಿಗೆ ತಕ್ಕಂತೆ ಗುರುವಿನ ಶಿಷ್ಯವಾತ್ಸಲ್ಯ. " ಎನ್ನುವೆರೋ ? ಉಹೂ !! ಗಟ್ಟಿಗರೊ-ನೀವು !!! ಅಗಲಿ,-ಶಿಷ್ಯರು ಇನ್ನೂ ಕಣ್ದೆರೆಯಲಿಕ್ಕಿರುವ ಬಾಲಕರು, ಗುರುಗಳೆಂದರೆ, ಕಣ್ದೆರೆದು ಬೆಳಕನ್ನು ಕಂಡುಕೊಂಡವರು ! ಅವರು ನಮ್ಮ ಶಿಷ್ಯರು ಅಭ್ಯುದಿತರಾಗಬೇಕೆಂಬ

ಸದ್ಭಾವನೆಯುಳ್ಳವರಾಗಿದ್ದು, ಅವರ ಉನ್ನತಿಗೆ ಸಹಜಮಾರ್ಗವನ್ನು ಬೋಧಿಸುವ ಸಂಕಲ್ಪ ಮಾಡಿದ್ದರಲ್ಲವೆ, ಶಿಷ್ಯ ವರ್ಗವು ಅವರಲ್ಲಿ ಅನನ್ಯ ಶರಣ್ಯಾಭಾವದಿಂದ ಗುರುಕುಲವಾಸಮಾಡಿ, ಜ್ಞಾನಶಕ್ತಿಲಾಭದಿಂದ ಅಭ್ಯುದಿತರಾಗುವೆವೆಂಬ ಭರವಸೆ ಹೊಂದುವದು ? ಅದೇ ಇಲ್ಲವಾದರೆ ಆಧಾರ ವಿಲ್ಲದವ.. ......'' ಎಂದಾದೀತು! ಇದು ಇಷ್ಟಕ್ಕೇಸಾಕು, ಇದನ್ನು ಮುಂದೆ ನೋಡುವ

||ಶ್ರೀ||

ಷಷ್ಠ ಪರಿಚ್ಛೇದ

" ಅಕ್ಷಯಕುಮಾರನ ವಸ್ತುವಿಚಾರವಿಮರ್ಶೆ—ಪ್ರಭಾಕರನ ಆಗಮನ,—ಸ್ವಾಗತಾಭಿನಂದನ—ಮಧುಮಿತ್ರ, ಕಲಾಧವರಿಬ್ಬರ ನಡೆ ನುಡಿಯಲ್ಲಿರುವ ಅಜಗಜಾಂತರನ್ಯಾಯ—ಕಲಾಧವನ ಆಗಮನ,— ಸನ್ಮಿತ್ರರ ಸುಖಸಂಭಾಷಣೆ, ಆಧುನಿಕ ವಿದ್ಯಾಭ್ಯಾಸದಲ್ಲಿಯ ನ್ಯೂನಾತಿರೇಕದೋಷಗಳ ಸಾಧಕ ಬಾಧಕಗಳು, ಸುಧಾರಿಸಬೇಕಾದಅಂಗ.— ಇತ್ಯಾದಿ, ಇತ್ಯಾದಿ.

ಆಧುನಿಕ ವಿದ್ಯಾರ್ಥಿ-ಲಕ್ಷಣಕ್ಕೆ ಇದೂ ಒಂದು ಅಂಗವೇನು ?

ಹಗಲು ಒಂಭತ್ತುಗಂಟೆಯಾಗಿರಬಹುದು. ವಿದ್ಯಾರ್ಥಿಮಂದಿರದಲ್ಲಿ ಊಟಕ್ಕೆ ಇನ್ನೂ ಒಂದುಗಂಟೆಯು ವಿರಾಮವಿದ್ದಿತು. ಅಕ್ಷಯಕುಮಾರನು ಪ್ರಾತಃಕೃತ್ಯಗಳನ್ನು ಮುಗಿಯಿಸಿಕೊಂಡು ತನ್ನ ಕಿರುಮನೆಯಲ್ಲಿ ಒಬ್ಬನೇ ಚಾಪೆಯಮೇಲೆ ಕುಳಿತು,ಕೈಯಲ್ಲಿ ಅದಾವುದೋ ಪತ್ರವನ್ನು ಹಿಡಿದು ಮತ್ತೆ ಮತ್ತೆ ತಿರುಗಿಸಿ ನೋಡುತ್ತ, ನಡುನಡುವೆ,-— 'ಭಲೆ ! ರಸರಾಜ ! ಭಲೆ !! ರಸಿಕಶಿಖಾಮಣಿಯೇ ನೀನಹುದು !!! ಸಂದೇಹವೇನು?' ಎಂದು-ವ್ಯಂಗೋಕ್ತಿಗಳಿಂದ ತಲೆದೂಗಿ ಉತ್ತರಕ್ಷಣದಲ್ಲಿಯೇ, ನಿಟ್ಟುಸಿರಿಟ್ಟು - ಮೇಲೆಯೂ-ಕೆಳಗೂ ನೋಡಿ, ಮತ್ತೆ ಓದುತ್ತಲೂ ಇದ್ದನು. " ಹಾಗಾದರೆ,—ಅಂತಹ ಪತ್ರವು ಆರಿಂದ-ಆರಿಗೆ-ಏನೆಂದು ಬರೆಯಲ್ಪಟ್ಟಿರಬೇಕು ? " ಎನ್ನುವಿರಲ್ಲವೇ ? ಮರೆತಿರೇಕೆ, ಸುಹೃದರೇ ! ನಿನ್ನೆ ರಾತ್ರಿಯಲ್ಲಿ ಪೂರ್ಣಕಲೆಯು ಕುಮಾರನ

ಕೈಯಲ್ಲಿರಿಸಿದ ಪತ್ರವು ಮತ್ತಾವುದಿರಬೇಕು ? ಲೇಖಕರ ವಿಚಾರದಲ್ಲಿ ನಾನೀಗಲೇ ಹೇಳಬೇಕೆಂದರೆ,—ಲೇಖಕರ ಹೆಸರನ್ನೇ ಕಾಣಿಸಲಿಲ್ಲ. ಇನ್ನು ನಾವೇನು ಹೇಳಬಹುದು ? ಆದರೆ ಲೇಖನದ ರೀತಿಯನ್ನು ನೋಡಿ-ನೀವೇ ಊಹಿಸಬಹುದೆಂದು ಅದರ ಪ್ರತಿಯನ್ನೇ ಇಲ್ಲಿ ಕೊಟ್ಟಿದೆ. ಪರಿಶೀಲಿಸಿ ನೋಡಿರಿ.

॥ ಪತ್ರ ॥

"ಶ್ರೀ...ದೇವೀಸಹಾಯ"

ಭಿಕ್ಷಾಂಪ್ರದೇಹಿ............ಕ್ಷುಧಿತಾಯಮಹ್ಯಂ.

ದೇವಿ ! ಅನ್ವರ್ಥನಾಮ್ನಿಯಾದ ಪೂರ್ಣಕಲಾದೇವಿ !! ನಾನೊಬ್ಬ ಭಿಕ್ಷುಕನು; ಭಿಕ್ಷಾಪಾತ್ರವನ್ನು ಹಿಡಿದು ಬೇಡುತ್ತಿದ್ದೇನೆ. ಹಸಿವು ತೃಷೆಗಳಿಂದ ಅತಿಯಾಗಿ ಪೀಡಿತನಾಗಿ, ಆರ್ತತೆಯಿಂದ ಪ್ರಾರ್ಥಿಸುತ್ತಿದ್ದೇನೆ. "ದೇಹಿಯೆಂದರೆ ನಾಸ್ತಿಯೆನ್ನಬೇಡ" ಎಂಬುದು ನಿನಗೆ ತಿಳಿದೇ ಇದೆ. ಆದರೆ—ಅದೇನು ಹೇಳುವೆ? ಭಿಕ್ಷುಕನಾಗಿದ್ದರೆ, ಭೋಜನಶಾಲೆಯ ಬಳಿಗೆ ಬರಬೇಕೆಂದೂ, ಅಡಗಿ ಕೇಳಿದರೆ ಭಿಕ್ಷವು ದೊರೆಯುದೆಂದೂ ಹೇಳುವೆಯೇನು ? ಆದರೆ ದೇವಿ ! ನನಗೆ ಆ ಹಿಡಿಗೂಳಿನಿಂದಣಿಯುವಂತಹ ಹಸಿವಲ್ಲ !........ಇನ್ನೂ ಹೆಚ್ಚು ಹೇಳಲಾರೆ. ಗುರುರಾಜಪುತ್ರಿ!—ನಾನಿಂದಿನವರೆಗೆ ನಿನ್ನನ್ನು ನೋಡಿದುದಾಗಲೀ—ನಿನ್ನ ವಿಷಯವನ್ನು ಕೇಳಿದುದಾಗಲೀ ಇಲ್ಲ. ಇದೇ ಈಗಲೇ ತಿಳಿದು ಬಂದು ನಿನಗೆ ಕಾಣದಂತೆ ನಿಂತು ನಿನ್ನನ್ನು ನೋಡಿದೆನು ; ಸಂತೋಷದಿಂದ ಪರವಶನಾದೆನು. ಮತ್ತೂ ಹೇಳಲೆ ? ನೀನಿನ್ನೂ ಕನ್ಯಾವಸ್ಥೆಯಲ್ಲಿರುವುದರಿಂದಲೂ, ನಾಗರಿಕ ಜನಾಂಗಕ್ಕೆ ಸೇರಿರುವ ಪ್ರೌಢವಿದ್ಯಾವತಿಯೆಂದು

ತಿಳಿದುದರಿಂದಲೂ, ಮತ್ತು ಕಲಾಕೌಶಲ್ಯಗಳಲ್ಲಿ ನಿಷ್ಣಾತರಾಗಿರುವೆಯೆಂಬುದು ನಿನ್ನ ನಾಮಧೇಯದಿಂದಲೇ ತಿಳಿಯುವುದರಿಂದಲೂ—ಧೈರ್ಯವಾಗಿ,—ಕೇವಲ ಆತ್ಮೀಯಭಾವದಿಂದ,—ಪೂರ್ಣಸ್ವಾತಂತ್ರ್ಯದಿಂದ ಈ ಪತ್ರದ್ವಾರಾ ಸಂಪ್ರಾರ್ಥಿಸುತ್ತಿರುವೆನು. ಇದರಿಂದ ನನ್ನನ್ನು ಅರಸಿಕನೆಂದಾಗಲೀ, ಅನಾಗರಿಕನೆಂದಾಗಲೀ, ಅಂಗಹೀನ—ಅಥವಾ ನಿರ್ಭಾಗ್ಯನೆಂದಾಗಲೀ, ಭಾವಿಸಬೇಕಾಗಿಲ್ಲ. ಇಂತಹ ಕೊರತೆಯು ನನ್ನನ್ನು ಸೋಕುವಂತೆಯೂ ಇಲ್ಲ. ಕನ್ಯಾ—ಕನ್ಯಾಪಿತ–ಮತ್ತು ಕನ್ಯಾಬಂಧುವರ್ಗಕ್ಕೆಲ್ಲಾ ಸಮರ್ಪಕವಾಗುವಂತಹ ಸುಸ್ವರೂಪ, ವಯೋಸುಗುಣ ವಿದ್ಯಾ—ಕುಲ ಸಂಪದ್ವೈಭವಗಳಲ್ಲಿ ಆವ ಭಾಗದಲ್ಲಿಯೂ ಆವ ನ್ಯೂನತೆಯೂ ಇಲ್ಲವೆಂದು ಖಂಡಿತವಾಗಿ ತಿಳಿಯಬಹುದು. ಹಾಗೆ ನೀನು ಇಷ್ಟಪಡುವುದಾದರೆ ಧಾರಾಳವಾಗಿ ನಿನ್ನ ಮುಂದೆ ಬಂದು ನಿಲ್ಲುವೆನು. ನಿನ್ನಲ್ಲಿ ಸಂಭಾಷಿಸುವಷ್ಟರ ಅವಕಾಶವನ್ನು ಕಲ್ಪಿಸಿಕೊಡುವುದಾದರೆ—ಆಗಿನ ನನ್ನ ಆನಂದಕ್ಕೆ ಮೇರೆಯೇ ಇರುವುದಿಲ್ಲ. ಸುಕುಮಾರಿ! ಶುಭಾಂಗಿ!! ಹೆಚ್ಚಾಗಿ ಹೇಳಲಾರೆನು. ನೀನು ಯೌವನೋನ್ಮುಖಿಯಾಗಿದ್ದು ಸ್ವಾತಂತ್ರ್ಯವನ್ನು ವಹಿಸುವ ಅರ್ಹತೆಯನ್ನು ಹೊಂದಿರುವೆ. ನಿನ್ನ ಭಾವಸುಖ–ಸಂಪತ್ತಿಯ ಕಡೆಗೆ ನೀನೇ ಹೆಚ್ಚು ಗಮನವನ್ನು ಕೊಡಬೇಕಲ್ಲದೆ, ಯೋಗಿವರ್ಯರಾದ, ವಿರಕ್ತಾಗ್ರೇಸರರಾದ—ನಿಮ್ಮ ತಂದೆಯು, ಅಷ್ಟಾಗಿ ಗಮನಿಸುವಂತಿಲ್ಲ. ಮತ್ತೆ ನಿನಗೆ ನಿನ್ನ-ಅಪ್ರೇಮಯಿಯಾದ ತಾಯಿಯೂ ಇಲ್ಲ. ವಸ್ತುಸ್ಥಿತಿಯು ಹೀಗಿದ್ದು ನಿನ್ನ ಭವಿಷ್ಯಜ್ಜೀವನದ ಸುಖಾನುಭವವಿಚಾರದ, – ಸಮಸ್ತಭಾರವೂ ನಿನ್ನನ್ನೇ ಸೇರಿರುವುದೆಂದು ಹೇಳಲು ಏನೂ ಅಡ್ಡಿಯಿರಲಾರದು! ಆದುದರಿಂದ ಮೇಲಿನ ನನ್ನ "ಭಿಕ್ಷಾಂಪ್ರದೇಹಿ..." ಎಂಬ ವಾಕ್ಯವನು

ಅನುಮೋದಿಸಲು ಆತಂಕವೇನಿದೆ ? ಒಪ್ಪಿಕೊಳ್ಳುವೆಯೆಂದೇ ನಂಬಬಹು ದಲ್ಲವೇ ? ಹಾಗಾದರೆ ಧನ್ಯನು ! ಬೆಳದಿಂಗಳ ಬೆಳಕಿನಲ್ಲಿ ನಿಂತು, ಹಾಗೂ-ಪ್ರಥಮಪ್ರಯತ್ನದಲ್ಲಿ-ಇನ್ನೆಷ್ಟು ಬರೆಯಬಹುದು ? ಆದರೆ ಒಂದು ಮಾತು. ಈ ಪತ್ರವನ್ನು ನೀನು ಮತ್ತಾರಲ್ಲಿಯೂ ತೋರಿಸು ವದಾಗಲೀ, ಮತ್ತಾರಮುಂದೆಯಾದರೂ ಸರಿ, ಇದರ ಪ್ರಸ್ತಾಪವನ್ನು ತೆಗೆಯುವದಾಗಲೀ, ನಿನ್ನ ಮತ್ತು ನನ್ನ ಇಬ್ಬರ ಕಲ್ಯಾಣಕ್ಕೂ ಹಾನಿ ಕರವಾಗುವುದೆಂಬುದು ನಿನಗೆ ಚನ್ನಾಗಿ ತಿಳಿದಿರಲಿ ! ಹಾಗಾಗುವುದಾ ದರೆ, ನಿನ್ನ ಆತ್ಮೀಯರಿಗೂ-ನನ್ನ ಮನಸ್ಸಿಗೂ............ಮುಂದೆ ಹೇಳಲಾರೆನು. ಮುಖ್ಯವಾಗಿ—ಬಹಿರಂಗಪಡಿಸಬಾರದೆಂದೂ ಉತ್ತರ ವನ್ನು ನಾಳೆಯ ರಾತ್ರಿ, ಇದೇ ಈ ನಿನ್ನ ಕಿರುಮನೆಯ ಗವಾಕ್ಷಕ್ಕೆ ಬಿಗಿದಿದ್ದರೆ ಇಲ್ಲಿಗೆ ಬಂದೇ ನಾನದನ್ನು ಕೈಕೊಳ್ಳುವೆನೆಂದೂ ಸೂಚಿಸಿ ಇಲ್ಲಿಗೆ ವಿರಮಿಸುವೆನು.

ಇತಿ—ಭಿಕ್ಷಪ್ರಾರ್ಥಿ-ಕಲಾಭ್ಯರ್ಥಿ. ”

ಪತ್ರವನ್ನು ನಾಲ್ಕಾರುಬಾರಿ ಚೆನ್ನಾಗಿ ಓದಿದ ಬಳಿಕ, ಅಕ್ಷಯ ಕುಮಾರನು ನಾಲ್ಕಾರು ನಿಮಿಷಗಳ ವರೆಗೆ ತನ್ನಲ್ಲಿಯೇ ವಿಚಾರಮಾ ಡುತ್ತ ಕುಳಿತನು. ವಿಚಾರಾಂತ್ಯದಲ್ಲಿ ತಲೆಯೆತ್ತಿ ಮೇಲೆನೋಡಿ, “ಹೂಂ ಆಗಲಿ ! ಭಗವತಿ ! ಇದಕ್ಕೆ ನಿನ್ನ ಪ್ರೇರಣೆಯುಂತಾಗುವದೋ-ಹಾಗೆ ಯೇ ಉತ್ತರವನ್ನು ಬರೆದು ಸುಕುಮಾರಿಗೆ ಮುಟ್ಟಿಸುವೆನು. ವಿಳಂಬಿ ಸುವಂತಿಲ್ಲ. ” ಎಂದು ಹೇಳಿ, ಲೇಖನ ಸಾಮಗ್ರಿಯನ್ನು ಸಿದ್ಧಪಡಿಸಿ ಕೊಂಡು ಪ್ರತ್ಯುತ್ತರವನ್ನು ಬರೆಯಕುಳಿತನು. ಪೂರ್ವಾಪರವಿವೇಚನೆ ಯುಳ್ಳವರು ಮಾಡುವ ಆವುದೇ ಒಂದು ಕಾರ್ಯವಾಗಲೀ ಕೆಡುವುದೆಂಬ ಭೀತಿಗೆ ಕಾರಣವಿಲ್ಲವಷ್ಟೆ ; ಹಾಗೆಂದ ಬಳಿಕ ಅಕ್ಷಯಕುಮಾರನ ಬರಹ

ವನ್ನು ಕುರಿತು ಹೇಳಬೇಕಾದುದೇನು ? ಆದರೂ ಅದಾವಬಗೆಯದೆಂದು ವಾಚಕರು ಕೌತುಕಗೊಂಡಿರುವದರಿಂದ ಅದನ್ನಿಲ್ಲಿ ವಿವರಿಸಬೇಕೆಂಬಿರೋ? ಆಗಬಹುದು. ಹೋ ! ಅದಾರಕೂಗು ?—

" ಶ್ರೇಯೋಸ್ತು ! ಸದ್ವಿದ್ಯಾಭ್ಯರ್ಥಿಗಳಾದ ವಿದ್ಯಾರ್ಥಿಕುಲ ಮಂಡನರಿಗೆ || "

ಹರಕೆಯನ್ನು ಕೇಳಿ, ಪತ್ರವನ್ನು ಪುನರಾಲೋಕನ ಮಾಡುತ್ತಿದ್ದ ಅಕ್ಷಯಕುಮಾರನು ಸಂಭ್ರಮದಿಂದ ತಿರುಗಿನೋಡಿ, ಎದ್ದುಬಂದು, ಬಾಗಿಲಬಳಿಬಂದು ನಿಂತು ನೋಡುತ್ತಿದ್ದ ತನ್ನ ಸಮಾನವಯಸ್ಕ (ಮಿತ್ರ) ನ ಕೈಹಿಡಿದು, ಆದರ ವ್ಯಂಜನಸ್ವರದಿಂದ "ಸುಖಾಗಮನವಷ್ಟೆ? ಸನ್ಮಿತ್ರ! ಬಾ, ಕುಳಿತಿಕೊ, —'' ಎಂದು ಕೇಳಿ, ಆಗಂತುಕನನ್ನು ಕರೆತಂದು ತಾನು ಮೊದಲು ಕುಳಿತಿದ್ದೆಡೆಯಲ್ಲಿ ಕುಳ್ಳಿರಿಸಿ, ತಾನೂ ಕುಳಿತನು

ಆಗಂತುಕ—ಮಂದಹಾಸದಿಂದ–'ಕುಮಾರ ! ವಿಶೇಷವೇನು ?

ಅಕ್ಷಯ —ವಿಶೇಷವಿನ್ನೇನಿದೆ–ಪ್ರಭಾಕರ ! ನೀನು ವಿವಾಹಿತನಾಗಿ ಬಂದುದೊಂದು ವಿಶೇಷ. ಮಧುಮಿತ್ರನು ಕನ್ಯಾನ್ವೇಷಣೆ ಅಥವಾ ಭಿಕ್ಷಾಟನೆಯಗೆ ಪ್ರವರ್ತಿಸಿದುದೊಂದು ವಿಶೇಷ !!

ಪ್ರಭಾಕರ — ಆತುರದಿಂದ '' ಹಾಗೆಂದರೆ ? ''

ಅಕ್ಷಯ—ಹಾಗೆಂದರೆ–ಎಂದರೆ ಏನೂ ಹೇಳಬಹುದು ? ಪ್ರಭಾಕರ ! ನೀನು ಮಾತ್ರ ದೇವೀ ಪ್ರಸಾದಕ್ಕೆ ಪಾತ್ರನಾಗಬಹುದು,–ಅವನಾಗಬಾರದೇನು ?

ಪ್ರಭಾಕರ—ನನಗೆ ನಿನ್ನ ಒಗಟೆಯು ತಿಳಿಯಲಿಲ್ಲ. ದೇವೀ ಪ್ರಸಾದವೆಂದರೇನು ? ವಿವಾಹಿತನಾದನೆಂಬ ಅರ್ಥವೋ

ಅಕ್ಷಯ—ಹಾಗೆಯೇ ಊಹಿಸು ! ಅದಕ್ಕೇನು ಹೇಳುವೆ ?

ಪ್ರಭಾಕರ—ನಾನಾಗಿ ಆತುರಗೊಂಡು, ಈ ವಿವಾಹ ವಿಧಿಗೆ ಒಳಗಾದನೆಂದೇ ತಿಳಿದೆಯೋ ? ಹಾಗೆ ತಿಳಿದಿದ್ದರೆ, ಆ ನಿನ್ನ ತಪ್ಪುತಿಳಿವಳಿಕೆಯನ್ನು ಬಿಟ್ಟುಬಿಡು. ನಾನಿದನ್ನು ಮನಸಾ ತಿರಸ್ಕರಿಸಿದೆನಾದರೂ, ಹಿರಿಯರು-ಕೇವಲ-ನನ್ನ ಹಿತೈಷಿಗಳೂ, ಗುರುಗಳೂ, ಪರದೇವತೆಗಳೂ ಆದ ತಾಯಿತಂದೆಗಳ ಸತ್ಯವಾಕ್ಪರಿಪಾಲನೆಗಾಗಿ ಕಟ್ಟುಬಿದ್ದು ಮಾಡಿಕೊಳ್ಳಬೇಕಾಯಿತು. ನಾನೇನೂ ಮಧುಮಿತ್ರನಂತೆ ಸ್ವತಂತ್ರನಲ್ಲವಷ್ಟೆ ?

ಅಕ್ಷಯ—ಸ್ವತಂತ್ರನೋ, ಪರತಂತ್ರನೋ ಹೇಗಾದರೂ ಸರಿ ; ನೀನು ಬ್ರಹ್ಮಚರ್ಯವ್ರತದ ನಿರ್ಬಂಧದಿಂದ ಬಿಡುಗಡೆಯಾದೆಯೋ-ಇಲ್ಲವೋ ?

ಪ್ರಭಾಕರ—ಬ್ರಹ್ಮಚರ್ಯವ್ರತದ ನಿರ್ಬಂಧವನ್ನು ಬಿಟ್ಟುಕೊಟ್ಟ ಬಳಿಕ, ನಮಗೇನುಳಿದಿತು ? ಆ ಮುಂದೆ ನಾವು ಮಾಡುವ ಅಭ್ಯಾಸವಾದರೂ ಅವುದುಂಟು ? ನಮ್ಮ ಅಭ್ಯಾಸ-ವ್ರತ-ಸಂಕಲ್ಪಗಳೇ ಬಯಲಾದಮೇಲೆ, ನಾವು ಇಲ್ಲಿ ಗುರುಕುಲವಾಸ-ಅಥವಾ-ಶಿಷ್ಯವೃತ್ತಿಯಲ್ಲಿ ಕೃತಾರ್ಥತೆ ಹೊಂದುವದಕ್ಕೆ ಅವಕಾಶವಾದರೂ ಎಲ್ಲಿಯದು ?

ಅಕ್ಷಯ—ಪ್ರಭಾಕರನ ಮುಖವನ್ನೇ ನೋಡಿ—' ಇರಲಿ, ಇದಕ್ಕೆ ಉತ್ತರವನ್ನು ಸ್ವಲ್ಪಸಾವಧಾನದಿಂದ ಕೊಡುವೆನು. ಆದರೆ, ನೀನೇನು, ಮತ್ತೆ ಗುರುಕುಲವಾಸಕ್ಕೆಂದೇ ಒಂದೆಯೋ ?

ಪ್ರಭಾಕರ—ಆಹಾ ! ಹೋಗುವಾಗಲೇ ಹೇಳಿರಲಿಲ್ಲವೆ?—ಮೂರುವಾರಗಳ ಅವಧಿಯಲ್ಲಿ ಬಂದು, ಗುರುಕುಲವಾಸದಲ್ಲಿ ಸೇರುವೆನೆಂದು-ಅದರಂತೆಯೇ ತಾಯಿತಂದೆಗಳಿಂದ ಅನುಮತಿ ಹೊಂದಿ ಬಂದುಬಿಟ್ಟೆನು.

ಅಕ್ಷಯ—ಹಾಗಿದ್ದರೆ ನಿನ್ನ ಪತ್ನಿಯೊ ? ಅವಳೆಲ್ಲಿರುವಳು ? ವಯಸ್ಸೆಷ್ಟು ? ವ್ಯಾಸಂಗಿಸುತ್ತಿರುವಳೊ ?

ಪ್ರಭಾಕರ—ಕಿರುನಗೆಯಿಂದ-'ಅಷ್ಟುದೂರದ ಪ್ರಶ್ನೆಗಳೇಕೆ ?'

ಅಕ್ಷಯ—ಹೇಳಿದರೆ ನಿನಗಾಗುವ ನಷ್ಟವೇನು ? ನನಗದರಿಂದ ಕೆಲಸವಾಗತಕ್ಕುದಿದೆ.

ಪ್ರಭಾಕರ—ನನಗೆ ನಷ್ಟವಿಲ್ಲ. ನೀನು ಹಾಸ್ಯಕ್ಕಾಗಿ ಕೇಳಿದೆಯೆಂದು ತಿಳಿದಿದ್ದೆ; ಕ್ಷಮಿಸು ! ನನ್ನ ಪತ್ನಿಗೆ ಈಗ ವಯಸ್ಸು ಹದಿಮೂರು. ವ್ಯಾಸಂಗವೆಂದರೆ ಪ್ರಾಥಮಿಕ ಶಿಕ್ಷಣದಲ್ಲಿ ತಕ್ಕಮಟ್ಟಿಗೂ ಜ್ಞಾನವನ್ನು ಹೊಂದಿರುವಳೆಂದು ಬಲ್ಲೆ. ಈಗ ಸದ್ಯಕ್ಕೆ ತಂದೆ ತಾಯಿಯರ ಬಳಿಯಲ್ಲಿಯೇ ಇರುತ್ತಾಳೆ.

ಅಕ್ಷಯ—ಹಾಗಾದರೆ, ಅವಳಿಗೆ ಇನ್ನೂ ವ್ಯಾಸಂಗವು ನಡೆಯುತ್ತಿದೆಯೊ ? ಹೇಗೆ ? ಯಾರಿಂದ ?

ಪ್ರಭಾ—ಅವಳ ತಾಯಿತಂದೆಗಳೇನೋ ಇನ್ನೂ ಪ್ರೌಢಶಿಕ್ಷಣಕ್ಕಾಗಿ ಕಲಾಶಾಲೆಗೆ ಕಳುಹಬೇಕೆಂದಿದ್ದರು;—ಆದರೆ, ನಾನು ಅಷ್ಟಕ್ಕೆ ಅವಕಾಶಕೊಡದೆ, ನಮ್ಮ ತಾಯಿತಂದೆಗಳನ್ನು ಮುಂದುಮಾಡಿ, ಅವಳಿಗೆ ನಮ್ಮ ಆಚಾರವಿಚಾರಗಳಲ್ಲಿಯೂ, ನಮ್ಮ ಧರ್ಮ-ನೀತಿ-ತತ್ತ್ವಗಳ

ಪರವಾಗಿಯೂ, ಮತ್ತು ನಮ್ಮ ಧ್ಯೇಯ-ಕರ್ತವ್ಯಗಳ ವಿಧಾನವಾಗಿಯೂ, ಬೋಧಿಸುವಂತಹ ನೈತಿಕಶಿಕ್ಷಣವು ಕೇವಲ ತಾಯಿತಂದೆ, ಮುಖ್ಯಗುರುಜನರುಗಳಿಂದ ಕೊಡಬೇಕೆಂದು ಮಾತ್ರ ತಿಳಿಸಿದೆನು.

ಅಕ್ಷಯ—ಅದೇನು ? ಈಗಲೇ ನಿನಗಷ್ಟು ಸ್ವಾತಂತ್ರ್ಯವೊ ?

ಪ್ರಭಾ—ಸ್ವತಂತ್ರದ ಹೆಮ್ಮೆಯಿಂದ ಇದನ್ನು ಹೇಳಿದುದಲ್ಲ. ಹೇಗೂ ಹಿರಿಯರ ಮಾತಿನಂತೆ, ವಿವಾಹವಿಧಿಗೊಳಪಟ್ಟುದಾಯಿತು. ಇನ್ನು ಮುಂದೆಯೂ ಆ ನಮ್ಮ ಹಿರಿಯರ ನಿರೀಕ್ಷೆಯನ್ನು ಸಾಫಲ್ಯಗೊಳಿಸಬೇಕಾದುದು ನಮ್ಮ ಕರ್ತವ್ಯವಷ್ಟೆ !

ಅಕ್ಷಯ—ಕಿರುನಗೆಯಿಂದ—'ಹೇಗೆ ? ಯಾವರೀತಿಯಿಂದ ?'

ಪ್ರಭಾ—ಹೇಗೆನ್ನುವೆ ?-ನಮ್ಮ ಈ ದೇಹಕ್ಕೆ ಮುಖ್ಯಾಧಿಕಾರಿಗಳು ತಾಯಿತಂದೆಗಳು ; ಅವರ ಆಜ್ಞಾನುವರ್ತನವೇ ತಮ್ಮ ಕರ್ತವ್ಯಕರ್ಮವು. ಅವರ ಶಾಸನವೇ ನಮಗೆ ಪ್ರಮಾಣವು. ಅದೇ ನಮ್ಮ ಮುಂದಿನ ಪುರೋವೃದ್ಧಿಗೆ ಸಾಧನವಾದ ಮಂಗಳಶಾಸನವು. ಆದುದರಿಂದ ಇಂತಹ ಪರದೇವತೆಗಳಾದ ತಾಯಿತಂದೆಗಳು, ತಮ್ಮ ಮಕ್ಕಳು ತಮ್ಮನ್ನು ಮನವೊಲೆದು ಸೇವಿಸುವರೆಂದಲ್ಲವೇ--ಹಿಗ್ಗುತ್ತಿರುವುದು ! ಹಾಗೆ ಅವರು ಹಾರೈಸುತ್ತಿರುವರೆಂಬುದನ್ನು ತಿಳಿದು ಮಕ್ಕಳಾದ ನಾವು ಅವರ ನಿರೀಕ್ಷೆಗೆ ಭಂಗತಾರದಂತೆ ಅವರ ಇಷ್ಟಾನುಸಾರವಾಗಿ ನಡೆಯುವದರಿಂದ ಅವರನ್ನು ತೃಪ್ತಿಪಡಿಸಬೇಕಾದುದಲ್ಲವೆ ?

ಅಕ್ಷಯ—ವ್ಯಂಗವಾಗಿ 'ಅವರ ಇಷ್ಟದಂತೆಯೇ ನಡೆಯ ಬೇಕೆಂದರೆ, ನಮ್ಮ ಮುಂದಿನ ಸುಖದ ದಾರಿಯು ಕಟ್ಟಿ ದಂತೆಯೇ ಆದೀತು ?'

ಪ್ರಭಾ—ಕೌತುಕದಿಂದ—'ಕಾರಣವೇನು?'

ಅಕ್ಷಯ—ಕಾರಣವೇ ? ನಮ್ಮ ನಮ್ಮ ಮನಸ್ಸಿಗೊಪ್ಪಿದಂತೆ ಕೊಡುವುದಕ್ಕೂ ಕೊಳ್ಳುವುದಕ್ಕೂ, ಉಣುವದಕ್ಕೂ, ಅನುಭವಿಸುವದಕ್ಕೂ ಅಧಿಕಾರವಿಲ್ಲದೆ, ಕೇವಲ ಹಿರಿ ಯರೆಂದೂ, ಅವರ ವಿಧಿಯಂತೆ ವರ್ತಿಸುವದೇ ವಿಧೇ ಯರಾಗಿರುವ ಮಕ್ಕಳಿಗೆ ವಿಹಿತವೆಂದೂ, ಹೇಳಿದರೆ,-- ಮುಂದೆ ನಮಗುಳಿದಿರುವದೇನು ?

ಪ್ರಭಾ—ಸರಿ ಸರಿ !ನಿನ್ನ ಪ್ರಶ್ನೆಯ ವಿಧಾನವನ್ನು ತಿಳಿದೆನು. ಅಕ್ಷಯಕುಮಾರ ! ನೀನು ಶ್ಲೇಷೋಕ್ತಿಯಿಂದ ಕೇಳು ತ್ತಿರುವೆಯೆಂದು ನಾನು ಬಲ್ಲೆನು. ಆದರೂ ಹೇಳುವೆನು! ಮನಬಂದಂತೆ ನಡೆಯಗೊಡದಿದ್ದ ಮಾತ್ರಕ್ಕೆ ನಾವು ಅಸುಖಿಗಳೆನ್ನಿಸುವೆವೆಂಬದು, ಈಗಿನ ನಾಗರಿಕಯುಗ ದವರ ಮಾತು, ನಮ್ಮ ಮತವು ಅಂತಹದಾಗಿಲ್ಲ. ಅದು ಆವುದನ್ನೂ, "**ತಡೆದುನೋಡು, ಹಿಡಿದು ಮಾಡು**" ಎಂದೇ ಸಾರುತ್ತಿದೆ. ಮನಸ್ಸು ಬಯಸುವುದನ್ನೆಲ್ಲಾ ಪೂರ್ಣಮಾಡಲೇಬೇಕೆಂದರೆ, ನಮಗೆ ಅಂಧಃತಮಸ್ಸೆಂಬ ಭಯಂಕರವಾದ ನರಕವೇ ಗತಿಯಾದೀತು !! ಅಕೆಗೆ, ಮೊದಲೇ ಸ್ವೈರವೃತ್ತಿಯಲ್ಲಿ ಗಮನವು. ಅದರಮೇಲೆ ಆವ ತಡೆಯೂ ಇಲ್ಲವಾದರೆ ಅದರ ವರ್ತನವು ಕ್ಷಣ

ಕ್ಕೆಷ್ಟು ಬಗೆಯಾಗಿ, ಎಂತೆಂತಹ ಮಹತ್ತರ ರೂಪಾಂತರಗಳನ್ನು ಹೊಂದಿ ಮಾನವರನ್ನು ಉನ್ಮತ್ತವಾನರರನ್ನಾಗಿ ಮಾಡಬಹುದೋ-ಹೇಳಲಾಗುವುದೇ? ಹೇಗಾದರೂ ಹೋಗಲಿ. ನನ್ನ ದೃಢಸಂಕಲ್ಪವೆಂದರೆ ಇಷ್ಟೇ! ನನ್ನ ಈ ದೇಹದ ವಿಷಯದಲ್ಲಿ ನನಗಿರುವ ಅಭಿಮಾನಕ್ಕೆ ಇಮ್ಮಡಿ-ಮುಮ್ಮಡಿಯಾದಷ್ಟರ ಅಭಿಮಾನವು, ಈ ದೇಹದ, ಈ ದೇಹವನ್ನಾಶ್ರಯಿಸಿರುವ ಅಂತರಾತ್ಮನ-ವಿಷಯಕವಾಗಿ ನಿಜವಾದ ಪ್ರೇಮವು, ನಮ್ಮ ತಾಯಿ ತಂದೆಯಲ್ಲಿರುವದು. ಹೇಗೆನ್ನುವೆ? ಅವರು ನಮ್ಮ ವಿಷಯದಲ್ಲಿ ತ್ರಿವಿಧವಾದ ಮುಖ್ಯಾಶಯವುಳ್ಳವರಾಗಿದ್ದಾರೆ. ೧ ಪುತ್ರರ ಜನ್ಮಧಾರಣ—ಸುಖಜೀವನಗಳ ಮೂಲಕ ವಂಶಾಭಿವೃದ್ಧಿ, ೨ ಅವರ ಸದಾಚರಣೆಗಳಿಂದ ತಮ್ಮ ಇಹಜೀವಿತದಲ್ಲಿ ಸುಖ, ಸಮಾಧಾನ; ಮತ್ತು ೩. ಆ ಮಕ್ಕಳ ಧಾರ್ಮಿಕವರ್ತನದ ದೈವೀಭಾವನೆಯಿಂದ ಉಪಲಬ್ಧವಾಗುವ ಶಾಶ್ವತ ಕೀರ್ತಿಯ-ಪಾರತ್ರಿಕ ಸುಖ-ವೈಭವಪ್ರಾಪ್ತಿ. ಹೀಗೆ ತಮ್ಮ ಮಕ್ಕಳು ತಮಗೆ ವಂಶವರ್ಧನರೂ ನಿಜಗುರುಪದಸೇವಾನಿರತರೂ, ಪರತತ್ವ ಸಂಶೋಧಕರೂ ಆಗಿ ತಮ್ಮ ಆನಂದವನ್ನು ಹೆಚ್ಚಿಸುವರೆಂಬ ಮೂರು ಬಗೆಯ ಆಶೋತ್ತರಗಳಿಂದಲೂ ಕೂಡಿರುವಲ್ಲಿ ನಮ್ಮ ಮುಂದಿನ ಆರೋಗ್ಯ, ಉದ್ಯೋಗ, ಆರ್ಥಿಕಲಾಭ, ಆತ್ಮಸಮಾಧಾನಗಳ ವಿಚಾರದಲ್ಲಿ ಅವರು ನಮಗೂ ಹೆಚ್ಚಿನ ಆಲೋಚನೆಯಲ್ಲಿರುವರೆಂಬು

ದೇ ಸ್ಪಷ್ಟಪಟ್ಟಂತಾಯಿತು. ಹಾಗೆಂದ ಬಳಿಕ, ಅವರು ನಮಗೆ ವಿಧಿಸುವ ಕಾರ್ಯವು ನಮ್ಮ ಮತ್ತು ಅವರ ಇಬ್ಬರ ಕ್ಷೇಮಾಭ್ಯುದಯಗಳಿಗೂ ತಕ್ಕುದಾದುದನ್ನೇ ವಿಚಾರ ಪೂರ್ವಕವಾಗಿ ತಿಳಿದು, ನಮಗೆ ವಿಧಿಸಿರುವರಲ್ಲದೆ, ಅದರಿಂದ ಅಸುಖಿಗಳಾಗುವಂತೆ ಮಾಡಿ, ಅಸುಖಿಗಳಾಗುವ ನಮ್ಮನ್ನು ನೋಡಿ ತಾವು ನಲಿಯಬೇಕೆಂದು ಮಾಡುವದಿಲ್ಲವಷ್ಟೆ ? ಹಾಗೆಂದಮೇಲೆ, ಅವರ ಮಾರ್ಗಾನುಸರಣವೃತ್ತಿಯಲ್ಲಿ ನಾವು ಸ್ವಲ್ಪವೂ ಮೈ ಮರೆಯದೆ, ಜಾಗ್ರತರಾಗಿರಬೇಕಾದರೆ, ನಮ್ಮ ಸಮ್ಮುಖ್ಯಸಹಕಾರ ಪಾತ್ರಗಳನ್ನು ಕೂಡ ನಮ್ಮ ಅಭಿಮತಕ್ಕೆ ಅನುಕೂಲರನ್ನಾಗಿ ಮಾಡಿಕೊಂಡಿರಬೇಕಾಯಿತಷ್ಟೆ ! ಹೆಚ್ಚೇಕೆ! ಪತ್ನಿಯು ಸಹಧರ್ಮಚಾರಿಣಿಯಾಗಿರಬೇಕಾದರೆ, ಅದಕ್ಕನುಗುಣವಾದ ಶಿಕ್ಷಣವನ್ನೇ ಹೊಂದುವುದು ಅವಶ್ಯಕವು. ಒಟ್ಟಿನಲ್ಲಿ ನನ್ನ ಪತ್ನಿಯು ಆರ್ಯಮಹಿಳಾವರ್ಗದಲ್ಲಿ ಪರಿಗಣಿತೆಯಾಗುವಂತಹ ಗುರುದೈವ ಭಕ್ತಿ, ಕರ್ತವ್ಯನಿಷ್ಠೆ, ಶ್ರಮಸಹಿಷ್ಣುತೆ, ಧರ್ಮಬುದ್ಧಿ, ದೇಶಾಭಿಮಾನ, ಆಶ್ರಿತವಾತ್ಸಲ್ಯಗಳೆಂಬ ಷಡ್ಗುಣಗಳಿಂದಲೂ ನನ್ನ ಪುತ್ರಕರ್ತವ್ಯಸಿದ್ಧಿಗೆ ಸಹಕಾರಿಣಿಯಾದರೆ ಸಾಕು. ಅದಕ್ಕೂ ಹೆಚ್ಚಿದ ವಿಪರೀತ ಪ್ರಜ್ಞೆಯನ್ನು ನಾನು ಬೇಕೆಂದು ಹೇಳಲಾರೆನು.

ಅಕ್ಷಯ—ಕಿರುನಗೆಯಿಂದ— 'ವಿಪರೀತಪ್ರಜ್ಞೆಯೆಂದರೆ ನಿನ್ನ ಅಭಿಪ್ರಾಯ!'

ಪ್ರಭಾ—ಅಭಿಪ್ರಾಯವಿನ್ನಾವುದೂ ಅಲ್ಲ. ಪ್ರಜ್ಞೆಯನ್ನು ಅತಿಕ್ರಮಿಸುವ ಆಚರಣವೇ ಸರಿ. ಹೇಗೆನ್ನುವೆ-ಈಗ ಹೇಳು ! ನಮ್ಮ ಮಹಿಳೆಯರು ಕೇವಲ ಪ್ರೌಢಶಿಕ್ಷಣವನ್ನು ಹೊಂದಬೇಕೆಂಬ ಆಕೋಕ್ತರದಿಂದ,ದೇಶ ವಿದೇಶಗಳನ್ನು ಸುತ್ತಿ,ಪ್ರವಾಸ-ಪರಗೃಹನಿವಾಸಗಳಕ್ಲೇಶಗಳನ್ನೂ ಸಹಿಸಿ, ಹಲವು ಗಂಜಾಂತರಗಳಿಗೆ ಸಿಕ್ಕಿಯೂ, ದೈವಯೋಗದಿಂದ ಅದೆಲ್ಲವನ್ನೂ ನಿರ್ವಹಿಸಿ, ಕಡೆಗೆ ಉದ್ದೇಶವಿದ್ದಂತೆ ನಾಲ್ಕಾರು ಭಾಷಾಶಾಸ್ತ್ರಗಳನ್ನು ಮುಗಿಯಿಸಿ ವಿದ್ಯಾಪರಿಣತೆಯರೆನ್ನಿಸಿ ಬಂದರೆಂದೇ ಭಾವಿಸು. ಅವರಿಂದ ನಮ್ಮವರಿಗಾಗುವ ಆರ್ಥಿಕಲಾಭವೇನು ? ಇಹಪರಗಳೆರಡರ ಮೂಲವನ್ನೂ, ಅರ್ಥವಿಚಾರವನ್ನೂ, ಮಾಡಿಹೇಳು.

ಅಕ್ಷಯ—(ಕಿರುನಗೆಯಿಂದ) 'ನಿನ್ನ ಪಾರತ್ರಿಕ ಸುಖದ ಮಾತನ್ನು ಕೇಳುವಷ್ಟು ದಡ್ಡರೂ ಈ ಕಾಲದಲ್ಲಿರುವರೇ ? ನಾನರಿಯೆನು ! ಲಾಭವೇನೆನ್ನುವೆ ? ಸಮಾನಾಧಿಕಾರ, ಸ್ವಾತಂತ್ರ್ಯ, ಸ್ವಪ್ರತಿಷ್ಠಾಕಾಮನೆ-ಇತ್ಯಾದಿಗಳಿಂದ ಮಹಾಗುಣಸಂಪನ್ನೆಯರಾದ ಮಹಿಳೆಯರನ್ನು ಮದುವೆಯಾಗುವದರಿಂದ, ಆಹಾರ ವಿಹಾರಗಳೆಲ್ಲದರಲ್ಲಿಯೂ—? "

ಪ್ರಭಾ—ಸಾಕು, ಅಷ್ಟಾದರೆ ನಮ್ಮ ಆರ್ಯತ್ವವು ಸಾರ್ಥಕವಾದಂತೆಯೇ ಸರಿ. ಹೋಗಲಿ, ಈಗ ಆಮಾತೆಲ್ಲ ಏಕೆ?

ಅಕ್ಷಯ—ಸುಮ್ಮನೆ ಕೇಳಿದೆನು. ಈಗ ನಿನ್ನ ತಾಯಿತಂದೆ

ಗಳು ನಿನಗಪ್ಪಣೆಕೊಟ್ಟು ಕಳುಹಿದರು;—ನೀನು ಮತ್ತೆ ಯೂ ವ್ಯಾಸಂಗಕ್ಕಾಗಿ ಬಂದೆ, ಸರಿ! ಆದರೆ ಈಗ ನಿನ್ನ ಮನಸ್ಸು ಇಬ್ಬರಿಗೆ ಪಾಲಾಗಬೇಕೋ? ಮೂರು ಪಾಲಾಗಬೇಕೋ ?

ಪ್ರಭಾ—ತಲೆದೂಗಿ ನಕ್ಕು 'ತಿಳಿದೆನು, ನಿನ್ನ ಪ್ರಶ್ನೆಯ ಅರ್ಥವೇನೆಂಬುದನ್ನು ತಿಳಿದುಕೊಂಡೆನು. ಅಕ್ಷಯಕುಮಾರ! ನನ್ನನ್ನು ಈ ಕಾಲದ ನಟ ವಿಟ ಶಾಸ್ತ್ರವಾದದಲ್ಲಿ ಪಟುಗಳಾಗಿರುವವರ ಗುಂಪಿಗೆ ಮಾತ್ರ ಸೇರಿಸಬೇಡ. ಕಂಕಣವನ್ನು ಕಟ್ಟಿಕೊಂಡುದು ನಿಜವಾದರೂ, ಈಗ ನಾನು ಕೇವಲ ಬ್ರಹ್ಮಚಾರಿ, ಮತ್ತು ಗುರುಕುಲವಾಸಕ್ಕಾಗಿ ಬಂದಿರುವ ಶಿಷ್ಯನು ಮಾತ್ರ! ಈಗ ನನ್ನ ಮನಸ್ಸು ಒಡೆಯಲು ಕಾರಣವಿಲ್ಲ. ಮೊದಲಿದ್ದಂತೆಯೇ ಗುರುಸೇವೆಯೇ ಮೊದಲಾದ ಅಭ್ಯಾಸದಲ್ಲಿ ನ್ಯಸ್ತನಾಗಿರುವುದಲ್ಲದೆ ನಮ್ಮ ಪ್ರಧಾನಗುರುಗಳಾದ ಮಾತಾಪಿತರ ಆಜ್ಞೆಯನ್ನು ಲೇಶಮಾತ್ರವೂ ಮೀರದಂತೆ ವರ್ತಿಸುವುದರಲ್ಲಿ ಯಾವಾಗಲೂ ಎಚ್ಚತ್ತಿರುವದು. ನೀನು ಕೇಳುವಂತೆ ಪತ್ನಿಯು ಮುಖೋಲ್ಲಾಸಕ್ಕಾಗಿ ಇಲ್ಲಿ ನನ್ನಿಂದ ಆವುದೇ ಬಗೆಯ ವ್ಯವಹಾರವೂ ನಡೆಯುವಂತಿಲ್ಲ. ಆವ ವ್ಯವಹಾರವಿದ್ದರೂ, ನಮ್ಮ ಹಿರಿಯರಿರುವರು ; ಅವಳ ಹಿರಿಯರಿರುವರು; ಅಷ್ಟೆ. ಇನ್ನಾದರೂ ತೃಪ್ತಿಯಾಯಿತೇ ?

ಅಕ್ಷಯ—ಕಿರುನಗೆಯಿಂದ–'ಒಂದು ಬಗೆಯಿಂದ ತೃಪ್ತಿಯಾ

ಯಿತಾದರೂ, ಮಧುಮಿತ್ರನ ನಾಗರಿಕತೆಯ ಮುಂದೆ ಇದೆಲ್ಲವೂ ಮೌಢ್ಯಾಚಾರವೆನ್ನಿಸುವವೆಂದಿಷ್ಟೇ ಚಿಂತೆ !'

ಪ್ರಭಾ—ತಲೆದೂಗಿ-"ಅಷ್ಟೇ ತಾನೆ ? ಚಿಂತೆಯೇಕೆ ? ಕಲಾಧವ ಕುಮಾರನ ಸಹಚರ್ಯೆಗಾದರೂ ನಮಗೆ ಅರ್ಹತೆಯುಂಟೋ ? ಇಲ್ಲವೋ !''

ಅಕ್ಷಯ—ಉಹೂ ! ಬಲು ಸೊಗಸೇ ಸರಿ ! ಇಬ್ಬರೂ ಸರಿಯಾಗಿರುವಿರಿ—ಹೆಡ್ಡತನದಲ್ಲಿ !

ಪ್ರಭಾ—ಸಾಕು, ನನಗೆ ಇಂತಹ ಹೆಡ್ಡನೇ ಸಖನಾಗಿರಲಿ !! ಅಕ್ಷಯಕುಮಾರ ! ಮಧುಮಿತ್ರನ ಆಕಾರ ಮನೋವಿಕಾರಾದಿಗಳು, ಹೊರಗಿನವರಿಗೆ ಅಂದವಾಗಿರಬಹುದು ; ಅವರನ್ನು ಸಂದರ್ಭವಶಾತ್ ಮರುಳುಮಾಡಿದರೂ ಮಾಡಬಹುದು. ಆದರೆ ನೋಡು, ಕಲಾಧವ ಕುಮಾರನ ಆಚಾರ ವಿಚಾರಗಳಾವುದರಲ್ಲಿಯೂ ಅಂತಹ ಕ್ಷಣಿಕಭ್ರಾಂತಿಯ ನಟನಾವಳಿಯು ಕಾಣಿಸುವದಿಲ್ಲ. ಅವನ ಸ್ವಭಾವವು ನಿರ್ಮಲಾಕಾಶದಲ್ಲಿ ಪ್ರಜ್ವಲಿಸುವ ಪ್ರಭಾಕರನಂತೆಯೇ ಇರುವದು. ಮಧುಮಿತ್ರನ ಸ್ವಭಾವವೆಂದರೆ ಕೃತಕವಾದ ಹಗಲುಬತ್ತಿಯ ಬೆಳಕಿನಂತೆ ತೋರಿ ಹಾರುವಂತಹದೇ ಸರಿ. ಇದರಿಂದ ಮಧುಮಿತ್ರ-ಕಲಾಧವ ಕುಮಾರರಿಗಿರತಕ್ಕ ಅಜಗಜಾಂತರನ್ಯಾಯವು ಸ್ಪಷ್ಟಪಡಬಹುದಷ್ಟೆ ! ಒಟ್ಟಿನಲ್ಲಿ-ಕಲಾಧವಕುಮಾರನ ಮಾರ್ಗಾನುಕರಣಮಾಡುವದಾದರೆ, ನಮ್ಮ ವಿದ್ಯಾರ್ಥಿ

ಕುಲವು ಸಿದ್ಧಾರ್ಥಿಗಳಾಗುವುದರಲ್ಲಿ ಏನೂ ಸಂಶಯ ವಿರುವುದಿಲ್ಲ. ಮತ್ತೇನು !

" ಮತ್ತೇನೂ ಇಲ್ಲ. ನೀವೆಲ್ಲರೂ ಸಿದ್ಧಾರ್ಥಿಗಳೇ ಆಹುದಷ್ಟೆ ? "

ಪ್ರಭಾಕರನ ಪ್ರಶ್ನೆಗೆ ಹೊರಗಣಿನಿಂದ ದೊರೆತ ಉತ್ತರವನ್ನು ಕೇಳಿ, ಇಬ್ಬರೂ ಚಕಿತರಾಗಿ ತಲೆಯೆತ್ತಿ ಬಾಗಿಲಕಡೆಗೆ ತಿರುಗಿನೋಡಿದರು. ಸ್ವಯಂ ಕಲಾಧವ ಕುಮಾರನೇ ಕೈ ಕಟ್ಟಿನಿಂತಿರುವನು. ಕುಮಾರನ ಮುಖದಲ್ಲಿ ಉತ್ಸಾಹವು ಉಕ್ಕಿ ಸುರಿಯುತ್ತಿರುವುದು. ಇಬ್ಬರೂ ನೋಡಿದರು· ಧಿಗ್ಗನೆದ್ದುಬಂದು ಕುಮಾರನ ಬೆನ್ನಮೇಲೆ ಇಬ್ಬರೂ ಏಕಕಾಲದಲ್ಲಿ ಚಪ್ಪರಿಸಿದರು. ಕಲಾಧವ ಕುಮಾರನುಕೂಡ ತನ್ನ ಮಿತ್ರರ ಾದರಾಥಿತ್ಯಕ್ಕೆ ಪ್ರತಿಯಾಗಿ ತನ್ನೆರಡು ನಳಿದೋಳುಗಳಿಂದ ಇಬ್ಬರ ಕೊರಳನ್ನೂ ಸುತ್ತಿ, ಇಬ್ಬರನ್ನೂ ಕರೆತಂದು ಮೊದಲಿದ್ದೆಡೆಯಲ್ಲಿಯೇ ಕುಳ್ಳಿರಿಸಿ ತಾನೂ ಅವರಿಬ್ಬರ ನಡುವೆ ಕುಳಿತು " ಮಿತ್ರರೇ! ಈಗ ನಾನಾರು? ನೀವೇನಾಗಿರುವಿರಿ? ಹೇಳಬಲ್ಲಿರೋ?"

ಪ್ರಭಾ—ಓಹೋ ! ಧಾರಾಳವಾಗಿ !! ಈಗ ನೀನೇ ಸಾಕ್ಷಾತ್ ಸ್ಥಿತಿಕರ್ತನಾದ ವಿಷ್ಣು, ನಿನ್ನ ಪಾರ್ಶ್ವ·········· ಅಲ್ಲವೇ ?

ಆಕ್ಷಯ—ಹಾಗೆನ್ನುವದಕ್ಕೂ, ಕಲಾಧವಕುಮಾರನೇ ಕ್ಷಮಾದೀಶನೆಂದೂ, ನಾವಿಬ್ಬರೂ ಆತನ ಅನುಗಾಮಿಗಳಾದ ······ರೆಂದೂ ಹೇಳುವುದರಿಂದ ಹೆಚ್ಚಿನ ಗುಣವುಂಟು.

ಕಲಾ—ಅಹುದು, ನನ್ನನ್ನು ವಿಷ್ಣುವೆಂದರೂ, ನಿಮ್ಮನ್ನು ವಿಷ್ಣು ಪತ್ನಿಯರೆಂದು ಹೇಳಿಕೊಂಡರೂ ನಗೆಗೇಡಿನ ಮಾತಾಗುವದು, ಅದು ಹೋಗಲಿ, ಇಲ್ಲಿ ಇಬ್ಬರೇ ಕುಳಿತು, ಮಾಡುತ್ತಿದ್ದುದೇನು ? ದೇವತಾರ್ಚನೆಯ ಸಮಯವು ಸಮೀಪಿಸಿತು. ಮಂದಿರಕ್ಕೆ ಬರುವುದಿಲ್ಲವೇನು ?

ಅಕ್ಷಯ—ಆಗಲೇ, ದೇವತಾರ್ಚನೆಯ ಸಮಯವಾಯಿತೆ ?

ಕಲಾ—ಆಗಲೇ,-ಪಾಪ ! ನಿನಗೆ ಹೇಗೆ ಗೊತ್ತಾಗಬೇಕು? ಪ್ರಭಾಕರನು ವಿವಾಹಿತನಾಗಿ ಬಂದನೆಂದು ಪರಿಹಾಸಮಾಡಬೇಕಾದುದೊಂದೇ ನಿನ್ನ ಗುರಿ ?

ಅಕ್ಷಯ—ಕಿರುನಗೆಯಿಂದ " ನಿಜ, ಅದೊಂದೇ ನನ್ನ ಗುರಿಯಾಗಿತ್ತು. ಆದರೆ, ಈಗ–ನಿನಗೂ ಬೇಗ ವಿವಾಹ ಬಂಧನವುಂಟಾದರೆ, ನನ್ನ ನಾಲಿಗೆಗೆ ಮತ್ತೂ ಸವಿಯು.

ಕಲಾಧ—ಆಗಲಿ, ಬಾಧಕವೇನದರಲ್ಲಿ ? ಪ್ರಭಾಕರನಿಗೆ ಉಂಟಾದಂತೆ, ಆ ತಾಯ್ತಂದೆಗಳ ಗುರುತರವಾದ ಶಾಸನವು ನನ್ನನ್ನು ಬಂಧಿಸಿದಾಗಲಲ್ಲವೇ ಆ ಮಾತು ? ಈಗಲೇ ನನಗೆ ಅಷ್ಟೇನೂ ಆತುರವು ಕಾಣುತ್ತಿಲ್ಲ. (ಎಂದು ಹೇಳುತ್ತಿದ್ದಂತೆಯೇ ಅಕ್ಷಯಕುಮಾರನು ಬರೆದು ಕೆಳಗಿರಿಸಿದ್ದ ಪತ್ರಗಳನ್ನು ಕೈಗೆ ತೆಗೆದುಕೊಂಡು) " ಇದೇನು ? ಎಲ್ಲಿಯದು ? ಯಾರಿಗೆ ? "

ಅಕ್ಷಯ—ಇದೀಗ ಪೂರ್ವಾಪರ ವಿವೇಚನೆಗೆ ಹೆಗ್ಗುರುತು ! ಊಹಿಸು.

ಪ್ರಭಾ—ಕುತೂಹಲದಿಂದ–"ಅದಾವುದು ? ಕಲಾಧವ ಕುಮಾರ ! ನನಗೂ ತಿಳಿವಂತೆ ಓದಿ ಹೇಳು ?"

ಕಲಾಧವನು ಸಮ್ಮತಿಸಿ, ಮೊದಲು ಭಿಕ್ಷಾರ್ಥಿಯ ಲೇಖನವನ್ನು ವಾಚಿಸಿ, ಆ ಬಳಿಕ ಅದಕ್ಕುತ್ತರವಾಗಿ ಬರೆದ ಕಾಗದವನ್ನು ಹೀಗೆ ಓದಿದನು.

॥ ಉತ್ತರ ಪತ್ರ ॥

ಶ್ರೀ ದುರ್ಗಾ ಸಹಾಯ.

" ಭಕ್ತ್ಯಾಪಠನ್ತಿಗಿರಿಜಾದಶಕಂಪ್ರಭಾತೇ | ಕಾಮಾರ್ಥಿನೋ ಬಹುಧನಾನ್ನ ಸಮೃದ್ಧಿಕಾಮಾಃ ॥ ಪ್ರೀತ್ಯಾಮಹೇಶವನಿತಾ ಹಿಮ ಶೈಲಕನ್ಯಾ | ತೇಭ್ಯೋದದಾತಿ ಸತತಂ ಮನಸೇಪ್ಸಿತಾನಿ " ॥

(ದಿನಚರ್ಯಾ. ಪುಟ ೧೧೯. ಶ್ಲೋ. ೧೧)

ವಿಶ್ವಸನೀಯರಾದ ವಿದ್ಯಾರ್ಥಿಗಳಲ್ಲಿ ಕೃತಜ್ಞತಾಪೂರ್ವಕ ವಂದನೆ!

ಕಲಾಭ್ಯರ್ಥಿಗಳು ಬರೆದ ಪತ್ರವು ನನಗೆ ಅರ್ಥವಾಗುವಂತಿಲ್ಲ, ಮೇಲಿನ ಶ್ಲೋಕದಲ್ಲಿಯೇ ಶಬ್ದಗಳನ್ನು ನುಂಗಿ ಬರೆದಿರುವ ಅಭಿಪ್ರಾಯವು ನನಗ ಬೋಧೆಯಾಗಿಲ್ಲ. ಆದರೆ ಅದರಲ್ಲಿ,

" ಸಂಧ್ಯಾತ್ರಯೇ ಸಕಲ ಭೂಸುರಸೇವ್ಯಮಾನೇ | ಸ್ವಾಹಾಸ್ವಧಾಸಿ ಪಿತೃದೇವಗಣಾರ್ತಿಹಂತ್ರೀ ॥ ಜಾಯಾಸುತಾಃ ಪರಿಜನೋಽತಿಥಯೋಽನ್ನಕಾಮಾಃ ॥ ಭಿಕ್ಷಾಂಪ್ರದೇಹಿ ಗಿರಿಜೇಕ್ಷುಧಿತಾಯಮಹ್ಯಂ॥'

[ದಿನಚರ್ಯಾ. ಪುಟ. ೧೧೮]

ಎಂದು ಬರೆದಿದ್ದರೆ ಎಷ್ಟು ಸ್ವಾರಸ್ಯವಾಗುತ್ತಿದ್ದಿತು ?

ವಿದ್ಯಾರ್ಥಿಗಳಿಗೆ, ಪ್ರೌಢಕಲಾಭ್ಯರ್ಥಿಗಳಿಗೆ, ಮತ್ತು ಗುರುಕುಲವಾಸದಲ್ಲಿರಬೇಕಾದ ಶಿಷ್ಯವೃತ್ತಿಯರಿಗೆ, ಆತ್ಮಪ್ರಶಂಸನದಷ್ಟುರ ಹೇಯ ಕಾರ್ಯವು, ಮತ್ತೊಂದಿರಲಾರದು. ಹೀಗೆ ಬರೆದುದಕ್ಕಾಗಿ ಕ್ಷಮೆಯಿರಲಿ!

ತಾಯಿತಂದೆಗಳು ವಿರಕ್ತರಾಗಿರಲಿ, ಅಶಕ್ತರಾಗಿರಲಿ, ರಿಕ್ತಹಸ್ತರಾಗಿರಲಿ, ಹೇಗಿದ್ದರೂ ಅವರೇ ಮಕ್ಕಳ ಸುಖದುಃಖಗಳ ವಿಚಾರಕ್ಕೆ ಹೊಣೆಗಾರರಾಗಿರತಕ್ಕವರು ! ಅವರ ಅಭಿಪ್ರಾಯದಂತೆ ನಡೆಯಬೇಕಾದುದೇ ಮಕ್ಕಳ ಧರ್ಮವು ;-ಮತ್ತು ಮುಖ್ಯ ಕರ್ತವ್ಯವು. ನಾನು ಕೂಡ, ಅದೇ ಮತವನ್ನೇ ಹಿಡಿದಿರುವೆನು. ನಮ್ಮ ತಂದೆಯೇ ನನ್ನ ಸಮಸ್ತ ಗುರು, ದೈವ, ಬಂಧು-ಮಿತ್ರವರ್ಗವೂ ಆಗಿರುವಂತೆ ನಂಬಿರುವೆನು. ಅಂತಹ ಪಿತೃದೇವನಿಗೆ ವಿರೋಧವಾಗಿ ಪಡೆಯಬಹುದಾದ ಸ್ವರ್ಗಲಾಭವೂ ನನಗೆ ಬೇಕಾಗಿಲ್ಲ, ಅವರ ಆಜ್ಞೆಯಂತೆ ನಡೆವುದೊಂದೇ ಗೊತ್ತು. ಅವರಿಗಾಗಿ ಬೆಂಕಿಯಲ್ಲಿಯಾದರೂ ಬೀಳಬಲ್ಲೆನು. ತಿಳಿದಿರಲಿ ! ಈ ವಿಚಾರದಲ್ಲಿ ನನ್ನಿಂದ ಒಂದು ಚಕಾರವೂ ಹೊರಡುವಂತಿಲ್ಲ. ಮುಖ್ಯವಾಗಿ,-ಭಗವಂತನು ನಿಮ್ಮನ್ನು ಸದ್ವಿದ್ಯಾಲಾಭದಿಂದ ಕೃತಾರ್ಥರಾಗಿ, ಉತ್ತಮಪಾತ್ರೆಯನ್ನು ಸಂಪಾದಿಸಿ, ಅಭಿವೃದ್ಧಿಗೆ ಬರುವಂತೆ ಮಾಡಲೆಂದಾಶಿಸುವೆನು. ಕೋರಿಕೆಯಂತೆಯೇ ಪ್ರತ್ಯುತ್ತರವು ಗವಾಕ್ಷಕ್ಕೆ ಬಿಗಿಯಲ್ಪಡುವುದು. ಆದರೆ, ಕಲಾಭ್ಯರ್ಥಿಗಳು ದುಡುಕುವುದೂ, ಈ ಯಃಕಶ್ಚನ ಸ್ತ್ರೀವ್ಯಕ್ತಿಯು ಮುಂದೆ ಬಂದು ನಿಂತು ಸಂಭಾಷಿಸುವದೂ ನನ್ನ ಮತವಲ್ಲ. ಸದ್ಯದಲ್ಲಿ ವ್ಯಾಸಂಗದಲ್ಲಿ ಹೆಚ್ಚು ಗಮನವಿರಿಸಿ, ಹಿರಿಯರ ಮಾತಿನಂತೆ ನಡೆವುದೊಂದೇ ಅವಶ್ಯಕರ್ತವ್ಯವೆಂದು ನಮ್ರಭಾವದಿಂದ ಸೂಚಿಸಿ, ವಿವರಮಿಸುವೆನು.

ಇತಿ ಕಲಾಭ್ಯರ್ಥಿಗಳ ಕ್ಷೇಮಾಭ್ಯುದಯಾಕಾಂಕ್ಷಿಣಿಯಾದ
ಧರ್ಮಭಗಿನಿ............ "

ಪ್ರಭಾಕರ —ಕುತೂಹಲದಿಂದ-'ಅಕ್ಷಯಕುಮಾರ ! ನಿನ್ನ ಈ ದಿನದ ವಿಚಾರವಿಮರ್ಶೆಗೆ ಇದೇ ಕಾರಣವಲ್ಲವೇ ?

ಅಕ್ಷಯ—ಅಹುದು ಆದರಿಂದಲೇ ಇಷ್ಟು ವಾದವಿವಾದಗಳಾದುವು.

ಪ್ರಭಾಕರ—ಈ ಪತ್ರಪಠಣದಿಂದ ಗುರುಪುತ್ರಿ,ಭಯಪಟ್ಟಿರಬಹುದಲ್ಲವೆ?

ಅಕ್ಷಯ—ಭಯಪಟ್ಟಿರುವುದು ಮಾತ್ರವಲ್ಲ, ಎಂದೋ ಕಾಲವಾದ ತಾಯಿಯನ್ನು ನೆನೆನೆನೆದು ಕ್ಲೇಶಪಡುತ್ತಿರುವಳು.

ಕಲಾಧವ—ಏನನ್ನೋ ಜ್ಞಾಪಿಸಿಕೊಂಡು ತಲೆಯೆತ್ತಿ—"ಇರಬಹುದು. ಹಾಗಾಗಿರುವುದರಿಂದಲೇ ಇಂದು ಗುರುಪುತ್ರಿಯು ತಂದೆಯ ಬಳಿಯಲ್ಲಿ ಮಾತನಾಡುತ್ತಿದ್ದಳೆಂದು ಭಾವಿಸುವೆನು."

ಅಕ್ಷಯ—ಗುರುಪುತ್ರಿ, ತಂದೆಯೊಡನೆ ಮಾತನಾಡುತ್ತಿದ್ದುದನ್ನು ನೀ ನಾವಾಗ ನೋಡಿದೆ ?

ಕಲಾಧವ-ಪ್ರಾತಃಕಾಲದಲ್ಲಿ ಗುರುಪಾದ ವಂದನೆಗಾಗಿ ಹೋಗಿದ್ದೆನಷ್ಟೆ; ಆಗ ಗುರುಗಳು ಕಾಲಕ್ಷೇಪದ ಮಂದಿರಕ್ಕೆ ಬರಲು ವಿಳಂಬವಾ ದುದರಿಂದ ಕಾರಣವೇನಿರಬಹುದೆಂದು ಶಂಕಿಸಿ, ನಾನೇ ಅವರ ಆಹ್ನಿಕಮಂದಿರಕ್ಕೆ ಹೋದೆನು. ಆ ವೇಳೆಯಲ್ಲಿ ಗುರುಗಳು ಸುಕುಮಾರಿಯೊಡನೆ ಸಂಭಾಷಿಸುತ್ತಿದ್ದುದನ್ನು ನೋಡಿದೆನು

ಅಕ್ಷಯ—ಕುತೂಹಲದಿಂದ ಕಲಾಧವನನ್ನು ನೋಡುತ್ತ 'ಕಲಾಧವ ಹಾಗಿದ್ದರೆ, ನೀನು ಗುರುಪುತ್ರಿಯನ್ನು ಚನ್ನಾಗಿ ನೋಡಿರುವೆ. ಆ ವೇಳೆಯಲ್ಲಿ ಸುಕುಮಾರಿ ಹೇಗಿದ್ದಳು ? ಅವಳ ಮುಖ ಭಾವವು ಹೇಗೆ ಕಾಣುತ್ತಿದ್ದಿತು. ಸಮಾಧಾನದಿಂದ ಮಾ ತನಾಡುತ್ತಿದ್ದಳೆ ? ಅಥವಾ ದುಗುಡದಿಂದ ಮಾತನಾಡು ತ್ತಿದ್ದಳೇ

—ಶ್ರೀಃ :—



"ಸ್ತೋತ್ರೇಣಾನೇನ ತಾಂದೇವೀಂ ಜಗಧ್ಧಾತ್ರೀಂ ಸರಸ್ವತೀಂ
ಯೇ ಸ್ಮರಂತಿ ತ್ರಿಸಂಧ್ಯಾಯಾಂ ಸರ್ವಾ ವಿದ್ಯಾಂ ಲಭಂತಿತೇ ||"

" ಸರಸ್ವತೀ ಮಹಾಭಾಗೇ ವಿದ್ಯೇ ಕಮಲಲೋಚನೇ |
ವಿಶ್ವರೂಪೇ ವಿಶಾಲಾಕ್ಷಿ ವಿದ್ಯಾಂದೇಹಿ ನಮೋಸ್ತುತೇ ||"

ಕಲಾ:—ತಲೆಯೆತ್ತಿ—'ಅಕ್ಷಯಕುಮಾರ! ಗುರುಪಾದವಂದನೆಗಾಗಿ ಮಾತ್ರವೇ ಹೋಗಿದ್ದ ನನಗೆ ಸುಕುಮಾರಿಯನ್ನು ನೋಡಬೇಕಾದ ಅಗತ್ಯವೇನಿತ್ತು? ಮತ್ತು ಹೆಂಗಸರನ್ನು ನೋಡುವುದರಲ್ಲಿ ದೋಷವೆಂದು ನಮ್ಮ ದಿನಚರ್ಯೆಯಲ್ಲಿಯೇ ನಮಗೆ ವಿಧಿಸಲ್ಪಟ್ಟಿಲ್ಲವೇ? ಅದಲ್ಲದೆ, ಆದರ್ಶ ಬ್ರಹ್ಮಚರ್ಯವ್ರತನಿಷ್ಠಾಪರನಾದ ಲಕ್ಷ್ಮಣದೇವನು ಕೂಡ, ಇದನ್ನೇ ಸಮರ್ಥಿಸುವಂತೆ—'ಪ್ರತಿನಿತ್ಯವೂ ಪಾದವಂದನೆಯಕಾಲದಲ್ಲಿ, ಜಾನಕೀದೇವಿಯ ಪಾದಗಳಲ್ಲಿದ್ದ ಈ ಆಭರಣವನ್ನು ನಾನು ನೋಡುತ್ತಿದ್ದೆನು. ಉಳಿದ ಆಭರಣಗಳಾವುವೂ ನನಗೆ ತಿಳಿಯವು'' ಎಂದನಲ್ಲವೆ?

ಅಕ್ಷಯ:—ಅದರಿಂದಲೇ ಲಕ್ಷ್ಮಣನನ್ನು ಈ ಕಾಲದವರೆಲ್ಲರೂ, ಅರಸಿಕನೂ, ಭಂಡನೂ ಆದವನೆಂದು ಟೀಕಿಸುತ್ತಿರುವರು.

ಕಲಾ:—ಹೇಗಾದರೂ, ಹೇಳಿಕೊಳ್ಳಲಿ; ಅದರಿಂದ ಆತನಿಗೇನೂ ಕೊರತೆಯಾಗುವಂತಿಲ್ಲ. ಆವನ ಲೋಕಾದರ್ಶಯೋಗ್ಯವಾದ ಬ್ರಹ್ಮಚರ್ಯೆಯಲ್ಲಿ ಅಷ್ಟಿಷ್ಟಾದರೂ ನಮ್ಮ ಬ್ರಹ್ಮಚಾರಿಗಳಿಂದ ಅನುಸರಿಸಲ್ಪಟ್ಟರೆ, ಈ ನಮ್ಮ ಆರ್ಯಮಾತೆಯ ಅಂತಸ್ತಾಪವು ನಿವಾರಣೆಯಾಗುವದರಲ್ಲಿ ಅಡ್ಡಿಯಿಲ್ಲ.

ಅಕ್ಷಯ:—ವ್ಯಂಗ್ಯಸ್ವರದಿಂದ–'ಓಹೋ! ಅದೇನೆಂದೆ? ಎಲ್ಲರೂ ಜಡಮತಿ ಲಕ್ಷ್ಮಣದೇವನ ಮಾರ್ಗಾನುಗಾಮಿಗಳಾಗಬೇಕೋ? ಸರಿ–ಸರಿ! ಪ್ರಭಾಕರ ಕುಮಾರ! ನೀನೇನೆನ್ನುವೆ-ಹೇಳಣ್ಣ! ಏನು ನಿನ್ನ ಟೀಕೆ? ಎಲ್ಲರೂ

ಅವನಂತೆಯೇ ತಿಂದುಂಡು ತೇಗುತ್ತಿರಲು ಅನುವಿದ್ದರೂ ಬಿಟ್ಟು, ಮಂದಬುದ್ಧಿಯಿಂದ ಅಣ್ಣನಹಿಂದೆ ಅಡವಿಯನ್ನು ಕುರಿತು ಹೋದಂತೆ, ತಮ್ಮ ಸುಖಸರ್ವಸ್ವವನ್ನೂ ಬಿಟ್ಟುಕೊಟ್ಟು ಹೋಗಬೇಕಾಯಿತು ?

ಪ್ರಭಾ:—ಕಿರುನಗೆಯಿಂದ–'ಸರಿಸರಿ! ನೀನಿಂದು ವಿಪರೀತ ವಿಚಾರದಲ್ಲಿ ತೊಡಕಿದಂತೆ ಕೋರುತ್ತಿದೆ. ಅದರಿಂದಲೇ ಇಷ್ಟು ವಿಪರೀತಾರ್ಥಕಲ್ಪನೆಯು ತೋರುವದು. ಆದರೆ, ಕೇಳು–ಪುತ್ರಾ ! ಕಲಾಧನನ ಅಭಿಪ್ರಾಯದಲ್ಲಿ ಅಪವಾದವಿಲ್ಲ. ಗೃಹಸ್ಥನಾದವನೂ ಕೂಡ ಆತ್ಮಸಂಯಮವು ದಿಂದ ಅಂತಶ್ಶುದ್ಧಿಮಾಡಿಕೊಂಡಿರುವುದು ಸಚ್ಚಿದಾನಂದಲಾಭಕ್ಕೆ ಸಾಧನವೆಂಬುದೇ ಅವನ ಅಭಿಪ್ರಾಯವು. ಅಷ್ಟಲ್ಲದೆ, ನಿಷ್ಕಾರಣವಾಗಿ ಪತ್ನೀ ಪುತ್ರ-ಗೃಹಾರಾಮಾದಿ ಸಮಸ್ತ ಸುಖಸಂಪತ್ತಿಯನ್ನೂ ಒಂದೇಬಾರಿಗೆ ಬಿಟ್ಟುಬಿಡಬೇಕೆಂದು ಇದು ಬೋಧಿಸುವದಿಲ್ಲ. ಹೇಗೆನ್ನುವೆ ? ಲಕ್ಷ್ಮಣದೇವನು ತನ್ನ ಆತ್ಮಶುದ್ಧಿಗಾಗಿ ಇಂದ್ರಿಯ ನಿಗ್ರಹದ ಘೋರತಪಶ್ಚರ್ಯೆಯನ್ನು ಮಾತ್ರ ಹಿಡಿದಿದ್ದನಲ್ಲವೆ, ಜೋಗಿಯಂತೆ ನಟಿಸಲು ಅಥವಾ ಜೋಗಿಯಾಗಲು ಮಾಡಿದುದಲ್ಲ. ಇದಕ್ಕೆ ದೃಷ್ಟಾಂತವು ಆತನು, ಅತ್ತಿಗೆ ಅಣ್ಣಂದಿರ ಸೇವೆಯಲ್ಲಿ, ಜ್ಞಾನಧನರಾದ ಮುನಿಜನರ ಸಮೂಹದಲ್ಲಿ, ಸಮಾಹಿತಚಿತ್ತನಾಗಿ ವರ್ತಿಸುತ್ತಿದ್ದುದೇ ಸಾಕಲ್ಲವೆ?

ಕಲಾ:—ನಮಗೆ ಲಕ್ಷ್ಮಣದೇವನ ಮಾತು ಹಾಗಿರಲಿ ; ಬ್ರಹ್ಮಚಾರಿಗಳ ನಿತ್ಯನೈಮಿತ್ತಿಕ ಕರ್ತವ್ಯವನ್ನು ಕುರಿತು

ನಮ್ಮ ಆರ್ಯರು ನಮಗೆ ವಿಧಿಸಿರುವದನ್ನಾದರೂ ನೋಡಬಾರದೇ?

"ನಿತ್ಯಂಸ್ನಾತ್ವಾಶುಚಿಃಕುರ್ಯಾದ್ದೇವರ್ಷಿಪಿತೃತರ್ಪಣಮ್||
ದೇವತಾಭ್ಯರ್ಚನಂಚೈವ ಸಮಿಧಾದಾಧಾನಮೇವಚ||"
"ವರ್ಜಯೇನ್ಮಧುಮಾಂಸಂಚಗಂಧಂ ಮಾಲ್ಯಂರಸಾನ್ಸ್ತ್ರಿಯಃ|
ಶುಕ್ತಾನಿಯಾನಿಸರ್ವಾಣಿ ಪ್ರಾಣಿನಾಂಚೈವಹಿಂಸನಂ||"
"ಅಭ್ಯಂಗಮಂಜನಂಚಾಕ್ಷ್ಣೋರುಪಾನಚ್ಛತ್ರಧಾರಣಮ್|
ಕಾಮಂಕ್ರೋಧಂಚ ಲೋಭಂಚ ನರ್ತನಂ ಗೀತವಾದನಂ||"
"ದ್ಯೂತಂಚ ಜನವಾದಂಚ ಪರೀವಾದಂತಥಾನೃತಮ್|
ಸ್ತ್ರೀಣಾಂಚಪ್ರೇಕ್ಷಣಾಲಂಭ ಮುಪಘಾತಂಪರಸ್ಯಚ||
ಏಕಃಶಯೀತ ಸರ್ವತ್ರ ನ............ *

ದಿನಚರ್ಯಾಪುಟ ೬೫

---

* ಬ್ರಹ್ಮಚಾರಿಯಾದವನು, ಪ್ರತಿದಿನವೂ, ಸ್ನಾನಮಾಡಿ, ಪರಿಶುದ್ಧ ಭಾವದಿಂದ ದೇವ, ಋಷಿ, ಮತ್ತು ಪಿತೃವರ್ಗಕ್ಕೆ ಅರ್ಘ್ಯಪ್ರದಾನಮಾಡಬೇಕು. ಮತ್ತು ಬ್ರಹ್ಮಚಾರಿಯು ಮದ್ಯಪಾನ, ಮಾಂಸಾಹಾರಗಳನ್ನೂ, ಸುಗಂಧ ಪರಿಮಳ ದ್ರವ್ಯಗಳನ್ನು ಸೇವಿಸುವದನ್ನೂ, ಮಾಲಿಕಾಧಾರಣವನ್ನೂ, ಬೆಲ್ಲವೇ ಮೊದಲಾದ ಅತಿಯಾದ ರಸಪದಾರ್ಥಗಳನ್ನು ಪರಿಗ್ರಹಿಸುವದನ್ನೂ,ಹಾಗೆಯೇ ಸ್ತ್ರೀಸುಖಾಭಿಲಾಷೆಯನ್ನೂ ಬಿಡಬೇಕು. ಮತ್ತು ಮದೋತ್ಪತ್ತಿಕಾರಣವಾದ ಆಮ್ಲರಸ ಸೇವನೆಯನ್ನೂ ಪ್ರಾಣಿಹಿಂಸಾಬುದ್ಧಿಯನ್ನೂ ಬಿಡತಕ್ಕದು. ತೈಲಾಭ್ಯಂಗನವನ್ನೂ, ಅಂಜನಾದಿ ಕಜ್ಜಲಗಳಿಂದ ನೇತ್ರರಂಜನವನ್ನೂ, ಪಾದುಕಾಧಾರಣ ಛತ್ರಧಾರಣ

ಅಕ್ಕಯ: —ತಲೆಯನ್ನು ಕೊಂಕಿಸಿ, ವ್ಯಂಗಸ್ವರದಿಂದ-'ಸರಿಸರಿ ಇದು ಪುಸ್ತಕದೊಳಗಣ ಬದನೆಯಕಾಯಿಮಾತ್ರ. ಶಾಸ್ತ್ರದಲ್ಲಿ ವಿಧಿಸಿರುವಂತೆಯೇ ನಡೆಯಬೇಕೆಂಬ ನಿಯಮವೇನಿದೆ? ಮಧುಮಿತ್ರನನ್ನು ಕೇಳು, ಅಥವಾ ಆಚರಿಸಲೇಬೇಕೆಂದರೆ-ನೋಡು! ಸೂತ್ರಕಾರರು ಇದರಂತೆಯೇ ಆಚರಿಸುತ್ತಿದ್ದರೆಂದು ನಮಗೆ ಸಾಕಷ್ಟು ಸಮಾಧಾನವು ಎಲ್ಲಿಯಾದರೂ ದೊರೆಯಬಹುದೋ? ಅದಿಲ್ಲ! ಅವರು, ತಮ್ಮ ಬಾಲ್ಯ--ತಾರುಣ್ಯ, ವಯ: ಪ್ರಾಬಲ್ಯ ಕಾಲಗಳನ್ನು ದಾಟಿ, ವಿರಕ್ತಿಹೊಂದಿದ ಬಳಿಕ, ತಮ್ಮ ಮುಂದಿನ ಮಕ್ಕಳಿಗೆಂದು ವಿಧಿಸಿದ ಸೂತ್ರಗಳಿವು....ಇದನ್ನೇನಂಬಿ, ಮೂಕ ಬಧಿರಾಂಧರಂತೆ ವರ್ತಿಸು—

ಕಲಾ, — ಸಾಕುಸಾಕು! ಪ್ರಿಯಮಿತ್ರ! ಇಂದು ನೀನು ಸ್ವ

ಗನ್ನೂ ಕಾಮ, ಕ್ರೋಧ, ಲೋಭ, ಮನೋವಿಕಲ್ಪ ಹೇತುಗಳಾದ ನೃತ್ಯಗೀತ ವಾದ್ಯಗಳನ್ನೂ ಬಿಟ್ಟುಬಿಡತಕ್ಕದು. ಪಗಡೆಯಾಟವೇ ಮೊದಲಾದ ದ್ಯೂತವ್ಯಸನವನ್ನೂ, ಜನಗಳಲ್ಲಿ ವೃಥಾವಾಕ್ಕಲಹವನ್ನೂ, ದೇಶವಿದೇಶವರ್ತಮಾನಾದಿಗಳ ಅನ್ವೇಷಣವನ್ನೂ, ಅನೃತವಚನವನ್ನೂ, ಮುಖ್ಯವಾಗಿ, ದುರಭಿಪ್ರಾಯದಿಂದ ಸ್ತ್ರೀಯರ ಅವಲೋಕನವನ್ನೂ ಅವರ ಪ್ರತಿಕಟಾಕ್ಷ ಮತ್ತು ಇತರ ಸುಖಾನುಭವನ್ನು ಅಪೇಕ್ಷಿಸುವದನ್ನೂ ಬಿಟ್ಟುಬಿಡಬೇಕು. (ಬಹ್ವಿಸಲ್ಲಿ-ಬ್ರಹ್ಮಚಾರಿಯು ದುರ್ವ್ಯಸನ, ಪ್ರಮೋದ ಕಾರಣಗಳಾದ ಆಚರಣಗಳನ್ನು ಬಿಟ್ಟು. ಏಕಾಂಗಿಯಾಗಿ, ಚಿತ್ತೈಕಾಗ್ರತೆಯಿಂದ, ಜ್ಞಾನಸಂಪಾದನೆಯಲ್ಲಿ ಗುರಿಯಿಟ್ಟು, ಗುರುಸೇವಾರೂಪದತಪದಿಂದ, ಅರ್ಥಸಿದ್ಧಿ ಹೊಂದಬೇಕೆಂಬುದೇ ಇದರಮುಖ್ಯತಾತ್ಪರ್ಯವು.)

ಭಾವಿಕ ಬುದ್ಧಿಯಿಂದ ಹೇಳುವಂತಿಲ್ಲ. ನಿನ್ನಲ್ಲಿ ಇಂದು ಅದಾವುದೋ ಬಲವಾದ ಕ್ರೂರ ಪಿಶಾಚವು ಆವೇಶಿಸಿರುವಂತೆಯೇ ತಿಳಿಯುವೆನು. ಮಾತೆತ್ತಿದರೆ ಮಧುಮಿತ್ರನ ಪಾದರಿಯನ್ನೇ ಮುಂದಿಡುವೆ.

ಅಕ್ಷಯ:—ಏಕಾಗಬಾರದು ? ನೋಡು ! ಮಧುಮಿತ್ರನನ್ನು ಆವಭಾಗದಲ್ಲಿ ಕಳೆದು ಹಾಕುವೆ ? ಗುಣ, ರೂಪ, ವಯೋ, ವಿದ್ಯಾ, ವೈಭವಗಳಲ್ಲಿ ಅವನಿಗೆ ಆವುದಕ್ಕೆ ಕೊರತೆ? ಅವನ ಸ್ವಹಸ್ತಾಕ್ಷರ ಪತ್ರವೇ ಬೋಧಿಸುತ್ತಿಲ್ಲವೇ ? ಆದರ್ಶ ಪುರುಷನೆಂದರೆ,- ರಸಿಕಾಗ್ರೇಸರನೆಂದರೆ,-ಅವನಿಗೇ-ಅಗ್ರತಾಂಬೂಲವೆತ್ತಲು ತಡೆಯೇಸಿದೆ?

ಪ್ರಭಾ—ಯೋ, ತಾಳುತಾಳು ! ಮಧುಮಿತ್ರನಿಗೆ ಅಗ್ರಪೂಜೆಯಾಗುವದಕ್ಕೆ ಇನ್ನೂ ಆತಂಕವಿದೆ. ರಸಿಕತೆಯಲ್ಲಿ, ಕಲಾಕೌಶಲ್ಯದಲ್ಲಿ, ಮಧುಮಿತ್ರನನ್ನು ಕಿರುಬೆರಳ ತುದಿಯಿಂದ ಕುಣಿದಾಡಿಸುವಂತಹ ಪುರುಷರನ್ನು ನಾನಿದೇ ಕಣ್ಣಿಂದ ನೋಡಿರುವೆನು.

ಅಕ್ಷಯ:—ಅದಾರು ಅಷ್ಟರ ರಸಿಕಾಗ್ರೇಸರರು ? ಮಧುಮಿತ್ರನು ಬರೆದಿರುವಂತೆ ಅವರೂ ಬರೆದಿರುವದುಂಟೋ ?

ಪ್ರಭಾ:—ಮಧುಮಿತ್ರನು ಮಾಡಿದುದೇ ಮಹಾಸಾಹಸವೆಂದು ಭಾವಿಸಿದೆಯೋ ? ನನ್ನ ಬಾಲ್ಯಮಿತ್ರ-ಬೃಹತ್ಸೇನರಾಯನನ್ನು ಕೇಳಿಯಾದರೂ ಬಲ್ಲೆಯೋ ?

ಅಕ್ಷಯ:—ಕೇಳಿದ್ದರೂ ಇರಬಹುದು; ಆದರೆ ಅಷ್ಟಾಗಿ ನೆನಪಿಲ್ಲ. ಇರಲಿ, ಅವನಷ್ಟು ರಸಿಕನೇ ?

ಪ್ರಭಾ,—ರಸಿಕನೆಂದರೆ ಸಾಲದು. ರಸಿಕಾಗ್ರೇಸರ ಚಕ್ರವ

ರ್ತಿಯೋ–ಅವನು !!! ಬಾಲ್ಯದಿಂದಲೂ ಅವನು ಬಲ್ಲು ಲೀಲೆಯಿಂದ ಬೆಳೆದವನು. ಅವನಲ್ಲಿರುವ ಕಲಾಕೌಶಲ ಗಳಲ್ಲಿ ಒಂದೊಂದೇ ಈ ಕಾಲದ ನಾಗರಿಕ ಜನಾಂಗಕ್ಕೆ ಲ್ಲ ಆದರ್ಶಯೋಗ್ಯವಾಗಿದೆ. ಅವನ ನಡೆನುಡಿಗಳಲ್ಲಿ ಕ್ಷಣಕ್ಷಣಕ್ಕೂ ಒಂದೊಂದು ಬಗೆಯ ಹೊಸಸ್ವರೂಪ-ಸೌಂದರ್ಯವೇ ತೋರಿಬರುತ್ತಿದೆ.

ಅಕ್ಷಯ, —ಕುತೂಹಲದಿಂದ–'ಅವನನ್ನು ನೀನು ಇಷ್ಟು ಹೊಗಳುವ ಕಾರಣವೇನು ? ಅವನು ಅಂತಹ ವರ್ಣನೀಯವಾದ ಕೌಶಲ್ಯವನ್ನು ಆವಸಂದರ್ಭದಲ್ಲಿ ಪ್ರಕಾಶಪಡಿಸಿದನು.

ಪ್ರಭಾ:—ನಾನು ರಾಜನಗರದ ವಿದ್ಯಾಶಾಲೆ (College) ಯುಲ್ಲಿ ಪ್ರೌಢವಿದ್ಯಾಭ್ಯಾಸದ ಪ್ರವೇಶ (Matriculation) ಪರೀಕ್ಷೆಗೆ ವ್ಯಾಸಂಗಿಸುತ್ತಿದ್ದೆನಷ್ಟೆ. ಆಕಾಲದಲ್ಲಿ, ಅವನೂ, ನಾನೂ, ಒಂದೇ ತರಗತಿಯ ಸಹಪಾಠಿಗಳಾಗಿದ್ದೆವು.

ಅಕ್ಷಯ:—ಕುತೂಹಲದಿಂದ–'ಆಯಿತು, ಮುಂದೆಹೇಳು ?

ಪ್ರಭಾ:—ಬೃಹತ್ಸೇನನು, ಪ್ರತಿದಿನವೂ ರಾತ್ರಿಯ ವೇಳೆಯಲ್ಲಿ ಒಂದೊಂದು ನೆವಗಳನ್ನು ಮುಂದಿಟ್ಟುಕೊಂಡು, ವಿದ್ಯಾರ್ಥಿಮಂದಿರದವರಿಗೆ ತಿಳಿದಂತೆಯೋ, ಅಥವಾ ಅವರ ಕಣ್ಣಿಗೆ ಮಣ್ಣೆರಚಿಯೋ ಹೇಗೋ–ಹೊರಗೆ ತಿರಿದು ಬರಲು ಹೋಗುತ್ತಿದ್ದನು. ನಾನು ಎಷ್ಟೋದಿನಗಳಲ್ಲಿ ಅವನನ್ನು ಪರೀಕ್ಷಿಸಲು ಪ್ರಯತ್ನಿಸಿ. ಕಡೆಗೂ ಆತನ ನಡೆ

ವಳಿಕೆಯನ್ನು ಕೂಲಂಕಷವಾಗಿ ತಿಳಿಯುವಂತಾಗದೆ ಬಂದಿರುವೆನು! ಆದಿರಲಿ, ಎಲ್ಲಕ್ಕೂ ಹೆಚ್ಚಾಗಿ ತಿಳಿದು ಬಂದ ಒಂದೇ ಉದಾಹರಣವನ್ನು ಕೊಡುವೆನು ಕೇಳು

ಕಲಾ:—ಆತುರದಿಂದ-'ಸರಿಸರಿ ! ನಿನ್ನ ಪ್ರಸ್ತಾವನೆಯೇ ಹನುಮಂತನ ಬಾಲವಾಗಿದೆ. ವಿಷಯವಿನ್ನೆಷ್ಟು ಉದ್ದವಿರಬೇಕು ? ಈ ಜನ್ಮದಲ್ಲಿ ನೀವು ಎದ್ದು ಬರುವಂತಿಲ್ಲ ?

ಅಕ್ಷಯ:—-ಕಲಾಧವ ! ಇದೇಕಿಷ್ಟು ಹಾರುತ್ತಿರುವೆ ? ಹೊಟ್ಟೆಯಲ್ಲಿ ತಾಳಹಾಕುತ್ತಿರುವದೇನು ? ಎಷ್ಟುಹೊತ್ತಿಗೆ ಎಲೆಯಮುಂದ ಕೂಡುವೆನು, ಎಷ್ಟುಹೊತ್ತಿಗೆ ಕವಳ ಧ್ವಂಸಮಾಡುವೆನು-ಎಂಬುದೇ ನಿನ್ನ ಆತುರವೇನು? ಕೇಳಿಲ್ಲವೇ ? ಉಪೋದ್ಘಾತವು ವಿವೃತವಾಗಿದ್ದಷ್ಟೂ ಕಥಾನಕವು ಸಂಗ್ರಹವಾಗಿಯೇ, ಹೇಳಲನುಕೂಲಿಸುವದೆಂಬುದನ್ನು !

ಕಲಾ:—ಸಾಕು,-ಆವನ ಗಜರಗಳಿಗೂ, ನಿನ್ನ ಸೊಬಗಿನ ಅರ್ಥವಿವರಣೆಗೂ ಸರಿಯಾಗಿದೆ. ನಾನು ಹೋಗಬೇಕು. ಅದೇನಾಯಿತೆಂಬುದನ್ನು ಒಂದೆರಡು ಮಾತಿನಲ್ಲಿ ಮುಗಿಯಿಸಿದರೆ ಕೇಳಿ ಹೋಗುವೆನು, ಇಲ್ಲವಾದರೆ-

ಪ್ರಭಾ:—ಕಲಾಧವನ ಕೈಹಿಡಿದು''ಅದೆಲ್ಲಿಗೆ ಹೇಗೆ ಹೋಗುವೆ? ನಿನ್ನ ಆಕ್ಷೇಪಉಂಟಾಗದಿದ್ದರೆ ಇಷ್ಟರಲ್ಲಿ ನನ್ನ ಭಾಷಣವೇ ಪೂರ್ಣವಾಗುತ್ತಿದ್ದಿತು. ಹೋಗಲಿ, ಕೋಪವನ್ನು ಬಿಟ್ಟು, ತಾಳ್ಮೆಯನ್ನು ತೊಟ್ಟು ಕೇಳು.- ರಾಜನಗರದಲ್ಲಿ ಪ್ರವೇಶಪರೀಕ್ಷೆಯಿಂದ ಮೊದಲು ಪೌಷ

ಶಿಕ್ಷಣದಪ್ರತಿಯೊಂದು ಪರೀಕ್ಷಾಕಾಲದಲ್ಲಿಯೂ ಸ್ತ್ರೀಪುರುಷರೊಂದೆಡೆಯಲ್ಲಿ ಸೇರಿ ಪರೀಕ್ಷೆಯನ್ನು ಕೊಡಬೇಕಾಗಿರುವುದು. ಹಾಗೆಮಾಡದಿದ್ದರೆ ನಿರ್ವಾಹವೇ ಇಲ್ಲವೆಂಬುದು ಸರಿಯಷ್ಟೆ.

ಕಲಾ!—ಸಿಟ್ಟುಸಿರಿಟ್ಟು,-'ಅದೇ ಈವರೆಗೆ ಹಬ್ಬಿ, ನಮ್ಮನು ಇಷ್ಟು ಮಟ್ಟಿಗೆ ಕಿತ್ತು ತಿನ್ನಲು ಬ್ರಹ್ಮರಾಕ್ಷಸದಂತೆ ಪರಿಣಮಿಸಿರುವ ಸ್ವೈರವೃತ್ತಿಗೆ ಅಂಕುರಪ್ರಾಯವಾಯಿತು. ದೇಶಪಾಲಕರು, ಪಾಪ ! ಪ್ರಜಾನಿವಹವು ಮುಖ್ಯವಾಗಿ ಸ್ತ್ರೀಪ್ರಪಂಚವು, ವಿದ್ಯಾಲಾಭದ ಸುಪ್ರಕಾಶತ್ವದಿಂದ ದೇಶದ ಸಾಂಪತ್ತಿಕ ಸ್ಥಿತಿಯನ್ನು ಊರ್ಜಿತಪಡಿಸುವವರಾದಾರೆಂದು ನಂಬಿದ್ದರು. ಅದಕ್ಕಾಗಿ ಬೆಟ್ಟದಷ್ಟುದ್ದದ ಹಣದರಾಶಿಯನ್ನೂ ಸುರಿದು, ಸುರಿಯುತ್ತಲೂ ಇರುವರು!! ಎಷ್ಟಾದರೇನು ? ಸ್ತ್ರೀಯರು ನಿಜಸ್ವರೂಪವನ್ನು ತಿಳಿದು, ತಮಗುಚಿತಕಾರ್ಯದಲ್ಲಿ ಪರಿಜ್ಞಾನವನ್ನು ಪಡೆಯುವದಕ್ಕೆ ಮಾತ್ರ ಅನುಕೂಲವಿಲ್ಲ. ಬರಿಯ ಆಡಂಬರ! ಪುರುಷರಂತೆ ತಾವೂ ಪರುಷವೃತ್ತಿಯನ್ನು ಹಿಡಿಯಬೇಕೆಂಬುದೊಂದೇ ಅವರ ಗುರಿಯಾಗಿದ್ದು, ಕಲಿಯುವ ಕಲೆಗಳೂ, ಆಡಂಬರದ ನ್ಯಾಸಗಳೇ ಆಗಿರುವದೆಂದರೆ ಮುಂದೆ ಹೇಳುವದೇನು ?

ಅಕ್ಷಯ:—ನಾಲಿಗೆಯನ್ನು ತಡೆಗಟ್ಟು , ಕಲಾಧವ ಕುಮಾರ! ದೇಶೋದ್ಧಾರಕರ ಗುಂಪಿಗೆ ಸೇರಿದವರಿಗಿಂತಲೂ ನಿನಗಿದರಲ್ಲಿಅನುಭವವೋ?ಸಾಂಪತ್ತಿಕಸ್ಥಿತಿಯನ್ನು ಊರ್ಜಿತಪಡಿ

ಸುವ ವಿಷಯದಲ್ಲಿ ಅವರಿಗಿರುವಷ್ಟು ನೈಪುಣ್ಯವು ನಿನ್ನಲ್ಲಿಹುವುದೊ ?

ಕಲಾ.—ನಾನು, ದೇಶಪಾಲಕರ ಅಥವಾ ದೇಶೋದ್ಧಾರಕರಾದ ವಿದ್ಯಾಂಗದವರ ಪ್ರಯತ್ನವನ್ನು ಆಕ್ಷೇಪಿಸಲಿಲ್ಲ; ಆದರೆ, ಈಗಿನ ಶಿಕ್ಷಣಾಪದ್ಧತಿಯೇ ಸರಿಯಾಗಿರುವದೆಂದೂ ನಾನು ನಂಬುವಂತಿಲ್ಲ.

ಪ್ರಭಾ:—ನಿಜ ! ಅವರು ಶಿಕ್ಷಣವಿಚಾರದಲ್ಲಿ ಕೆಲವು ಸುಧಾರಣೆಯನ್ನು ಮಾಡಿದರೆ, ದೇಶಾಭ್ಯುದಯವು ತನಗೆ ತಾನೇ ಆಗುವದರಲ್ಲಿ ಅಡ್ಡಿಯಿರುವದಿಲ್ಲ.

ಅಕ್ಷಯ:—ಆದೇನದು ?

ಪ್ರಭಾ:—ಏನಂದರೆ, ಹಿಂದೆ ಸೂಕ್ಷ್ಮವಾಗಿ ಹೇಳಿದೆನಷ್ಟೆ-ಸ್ತ್ರೀಯರಿಗೆ ಎಲ್ಲಿಯವರೆಗೆ ಅಭ್ಯಾಸವು ಆವಶ್ಯಕವೆಂಬುದನ್ನು? ಸ್ತ್ರೀಯರಿಗೆ ಅವರ ಸ್ವಸ್ವರೂಪ, ಸ್ವಧರ್ಮ, ಧ್ಯೇಯ, ಕರ್ತವ್ಯಗಳನ್ನು ತಿಳಿಯುವ ಮಟ್ಟಿಗೆ ಶಿಕ್ಷಣವು ಬಲವದ್ಬಂಧವಾಗಿಯೋ, ಆಸ್ಥಾಪೂರ್ವಕವಾಗಿಯೋ-ಕೊಡಬೇಕಾದುದು ಮುಖ್ಯವು. ಅವರ ಪ್ರಾಥಮಿಕ ಶಿಕ್ಷಣದ ಪರಿಮಿತಿಯಲ್ಲಿಯೇ ಅವರು, ತಮ್ಮ ದೇಶಾಚಾರಪದ್ಧತಿ, ಮತಬೋಧೆ, ತಮ್ಮ ಪೂರ್ವಜರ ಕಟ್ಟಳೆಗಳಲ್ಲಿ ತಕ್ಕಮಟ್ಟಿಗೆ ಪರಿಶ್ರಮವುಳ್ಳವರಾಗುವಂತೆ-ಅವರಿಗೆ ತಕ್ಕಷ್ಟು ಪ್ರಾಪಂಚಿಕ, ಪಾರಮಾರ್ಥಿಕ, ನೈತಿಕ, ಸಾಮಾಜಿಕ, ಸಾಂಸಾರಿಕ ಚಿತ್ರಗಳ ಜ್ಞಾನವನ್ನುಂಟುಮಾಡಿಕೊಡುವಂತಹ ಶಿಕ್ಷಣವು ಆವಶ್ಯಕವಾಗಿರಬೇಕು. ಅಷ್ಟಾಗಿದ್ದರೆ ಸಾಕು. ಆದಕ್ಕೂ ಹೆಚ್ಚಿನ

ಅಭ್ಯಾಸವು ನಮ್ಮ ಮಹಿಳೆಯರಿಗೆ ಅಗತ್ಯವಿಲ್ಲ. ನಮ್ಮ ಮಹಿಳೆಯರು ಪಟ್ಟಭದ್ರೆಯರಾಗಿ ರಾರಾಜಿಸಿ, ಅಧಿಕಾರದಲ್ಲಿ ವಿರಾಜಿತೆಯರಾದ ಮಾತ್ರಕ್ಕೆ ನಮ್ಮ ದೇಶದ ಸಾಂಪತ್ತಿಕ ಸ್ಥಿತಿಗೆ ನವಚೈತನ್ಯವನ್ನುಂಟುಮಾಡುವರೆಂಬುದು ನಿರಾಧಾರ ವಿಚಾರವೇಸರಿ ! ಏಕೆಂದರೆ, ಸ್ತ್ರೀಯರಲ್ಲಿ ನಿರಂಕುಶಪ್ರಭುತ್ವದ, ಸ್ವೈರವೃತ್ತಿಯ ವ್ಯಾವಹಾರಿಕ ಔದ್ಯೋಗಿಕ ವ್ಯಸನಗಳು ಹೆಚ್ಚಿದಷ್ಟೂ, ನಮ್ಮ ಪುರುಷರ ಪೌರುಷಜೀವನಕ್ಕೆ ಮುಗಿಲು ಮೂಡುವದು ನಿಜ. ಅಂತಹರ ಪಟಾಟೋಪದಮುಂದೆ ಪುರುಷರ ಪ್ರಜ್ಞಾಸಂಪತ್ತಿಯೂ, ಮನೋನಿಗ್ರಹವೂ, ನಿರರ್ಥಕವು. ಕಡೆಗೆ, ನಮ್ಮವರಲ್ಲಿ ಬಹುಭಾಗಕ್ಕೆ ಸ್ತ್ರೈಣರೆಂಬ ಅಪವಾದವೇ ಮುಸುಕಿ, ನಮ್ಮ ಆರ್ಯತ್ವದ ಧೀರತನವನ್ನು ಮುಚ್ಚಿ ಬಿಡುವದರಲ್ಲಿ ತಿರುಗುವದೆಂದರೂ ಅನೃತವಾಗದು.

ಅಕ್ಕಯ್ಯ:—ಏನುಏನು ! ನಿನ್ನಿಷ್ಟವೇನು? ಸ್ತ್ರೀಯರನ್ನು ಕೆಳಗೆ ತಳ್ಳಬೇಕೆಂಬದೊ ?

ಪ್ರಭಾಕರ:—ಕಿರುನಗೆಯಿಂದ 'ಅವರಿಗೆ ಈಗ ಸಲ್ಲುತ್ತಿರುವ ಅಧಿಕಾರವನ್ನು ಕೀಳಬೇಕೆಂದಿರುವೆಯೋ! ನನ್ನ ಅಭಿಪ್ರಾಯವು ಅಂತಹ ಹೇಯವಾದುದಲ್ಲ. ಸ್ತ್ರೀಯರನ್ನು ಕೆಳಗೆ ತಳ್ಳಬೇಕೆಂದು ನಾನೆಂದೂ ಹೇಳುವವನಲ್ಲ. ಅವರನ್ನು ಪ್ರಜ್ಞಾಪ್ರಕಾಶದಿಂದ ಮೇಲಕ್ಕೇರುವಂತೆ ಮಾಡಬೇಕೆಂಬುದೇ ನನ್ನ ಇಷ್ಟ. ಅವರಿಗೆ ಆದಿಯಿಂದಲೂ ಮನು ಪ್ರಭೃತಿಗಳಾದ ನಮ್ಮ ಆರ್ಯಮಹರ್ಷಿಯರು ಕೊಡು

ತ್ತಿದ್ದ ಪ್ರಾಶಸ್ತ್ಯವನ್ನು ಈಗಲೂ, ಇನ್ನುಮುಂದೆಯೂ, ನಮ್ಮವರೆಲ್ಲರೂ ಸಲ್ಲಿಸಬೇಕೆಂಬುದೇ ನನ್ನ ಮುಖ್ಯಾಶ ಯವು. ಆದರೆ, ಹೀಗೆ ಬರಿಯ ಬಾಹ್ಯಪ್ರಪಂಚದ ಆ ಡಂಬರದಲ್ಲಿ ಅವರನ್ನು ಮೇಲೇರಿ ಕುಳ್ಳಿರಲಾಗಿಸಿದರೆ ಆಯಿತೆಂದೋ ? ಸಧವೆಯರೆನ್ನದೆ,-ವಿಧವೆಯರೆನ್ನದೆ, ವಿಯೋಗಿನಿಯರೆನ್ನದೆ,-ಎಲ್ಲರಿಗೂ ಅಧಿಕಾರ, ಗುರುತ್ವ ಭಾರಗಳನ್ನು ವಹಿಸಿದ ಮಾತ್ರದಿಂದ ಏನಾದ ಹಾಗೆನ್ನು ವೆ ? ಸಧವೆಯು ಸಂಸಾರರಾಜ್ಯದಲ್ಲಿ ನೆಲೆಗೊಂಡು, ತಾರತಮ್ಯವರಿತು, ಸ್ವಯಂಸೇವೆಯಿಂದ ಸ್ವಗೃಹ, ನಿಜಭರ್ತಾರ, ನಿಜಪರಿವಾರಗಳನ್ನು ಪರಿಪಾಲಿಸುವಂತೆ, ಅಧಿಕಾರದಲ್ಲಿ ನಿಯೋಗಿಸಿದರೆ ನಡೆಯಲಾದೀತೋ ? ಒಂದುವೇಳೆ, ಅಧಿಕಾರಿಣಿಯರು ನೀತಿವಂತೆಯರಾಗಿದ್ದ ರೆಂದೇ ಭಾವಿಸು; ಆದರೂ, ಅವರು, ತಮ್ಮ ವೃತ್ತಿ ಗಾದರೂ ಬದ್ಧರಾಗಿರಬೇಕಾಗುವದರಿಂದ, ತಮ್ಮ ಪಾ ಲಿಗೆ ಬಿದ್ದಿರುವ ಕಾರ್ಯವನ್ನು ಇತರರ ಮೂಲಕ ನಡೆ ಯಿಸಬೇಕಾದೀತು ! ಹಾಗಾಗುವದರಿಂದ ವ್ಯಯವು ಇಮ್ಮಡಿಯಾಗುವದು ಮಾತ್ರವಲ್ಲದೆ, ತನ್ನ ಕಾರ್ಯವನ್ನು ತಾನು ಮಾಡಿದಂತೆ ಮನರಂಜನೆಯು ಬೇರೆ ಆಗ ಲಾರದು. ಹೀಗೆ ಮನಶ್ಶಾಂತಿಯೂ, ಕೃತಾರ್ಥ ತೆಯೂ, ಶ್ರಮಸಹಿಷ್ಣುತೆಯೂ, ನಿಜಕರ್ತವ್ಯ ಸ್ಫೂರ್ತಿ ಯೂ ಇಲ್ಲದೆಡೆಯಲ್ಲಿ, ಎಷ್ಟೇ ಧನದವರ್ಷಾವವಾಗುತ್ತಿ ರಲಿ, ಉಳಿಯುವ ಆಶೆಯಾದರೂ ಇರುವದೆ ? ಅದಕ್ಕೆ ಪ್ರತಿಯಾಗಿ, ಸಧವೆಯಾಗಿರುವ ಅಂಗನೆಯರು, (ತಾವಾ

ಗಿ ಪತಿಗೃಹವನ್ನು ತ್ಯಾಗಮಾಡಿ ಬಂದೆವೆಂದು ನಿರ್ಲಜ್ಜೆಯಿಂದ ಹೇಳುವವರಾಗಿದ್ದರೂ ಸರಿ) ಬಂದು ಪ್ರಾರ್ಥಿಸಿದರೂ, ಅಂತಹರ ಪ್ರಾರ್ಥನೆಯನ್ನು ದೂರಮಾಡಿ, ಅವರಿಗೆ ತಕ್ಕಂತೆ ಬುದ್ಧಿಗಲಿಸಿ, ಅವರನ್ನು ಅವರ ಸ್ವಕರ್ತವ್ಯದ ಕಡೆಗೆ ಗಮನಿಸುವಂತೆ ನ್ಯಾಯ—ನಿಷ್ಠುರ ವಾಣಿಯಿಂದ ವಿಧಿಸಿ ಕಳುಹುವದಾದರೆ, ಆಗ ನಮ್ಮ ದೇಶದಲ್ಲಿ ಎಷ್ಟರ ಶಾಂತಿ, ಧೃತಿ, ಕ್ಷಮೆ, ವಿಜ್ಞಾನ, ವೈಭವಗಳು ಪ್ರಕಾಶಕ್ಕೆ ಬರಲಾಗುವವೋ ತಿಳಿಯುವೆ! ವಿಯೋಗಿನಿ-ಅಥವಾ ವಿಧವೆಯರಿಗೂ ಹಾಗೆಯೇ ಅವರ ಪ್ರಕೃತಿ, ಧರ್ಮ, ಮತ್ತು ಕರ್ತವ್ಯಗಳಿಗೆ ತಕ್ಕಂತಹ ಬೋಧನೆಯನ್ನು ಕೊಟ್ಟು, ಅವರನ್ನು ಸ್ವಜನರಿರುವೆಡೆಯಲ್ಲಿರುವಂತೆ ವಿಧಿಸಿದರೆ, ಎಷ್ಟುಮಟ್ಟಿನ ಸಹಾಯ ಸಂಪತ್ತಿಯಾಗುವದೆಂದು ಬಲ್ಲೆ ? ಈ ಇಬ್ಬರನ್ನು ಬಿಟ್ಟು, ಮುಂದೆಬಂದರೆ, ಸತಿ–ಪುತ್ರ–ಗುರು, ಬಂಧುಗಳಾರೂ ಇಲ್ಲದ ಅನಾಥ ಮಹಿಳೆಯರಿಗೆ ಮಾತ್ರ, ಇವರು, ಉದ್ಯೋಗ–ಅಧಿಕಾರಗಳನ್ನು ಕೊಡುವದರಿಂದ; ಅದೂ, ನಮ್ಮ ಬಾಲಿಕಾನಿವಹವನ್ನು ಪ್ರಾಥಮಿಕ ಶಿಕ್ಷಣದಿಂದ ದಕ್ಷರನ್ನಾಗಿ ಮಾಡುವಂತಹ ನೈತಿಕ ವಿದ್ಯಾಪರಿಶ್ರಾಮಿಕ ಕ್ರಿಯೆಯಲ್ಲಿ ನಿಯೋಜಿಸುವದರಿಂದ ಮಾತ್ರ–ನಮ್ಮ ದೇಶದ ಸಂಪದಭಿವೃದ್ಧಿಯಾಗಬೇಕಲ್ಲದೆ, ಬೇರೆ, ಆವ ಉಪಾಯದಿಂದಲೂ ಆಗುವಂತಿಲ್ಲ. ಇದರಿಂದ ಆ ನಮ್ಮ ಭಗಿನಿಯರು ನಮ್ಮಲ್ಲಿ ಮುರಿದು ಬೀಳುವರಾದರೂ ಚಿಂತೆಯಿಲ್ಲ.

ಅಕ್ಷಯ:—ಇಷ್ಟಾದರೆ, ಸಾಕೆನ್ನುವೆಯೋ ?

ಪ್ರಭಾ:—ಸಾಕು, ಸದ್ಯಕ್ಕೆ ಇಷ್ಟಾದರೆ ಎಷ್ಟೋ ಅನುಕೂಲ ವಾದೀತು !

ಅಕ್ಷಯ:—ಹೇಗೆ ?

ಪ್ರಭಾ:—ನಮ್ಮವರ ಮನಸ್ಸಿನಲ್ಲಿ ಸ್ತ್ರೀಯರ ವಿಷಯಕವಾದ ಅಸೂಯೆಗೂ, ಅಭಿಮಾನೋತ್ಕರ್ಷತೆಯ ಬಹುಮಾನ ಸ್ಪರ್ಧೆಗೂ ಅವಕಾಶವಿರುವದಿಲ್ಲ. ಅಲ್ಲದೆ, ಅವರು ಕೂಡ, ತಮ್ಮ ಪಾಂಡಿತ್ಯಪ್ರಭೆಯನ್ನು ಪ್ರಕಟಿಸಬೇಕೆಂದು ಈಗಿನಂತೆ ನಿರ್ಲಜ್ಜಾಪ್ರಕೃತಿಗಳಾಗಿ ಮೇಲೆ ಬೀಳಲು ಬರಲಾಗುವದಿಲ್ಲ. ಆಗ ಅವರ ಪ್ರತಿಭಾವಿಶೇಷ, ಕಾರ್ಯದಕ್ಷತೆಗಳೆಲ್ಲವೂ, ಗೃಹರಾಜ್ಯಪರಿಪಾಲನೆಯೊಂದರಲ್ಲಿಯೇ ನೆಲೆಗೊಂಡು, ತಮ್ಮ ತಮ್ಮ ಪುರುಷನಿಗೆ ಕೈಪಿಡಿಗಳಾಗಿಯೂ, ಆತ್ಮಾನಂದಲಾಭಕ್ಕೆ ಆಧಾರ ಪಾತ್ರರಾಗಿಯೂ ಪರಿಗಣಿತರಾಗುವದರಲ್ಲಿ ಸಂಶಯ ವಿರುವದಿಲ್ಲ. ಇಷ್ಟಾದರೆ ನಮ್ಮವರ ಚಿತ್ತವೃತ್ತಿಯು ಕೂಡ, ಪರಿಪಿತಾಚರಣೆಯಲ್ಲಿದ್ದು ನಮ್ಮ ಅಭ್ಯಾಸವನ್ನು ಸಾಫಲ್ಯಗೊಳಿಸಿಕೊಳ್ಳಲು ತಕ್ಕಂತೆ ಸುಲಲಿತವಾಗಿ ತಿರುಗುವದೆಂದು ಬೇರೆ ಹೇಳಬೇಕಾಗಿಲ್ಲ. ಇನ್ನೂ ಹೇಳಬೇಕೇನು ?

ಕಲಾ:—ಇಂತಹ ತರ್ಕವನ್ನು ಎಷ್ಟುದೂರ ಬೆಳೆಯಿಸಿದರೂ ಬೆಳೆಯಿಸಬಹುದು! ಆದರೆ ಅದಕ್ಕೆ ಈಗ ಸಮಯವಿಲ್ಲ! ಕಡೆಗೂ ಹೇಳು,-ಬೃಹತ್ಸೇನನು ಮಾಡಿದುದೇನು ?

ಪ್ರಭಾ:—ಕಿರುನಗೆಯಿಂದ 'ಮಾಡುವದೇನು! ಪರೀಕ್ಷಾಸ್ಥಾನವನ್ನು ಸೇರಿ, ಪರೀಕ್ಷಕರ ಪ್ರಶ್ನೆಗೆ, ನಮುನಮುಗೆ ಮೊ

ಳಿದ ವಿಚಾರಗಳನ್ನು ಬರೆದುಕೊಟ್ಟು, ನಾವು ಹೊರಟು ಬಂದೆವು. ನಮ್ಮವರಲ್ಲೆಲ್ಲಾ ಬೃಹತ್ಸೇನನು ಗಣಿತಪಾಠದಲ್ಲಿ ಗಟ್ಟಿಗನೆನ್ನಿಸಿದ್ದನು. ಆ ಹೆಮ್ಮೆಯೇ ಅವನಲ್ಲಿ ಹೆಚ್ಚಾಗಿದ್ದಿತು. ಆತನು, ತನ್ನ ಪ್ರೌಢಿಮೆಗಾಗಿ ತನ್ನಲ್ಲಿ ತಾನೇ ಹಿಗ್ಗಿ, ಜಗ್ಗುಹಾಕುತ್ತ ಬರುತ್ತಿದ್ದನು. ಅದೇ ಸಮಯದಲ್ಲಿಯೇ ಅಲ್ಲಿಗೆ ಪರೀಕ್ಷೆಗಾಗಿ ಬಂದು, ಸೇನನ ಠೀವಿಯನ್ನು ನೋಡಿ, ಕೌತುಕಗೊಂಡಿದ್ದ, ವಿಯೋಗಿನಿಯಾದ ವಿಲಾಸವತಿಯು, ಅದೇದಾರಿಯಲ್ಲಿ ಹೊಂಚಿ ನಿಂತಿದ್ದು, ಇವನನ್ನು ಸಂಧಿಸಿದಳು. ಇಬ್ಬರಿಗೂ ಪರಸ್ಪರ ಕುಶಲಪ್ರಶ್ನೆಗಳು ನಡೆದುವು. ಬಳಿಕ ಪರೀಕ್ಷಾವಿಚಾರಗಳೂ, ಆದಾದಬಳಿಕ ಪರೀಕ್ಷಾಭಾಗಕ್ಕೆ ಪ್ರಾಮುಖ್ಯವಾದ ಗಣಿತವಿಚಾರದಲ್ಲಿ ತಮಗಿರುವ ಪಾಂಡಿತ್ಯ ಪ್ರದರ್ಶನದ ಆತ್ಮಪ್ರಶಂಸೆಗಳೂ, ಆದಾದಬಳಿಕ, ಧನ್ಯವಾದಗಳೂ, ಒಂದರಹಿಂದೆ ಒಂದರಂತೆ ನಡೆದು ಬಂದು ನಾಲ್ಕಾರು ನಿಮಿಷಗಳಲ್ಲಿ ಹಸ್ತಲಾಘವಕ್ಕೂ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಪ್ರಥಮ ದರ್ಶನದಲ್ಲಿಯೇ ಇಷ್ಟು ಸೌಲಭ್ಯ ವುಂಟಾದ ಬಳಿಕ, ಇನ್ನು ಚಿರಪರಿಚಿತ ಸ್ಥಳದಲ್ಲಿ ಹೇಳಬೇಕಾದುದೇನು ? ಕಲಾಧವ ಕುಮಾರ ! ಇದೇಕೆ-ಹೀಗೆ ಸ್ತಬ್ಧನಾಗಿ ಕುಳಿತುಬಿಟ್ಟೆ ? ಇದೇ ಹೊಸದೇನು ? ಬೃಹತ್ಸೇನನನ್ನು ಮೀರಿಸುವವರೂ, ಅವನಿಗೆ ಸಮಾನರಾಗಿರುವವರೂ, ರಾಜನಗರದ ಕಲಾಶಾಲೆಯಲ್ಲಿಲ್ಲದೆ ಇರಲಿಲ್ಲ. ಅವರಲ್ಲಿ ಕೆಲವರಿಗೆ, ನ್ಯಾಯಶಾಸನಗಳು ಎಚ್ಚರಿಸಿದ್ದರೂ ಅವರದನ್ನು ಗಮನಿಸುವಂತೆ

ರಲಿಲ್ಲ. ಎಂದರೆ-ಅಲ್ಲಿದ್ದವರೆಲ್ಲರೂ ಹಾಗೆಯೇ ಇದ್ದರೆಂದು ಮಾತ್ರಭಾವಿಸಬಾರದು. ನಿಜವಾದ ವಿದ್ಯಾರ್ಥಿಗಳೂ ಇದ್ದರು, ಏನಾದರೇನು ? ಬೃಹತ್ಸೇನನ ಈ ನಡವಳಿಕೆಯನ್ನು ನೋಡಿದುದೇ ನನಗೆ ಅಲ್ಲಿಯ ಪಾಠಸಂಗದಲ್ಲಿ ಜಿಹಾಸೆಯುಂಟಾಗಲು ಕಾರಣವಾಗಿ ತಿರುಗಿತು ಆದುದರಿಂದಲೇ ನಾನು ಅಲ್ಲಿರದೆ ಹೊರಟು ಬಂದು, ಈ ಶಾಂತಿನಿಲಯದಲ್ಲಿ ಸೇರಿದೆನು.

ಕಲಾ:—ನಿಟ್ಟುಸಿರಿಟ್ಟು—'ಕಷ್ಟಕಷ್ಟ ! ಮಾಡುವುದೇನು ? ಪ್ರಭಾಕರ ! ಎಲ್ಲೆಡೆಯಲ್ಲಿಯೂ ಇದೇ ಪಾಡಾದರೆ ನಾವು ಹೇಳುವದೇನಿದೆ!-''ಆಧುನಿಕವಿದ್ಯಾರ್ಥಿ ಲಕ್ಷಣಕ್ಕೆ ಇದೂ ಒಂದು ಅಂಗವಾಗಿರಬಹುದೇನೆಂಬುದೇ ನನಗೆ ಪ್ರಶ್ನೆಯಾಗಿದೆ ? ಇನ್ನು ಸಾಕು, ನಾನು ಕೇಳಲಾರೆನು! ಪೂಜಾಕಾಲವು ಅತಿಕ್ರಮಿಸಿತು. ? ಎಂದು ಹೇಳಿ ನಿಲ್ಲದೆ ಎದ್ದು ಹೊರಟುಬಿಟ್ಟನು.

ಪ್ರಭಾಕರ:—ಅಕ್ಷಯಕುಮಾರರೂ ಎದ್ದು, ಕಿರುಮನೆಯ ಕದವನ್ನು ಭದ್ರಪಡಿಸಿಕೊಂಡು ಕಲಾಧವನ ಮಾರ್ಗವನ್ನೇ ಅನುಸರಿಸಿ ನಡೆದರು.

ದೇಶಬಾಂಧವರೇ ! ದೇಶೋದ್ಧಾರಕರೇ !!

ಕ್ಷಮೆಯಿರಲಿ! ಈ ಷಷ್ಠಪರಿಚ್ಛೇದವನ್ನು ಎಳಿಪಿಸಿ, ನಿಮ್ಮ ಸಿಷ್ಠುರವಾಣಿಗಳಿಗೆ ಭಾಜನರಾಗಬೇಕೆಂದು ನಾವು ನೆನೆದಿರಲಿಲ್ಲ,-ಆದರೂ ಯತ್ನವಿಲ್ಲದೆ ವಿವರಿಸಬೇಕಾಗಿ ಬಂದಿತು. 'ಖಂಡಿತವಾದಿ-ಲೋಕವಿರೋಧಿ. '—'ಕಂಡಸುದ್ದಿಯು ನಾಡೆಕೆಂಡದಂತಾಗುವರು, ' ಎಂಬ ಸಾಮಿತಿಗಳನ್ನು ತಿಳಿದು, ಅನಿವಾರ್ಹಪಕ್ಷದಿಂದ, ಪ್ರಸಂಗವಶಾತ್, ಸ

ಮ್ಮವರ ಕಲ್ಯಾಣಕ್ಕೆಂದು ಮಾತ್ರ, ಇಲ್ಲಿ ತಕ್ಕಮಟ್ಟಿಗೂ—ಶಿಕ್ಷಣ-ಅಭ್ಯಾಸ, ಉದ್ಯೋಗ-ವೃತ್ತಿ-ಕರ್ತವ್ಯಗಳ ವಿಚಾರವಾದ ಪ್ರಸ್ತಾವವನ್ನು ಸ್ಪಷ್ಟವಾಗಿ ವಿವರಿಸಬೇಕಾಯಿತು. ಇಷ್ಟಕ್ಕೇ ಆಗ್ರಹಿಸುವವರು ನೀವಾದರೆ, ನಾವು ಮಾಡುವದೇನಿದೆ ? ದೇಶಹಿತಕ್ಕಾಗಿ ನಿಮ್ಮ ತಿರಸ್ಕಾರವನ್ನಾದರೂ ಸಹಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ ? ಇದನ್ನರಿತು, ಈ ಷಷ್ಟಪರಿಚ್ಛೇದವಾದ್ಯಂತದ ಸಾರವನ್ನೂ ಸಂಗ್ರಹಿಸಿ, ಅನುಕರಣಕ್ಕೆ ತರಬೇಕಾದ ನಿಮ್ಮ ಕರ್ತವ್ಯವನ್ನು ನೀವೂ ಗಮನಿಸಬೇಕಷ್ಟೆ ? (ಆಗಲಿ!)

ಶ್ರೀ.

ಸಪ್ತಮಪರಿಚ್ಛೇದ.

(ಮಧುಮಿತ್ರನ ಕಳವಳ—ಕಾತರಗಳು ; ನಳಿನೀಕಾಂತಕುಮುದಮಿತ್ರರ ಆಗಮನವು. ಮಧುಮಿತ್ರನ ಸಂತಾಪ ;—ನಳಿನೀಕಾಂತನ ಹೇಳಿಕೆ,-ಕುಮುದಮಿತ್ರನ ಅಭಯ

——ಇತ್ಯಾದಿ-ಇತ್ಯಾದಿ—

ನಾಗರಿಕನಾದ ನಿನಗೂ ಈ ಕಳವಳವೇ ? ನಾನಿರುವೆನು; ದುಗುಡವನ್ನು ಬಿಡೇಳು.

ರಾತ್ರಿ ಸುಮಾರು ಒಂಭತ್ತು ಗಂಟೆಯಿರಬಹುದು. ಮಧುಮಿತ್ರನು, ವಿದ್ಯಾರ್ಥಿಮಂದಿರದಿಂದ ಇನ್ನೂ ಹೊರಹೊರಟಿಲ್ಲ. ತನ್ನ ನಿಯತಸ್ಥಾನವಾದ ಕಿರುಮನೆಯಲ್ಲಿ ಒಬ್ಬನೇ, ಕುರ್ಚಿಯಮೇಲೆ ಕುಳಿತು, ಚಿಂತಿಸುತ್ತಿದ್ದನು. ಆವನ ಮುಂದೆ ಮೇಜಿನಮೇಲೆ ದೀಪವು

ಮಿಣಗುಟ್ಟುತ್ತಿದ್ದಿತು. ಪಕ್ಕದಲ್ಲಿ ಮತ್ತೆರಡು ಕುರ್ಚಿಗಳು ಇಡಲ್ಪಟ್ಟಿದ್ದುವು. ಮಿತ್ರನ ಈ ಬಗೆಯ ವ್ಯಸ್ತತೆಗೆ ಕಾರಣವೇನೆಂಬುದೇ ತಿಳಿಯಲಿಲ್ಲವೆಂಬಿರೋ ? ಹಾಗಿದ್ದರಿತ್ತ ನಿಂತು ನೋಡಿ, ತಿಳಿಯಿರಿ—ಸುಹೃದರೆ!-ತಾಳ್ಮೆಯಿಂದ ಪರಿಶೀಲಿಸಿರಿ, ಕಿವಿಕೊಟ್ಟು ಕೇಳಿರಿ——ಏನೆನ್ನುವನು? "ಈಗೇನು ಮಾಡಲಿ? ಹೀಗಾಯಿತೇಕೆ? ಕಾರಣರಾರು? ಅವಳ ಈ ತಿರಸ್ಕಾರಭಾವಕ್ಕೆ ನನ್ನಿಂದ ಏನಾದರೂ ದೋಷವು ತೋರ್ಪಟ್ಟಿತೇ? ಅಥವಾ ಅವಳು ನನ್ನನ್ನು ನೋಡಿ-ಇಲ್ಲವೆ ಕೇಳಿ ತಿಳಿದಿರುವಳೇ? ಏನು ಸಮಾಚಾರವಿದು? ಒಂದೇ ಬಾರಿಗೆ ಹೀಗೆ ತುಂಡು ಮಾಡಿಬಿಟ್ಟು, ನನ್ನ ಆಶೆಯನ್ನು ನಿರಾಶೆಪಡಿಸಿದಳೇತರಿಂದ? ಅವಳು ಮತ್ತಾವನ ಮೋಹಕ್ಕಾದರೂ ಸೆರೆ ಬಿದ್ದಿರಬಹುದೇ? ಹಾಗಾಗಿರಬೇಕು!'' ಎಂದು ಹೇಳುತ್ತ ಹಾಗೆಯೆ, ಬೆದರಿಬಿದ್ದು, "ಏನದು ! ಅವಳು ಅನ್ಯತ್ರ ಗಮಕಿಯಾಗಿರಬೇಕೆಂದೆ ? ಹಾಗಾಗಬಹುದೇ ? ನ್ಯಾಯವೇ ? ನನ್ನನ್ನು ಬಿಟ್ಟರೆ ಅವಳಿಗೆ ಅನುರೂಪನಿನ್ನಾವನು ದೊರೆತಾನು? ಸಿಕ್ಕುವದಾದರೂ ನನ್ನ ಗತಿಯೇನು? ಚೀ ! ಚೀ !! ಇದು ನನಗೆ ಸಹನಾತೀತವು. ಆದರೆ ಈಗೇನುಮಾಡಲಿ? ನನಗೇನೂ ತೋರುವದಿಲ್ಲವಲ್ಲಾ"-ಎಂದು ಗಟ್ಟಿಯಾಗಿ ಹೇಳುತ್ತಿದ್ದನು. ಅಷ್ಟರಲ್ಲಿ ಹೊರಗಣಿಂದ ನಳನೀಕಾಂತನು ಮತ್ತಾವನೋ ಸಮಾನಸ್ಕಂಧನಾದ ತರುಣನೊಡನೆ ಓಡಿಬಂದು, ಮೆಲ್ಲನೆ ಮಿತ್ರನ ಭುಜದಮೇಲೆ ಕೈಯಿಟ್ಟು, ಕೇಳಿದನು. "ಮಿತ್ರಾ ಹೀಗೇಕೆ ಪರವಶನಾಗಿ ಕುಳಿತಿರುವೆ?"

ಮಧು:—ತಲೆಯೆತ್ತಿ ಇಬ್ಬರ ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿ ಕೊಂಡು "ನಳಿನೀಕಾಂತ ! ಕರ್ತವ್ಯಪರಾಙ್ಮುಖನಾಗಿ ರುವ ನಾನು ಮತ್ತೇನು ಮಾಡಲಿ ?

ನಳಿನಿ—"ಏನು ಮಾಡಬೇಕೇ? ಮಿತ್ರ ! ಹೊರಗೆ ಬರುವುದಿಲ್ಲವೇ?

ಮಧು—ಹೊರಗೆ ಆವ ಕೆಲಸಕ್ಕಾಗಿ ಬರಬೇಕು?

ನಳಿನೀ —ಆವಕೆಲಸಕ್ಕೆಂದರೆ--ನೀನೇ ಹೇಳು, ನೋಡುವ ? ದಿನವೂ ನೀನು ರಾತ್ರಿಯಲ್ಲಿ ಎಲ್ಲಿಗೆ, ಏತಕ್ಕೆ ಹೋಗಿ ಬರುತ್ತಿದ್ದೆ?

ಮಧು—ನಿಟ್ಟುಸಿರುಬಿಟ್ಟು-'ಇಲ್ಲ; ಈದಿನ ನಾನೆಲ್ಲಿಗೂ ಬರುವದಿಲ್ಲ!'

ನಳಿನೀ—ಕೌತುಕದಿಂದ-'ಏತರಿಂದ?'

ಮಧು —ನನಗೆ ಬೇಕಾಗಿಲ್ಲದುದರಿಂದ

ನಳಿನೀ—ವಿಸ್ಮಯದಿಂದ-'ಬೇಕಾಗದಿರಲು ಕಾರಣ!'

ಮಧು—ತಲೆಯೆತ್ತಿ--'ಮಿತ್ರ-ನಳಿನೀಕಾಂತ! ನಿಜವಾದ,--ನಿರಾತಂಕವಾದ, ನಿಷ್ಕಲಂಕವಾದ, ಉತ್ತರೋತ್ತರ ಅಭಿವೃದ್ಧಿಕಾರಣವಾದ ಪಾತ್ರವು ಅದಲ್ಲವೆಂದು ಅನುಭವ ಮಾಡಿಕೊಂಡುದರಿಂದ.

ನಳಿನೀ—ಏನು-ಏನು ? ಏನೆಂದೆ? ಮಿತ್ರ! ಎಚ್ಚರಿಕೆಯಾಗಿ ಮಾತನಾಡುವೆಯೋ ?-ಇಲ್ಲವೋ ?

ಮಧು—ಎಚ್ಚತ್ತುಕೊಳ್ಳುತ್ತಿದ್ದೇನಾದುದರಿಂದಲೇ ಹೀಗೆ ಹೇಳುತ್ತಿರುವದು.

ನಳಿನೀ—ತಲೆಯನ್ನು ಕೊಂಕಿಸಿ-'ಮತ್ತೊಂದು ಬಾರಿ ನೆನಪು ಮಾಡಿಕೊಂಡು ಹೇಳು? ಸುಖವಿಲ್ಲವೇ? ಪ್ರಮೋದಕಾರಕವಲ್ಲವೇ? ಶಕ್ತ್ಯುತ್ತೇಜಕವಲ್ಲವೇ?

ಮಧು—ನಳಿನೀಕಾಂತ! ನಾನಿಂದು ಶ್ಲೇಷ್ಮದಲ್ಲಿ ಬಿದ್ದನೊಣದಂತೆ ಒದ್ದಾಡುತ್ತಿದ್ದೇನೆ. ನನಗೆ ಅದೇ ಆಹ್ಲಾದದಾಯಕಪಾತ್ರವೋ, ಇದೇ ಆಹ್ಲಾದದಾಯಕಪಾತ್ರವೋ,

ಹೇಳಲಾರೆನು (ಪಕ್ಕಕ್ಕೆ ತಿರುಗಿ) ನೀನು ಹೇಳು, ಕೃಮುದ ಮಿತ್ರ ! ನನಗೆ ಆಹ್ಲಾದಪಾತ್ರವಾವುದು ? ಶಕ್ತ್ಯುತ್ತೇಜಕ ವಸ್ತುವಾವುದು?

ಕುಮುದ—ನಿನಗೆ-ಎಂದರೆ, ನಿನ್ನ ಸಂದೇಶವು ನನಗೆ ಅರ್ಥವಾಗಲಿಲ್ಲ. ಸಾಮಾನ್ಯವಾಗಿ, ಆಹ್ಲಾದ—ಉತ್ಸಾಹಗಳನ್ನು ಹೆಚ್ಚಿಸುವದೆಂದರೆ, ಜ್ಞಾನ-ಮನೋಜಯ ಇವೇ ಸರಿಯೆಂದು ಹೇಳುತ್ತಾರೆ! ಅವೆರಡಕ್ಕೂ, ನಮಗೆ ಆಧಾರವಾದುದೆಂದರೆ ತಿಳಿದೇ ಇದೆ-ವಿದ್ಯಾಭ್ಯಾಸ!

ನಳಿನೀ—ಸಾಕಯ್ಯ, ನಮಗೆ ನಿನ್ನ ಈ ವೇದಾಂತವು ಬೇಕಾಗಿಲ್ಲ. ಈ ನಮ್ಮ ವಯಃಪ್ರಾಬಲ್ಯಕಾಲದಲ್ಲಿ, ಅದರಲ್ಲಿಯೂ, ರಸಿಕಸಮಾಜದಲ್ಲಿ, ಸುಧಾರಣಾವಾದಿಗಳ ಗುಂಪಿನಲ್ಲಿ ಸೇರುವ ನಮಗೆ, ಅವವು ಪ್ರೇಕ್ಷಣೀಯವಸ್ತುಗಳು? ಆಹ್ಲಾದದಾಯಕ ಪಾತ್ರವಾವುದು? ಸುರಾದೇವಿಗೆ ಮಿಂಚಿದ ಪಾತ್ರವೂ ಇರುವದೇ? ರಕ್ತಾಕ್ಷಿಯ ಕೃಪಾಕಟಾಕ್ಷ ಪಾತ್ರನಾಗುವ ಭಾಗ್ಯದಮುಂದೆ ಮತ್ತಾವ ಲಾಭವೇಆಗಲಿ, ಗಣನೀಯವೆ?

ಕುಮುದ—ಜಿಹಾಸೆಯಿಂದ-'ನಳಿನೀಕಾಂತ ! ಅವೆರಡು ಮಾತನ್ನುಮಾತ್ರ ನನ್ನಮುಂದೆ ಹೇಳಬೇಡ ! ನನಗೆ ಅವೆರಡು ಹೆಸರೂ ಅಸಹ್ಯವಾಗಿ ತೋರುತ್ತವೆ. ಮತ್ತಾವ ಮೋಜುಗಾರಿಕೆಯನ್ನು ಬೇಕಾದರೂ ಹೇಳು, ಅವೆಲ್ಲಕ್ಕೂ ಮುಂದಾಗಿ ನಿಲ್ಲುವೆನು. ಅಧಃಪತನ ಹೇತುಗಳಾದ ಸುರಾಪಾನ-ವೇಶ್ಯಾರಾಧನ ಇವೆರಡನ್ನು ಮಾತ್ರ ನನ್ನ ಮುಂದೆ ಹೇಳಬೇಡ.

ನಳಿನೀ—ದರ್ಪಿತಸ್ವರದಿಂದ" ಏನು ? ನಿನಗಿವುಗಳಲ್ಲಿ ಇಷ್ಟು ಅನಾದರವೇ? ಚೀ ! ನೀನು ಇಂತಹ ಅರಸಿಕನೆಂದು ನಾನೀವರೆಗೂ ತಿಳಿದಿರಲಿಲ್ಲ! ನಿನ್ನನ್ನು ನಾನೀಕಾರ್ಯಗಳಲ್ಲಿ ನಿಪುಣನೆಂದೇ ನಂಬಿದ್ದೆನು"

ಕುಮುದ —ಉತ್ತೇಜಿತ ಸ್ವರದಿಂದ 'ಇಲ್ಲ, ಈ ಎರಡು ದುರ್ವ್ಯಸನಗಳು ಮಾತ್ರ ನನಗೆ ದೂರದಲ್ಲಿರಬೇಕು. ಕುಡಿತದಂತೆ ಕೇಡನ್ನು ತರುವ ಪದಾರ್ಥವು ಯಾವುದೂ ಇಲ್ಲವೆಂಬುದು ನನ್ನ ನಂಬಿಕೆ. ಅದರಮೇಲೆ ವೇಶ್ಯೆಯರ ಸಹವಾಸದಷ್ಟು ನೀಚಕಾರ್ಯವು ಮತ್ತಾವುದಿದೆಯೆಂದು ಹೇಳಬಹುದು ?'

ನಳಿನೀ—ಜಡ, ನಿನಗದರ ಸವಿಯೇ ತಿಳಿದಿಲ್ಲ. ಒಂದು ದಿನವಾದರೂ ನನ್ನ ಜತೆಯಲ್ಲಿ ಬಾ,–ನಿನಗೆ ಸ್ವರ್ಗಭೋಗವನ್ನೇ ಉಂಟುಮಾಡಿಸುವೆನು. ಆ ಮುಂದೆ-ನನ್ನನ್ನೂ ಹಿಂದೆ ಬಿಟ್ಟು, ನೀನದರ ಸುಖಾನುಭವದಲ್ಲಿ ಮುಂದೋಡುವೆ!

ಕುಮುದ—ನನಗಾ ಸುಖವು ಬೇಕಾಗಿಲ್ಲ; ನಳಿನೀಕಾಂತ ! ನಾನು ಈವರೆಗೆ ಎಷ್ಟೋ ಕಡೆಗಳಲ್ಲಿ, ಎಷ್ಟೋ ಸಂಘಗಳಲ್ಲಿ, ಕಡೆಗೆ ಎಷ್ಟೋ ಸ್ತ್ರೀಸಮೂಹದಲ್ಲಿ ಇದ್ದು ಬಂದಿರುವೆನು. ನಾನು ಸ್ವತಃ ಅವುಗಳಲ್ಲಿ ಭಾಗಿಯಾಗದಿದ್ದರೂ, ಆಗಿ ನರಳುವವರನ್ನು ನೋಡಿ ಬಂದಿರುವೆನು. ಹಾಗೆ ವಿಷಯಲಾಲಸೆಯು ಅತಿಯಾಗಿದ್ದರೆ ನ್ಯಾಯರೀತಿಯಲ್ಲಿ ಹಿರಿಯರ ಮಾತಿನಂತೆ ಅನುರೂಪ ಕನ್ಯಾಪರಿಗ್ರಹಮಾಡಿ ಸುಖಪಡಬಾರದೇಕೆ ?

ನಳಿನೀ—ನಿನ್ನ ಆ ನಿರ್ಬಂಧದ ಸುಖವು ಯಾರಿಗೆ ಬೇಕು ? ಬೇಕೆಂದಾಗ ಸಾಕೆನ್ನುವ ವರೆಗೆ ಸುಖಿಸಬಹುದಾದಷ್ಟು ಸೌಖ್ಯಪಾತ್ರವು ಒಳಿಯಲ್ಲಿದ್ದೂ ಇತರ ಪಾತ್ರಾನ್ವೇಷಣೆಗೆ ಹೋಗಬಹುದೇನು ? ನಮ್ಮ ರಕ್ತಾಕ್ಷಿಯನ್ನು ನೀನು ಹೇಳುವ ವೇಶ್ಯೆಯರಂತೆ ಭಾವಿಸಬೇಡ. ಅವಳಂತಹ ಆಶ್ರಿತವತ್ಸಲೆಯರೂ, ಪರೋಪಕಾರ ನಿರತೆಯರೂ, ಉದಾರಚರಿತೆಯರೂ, ಮತ್ತು ಆರ್ತತ್ರಾಣ ಪರಾಯಣೆಯರೂ, ಮತ್ತಾರಾದರೂ ಇದ್ದರೆ ತೋರಿಸು,—ನಾನು ನಿನ್ನ ದಾಸ್ಯವೃತ್ತಿಯನ್ನು ಅಂಗೀಕರಿಸುವೆನು.

ಕುಮುದ—ಕಿರುನಗೆಯಿಂದ 'ಸರಿಯೆ, ನಳಿನೀಕಾಂತ ! ನಿನಗೆ ದಾಹವು ಹೆಚ್ಚುವಂತೆ ತೋರುತ್ತದೆ. ನೀನಿನ್ನು ಮುಂದೆ ಸರಿಯಾದ ಸ್ಥಿತಿಯಲ್ಲಿರುವೆಯೆಂದು ಹೇಳಲಾರೆನು. ಈಗ ನೀನು ವಿಷಯತೃಷೆಯಲ್ಲಿ ಬಿದ್ದು, ಕಾಮಾಂಧಳಾಗಿರುವ ರಕ್ತಾಕ್ಷಿಯಪಾದಸೇವಕನಾಗಿ ಜೀವಿಸುವೆಯಾದರೆ, ಅದರ ಫಲಾನುಭವವು ನಿನಗೆ ಮುಂದೆ ಬಹು ಕ್ರೂರವಾಗಿ ಉಂಟಾಗುವದು. (ಪಕ್ಕಕ್ಕೆ ತಿರುಗಿ) ಮಧುಮಿತ್ರ ! ಎಚ್ಚರಿಕೆ ! ನೀನಾದರೂ ಎಚ್ಚತ್ತಿರು ! ಕುತ್ಸಿತಕಾರ್ಯದಲ್ಲಿ ಹೇಗೂ ಪ್ರವರ್ತಿಸಬೇಡ. ನಿನ್ನ ತಾಯಿಯನ್ನು ಸ್ಮರಿಸು. ನಿನ್ನ ತಂದೆಯನ್ನು ಸ್ಮರಿಸು !

ಮಧು—ಮಿತ್ರ! ಈಗ ನನಗೆ ಆರ ಸ್ಮರಣೆಯೂ ಬರುವಂತಿಲ್ಲ. ನನಗೆ ಬೇಕಾಗಿರುವದೆಂದರೆ ಪೂರ್ಣಕಲೆಯ ಸ್ಮರಣೆಯೊಂದೇ !

ನಳಿನೀ—ಸರಿಯೆ, ಅಲಭ್ಯವಸ್ತುವನ್ನು ಕುರಿತೇ ಚಿಂತಿಸುತ್ತಿರು! ಸೌಲಭ್ಯವಸ್ತುವನ್ನು ನಿರಾಕರಿಸುತ್ತಿದ್ದು, ಮುಂದೆ ಪಶ್ಚಾತ್ತಾಪಪಡುವೆ, ಎಚ್ಚರಿಕೆ! ರಕ್ತಾಕ್ಷಿಯ ಉಪಕಾರವನ್ನು ನೀನೆಂದಿಗೆ ತೋರಿಸಬಲ್ಲೆ? ಈ ವರೆಗಣ ಋಣಾನುಬಂಧವನ್ನು ಇಂದು ಒಂದೇ ಹೊಡೆತಕ್ಕೆ ಕಡಿದು ಹಾಕಲೆಣಿಸಿದೆಯಲ್ಲವೆ? ಸಾಧ್ಯವೆ?

ಮಧು—ಸಾಧ್ಯವೆಂದಾಗಲೀ, ಅಲ್ಲವೆಂದಾಗಲೀ, ಹೇಳಲಾರೆ; ಆದರೂ ಕ್ಷಮಿಸು, ನಳಿನೀಕಾಂತ! ದಯೆಯಿಟ್ಟು ಇದೊಂದುದಿನ ನನ್ನನ್ನು ಕ್ಷಮಿಸು! ನೀನು ಮಾತ್ರ ಬೇಕಾಗಿದ್ದರೆ ಹೋಗು. ನಾನು ದೇಹಾಲಸ್ಯದಲ್ಲಿರುವೆನೆಂದು ಅವಳಿಗೆತಿಳಿಸಿರು. ನನಗಿಂದಾದ ಉತ್ಸಾಹಭಂಗ, ಅಪಮಾನ, ಇವುಗಳು ನನ್ನನ್ನು ಇಲ್ಲಿಂದ ಹೊರಗೆ ಬಿಡಲಾರದಂತೆ ತಡೆಯುತ್ತಿವೆ.

ಕುಮಾರ—ಇದೊಂದು ದಿನವೆಂದು ಮಾತ್ರವಲ್ಲ, ಎಂದೆಂದಿಗೂ—ಎಂದೇ ಹೇಳಿದರಾಗದೇ? ಇರಲಿ, ಮಧುಮಿತ್ರ! ಅದಾವ ಅಪಮಾನವುಂಟಾಯಿತು? ಏಕೆ ಹೀಗಿರುವೆ?

ಮಧು—ಕುಮುದ! ನೀನು ಗುರುಪುತ್ರಿಯನ್ನು ನೋಡಿಬಲ್ಲೆಯಾ?

ಕುಮುದ—ಓಹೋ, ಧಾರಾಳವಾಗಿ; ಗುರುಪುತ್ರಿಯಲ್ಲಿ ನಾನು ನಿಶ್ಶಂಕೆಯಿಂದ ಕೇವಲ ಸಲಿಗೆಯಿಂದ ಎಷ್ಟೋವೇಳೆ ಮಾತನಾಡಿಯೂ, ಆಡುತ್ತಲೂ ಇರುವೆನು.

ಮಧು—ವಿಸ್ಮಯ ಕೌತುಕಗಳಿಂದ 'ನೀನೇ ಧನ್ಯಪುರುಷನು!

ನನ್ನಂತಹ ನಿರ್ಭಾಗ್ಯರಿಗೆ ದೊರೆಯಬೇಕೆಂದರೆ ಹೇಗಾದೀತು ?

ಕುಮುದ—ಮಧುಮಿತ್ರ! ಪೂರ್ಣಕಲೆಯನ್ನು ನಾನು ಬೇರೆಯಾಗಿ ತಿಳಿದಿಲ್ಲ. ನನ್ನ ತಂಗಿ ಕುಮುದೆಯನ್ನು ಹೇಗೆ ಸಲಿಗೆಯಿಂದ ನೋಡುತ್ತಿರುವೆನೋ ಅದೇರೀತಿಯಿಂದ ಅವಳನ್ನೂ ನೋಡುತ್ತಿರುವೆನು. ಅವಳೂ ನನ್ನನ್ನು ಅಣ್ಣನೆಂದೇ ಕರೆಯುತ್ತಿರುವಳಲ್ಲದೆ ಇತರ ಭಾವದಿಂದ ನೋಡುತ್ತಿಲ್ಲ. ಇಷ್ಟಕ್ಕೇ ನಿನಗಿಷ್ಟರ ಕೌತುಕವೇಕೈ

ಮಧು—ನಿಟ್ಟುಸಿರಿಟ್ಟು 'ಕುಮುದ ಮಿತ್ರ ! ಈಗ ನಾನ? ಸರಿಯಾದ ಸ್ಥಿತಿಯಲ್ಲಿಲ್ಲ. ನನ್ನ ಚಿತ್ತವು ಪೂರ್ಣಕಲೆಯ ಪಾಣಿಗ್ರಹಣದಲ್ಲಿ ಮಾತ್ರವೇ ನೆಲಸಿರುವುದು. ಆದರೆ ಅದು ನನ್ನಂತಹ ಅನಾಥನ ಪಾಲಿಗೆ ಲಭಿಸುವುದು ಸ್ವಪ್ನೇಪಿ ದುರ್ಲಭವೆಂದೇ ತೋರುತ್ತಿದೆ. ಈ ಕಾರ್ಯಸಿದ್ಧಿಗಾಗಿ, ನನ್ನ ತಾಯನ್ನು ಮರೆಹೊಕ್ಕು—

ನಳಿನೀ:—ಅಗ್ರಹದಿಂದ "ಇದೀಗ ಹುಚ್ಚುತನವು ! ಸಾಗದ ಕಾರ್ಯದಲ್ಲಿ ಪ್ರವರ್ತಿಸಿ, ಸಂತಪ್ತ ನಾಗುವದೊಂದೇ ಇದಕ್ಕೆ ಸಾಫಲ್ಯವಲ್ಲದೆ, ಬೇರೇನೂ ಇಲ್ಲ. ಇನ್ನು ಸಾಕೇಳು. ದುಃಖೋಪ ಶಮನ ಕಾರಿಣಿಯಾದ ಸುರಾದೇವಿಯನ್ನು ಆರಾಧಿಸಿ, ಶಾಂತಿಯನ್ನುವಹಿಸಿ ಇರುವೆಯಂತೆ ! ಬಾ, ಬೇಗಬಾ ! "

ಮಧು:—ಜಿಗುಪ್ಸೆಯಿಂದ ' ನಳಿನೀಕಾಂತ ! ದಯೆಯಿಟ್ಟು ನನ್ನನ್ನು ಈ ದಿನದ ಮಟ್ಟಿಗಾದರೂ ಕ್ಷಮಿಸು. ನಾನೀ ದಿನ ಈ ಕಿರುಮನೆಯಿಂದ ಹೊರಗೆ ಕಾಲಿಡುವವನೇ ಅಲ್ಲ.

ನನ್ನ ಮುಂದಿನ ನಡತೆಯನ್ನು ಹೇಗೆ ಸುದಾರಿಸಿಕೊಳ್ಳ ಬೇಕೆಂಬುದೇ ನನಗೀದಿನದ ಚಿಂತೆಯಾಗಿದೆ.

ಕುಮದ:—ಮಧುಮಿತ್ರ ! ಮೂಲವನ್ನು ತಿಳಿಯ ಹೇಳದೆ ಕಾಲಕಳೆಯುತ್ತಿರುವೆ. ಪ್ರವಾಸವನ್ನು ಮುಗಿಯಿಸಿ ಕೊಂಡು ಬಂದ ಮಿತ್ರನನ್ನು ಸ್ವಾಗತಿಸುವದೆಂದರೆ ಇದೇ ಆಹುದೇನು ?

ಮಧು:—ಕುಮುದ ! ನೀನೂ ನನ್ನಲ್ಲಿ ಆಗ್ರಹಿಸುವೆಯಾ ? ಅಷ್ಟುಮಟ್ಟಿಗೆ ಕಾಠಿಣ್ಯವನ್ನು ವಹಿಸಬೇಡ. ಮೊದಲೇ ನಾನು ಮರ್ಮಾಂತಿಕಯಾತನೆಯನ್ನು ಅನುಭವಿಸುತ್ತ-

ಕುಮುದ:—ಅದೇನೆಂದು ಕೇಳಿದರೆ ಹೇಳದೆ, ಸುಮ್ಮನೆ ವಿಭ್ರಾಂತನಂತೆ ಹೇಳುತ್ತಿರುವೆಯಲ್ಲ?

ಮಧು:—ಹಾಗಿದ್ದರೆ ಇದೇನೋಡು ; ನಾನು ಪೂರ್ಣಕಲೆಯ ದಯೆಯನ್ನು ಪ್ರಾರ್ಥಿಸಿ ಬರೆದಿದ್ದ ಪತ್ರದ ಪ್ರತಿಯೇ ಇದು ಇದಕ್ಕೆ ಅವಳಿಂದ ದೊರೆತ ಉತ್ತರವೇ ಅದು. ಇವೆರಡನ್ನು ನೋಡಿ ನೀನೇ ಸಮಾಧಾನವನ್ನು ಹೇಳು.

ಕುಮುದ:—ಎರಡು ಪತ್ರಗಳನ್ನೂ ಕೈಕೊಂಡುನೋಡಿ, ''ಮಧುಮಿತ್ರ ! ಈ ಪತ್ರವ್ಯವಹಾರದಲ್ಲಿ ಪ್ರವರ್ತಿಸುವಂತೆ ನಿನಗೆ ಬೋಧಿಸಿದವರಾರು'' ?

ನಳಿನೀ:—ಏನಾಯಿತು ? ಕಾರ್ಯಸಾಧನೆಯಾಗಬೇಕಾದರೆ ಪ್ರಯತ್ನವೂ, ಉತ್ತರ ಪ್ರತ್ಯುತ್ತರ ಸಂಭಾಷಣೆ ಮೊದಲಾದ ವ್ಯವಹಾರವೂ ನಡೆಯಬೇಕಲ್ಲವೆ ?

ಕುಮುದ:—ನಿಜ ! ಆದರೂ ವಿಚಾರ ಮಾಡಬೇಡವೆ ? ಹಿರಿಯರಿಗೆ ತಿಳಿದರೆ ಪರಿಣಾಮವೇನಾಗಬಹುದು ? ಈ

ವಿಷಯವು ಸಾಮಾನ್ಯವಾದುದಲ್ಲ. ಎಲ್ಲರೂ ಸಮ್ಮತಿಸಿ, ಸಂತೋಷದಿಂದ ನಡೆಯಿಸಿ ಕೊಡುವಂತಹುದು. ಹೀಗಿರುವಾಗ, ಮಧುಮಿತ್ರನು ಕಾಲಿಟ್ಟ ಮಾರ್ಗವು ಕಂಟಕಿತವಾದುದಲ್ಲವೆ? ಆದರೆ, ಕಳೆದುಹೋದ ಹೋರಾ ರ. ಇನ್ನು ಅದಕ್ಕಾಗಿ ವ್ಯಥೆಪಟ್ಟರೆ ಏನೂ ಆಗುವಂತಿಲ್ಲ.

ಮಧು:—ಹಾಗಾದರೆ ನಿನಗೆ ತೋರುವುದೇನು? ಈ ಕಾಗದವು ಇತರರ ಅವಗಾಹನೆಗೆ ಬಂದಿರಬೇಕೆಂದು ಊಹಿಸುವೆಯಾ?

ಕುಮುದ:—ಧಾರಾಳವಾಗಿ,— ಒಬ್ಬರ ಅಭಿಪ್ರಾಯವನ್ನು ಪಡೆದೇ ಇದು ಬಂದಿದೆ.

ಮಧು:—ಆವ ಆಧಾರದಿಂದ ಹೀಗೆಹೇಳುವೆ?

ಕುಮುದ:—ನಾನು ಗುರುಗಳ, ಗರುಪುತ್ರಿಯ, ಗರುಶಿಷ್ಯರು ಮತ್ತು ಗುರುಪರಿವಾರಕ್ಕೆ ಸೇರಿದವರ ಸ್ವಭಾವಗಳನ್ನು ತಕ್ಕಮಟ್ಟಿಗೂ ಬಲ್ಲೆನು. ಗುರುಪುತ್ರಿಯು ಮಾಡುವ ಪ್ರತಿಯೊಂದು ಕಾರ್ಯವನ್ನೂ-ಕಡೆಗೆ ತನ್ನ ಸಖಿಯರೊಡನೆ ಮಾತನಾಡುವದಕ್ಕೆ ಕೂಡ, ತನ್ನ ಮಾವನಾದ ಅಕ್ಷಯಕುಮಾರನ ಅಭಿಪ್ರಾಯವನ್ನು ತಿಳಿದೇ ಮಾಡುವಳೆಂಬುದು ನನಗೆ ಗೊತ್ತು.

ಮಧು:—ಶಂಕಿತನಾಗಿ- "ಹಾಗಿದ್ದರೆ ಗತಿ? ಅವನಿಗೆ ನನ್ನ ಈ ವ್ಯಾಪಾರವು.........

ಕುಮುದ:—ಮಿತ್ರ! ಅಕ್ಷಯಕುಮಾರನು ಅಂತಹ ಕಿಡುಕನಲ್ಲ ನಾನು ಕೇಳಿ-ನೋಡಿ ತಿಳಿದಿರುವುದರಲ್ಲಿ, ಆತನು ನಿನ್ನ

ಯಾವದ್ವೃತ್ತಾಂತವನ್ನೂ ತಿಳಿದಿರುವನೆಂದೂ, ನಿನ್ನ ನ್ನು ಸನ್ಮಾರ್ಗ ಗಾಮಿಯಾಗುವಂತೆ ಮಾಡಲು ಅವನು ಸರ್ವಪ್ರಯತ್ನ ಮಾಡುತ್ತಿರುವನೆಂದೂ ಬಲ್ಲೆನು. ಆದು ದರಿಂದ ಈ ವಿಷಯವನ್ನು ಅವನು ತಿಳಿದಿದ್ದರೂ ಬಹಿ ರಂಗ ಪಡಿಸಿಯಾಗಲಿ, ಪಡಿಸುವದಾಗಲಿ, ಇಲ್ಲವೆಂದು ನನಗೆ ನಂಬಿಕೆಯುಂಟು.

ಮಧು:—ನಿನಗಾರಿಂದ ಇದು ತಿಳಿದಿತು ?

ಕುಮುದ:—ನಾನು ಅಡಿಗಡಿಗೆ ಅವನಲ್ಲಿ ಪ್ರಸಂಗಿಸುವುದುಂಟು. ಅಲ್ಲದೆ, ನಾವಿಬ್ಬರೂ ಬಾಲ್ಯದಿಂದಲೂ ಒಡನಾಡಿಗಳು. ಅದರಮೇಲೆ ಈಗಿನ ವಿಚಾರವು ಪ್ರಭಾಕರನ ಮುಖದಿಂ ದ ಸಂಗ್ರಹವಾಗಿ ತಿಳಿದುಬಂದಿದೆ.

ಮಧು:—ಹಾಗಿದ್ದರೆ, ಕುಮುದಮಿತ್ರನೆ ! ನನ್ನ ಆಶೆಯನ್ನು ಕಡಿದುಹಾಕಲೆ? ಆದೇವಿಯನ್ನು ಕಣ್ಣಿಂಬಾದರೂ ನೋ ಡಿ, ದಣಿಯ ಬೇಕೆಂದಿರುವ ನನಗೆ ಅದಾದರೂ ಸಾಧ್ಯ ವಾಗ ಬಹುದೆ ? ಹೇಳು.

ಕುಮುದ:—ನಕ್ಕು "**ನಾಗರಿಕವಾದ ನಿವಗೂ ಈ ಕಳವ ಳವೇ? ನಾನಿರುವೆನು· ದುಗುಡವನ್ನುಳಿದೇಳು.**"

ಮಧು:— ನಾಗರಿಕನಂತಾಗುವೆನೆಂದು ಮಾಡಿದುದರಿಂದಲೇ ಹೀಗಾದೆನು. ಇರಲಿ, ಮಿತ್ರ ! ನೀನೇನುಮಾಡಬಲ್ಲೆ? ನನಗಾಕೆಯ ದರ್ಶನವನ್ನಾದರೂ......

ನಳಿನೀ:—"ಸರಿಸರಿ ! ಹೀಗೆಯೇ ಅಳುತ ಕುಳಿತಿರು. ನಾನಿ ನ್ನು ಹೊರಡುವೆನು. ಹೊತ್ತುಮೀರುತ್ತಿದೆ." ಎಂದು

ಹೇಳಿ, ಕುಮುದಮಿತ್ರನು ತಡೆಯುತ್ತಿದ್ದರೂ, ನಿಲ್ಲದೆ ಹೊರಟುಹೋದನು.

ಕುಮುದ:—ಹೋಗಲಿ, ಮಧುಮಿತ್ರ! ನಳಿನೀಕಾಂತನ ದುರಾಚಾರಕ್ಕಾಗಿ ನಾನು ತುಂಬಾ ವ್ಯಥೆಪಡುತ್ತೇನೆ. ಇನ್ನು ಏಳು, ಈ ರಾತ್ರಿ ನೀನಿಲ್ಲಿ ಒಂಟಿಯಾಗಿ ಮಲಗಬೇಡ; ನಮ್ಮ ಮನೆಗೆಬಾ. ನನ್ನ ಕಿರುಮನೆಯಲ್ಲಿಯೇ ಮಲಗುವೆ. ನೀನೇನೂ ಯೋಚಿಸಬೇಕಾಗಿಲ್ಲ. ಪೂರ್ಣಕಲೆಯೊಬ್ಬಳೇ ಹೆಂಗಸಲ್ಲ. ಅವಳೊಬ್ಬಳೇ ರೂಪವತಿಯಾದವಳಲ್ಲ. ಇನ್ನೂ ಅವಳಿಗೆ ಸಮಾನರೂ ಅಧಿಕರೂ ಇದ್ದಾರೆ. ಅವಳೊಂದು ವೇಳೆ ನಿನ್ನನ್ನು ಒಪ್ಪದಿದ್ದರೂ, ನಿನಗೆ ಅನುಕೂಲಳಾದಷ್ಟು ವಧುವನ್ನೇ ಆರಿಸಿಕೊಡುವ ಭಾರವು ನನ್ನದಾಗಿರಲಿ ಹಾಗೂ ಒಂದು ವೇಳೆ, ನಿನಗೆ ಅವಳನ್ನು ನೋಡಿ ಸಂಭಾಷಿಸಲೇ ಬೇಕೆಂಬ ಕೋರಿಕೆಯಿದ್ದರೆ, ಅದೂ ಆಗಲಿ.

ಮಧು:—ಆತುರದಿಂದ ‘ಹೇಗೆ? ಯಾವಾಗ?’

ಕುಮುದ:—ನಾಳೆಯೇ ನಮ್ಮ ಮನೆಯಲ್ಲಿ ನಮ್ಮ ತಂದೆಯ ವರ್ಧಂತ್ಯುತ್ಸವವು ನಡೆಯಬೇಕಾಗಿರುವುದು. ಆ ಸಂದರ್ಭದಲ್ಲಿ, ಎಲ್ಲರಿಗೂ ಆಹ್ವಾನಗಳು ಹೋಗುವವು. ಆಗಲೇ ಪೂರ್ಣಕಲೆ, ಶಾರದೆ, ನನ್ನ ತಂಗಿ ಕುಮುದೆಯರ ಗಾನವು ನಡೆಯುವಂತೆ ಏರ್ಪಡಿಸುವುದು. ಆಸಂದರ್ಭದಲ್ಲಿ ನಿನಗೆ ಅವಳ ಸಂದರ್ಶನವು ನಿರಾಯಾಸವಾಗಿ ದೊರೆಯುವಂತೆ ಮಾಡುವೆನು. ಈಗ ಏಳು, ಎಂದು ಹೇಳಿ ನವಭಾವೋದಯದಿಂದ ಮುಗ್ಧನಂತಾಗಿದ್ದ ಮಧು

ಮಿತ್ರನನ್ನು ಜತೆಗೊಂಡು ಕುಮುದಮಿತ್ರನು ಹೊರಟು ಹೋದನು.

ಶ್ರೀ.

ಅಷ್ಟಮ ಪರಿಚ್ಛೇದ.

ಕುಮುದೆಯ ತಂದೆಯೊದ ತಾರಾನಾಥನ ಜನ್ಮೋತ್ಸವ ಸಮಾರಂಭ ವಿದ್ಯಾರ್ಥಿಗಳೆಲ್ಲರಿಗೂ ತಾರಾನಾಥನ ಆಮಂತ್ರಣ ; ಕುಮುದಮಿತ್ರನ ಸಂಧಾನ-ಕುಮುದೆಯ ಸಡಗರ ; ಮತ್ತು ಪೂರ್ಣಕಲೆಗೆ ಬಲಾತ್ಕಾರ ಶಾರದೆಯ ಆಗಮನ, ಕುಮುದಮಿತ್ರ-ಮಧುಮಿತ್ರರ ಸ್ವಾಗತಾಭಿನಂದನ, ಪೂರ್ಣಕಲೆಯ ಗಮನೋದ್ಯೋಗ, ಮಧುಮಿತ್ರನ ನಿರ್ಬಂಧ ಮತ್ತು ಪ್ರೇಮಸಂಭಾಷಣೆ;-ಪೂರ್ಣಕಲೆಯ ತಿರಸ್ಕಾರ, ಕುಮುದ ಮಿತ್ರನ ಮೂರ್ಛಾಸ್ಥಿಕೆ, ಪೂರ್ಣಕಲೆಯ ಘರ್ಜನೆ, ತಾರಾಕಾಂತನ ವಿನೋದ, ಪೂರ್ಣಕಲೆಯ ಪಲಾಯನ, ಪ್ರಭಾಕರ ಅಕ್ಷಯಕುಮಾರರ ಆಗಮನ ; ಅಭಿನಂದನ, ಕಲಾಧವನಮೇಲೆ ಕುಮುದ ಮಿತ್ರನು ಮಾಡುವ ಆಕ್ಷೇಪ ಮತ್ತು ವಿದ್ಯಾರ್ಥಿಗಳಿಗೆ ಮಗಳ ಮೂಲಕ ಉಪಚಾರ ಪ್ರಯತ್ನ, ಅಕ್ಷಯಕುಮಾರನ ವಿವಿಧವಾರ್ತೆಗಳು, ಅಕ್ಷಯಕುಮಾರ ಪ್ರಭಾಕರರನಮ್ರಸೂಚನೆ- ಇತ್ಯಾದಿ ಇತ್ಯಾದಿ.

"ಕುಮುದೆ ! ನನಗಿನ್ನು ತಡೆಯಲಾಗುವುದಿಲ್ಲ. ನಮ್ಮ ಮಾವನಿಗೆ ತಿಳಿಸದೆಯೇ ನಾನಿಲ್ಲಿಗೆ ಬಂದಿರುವೆನು............"

"ಓಹೊ ! ಮಹಾಭಯವಲ್ಲವೆ ? ನಿನ್ನ ಆ ಮಾವನನ್ನು ನಾನರಿಯೆನೋ ? ಆತನಿಗೆ ಹೇಳದೇ ಬಂದುದರಲ್ಲಿ ನಷ್ಟವಾದುದೇನೋ? "

" ನಷ್ಟವಾವುದೂ ಇಲ್ಲದಿದ್ದರೂ ಅಜ್ಜಿಯ ನಿಷ್ಠೂರ, ಮಾವನ ಆಕ್ಷೇಪ, ಇವುಗಳಿಗೆ ಅವಕಾಶವುಂಟಾಗುವುದು. "

"ಅಜ್ಜಿಯ ನಿಷ್ಠೂರ ! ಅದೇಕೆ ? ಈ ಮನೆಗೆ ಬರಬೇಕಾದರೂ ಅವರನ್ನು ಕೇಳಿ ಬರಬೇಕೋ ? "

" ಬೇಡವೆ-ಕುಮುದೆ ? ಮನೆಯಲ್ಲಿ ನಾನಿಲ್ಲದಿದ್ದರೆ ಅವರ ಮನಸ್ಸು ಹೇಗಾಗಬಹುದು-ಯೋಚಿಸು. ಹೇಳದೆ-ಕೇಳದೆ ಮನೆಯ ಹೊಸಲನ್ನು ದಾಟಿ ಹೊರಗೆ ಹೋಗುವದೆಂದರೇನೆಂದು-ಕೂಗಲಾರರೇ ? "

" ನಮ್ಮಮ್ಮ-ಬಿಡು ಬಿಡು ! ಎಷ್ಟು ಬಡಿವಾರವನ್ನು ಕಲ್ತಿರುತ್ತೀಯೆ! ಇಂತಹ ಕೆಲಸಕ್ಕೆ ಬಾರದ ಆಕ್ಷೇಪಗಳನ್ನು ನಾವೆಂದೂ ಕೇಳಿದವರಲ್ಲ. ಇರಲಿ, ನಾಳೆಯಿಂದ ನಾನೂ ನಿಮ್ಮ ಮನೆಗೆ ಬರುವುದನ್ನು ನಿಲ್ಲಿಸಿದರಾಯಿತು ! ಆದರೆ, ಕಲೆ ? ಇದೊಂದು ದಿನದ ಮಟ್ಟಿಗಾದರೂ ನಮ್ಮ ಮನೆಯವಳಾಗಿರು. ನೋಡು ಮನೆಯಲ್ಲಿ ನಮ್ಮ ಅಪ್ಪಯ್ಯನಿಗೆ ಇಂದು ಹುಟ್ಟಿದ ಹಬ್ಬವು! ಇಂದಿಗೆ ಅವರಿಗೆ ೪೫ ನೆಯ ವರ್ಷವು ತುಂಬಿ, ೪೬ ನೆಯ ವರ್ಷಕ್ಕೆ ಮೊದಲಾಗುತ್ತದೆ. ಆದುದರಿಂದ ಜನ್ಮ ದಿನದ ಉತ್ಸವವನ್ನು ಸಡಗರದಿಂದ ನಡೆಯಿಸಬೇಕೆಂದು ನಮ್ಮ ತಂದೆಯು ಎಷ್ಟೋ ಸನ್ನಾಹಮಾಡಿರುತ್ತಾರೆ. ಈದಿನ, ನಮ್ಮ ತಂದೆಯ ಶಿಷ್ಯ ಮಂಡಲಿಯವರೆಲ್ಲರಿಗೂ ದೊಡ್ಡ ಔತಣವು. ಅವರೆಲ್ಲರೂ ಇನ್ನು ಸ್ವಲ್ಪಹೊತ್ತಿನಲ್ಲಿ ಬರುತ್ತಾರೆ. ಅವರು ಬರುವ ಸೊಬಗನ್ನಾದರೂ ನೀನು ನೋಡಬೇಕೋ-ಬೇಡವೈ ? ಪೂರ್ಣಕಲೆ ! ಸ್ವಲ್ಪದಯೆಯಿಟ್ಟು ನನಗಾಗಿ ನಿಲ್ಲು!-ಆ ವೇಳೆಯಲ್ಲಿ ಅವರನ್ನು ಆದರಿಸಿ ಕರೆತಂದು ತಂದೆಯಮುಂದೆ ಬಿಡುವದಕ್ಕೂ, ಎಲ್ಲರಿಗೂ ಉಪಹಾರ-ಪಾನೀಯಗಳನ್ನು ಒಪ್ಪಿಸಿ, ಫಲಪುಷ್ಪ, ಗಂಧ-ತಾಂಬೂಲಗಳನ್ನು ಕೊಡುವದಕ್ಕೂ, ಆ ಬಳಿಕ ಅವರ ಮನಸ್ಸಿಗೆ ಉಲ್ಲಾಸವಾಗುವಂತೆ ಸೊಗಸಾದ ಹೊಸಮಟ್ಟುಗಳ ಸಂಗೀತ

ಗಳನ್ನು ವಾದ್ಯಗಳೊಡನೆ ಹಾಡಿ, ಸಂತೋಷವನ್ನು ಹೆಚ್ಚಿಸುವುದಕ್ಕೂ ನನಗೆ ನಮ್ಮ ತಂದೆಯ ಅಪ್ಪಣೆಯಾಗಿದೆ. ಅಷ್ಟೆಲ್ಲವನ್ನೂ ನಾನೊಬ್ಬಳೇ ನಿಂತು ನೆರವೇರಿಸಲಾರೆನೆಂಬ ಶಂಕೆಯಿಂದ, ನಿನ್ನನ್ನೂ, ಶಾರದೆಯನ್ನೂ ಸಹಾಯಕ್ಕೆಂದು ಕರೆದು ತಂದೆನು. ''

ಮೇಲಿನ ಉತ್ತರ ಪ್ರತ್ಯುತ್ತರಗಳು ಭಾಸ್ಕರ ಭಟ್ಟಾಚಾರ್ಯರ ಮನೆಗೆ ಇದಿರಾಗಿದ್ದ ಉಪ್ಪರಿಗೆಯ ಮನೆಯ ಒಳತೊಟ್ಟಿಯ ಕಿರುಮನೆಯಲ್ಲಿದ್ದ ಪೂರ್ಣಕಲಾ ಕುಮುದೆಯರಿಗೆ ನಡೆಯುತ್ತಿದ್ದುವು. ಇಬ್ಬರೂ ನಿಂತಿದ್ದರು. ಬಾಗಿಲನ್ನು ಹಾಕಿ ಅದಕ್ಕೆ ಅಡ್ಡಲಾಗಿ ತಾನೇ ನಿಂತಿದ್ದ ಕುಮುದೆಯು,ಗಾಬರಿಗೊಂಡು ಹೊರಟುಹೋಗಲು ಸಮ್ಮತಿಯನ್ನು ಕೇಳುತ್ತಿದ್ದ ಪೂರ್ಣಕಲೆಯ ಕಯ್ಗಳನ್ನು ಬಲವಾಗಿ ಹಿಡಿದಿದ್ದಳು.

ಪೂರ್ಣಕಲೆಗೆ–ಪಾಪ ! ಭಯವು ಹೆಚ್ಚಿತು. ಹೊರಟುಹೋಗಬೇಕೆಂಬ ಆತುರವು ;-ಆದರೆ ಹೋಗುವಳೆಲ್ಲಿಗೆ ? ಹೇಗೆ ? ಪೂರ್ಣಕಲೆಯ ವಯಸ್ಸು ೧೩ ಮಾತ್ರ. ಕುಮುದೆಗೆ ೧೫ ನೆಯ ವರ್ಷವು ನಡೆಯುತ್ತಿದೆ. ಅಲ್ಲದೆ, ಆಕಾರ, ಶರೀರ ಸೌಷ್ಠವ, ಬಲಾಢ್ಯತೆ, ವಾಗ್ವೈಖರಿ, ಅಂಗಭಂಗಿ, ಸಾಹಸ, ಧೈರ್ಯಗಳೇ ಮೊದಲಾದ ವಿಚಾರಗಳೆಲ್ಲದರಲ್ಲಿಯೂ ಕುಮುದೆಯು, ಪೂರ್ಣಕಲೆಗೆ ದ್ವಿಗುಣಾಧಿಕಳಾಗಿದ್ದಂತೆ ತೋರುತ್ತಿದ್ದಳು. ಹೀಗಿರುವ ಯೌವನೋನ್ಮುಖಿಯಾದ ಕುಮುದೆಯ ದೃಢಮುಷ್ಟಿಯನ್ನು,—ಭೀರುಸ್ವಭಾವಿಯೂ, ಲಜ್ಜಾವತಿಯೂ. ಬಾಲೆಯೂ ಆಗಿರುವ ಪೂರ್ಣಕಲೆಯು ಬಿಡಿಸಿಕೊಳ್ಳಲಾದೀತೇ ? ಎಷ್ಟೋ ಹೇಳಿದಳು, ಫಲವಿಲ್ಲವಾಯಿತು. ಮೇಲೆ ಹೇಳಿದ ಕುಮುದೆಯ ಮಾತಿನಿಂದ ಪೂರ್ಣಕಲೆಯ ಭಯವು ಮತ್ತೂ ಹೆಚ್ಚಿತು; ಕಂಬನಿದುಂಬಿ ಕೇಳಿಕೊಂಡಳು.

"ಕುಮುದಾ ! ನಿನ್ನ ಕಾಲಿಗೆ ಬೀಳುವೆನು. ಸ್ವಲ್ಪಹೊತ್ತು

ಮಾತ್ರ ಅವಕಾಶಕೊಟ್ಟು ನನ್ನನ್ನು ಬೀಳ್ಕೊಡು! ನಾನು ಅಜ್ಜಿಗೆ ಹೇಳಿ ಬೇಗ ಬರುತ್ತೇನೆ. ''

ಕುಮುದೆ:—ತಲೆಯನ್ನು ಕೊಂಕಿಸಿ ' ಬಲ್ಲೆ-ಬಲ್ಲೆ ,-ನಾನಿದೆಲ್ಲವನೂ ಚನ್ನಾಗಿ ಬಲ್ಲೇ! ಶಾರದೆಯು ತಾಯಿಯ ಬಳಿಯಲ್ಲಿ ಒಂದುಮಾತನ್ನು ಹೇಳಿ, ನಾಲ್ಕು ನಿಮಿಷದಲ್ಲಿ ಬರುತ್ತೇನೆಂದು ಹೋದಳು. ಇನ್ನೂ ಬಂದಿಲ್ಲ. ನಿನ್ನನ್ನೂ ಬಿಟ್ಟು ಬಿಡಬೇಕೋ ? ಆದಾಗದು! ನೀವಿಬ್ಬರೂ ಒಂದೇ ಬಗೆಯವರು.

ಕುಮುದೆಯ ಮಾತಿಗೆ ಪ್ರತಿಯಾಗಿ ಹೊರಗಡೆಯಿಂದ ಹೀಗೆ ಉತ್ತರವು ಹೊರಟಿತು.—

'' ಚಿಂತೆಯಿಲ್ಲ, ಕುಮುದಾದೇವಿಯರೇ ! ನಾವಿಬ್ಬರೂ ಒಂದೇ ಬಗೆಯವರೇ ಅಹುದು! ಇಬ್ಬರನ್ನೂ ಬಿಟ್ಟು ಕೊಡಬಾರದೇಕೆ? ನಿಮ್ಮ ಬಗೆಗೆ ಸರಿಬಾರದವರಲ್ಲಿ ನೀವೇಕೆ ಇಷ್ಟು ಬಲಾತ್ಕರಿಸುವುದು. '',

ಕುಮುದೆಯು ಪೂರ್ಣಕಲೆಯನ್ನು ಹಿಡಿದದ್ದಂತೆಯೇ ಶಾರದೆಯನ್ನು ಕೂಗಿ ಹೇಳಿದಳು:—

'' ಬಂದೆಯೇನು—ಶಾರದೇ ! ಹೊಂಚಿನಿಂತು ಕೇಳುವ ಬುದ್ಧಿ, ನಿನಗೆಂದಿನಿಂದ ಅಭ್ಯಾಸವೋ ''

ಶಾರದೆ:—ನೀನೆಂದಿನಿಂದ ನಮ್ಮನ್ನು ಕಡೆಗಣಿಸುವದನ್ನು ಕಲಿತೆಯೋ ಅಂದಿನಿಂದಲೇ ನಮಗೂ ಇದರ ಅಭ್ಯಾಸ.

ಪೂರ್ಣಕಲಾ: —ಶಾರದಾ! ಹೊರಗೆ ನಿಂತೇನು ಮಾಡುವೆ ? ಒಳಗೆಬಾ

ಕುಮುದೆ:—ಇನ್ನೇನಮ್ಮ—ಶಾರದೆ ? ಕಲೆಯೇ ಕೂಗುತ್ತಿರುವಳು ಏಕೆ ಹೊರಗೆ ನಿಂತಿರಬೇಕು ? ನನಗಾಗಿ ಬಾರದಿದ್ದರೂ ಕಲೆಯಮೇಲಿನ ಮರುಕದಿಂದಾದರೂ ಒಳಗೆ ಬರಬಹುದಲ್ಲವೆ ?

ಶಾರದೆ:—ನಾನು ಹೇಗೆ ಬರಲಿ ? ಇತ್ತ ಕಡೆಯ ಬಾಗಲಿಗೆ ಬೀಗವನ್ನು ಹಾಕಿರುತ್ತಾರೆ.

ಕುಮುದೆ:—ಬೀಗಹಾಕಿದ್ದಾರೆಯೇ ? ಹಾಗಿದ್ದರೂ ನಿನಗೆ ಅಡ್ಡಿಯೇನಿದೆ ? ನಮ್ಮ ಅಣ್ಣಯ್ಯನ ಕಿರುಮನೆಯ ಕಡೆಯ ಬಾಗಲಿನಿಂದ ಬರಲಾಗದೇನು?

ಪೂರ್ಣ:—ಕುಮುದಾ ! ದಯೆಯಿಟ್ಟು ನನ್ನನ್ನು ಇತ್ತಕಡೆಯ ಬಾಗಿಲಿನಿಂದಾದರೂ ಹೋಗಗೊಡು, ನಿನ್ನ ಕಾಲಿಗೆ ಬೀಳುತ್ತೇನೆ.

ಕುಮುದೆ:—ನಗುತ್ತ "ಕಾಲಿಗೆ ಬಿದ್ದರೆ ಹರಕೆಯೊಪ್ಪಿಸುತ್ತೇನೆ. ನಿನಗೆ ಬೇಗನೆ ಕಲ್ಯಾಣವಾಗಲಿ!

ಪೂರ್ಣ:—ಕಲ್ಯಾಣವಮ್ಮ ಬೇಡವೆಂದು ಹೇಳುವರಾರು ? ಎಂದಾದರೂ ಆಗಿಯೇ ಆಗುತ್ತದೆ, ಈಗಿನ ಮಾತನ್ನು ನಡೆಯಿಸಿಕೊಡು ಅಷ್ಟೇಸಾಕು.

ಕುಮುದೆ:—ಪೂರ್ಣಕಲೆಯ ಕೈಬಿಟ್ಟು " ಹಾಗಿದ್ದರೆ ನಡೆ, ನಿನ್ನನ್ನು ನಾನೇನೂ ಕಟ್ಟಿ ಬಿಗಿದು ನಿಲ್ಲಿಸಿಕೊಂಡಿಲ್ಲ. ಹೋಗು! "

ಪೂರ್ಣಕಲೆಯು ನಗುಮೊಗದಿಂದ "ಕೋಪಿಸಿಕೊಂಡಾದರೂ ಬಿಟ್ಟೆಯಲ್ಲ, ಅಷ್ಟೇಸಾಕು. " ಎಂದು ಹೇಳಿ ಇದಿರಾಗಿದ್ದ ಬಾಗಿಲ ಬಳಿಗೆ ಒಂದು ಬಾಗಿಲನ್ನು ತನ್ನೆರಡು ಕೈಗಳಿಂದಲೂ ಬಲವಾಗಿ ಹಿಡಿದೆಳೆದಳು. ಬಾಗಿಲನ್ನು ತೆರೆಯಲಾಗಲಿಲ್ಲ. ಕಲೆಯ ಹೃದಯವು ನಡುಗಿತು. ಕುಮುದೆಯನ್ನು ನೋಡಿ, "ಕುಮುದಾ! ಬಾಗಿಲನ್ನು ತೆಗೆಯಲಾಗುವುದಿಲ್ಲವೇಕೆ ? "ಎಂದು ಕೇಳಿದಳು.

ಕುಮುದೆ:—ಹೊರಗಡೆ ಶಾರದೆಯು ಚಿಲುಕವನ್ನು ಹಾಕಿರಬಹುದು ಕೂಗಿ ಹೇಳು.

ಪೂರ್ಣಕಲೆ:—ಗಟ್ಟಿಯಾಗಿ ಕೂಗಿದಳು- 'ಶಾರದಾ! ನೀನೂ ಹಾಸ್ಯಕ್ಕೆ

ಮೊದಲು ಮಾಡಿದೆಯಾ? ಬಾಗಿಲನ್ನು ತೆರೆಯುಲೊಲ್ಲೆಯಾ?''

ಹೊರಗಿನಿಂದ ''ತೆರೆಯುವೆನು'' ಎಂದು ಸಣ್ಣಾಸ್ವರದಲ್ಲಿ ಉತ್ತರವು ಹೊರಟಿತು. ಪೂರ್ಣಕಲೆಯು ಉತ್ಸುಕತೆಯಿಂದ ಬಾಗಿಲ ಕಡೆಯನ್ನೇ ನೋಡುತ್ತ ನಿಂತಳು. ಹೊರಗಿನಿಂದ ಬಾಗಿಲ ಚಿಲುಕವು ತೆಗೆಯಲ್ಪಟ್ಟಿತು. ಒಡನೆಯೇ ಬಾಗಿಲನ್ನು ತೆರೆದು ಕುಮುದಮಿತ್ರನು ಪರಿಹಾಸದಿಂದ ಬಾಗಿಲಿಗಡ್ಡವಾಗಿ ನಿಂತು ''ಏಕೆ, ತಂಗೀ! ಕಲೇ! ಹೀಗೇಕೆ ನೋಡುತ್ತ ನಿಂತಿರುವೆ? ಭಯಪಡುವಿಯೇಕೆ?''

ಪೂರ್ಣ—ಕಂಪಿತಸ್ವರದಿಂದ—'ಅಣ್ಣಾ! ಅಷ್ಟು ಹೊತ್ತಿನಿಂದ ಕುಮುನೆಯು ತಡೆದಿದ್ದಾಳೆ. ಮನೆಯಲ್ಲಿ ಯಾರಿಗೂ ಹೇಳದೆ ಬಂದಿದ್ದೇನೆ...'

ಕುಮುದಮಿತ್ರ—ತಲೆದೂಗಿ—'ಪೂರ್ಣಕಲಾ! ನೀನೇನೂ ಭಯಪಡಬೇಕಾಗಿಲ್ಲ. ನಿಮ್ಮ ಮಾವನು ಇಷ್ಟರಲ್ಲಿಯೇ ಇಲ್ಲಿಗೆ ಬರುತ್ತಾನೆ. ಧೈರ್ಯವಾಗಿರು, ನಾನಿರುವೆನು. ಓಹೋ! ಇದೇನಿದು—ಹೀಗೆ ನಡುಗುತ್ತಿರುವೆ? ಮುಖವೆಲ್ಲಾ ಹೀಗೇಕೆ ಕಪ್ಪಗಾಗಿ ಹೋಯಿತು? ಸರಿಸರಿ! ನನ್ನನ್ನು ಹುಲಿಯೆಂದೇನಾದರೂ ತಿಳಿದೆಯೋ?

ಪೂರ್ಣಕಲೆಯ ಕಣ್ಣಿನಲ್ಲಿ ನೀರು ತುಂಬಿತು; ಭಯದಿಂದ ಶರೀರವೆಲ್ಲಾ ನಡುಗತೊಡಗಿತು. ಮರುನುಡಿಯಿಲ್ಲದೆ ಬಾಗಿಲನ್ನೇ ಒರಗಿ ನಿಂತಳು. ಕುಮುದಮಿತ್ರನು ನಸುನಗುತ್ತ ಹಿಂದಿರುಗಿ ಕೈಸನ್ನೆ ಮಾಡಿದನು. ಉತ್ತರಕ್ಷಣದಲ್ಲಿಯೇ ಮಧುಮಿತ್ರನು ಮಂದಹಾಸದಿಂದ ಬಂದು ಕುಮುದಮಿತ್ರನ ಬಳಿಯಲ್ಲಿ ನಿಂತನು. ಮಧುಮಿತ್ರನ ಠೀವಿಯನ್ನು ನೋಡಿದರೆ ಯಾರಿಗೇ ಆಗಲಿ, ಕೌತುಕವಾಗುತ್ತಿದ್ದಿತು. ಪೂರ್ಣಕಲೆಯು, ಪಾಪ! ಆತನು ಬಂದು ತನ್ನ ಮುಂದೆ ನಿಂತಬಗೆಯನ್ನು ನೋಡಿದಳು; ಭಯವು ಮಿತಿಮೀ

ರಿದುದರಿಂದ ತಲೆಬಾಗಿ ಚಳಿಜ್ವರದಿಂದ ನಡುಗುವವರಂತೆ ನಡುಗುತ್ತ ನಿಂತಳು.

ಕುಮುದ–'ಮಧುಮಿತ್ರ! ಇನ್ನು ನನ್ನ ವಾಗ್ದಾನವು ಸಫಲವಾಯ್ತಷ್ಟೆ; ಮುಂದಿನ ಕೆಲಸವು ನಿನ್ನದು. ಪ್ರಯತ್ನಕ್ಕೆ ಮೊದಲಾಗಬಹುದು.'

ಮಧು–ಉತ್ಸಾಹದಿಂದ 'ಗುರುಪುತ್ರಿ! ನಾನಾರೆಂಬುದು ಗೊತ್ತಾಯಿತೆ?'

(ಪೂರ್ಣಕಲೆಯು ಉತ್ತರವನ್ನು ಕೊಡಲಿಲ್ಲ.)

ಮಧುಮಿತ್ರ—ಏಕೆ? ತಿಳಿಯಲಿಲ್ಲವೇ? ಕಲಾಭ್ಯರ್ಥಿಯ ಹೆಸರಾದರೂ ನೆನಪಿನಲ್ಲಿದೆಯೋ ?

ಪೂರ್ಣಕಲೆಯು ಮೊದಲಿನಂತೆಯೇ ತಲೆಯನ್ನು ತಗ್ಗಿಸಿ ಕುಗ್ಗಿದ ಸ್ವರದಿಂದ ''ನೆನಪಿಲ್ಲದಿಲ್ಲ''

ಮಧು —ಹಾಗಾದರೆ ಕಲಾಭ್ಯರ್ಥಿಯೇ ಮುಂದಿರುವಾತನೆಂದು ತಿಳಿಯಬಹುದು.

ಹಿಂದಿನಿಂದ ಶಾರದೆಯು ಬಂದು ಮಧುಮಿತ್ರನ ಹಿಂದೆನಿಂತು ಕುಮುದೆಯನ್ನು ನೋಡಿ ''ಕುಮುದೆ! ಏಕೆ ನಿಂತಿರುವೆ? ಕಲಾಭ್ಯರ್ಥಿಗಳಿಗೆ ಸನ್ಮಾನಮಾಡಬಾರದೇನು?

ಕುಮುದೆ—ನಾನು ಮಾಡಬೇಕಾದ ಕಾಲದಲ್ಲಿ ಮಾಡುತ್ತೇನೆ. ಈಗಿನ ಸನ್ಮಾನವು ಪೂರ್ಣಕಲೆಯದಾಗಿದೆ.

ಕುಮುದಮಿತ್ರ–-ಅಹುದು, ಶಾರದಾತಂಗೀ! ಈಗಿನ ಸನ್ಮಾನವು ಪೂರ್ಣಕಲೆಯದು. ನೀನೇಕೆ ಅಲ್ಲಿ ನಿಂತಿದ್ದೀಯೆ, ಇತ್ತಬಾ.

ಶಾರದೆ––ನೀನೂ ಸರಿಯಣ್ಣಾ! ದಾರಿಗಡ್ಡಲಾಗಿ ನಿಂತು ಬಾರೆಂದು ಕರೆಯುತ್ತಿರುವೆ!

ಮಧುಮಿತ್ರನು ಸ್ವಲ್ಪ ಸರಿದು ನಿಂತು —"ಬರಬಹುದು, ದಾರಿಯನ್ನು ಬಿಟ್ಟುಕೊಟ್ಟಿದೆ."

ಶಾರದೆಯು ಪೂರ್ಣಕಲೆಯ ಮುಖವನ್ನು ನೋಡಿ ಸನ್ನೆಮಾಡಿದಳು. ಪೂರ್ಣಕಲೆಯು ಮೆಲ್ಲನೆ ತಪ್ಪಿಸಿಕೊಳ್ಳಲು ಮುಂದಕ್ಕಡಿಯಿಟ್ಟಳು. ಮಧುಮಿತ್ರನು ನೋಡಿದನು; ತಲೆದೂಗಿ ಕೈಕಟ್ಟಿ "ಓಹೋ! ದೇವಿಯರು ತುಂಬಾ ಸಾಹಸವತಿಯರೇ ಅಹುದು, ಬಲ್ಲೆ! ಆದರೂ ಸಾಹಸವಿಲ್ಲಿ ಫಲಿಸದು." ಪೂರ್ಣಕಲೆಯು ಹಿಮ್ಮೆಟ್ಟಿ, ತಲೆತಗ್ಗಿಸಿ ನಿಂತುಬಿಟ್ಟಳು.

ಮಧುಮಿತ್ರ—ಈಗಲಾದರೂ ಹೇಳಲು ತಡೆಯೇನು? ಕಲಾಭ್ಯರ್ಥಿಯ ಪತ್ರವು ಅರ್ಥವಾಗಲಿಲ್ಲವೇನು?

(ಈಗಲೂ ಪೂರ್ಣಕಲೆಯಿಂದ ಉತ್ತರವಿಲ್ಲ.)

ಶಾರದೆ—ಅಕ್ಕ! ಹೇಳುವದಿದ್ದರೆ ಧೈರ್ಯವಾಗಿ ಹೇಳಿ, ಹೊರಟುಬರಬಾರದೇ?

ಮಧು—ಅದಿಾಗ ನೋಟವಾಯಿತು. ಅರ್ಥವಾಯಿತೋ-ಇಲ್ಲವೋ?

ಪೂರ್ಣ—ಅರ್ಥವಾಗುವಂತಿದ್ದರಲ್ಲವೇ?

ಮಧು—ಅರ್ಥವಿವರಣೆ ಮಾಡಿ ಹೇಳಲೇ ?

ಪೂರ್ಣ—ಅಗತ್ಯವೇನೂ ಕಾಣಿಸಲಿಲ್ಲ. ಅದಕ್ಕುತ್ತರವನ್ನು ಆಗಲೇ ಕೊಟ್ಟಾಗಿದೆ.

ಮಧು—ಉತ್ತರವು ಯಾರ ಅಭಿಪ್ರಾಯದ ಮೇಲಿಂದ ಹೊರಟಿತು?

ಪೂರ್ಣ—ಯಾರ ಅಭಿಪ್ರಾಯವು ಬೇಕಾಗಿ ಸೂಚನೆಯಾಗಿದ್ದಿತೋ, ಅವರ ಅಭಿಪ್ರಾಯದ ಮೇಲಿಂದಲೇ ?

ಮಧು—ಸರಿಯೆ, ಹೇಳಿಕೊಟ್ಟವರು ?

ಪೂರ್ಣ—ನನಗಾರೂ ಹೇಳಿಕೊಡಲಿಲ್ಲ.

ಮಧು—ಹೇಳಿಕೊಡದಿದ್ದರೆ ಹೋಗಲಿ, ಬರೆದುಕೊಟ್ಟರಲ್ಲವೆ?

ಪೂರ್ಣ—ನನಗೊಂದೂ ತಿಳಿಯದು, ಆ ಬರೆಹವೇನೋ ನನ್ನದೆಂದು ಮಾತ್ರ ಹೇಳಬಲ್ಲೆ.

ಮಧು—ಬರೆಹವ ನಿನ್ನದೆಂದು ಬಲ್ಲೆ. ಆದರೆ ನೀನೇ ಅದನ್ನು ನಿನ್ನ ಸ್ವಬುದ್ಧಿಯಿಂದ ಬರೆದೆಯಾ? ಅದೇ ನಿನ್ನ ಅಭಿಪ್ರಾಯವೇ?

ಪೂರ್ಣ—ಹುಬ್ಬುಗಂಟಿನಿಂದ ‹ಅಹುದು, ಅದೇ ನನ್ನ ಅಭಿಪ್ರಾಯ! ಹೀಗೆಲ್ಲಾ ಸಿಕ್ಕಿದಂತೆ ಮಾತನಾಡುವುದು ಸರಿಯಾಗಿ ಕಾಣುತ್ತಿಲ್ಲ. ನೆರೆಮನೆಯ ಹೆಣ್ಣುಮಕ್ಕಳನ್ನು ತಡೆಗಟ್ಟುವದೆಂತೂ ಸರಿಯಾಗಿಲ್ಲ.

ಮಧು— ನೆರೆಮನೆಯ ಹೆಣ್ಣೊಂದು ಮಾತನಾಡುವದಿಲ್ಲ. ನೆರೆಯಾಗಿಲ್ಲತಕ್ಕ ಹೆಣ್ಣಿಂದೇ ಕೇಳುತ್ತಿರುವೆನು.

ಪೂರ್ಣ—ಕೋಪದಿಂದ ಕುಮುದೆಯ ಕಡೆಗೆ ತಿರುಗಿ ‹ಕುಮುದಕ್ಕ! ಇದೆಲ್ಲವೂ ನಿನ್ನ ತಂತ್ರವಲ್ಲವೇ? ಇದಕ್ಕಲ್ಲವೇ ನೀನು ನನ್ನನ್ನು ತಡೆದು ನಿಲ್ಲಿಸಿದ್ದು?

ಕುಮುದೆ—ಹಾಗೆಂದೇಕೆಹೇಳು; ನಷ್ಟವೇನು?

ಪೂರ್ಣ—ನಷ್ಟವೇನೂ ನಿನಗೆ ಕಾಣುತ್ತಿಲ್ಲ. ಕಂಡಕಂಡವರೆಲ್ಲಾ ತಡೆಗಟ್ಟುವದೆಂದರೆ ;—

ಕುಮುದಮಿತ್ರ—ಹೋ! ತಾಳು, ಪೂರ್ಣಕಲಾ! ಇವನೇನೂ ಹೊರಗಿನವನಲ್ಲ. ನನ್ನ ಮಿತ್ರನೇ!

ಪೂರ್ಣ—ಅಣ್ಣಾ! ನಿನಗೆ ಮಿತ್ರನಾದರೆ ನೀನು ಬೇಕಾದಂತೆ ಮಾತನಾಡು, ನನ್ನನ್ನು ತಡೆಯುವದಾಗಲೀ, ನನ್ನಲ್ಲಿ ಸಿಕ್ಕಿದಂತೆ ಮಾತನಾಡುವುದಾಗಲೀ ಸರಿಯಲ್ಲ.

ಪೂರ್ಣಕಲೆಯ ಮಾತಿಗೆ ಉತ್ತರವಾಗಿ ಕುಮುದಮಿತ್ರನ ಕಿರುಮನೆ

ಯಿಂದ ಉತ್ತರವು ಹೊರಟಿತು ‹‹ಭಲೆ! ಭಲೆ!! ಭಲೆ!!! ಇದೀಗ ದುರ್ಗಾವೇಶ ಪ್ರದರ್ಶನ! ಇದೇ ಸಾಕ್ಷಾತ್ ಭೈರವೀ ಪ್ರತ್ಯಕ್ಷದರ್ಶನ !!!''

ಮಧುಮಿತ್ರ-ಕುಮುದಮಿತ್ರರು ಗಂಭೀರಮುದ್ರೆಯನ್ನು ತಳೆದು ಕಿರುಮನೆಯ ಕಡೆಯನ್ನು ನೋಡುತ್ತ ಸರಿದು ನಿಂತರು. ಕಿರುಮನೆಯೊಳಗಿನಿಂದ 45 ವರ್ಷ ವಯಸ್ಸಿನ ಸ್ಥಾನುಲಾಂಗನೊಬ್ಬನು ಬಿಳಿ ಬೆಲೆ ಬಾಳುವ ಉಡುಪನ್ನು ಧರಿಸಿ, ಬಗ್ಗಿ ನಡೆಯುತ್ತ ಬಂದು ಶಾರದೆಯು ನಿಂತಿದ್ದಲ್ಲಿ ನಿಂತನು. ಶಾರದೆಯು ‹‹ಓಹೋ ಗುರುಗಳೂ ವಿನೋದದಲ್ಲಿ ತೊಡಗಿ ಮಕ್ಕಳೊಡನಾಟಕ್ಕೆ ಬಂದಿದ್ದಾರೆ!'' ಎಂದು ಪರಿಹಾಸದಿಂದ ಹೇಳಿದಳು. (ಈತನೇ ಕುಮುದೆಯ ತಂದೆಯಾದ ತಾರಾಕಾಂತನೆಂಬುದನ್ನು ನಾವಿಲ್ಲಿ ಹೇಳಬೇಕಾಗಿಲ್ಲವಷ್ಟೆ?)

ತಾರಾ—ಆಗಬಾರದೇನು-ಶಾರದೇ? ಶಿಷ್ಯರ ಮತ್ತು ಮಕ್ಕಳ ಒಡನೆ ಆಟವಾಡುವದು ಅದೊಂದು ಉತ್ಸಾಹವೇ ಅಹುದಲ್ಲವೇ? ಅದರಲ್ಲಿಯೂ ನಿನ್ನಂತಹ ವಾಚಾಳಿಗಳಾದ ಹೆಣ್ಣುಮಕ್ಕಳನ್ನು ವಿನೋದಮಾಡುವದಂತೂ ಎಷ್ಟು ಆಹ್ಲಾದಕರವೆಂದು ಬಲ್ಲೆ?

ಶಾರದೆಯು ಲಜ್ಜೆಯಿಂದ ನಿಲ್ಲದೆ ಓಡಿಹೋದಳು. ಪೂರ್ಣಕಲೆಯು ಮಾತನಾಡದೆ ತಪ್ಪಿಸಿಕೊಂಡು ಹೋಗಲು ಸಮಯ ನಿರೀಕ್ಷಣೆಯಲ್ಲಿದ್ದಳು. ತಾರಾಕಾಂತನು ಮೆಲ್ಲನೆ ಬಂದು ಕುಮುದೆಯ ಬಳಿಯಲ್ಲಿ ನಿಂತು ‹‹ತಾಯಿ! ಪೂರ್ಣಕಲೆಗೆ ಧೈರ್ಯಹೇಳು. ಅವಳು ತುಂಬಾ ಭಯಪಟ್ಟಂತೆ ಕಾಣಿಸುತ್ತಾಳೆ. ನನ್ನನ್ನು ಕಂಡರಂತೂ ಅವಳಿಗೆ ಎಲ್ಲಿಯೂ ಇಲ್ಲದ ಸಂಕೋಚವೇ ಬರುತ್ತದೆ.

ಪೂರ್ಣಕಲೆಯು ಇನ್ನು ಅಲ್ಲಿ ನಿಂತಿರಲಾಗಲಿಲ್ಲ. ತಾರಾಕಾಂತನಿಗಾಗಿ ದಾರಿಯನ್ನು ಬಿಟ್ಟು, ಕುಮುದಮಿತ್ರ-ಮಧುಮಿತ್ರರಿಬ್ಬರೂ ಸರಿ

ದು ನಿಂತಿದ್ದುದರಿಂದ ದಾರಿಯಲ್ಲಿ ಅಡ್ಡಗಟ್ಟುವವರು ಇರಲಿಲ್ಲ. ಇದೇ ಸುಸಮಯವೆಂದು ತಿಳಿದು, ಪೂರ್ಣಕಲೆಯು ಒಂದೇ ಲಂಘನೆಗೆ ಅಲ್ಲಿಂದ ಹಾರಿ, ತಪ್ಪಿಸಿಕೊಂಡು ಹೊರಟುಹೋದಳು. ತಾರಾಕಾಂತನು ನೋಡಿದನು; ವಿಸ್ಮಯಗೊಂಡು " ಅಬ್ಬ ! ಎಷ್ಟು ಚತುರೆಯರಾಗಿದ್ದಾರೆ! ಕುಮುದಾ! ನೋಡಿದೆಯೊ? ನಿನ್ನ ಪ್ರೌಢಿಮೆಯು ಇವರಮುಂದೆ ಏನಾಯಿತು ?"

ಕುಮುದಮಿತ್ರ—"ಅಪ್ಪ! ಅವರ ಈ ಬಗೆಯ ಕೌಶಲ್ಯಕ್ಕೆ ಅಕ್ಷಯಕುಮಾರನೇ ಕಾರಣನು. ಅವನ ಶಿಕ್ಷಣಾಪ್ರಭಾವದಿಂದ ಈ ಹುಡುಗಿಯರಲ್ಲಿ ಹೀಗೆ ಸಮಯೋಚಿತವಾದ ಚಾತುರ್ಯ-ಸಾಹಸಗಳು ಸ್ಫೂರ್ತಿಗೊಳ್ಳುತ್ತಿವೆ.

ಕುಮುದಮಿತ್ರನ ಮಾತಿಗೆ ಹೊರಗಿನಿಂದ ಉತ್ತರವು ದೊರೆದಿತು.

'ಆಗಲಿ, ನಷ್ಟವೇನದರಲ್ಲಿ ? ನೀನೂ ಹಾಗೆಯೇ ಮಾಡಬಹುದಷ್ಟೆ ?"

ತಾರಾ— ಸಂಭ್ರಮದಿಂದ "ಬಾರಯ್ಯಾ? ಅಕ್ಷಯಕುಮಾರ! ಓಹೋ; ಪ್ರಭಾಕರಕುಮಾರ, ಬಾ ಬಾ! ತುಂಬಾ ಸಂತೋಷವಾಯಿತು, ಬೇಗ ಬನ್ನಿರಿ."

ಪ್ರಭಾಕರನ ಕೈಹಿಡಿದುಕೊಂಡು ಅಕ್ಷಯಕುಮಾರನು ಬಂದು, ತಾರಾಕಾಂತನ ಮುಂದೆ ನಿಂತು ನಮ್ರ ಭಾವದಿಂದ ಕೈಮುಗಿದನು.

ಕುಮುದಮಿತ್ರ—ಅಕ್ಷಯಕುಮಾರನ ಕೈಹಿಡಿದು "ಎಲ್ಲಿ? ಕಲಾಧವನು ಬಂದಂತೆ ಕಾಣಲಿಲ್ಲ;"

ಅಕ್ಷಯ— ಅವನು ಬರುವಂತೆ ಕಾಣಲಿಲ್ಲ.

ಮಧು—ಏಕೆ ? ಹಿರಿಯರ ಮಾತನ್ನು ಮೀರಬೇಕೆಂಬುದೇ ಅವನ ಸಂಕಲ್ಪವೋ?

ಅಕ್ಷಯ—ಕೆಲವು ಸಂದರ್ಭಗಳಲ್ಲಿ ಹಿರಿಯರ ಮಾತನ್ನು ಮೀರಿ ನಡೆದರೂ ಅದರಿಂದ ಅಧರ್ಮವೇನೂ ಆಗುವದಿಲ್ಲ. ಹಿರಿಯರ ಗೌರವ, ಕೀರ್ತಿ,ಸಂತೋಷಗಳನ್ನು ಹಾಳುಮಾಡುವಂತಹ ಉಚ್ಛೃಂಖಲವರ್ತನದಲ್ಲಿ ಪ್ರವರ್ತಿಸಿದರೆ ಮಾತ್ರ ಧರ್ಮಹಾನಿಯಾಗುತ್ತದೆ.

ತಾರಾ—ಒಳ್ಳೆಯ ಉತ್ತರನೇ ಅಹುದು, ಆದರೂ ಅಕ್ಷಯಕುಮಾರ ! ನನ್ನ ಸಂತೋಷಕ್ಕೆ ಕೊರತೆಯನ್ನುಂಟುಮಾಡುವುದುಚಿತವೇನು?

ಅಕ್ಷಯ—ಮಹನೀಯರೇ ! ಕಲಾಧವನ ಸ್ವಭಾವ-ಆಚಾರ-ವಿಚಾರಗಳನ್ನು ಚನ್ನಾಗಿ ತಿಳಿದಿರುವ ತಾವು, ಹೀಗೆ ಅಸಮಾಧಾನ ಪಡುವದು ಸರಿಯಾಗಿ ಕಾಣುವದಿಲ್ಲ.

ಕುಮುದಮಿತ್ರ—ಅಹುದಯ್ಯ! ಸರಿಯಾಗಿಲ್ಲವೆಂದು ನೀನು ಹೇಳುವೆ. ಆದರೆ ನೋಡು, ತಮ್ಮ ಶಿಷ್ಯವರ್ಗವೆಲ್ಲಕ್ಕೂ ಈ ದಿನದಲ್ಲಿ ಸಂತೋಷವಾದ ಔತಣವನ್ನೂ, ವಿನೋದಕೂಟವನ್ನೂ ನಡೆಯಿಸಬೇಕೆಂದು ಹಿರಿಯರು ಆಶೆಪಟ್ಟು ಕರೆದರೆ ಬರಲಾರೆನೆಂಬುದೇ ಗೌರವವೋ? ಅದೇ ಆತನ ಶಿಷ್ಯಕರ್ತವ್ಯವೋ?

ಪ್ರಭಾ—ಕುಮುದಮಿತ್ರ! ಕಲಾಧನಕುಮಾರನು ಗುರುಜನರ ಪಾದಸೇವೆಗೆ ಸಿದ್ಧನಾಗಿದ್ದೇನೆಂದೂ ಆದರೆ ಅಲ್ಲಿ ನಡೆಯುವ ವಿನೋದಕೂಟಕ್ಕೆ ಮಾತ್ರ ನಾನು ಸೇರಲು ಹಿಂತೆಗೆಯುತ್ತೇನೆಂದ ತಿಳಿಸಿ ಕ್ಷಮೆಯನ್ನು ಕೇಳಿಕೊಂಡಿರುವನು.

ತಾರಾ—ಇನ್ನು ಆತನ ಇಷ್ಟ. ಆತನು ಎಂದೂ ಹೆಂಗಸಿನ ಸ್ವಭಾವದವನೇ ಸರಿ. ಅಷ್ಟು ಲಜ್ಜಾಪ್ರಕೃತಿಯವನೂ, ಹೇಡಿಯೂ ಆದ ಪುರುಷರನ್ನು ನಾನೆಲ್ಲಿಯೂ ನೋಡಿಲ್ಲ. ಇರಲಿ, ಉಳಿದವ

ರಾದರೂ ಬಂದಿರುವರೋ ?

ಪ್ರಭಾ—ಎಲ್ಲರೂ ಬಂದು ಅಂಗಳದಲ್ಲಿದ್ದರು.

ತಾರಾ—ಕುಮುದಮಿತ್ರನನ್ನು ನೋಡಿ 'ಮಗು! ನೀನು ಹೋಗಿ ಎಲ್ಲರನ್ನೂ ಸರಿಯಾಗಿ ಸನ್ಮಾನಿಸಿಕುಳ್ಳಿರಿಸು. ಕುಮುದೆಯು ತನ್ನ ಉಳಿದ ಸತ್ಕಾರಗಳಿಗೆ ಮೊದಲು ಮಾಡಲಿ. ಈದಿನ ಅವಳ ಗಾನ,ವಾದನ, ನೃತ್ಯ,ಗೀತ-ವಿದ್ಯೆಗಳೂ,ಉತ್ತರ ಪ್ರತ್ಯುತ್ತರಗಳ ವಿನೋದಸಂಭಾಷಣೆಯೂ ನಡೆಯುವವು. ಕುಮುದೆ! ಇನ್ನು ಹೊರಡು ; ನೋಡಿಲ್ಲ, ಅಕ್ಷಯಕುಮಾರ--ಪ್ರಭಾಕರರಿಬ್ಬರೂ ಇಲ್ಲಿರುವರು. ಇವರು ಯಾರನ್ನೂ ಮೆಚ್ಚುವವರಲ್ಲ. ಇವರಿಂದ ಸರಿಯೆನ್ನಿಸಿಕೊಳ್ಳುವಂತೆ ನಿನಗೆ ನೇಮಿಸಿರುವ ಕೆಲಸವನ್ನು ನೀನು ಜಾಗರೂಕತೆಯಿಂದ ನಡೆಯಿಸಬೇಕು.

ಕುಮುದೆ—ತಲೆದೂಗಿ ಮುಂದೆಬಂದು ಅಕ್ಷಯಕುಮಾರ ಪ್ರಭೃತಿಗಳನ್ನು ನೋಡಿ "ಪ್ರಿಯಮಿತ್ರರೇ! ಸುಖಾಗಮನವನ್ನು ಕೋರುತ್ತೇನೆ. ಮಂಟಪಕ್ಕೆ ಬರಬೇಕು." ಎಂದು ನಲಿಯುತ್ತ ಹೇಳಿದಳು.

ಅಕ್ಷಯ—ತಾಯಿ! ನಮಗಷ್ಟು ಗೌರವವೇನೂ ಅಗತ್ಯವಾಗಿ ಕಾಣಲಿಲ್ಲ. ಉಳಿದ ಅತಿಥಿ ಅಭ್ಯಾಗತರನ್ನು ಸತ್ಕರಿಸು, ನಡೆ! ನಾವು ಹಿಂದಿನಿಂದ ಬರುತ್ತೇನೆ.

ತಾರಾ—ಏಕೆ? ಅಕ್ಷಯಕುಮಾರ! ನಿನ್ನನ್ನು ಮುಂದೆ ನಿಲ್ಲಿಸಿಕೊಂಡೇ ಉಳಿದವರನ್ನು ಆದರಿಸಬೇಕೆಂಬುದು ನನ್ನ ಇಷ್ಟವಲ್ಲವೆ ?

ಅಕ್ಷಯ—ಸ್ವಾಮಿನಾಥ! ನಾನು ತಮ್ಮ ದಾಸ್ಯಕ್ಕೆ ಪಾತ್ರನಲ್ಲದೆ, ತಮ್ಮ ಉಪಚಾರಕ್ಕೆ ಪಾತ್ರನಲ್ಲ ! ದಯೆಯಿಟ್ಟು ಕ್ಷಮಿಸಬೇಕು. ಬೇಕೆಂದರೆ, ತಮ್ಮ ಆಜ್ಞೆಯಾದರೆ,ನಾನೇ ಮುಂದಾ

ಳಾಗಿ ನಿಂತು, ವಿದ್ಯಾರ್ಥಿಗಳಿಗೆ ತಕ್ಕಂತೆ ಸತ್ಕಾರವನ್ನು ಮಾಡುತ್ತೇನೆ.

ತಾರಾ—ಕುಮುದೆಯ ವಿದ್ಯಾ ಪ್ರೌಢಿಮೆಗೆ ಪ್ರತಿಫಲವಾಗುವುದು ಹೇಗೆ? ಅವಳದನ್ನು ಕಲ್ತುದರ ಸಾರ್ಥ್ಯಕ್ಯತೆಯಾಗಬೇಡವೇ?

ಪ್ರಭಾ—ಸ್ವಾಮಿ! ತಾವು ಗುರುವರ್ಗೀಯರು; ನಾವು ತಮ್ಮ ಶಿಷ್ಯವರ್ಗದವರು; ತಮಗೆ ನಾವು ಹೇಳುವುದು ಸರಿಯಲ್ಲವಾದರೂ ಈಗ–ಈ ಸಂದರ್ಭದಲ್ಲಿ ಹೇಳದಿದ್ದರೆ ನಿರ್ವಾಹವಿಲ್ಲ. ಕ್ಷಮೆಯಿರಲಿ! ನಾನು ನಿಷ್ಪಕ್ಷಪಾತದೃಷ್ಟಿಯಿಂದ ನ್ಯಾಯವಿಚಾರವನ್ನು ಸನ್ನಿಧಿಗೆ ನಿವೇದಿಸಬೇಕೆಂದಿರುವೆನು. '

ತಾರಾ—ಅದೇನದು–ನಿನ್ನ ನ್ಯಾಯ ನಿವೇದನದ ವಿಚಾರ? ಹೇಳು. ನನಗೆ ಕುಮುದಮಿತ್ರನು ಹೇಗೋ ಹಾಗೆಯೇ ನೀನೂ ಆಗಿರುತ್ತೀಯೆ, ನಿನ್ನ ಮಾತಿನಲ್ಲಿ ನನಗೆ ಕೋಪವೇಕೆ?

ಪ್ರಭಾ—ಸ್ವಾಮಿ! ತಾವು ಸ್ತ್ರೀಪುರುಷರ ಪ್ರಕೃತಿ, ಸ್ವಭಾವ, ಪರಿವರ್ತನಾಸ್ಥಿತಿ–ಗತಿ ವಿಚಾರಗಳನ್ನು ಚನ್ನಾಗಿ ತಿಳಿದಿರುತ್ತೀರಿ. ಅವರ ವಯೋ, ವಾಸ, ಮನೋಧರ್ಮಗಳೂ ತಮಗೆ ತಿಳಿಯದೆ ಇಲ್ಲ. ಹೀಗಿದ್ದು ಅವರವರಿಗೆ ತಕ್ಕಂತಹ–ಎಂದರೆ–ಅವರ ಅಭ್ಯುದಯಕ್ಕೆ ಅವಶ್ಯಕವಾದಂತಹ ಕರ್ತವ್ಯವನ್ನು ತೋರಿಸದೆ, ಅವರ ಉಚಿತಾನುಚಿತ ಪ್ರಜ್ಞೆಯಮೇಲೆ ಮೋಡವೇ ಮುಸುಕುವಂತೆ ಮಾಡುತ್ತಿರುವ ಕಾರ್ಯಭಾಗವು ಶೋಚನೀಯವಾಗಿದೆ.

ತಾರಾ—ಹಾ! ಹಾಗೆಂದರೆ! ನೀನೇನು ಕೇವಲ ಸ್ತ್ರೀಯರ ಶ್ಲೇಷೋಕ್ತಿಯಂತೆಯೇ ಸಂಧಿಗ್ಧವಾಕ್ಯಗಳನ್ನೇ ಹೇಳುತ್ತಿರುವೆ ? ಅನ್ಯಾಪದೇಶ ವಾಕ್ಯಗಳಿಲ್ಲಿ ಅಗತ್ಯವಾಗಿಲ್ಲ. ಸ್ಪಷ್ಟೋಕ್ತಿಗಳಿಂದ

ಹೇಳು. ನನ್ನ ಕಾರ್ಯಗಳಲ್ಲಿ ಅವುದನ್ನು ಅನೀತಿಯೆಂದು ಹೇಳುವೆ?

ಪ್ರಭಾ—ಕ್ಷಮಿಸಬೇಕು. ತಮ್ಮ ಈಗಿನ ಪದ್ಧತಿಯನ್ನು ನೋಡಿದರೆ, ಪಾಶ್ಚಾತ್ಯಪದ್ಧತಿಯ ಅನುಕರಣವೆಂಬ ಗಾಳಿ ಸೋಕಿದಂತೆ ಕಾಣುತ್ತದೆ. ನಮ್ಮ ಆರ್ಯಸಮಾಜದಲ್ಲ, ಹುಡುಗಿಯರನ್ನು ತರುಣರ ಬಳಿಯಲ್ಲಿ, ಹಾಗೂ ವಿಲಾಸಪ್ರಿಯರಾದ ಅನ್ಯವಸ್ಥಿತ ಚಿತ್ತರಾದವರ ಬಳಿಯಲ್ಲಿ ನಿರ್ಲಜ್ಜಾಪ್ರಕೃತಿಗಳಾಗಿ ವರ್ತಿಸು ವಂತೆ ಮಾಡುವುದು ತುಂಬಾ ಹಾನಿಕರವಾಗಿ ತೋರುತ್ತದೆ. ಹಾಗೆ ಅವರು ವರ್ತಿಸುವದರಿಂದ ವಿದ್ಯಾರ್ಥಿಗಳ ಅಥವಾ ಆ ತರುಣಜನರ ಮನಸ್ಸು ವಿಕಾರವಶವಾಗಿ, ಆ ಹುಡುಗಿಯರ ವಿಷ ಯದಲ್ಲಿ ತಮ್ಮ ಕುಚೇಷ್ಟೆಗಳನ್ನು ತೋರಿಸಲು ಪ್ರಯತ್ನಿಸುವ ರು. ಕಾಲಕ್ರಮದಿಂದ ಆದೇ, ವಿಷಯ ಸನ್ನಿಪಾತದಂತೆ ವಿಪ ರೀತದಲ್ಲಿ ಪರಿಣಮಿಸುವುದು.

ತಾರಾ—ಇರಬಹುದು, ಆದರೆ ನಾನು ಮಾಡಿರುವುದರಲ್ಲಿ ಅಂತಹ ಬಾಧ ಕವೇನಿದೆ ?

ಅಕ್ಷಯ—ಸ್ವಾಮಿನಾಥ ! ತಮ್ಮ ಈ ದಿನದ ವಿಪರ್ಯಾಡನ್ನೇ ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿದೆ. ತಮ್ಮ ಸುಕುಮಾರಿಯು ಕನ್ಯಾವ ಸ್ಥೆಯನ್ನು ಮೀರಿ, ತಾರುಣ್ಯದಲ್ಲಿ ಕಾಲಿರಿಸಿರುವಳು. ಯೌವ ನವೇ ಸೌಂದರ್ಯಮಯವೆಂದು ಹೇಳುವರು. ಅದರಮೇಲೆ ಸೌ ಕುಮಾರ್ಯ, ಗಾಂಭೀರ್ಯ ಚಾತುರ್ಯಗಳೂ, ಕುಶಲಕಲಾನೈಪುಣ್ಯ ವೂ ಸೇರಿದ್ದರೆ ಹೇಳುವದೇನು ? ಅಂತಹ ಮನೋಮೋಹಿನಿಯರ ಸಂದರ್ಶನ-ಸಂಭಾಷಣಗಳೇ ಮನೋವೇಧಕವಾಗಿ ತೋರುವ ವೆಂದ ಬಳಿಕ ಅವರ ವಿಲಾಸ ವಿಭ್ರಮಾದಿಗಳೊಡಗೂಡಿದ ನೃತ್ಯ,

ಗೀತ, ವಾದನಗಳೂ, ಮತ್ತು ಇತರ ಆತಿಥ್ಯಗಳೂ, ತರುಣ ಜನರ ಮನಸ್ಸನ್ನು ಯಾವ ಸ್ಥಿತಿಗೆ ತರಬಹುದೆಂದು ಸ್ವಲ್ಪ ವಿಚಾರಮಾಡಿದರೆ ಸಾಕಾಗಿದೆ. ಹೀಗೆ ಹೇಳಿದೆವೆಂದು ನಮ್ಮಲ್ಲಿ ಮರ್ಯಾದೋಲ್ಲಂಘನದ ಅಪವಾದವನ್ನು ಹೊರೆಯಿಸಬಾರದೆಂದು ಪ್ರಾರ್ಥಿಸುತ್ತೇವೆ. ಕುಮುದೆಯು ನಮ್ಮ ಒಡಹುಟ್ಟಿದವಳೆಂದೇ ತಿಳಿದಿರುವುದರಿಂದ ಅವಳ ಪುರೋಭಿವೃದ್ಧಿಗಾಗಿ ನಾವು ಈ ಮಾತನ್ನು ಸ್ಪಷ್ಟವಾಗಿ ನಿವೇದಿಸಿರುತ್ತೇವೆ. ತಾವು ಒಂದು ವೇಳೆ ಅನ್ಯಪದ್ಧತಿಯನ್ನು ಹಿಡಿದಿದ್ದರೂ ತಮ್ಮ ಕನ್ಯೆಗೆ ಮಾತ್ರ ನಮ್ಮ ಆರ್ಯ ನೀತಿಶಿಕ್ಷಣದ ಪದ್ಧತಿಯನ್ನೇ ಕಲಿಸಬೇಕೆಂಬುದು ನಮ್ಮ ಪ್ರಾರ್ಥನೆ.

ಹೀಗೆ ಹೇಳಿ ಇಬ್ಬರೂ ಕೈಮುಗಿದು ಹೊರಟು ಹೋದರು.

ನವಮಪರಿಚ್ಛೇದ

“ರಕ್ತಾಕ್ಷಿಯ ಸಂತಾಪ, ನಿಶೆಯ ಸಮಾಧಾನ, ನಳಿನೀಕಾಂತ ಮಧುಮಿತ್ರರ ಆಗಮನ, ರಕ್ತಾಕ್ಷಿಯ ತಿರಸ್ಕಾರವಾಕ್ಯ, ನಳಿನೀಕಾಂತನ ದೈನ್ಯಪ್ರಾರ್ಥನೆ, ರಕ್ತಾಕ್ಷಿಯ ಆಗ್ರಹ, ಮಧುಮಿತ್ರನ ಕ್ಷಮಾಪ್ರಾರ್ಥನೆ, ರಕ್ತಾಕ್ಷಿಯ ಉದಾಸೀನ-ನಿಶೆಯ ಆದರ ಮತ್ತು ಅಭಯಪ್ರದಾನ ಇತ್ಯಾದಿ—ಇತ್ಯಾದಿ.

ಕೃತಘ್ನ! ತೊಲಗತ್ತ, ಇನ್ನು ಮುಂದೆ ನಿನ್ನ ಮುಖಾವಲೋಕನವೂ ನನಗೆ ಬೇಡ.

ರಾತ್ರಿ ಹತ್ತುಗಂಟೆ ಹೊಡೆದು ಹೋಗಿದ್ದಿತು. ಪ್ರಭಾನಗರದ ರಾಜಬೀದಿಯ ಹಿಂದುಗಡೆಯ ಪಣ್ಯಾಂಗನಾವೀಥಿ (ವೇಶ್ಯೆಯರ ಬೀದಿ)

ಯಲ್ಲಿ ಮಧ್ಯದ ಉಪ್ಪರಿಗೆಯ ಮನೆಯ ಮೇಲ್ಗಡೆಯ ಕಿರುಮನೆಯಲ್ಲಿ ಮಂಚದಮೇಲೆ ಕರಾಳಕೃಷ್ಣವದನೆಯೋರ್ವಳು ಕುಳಿತಿದ್ದಳು. ಮಂಚದ ಬಳಿಯಲ್ಲಿ ದಾಸಿಯೊಬ್ಬಳು ನಿಂತು ಬೀಸಣಿಗೆಯಿಂದ, ಮಂಚದ ಮೇಲೆ ಕುಳಿತಿದ್ದವಳಿಗೆ ಗಾಳಿಯನ್ನು ಹಾಕುತ್ತಿದ್ದಳು. ಕೃಷ್ಣವದನೆಯು ರೂಪವತಿಯಲ್ಲದಿದ್ದರೂ ಯೌವನಭರದಿಂದುಂಟಾದ ದೇಹ ಪುಷ್ಟತೆಯಿಂದಲೂ, ಸ್ವೈರವೃತ್ತಿಯ ವಿಲಾಸದಿಂದಲೂ, ಉಟ್ಟು ತೊಟ್ಟಿದ್ದ ಆಭರಣ ವಸ್ತ್ರಾದಿಗಳ ದೆಸೆಯಿಂದಲೂ ಅದೊಂದು ಬಗೆಯ ಥಾಳಥಳ್ಯದಿಂದ ಯುವಜನ ಚಿತ್ತಾಕರ್ಷಿಣಿಯಾಗಿ ತೋರುತ್ತಿದ್ದಳು.

ಯುವತಿಯನ್ನು ನೋಡಿದರೆ, ಮತ್ತು ಯುವತಿಯ ಮನೆಯಲ್ಲಿದ್ದ ಇತರ ಪರಿವಾರದವರನ್ನು ನೋಡಿದರೆ, ಮನೆಯ ಆಡಳಿತ ಊಟಪಾಟಗಳೇ ಮೊದಲಾದ ಇತರ ವಿಚಾರಗಳನ್ನು ನೋಡಿದರೆ ಇವಳು ಜಾತ್ಯಾವೇಶ್ಯೆಯಲ್ಲವೆಂದೂ, ಧನದಾಹ ಪಿಶಾಚಗ್ರಸ್ತರಾದ ಪೋಷಕರ ದೆಶೆಯಿಂದ ಸ್ವೈರವೃತ್ತಿಗೆರಗಿದ ಕುಲಟಾಂಗನೆಯೆಂದೂ ತೋರುತ್ತಿದ್ದಿತು

(ಹೇಗೆಂಬುದು ಇನ್ನು ಮುಂದೆ ತಿಳಿದುಬರುವುದು.)

ಯುವತಿಯು ನಿಟ್ಟುಸಿರಿಟ್ಟು--ದಾಸಿಯನ್ನು ಕುರಿತು ''ನಿಶೆ ! ಎಷ್ಟುಕಾಠಿಣ್ಯ, ಎಂತಹ ಕೃತಘ್ನತೆ, ಎಷ್ಟು ವಂಚನೆ, ಎಂತಹದ್ರೋಹ.''

ನಿಶೆ —ಅಮ್ಮಾ! ಸುಮ್ಮನೇಕೆ ಕಾತರಪಡುವೆ ? ಆತುರದಿಂದ ಏನನ್ನೂ ಹೇಳಬೇಡ, ಸ್ವಲ್ಪ ನಿಧಾನಿಸು. ಮೋಸವೇನೂ ಇರಲಾರದು. ನಳಿನೀಕಾಂತನು ಹೇಳಿದಂತೆ ಆಲಸ್ಯದಿಂದ ಬರಲಿಲ್ಲವೋ-ಏನೋ- ಅಷ್ಟಕ್ಕೇ ಇಷ್ಟು—

ಯುವತಿ——ಕೆಂಗಣ್ಣುಗಳಿಂದ——"ಸಾಕು ಸಾಕು, ಕೇಳಲಾರೆನು, ಸುಮ್ಮನಿರು. ಆಲಸ್ಯವಂತೆ! ಎಂತಹ ಆಲಸ್ಯ? ನೀನೇನೂ ನನಗೆ ಹೇಳಬೇಕಾಗಿಲ್ಲ. ಹೋಗತ್ತ-ಅವನ ಹಿಂದೆಯೇ,''

ನಿಶೆ—ಗಾಬರಿಯಿಂದ—"ಇದೇಕೆ, ಹೀಗೆ ಕೋಪಿಸುವೆ? ನಾನೇನು ಮಾಡಿನೆ? ನನ್ನಿಂದಾದ ಅಪರಾಧವೇನು?''

ಯುವತಿ—ಬಲ್ಲೆ-ಬಲ್ಲೆ! ನೀನೂ ಅವನೂ ಒಂದಾಗಿದ್ದೀರೆಂದು ಚನ್ನಾಗಿ ಬಲ್ಲೆ.

ನಿಶೆಯು ಯುವತಿಯ ಮಾತಿಗೆ ಅಳುತ್ತ ನಿಂತಳು. ಅಷ್ಟರಲ್ಲಿ ಮನೆಯ ಒಳಗಿನಿಂದ ಸುಮಾರು ೬೦ ವರ್ಷದ ಮುದುಕಿಯೊಬ್ಬಳು ಬಂದು ಯುವತಿಯ ಮಂಚದಬಳಿಯಲ್ಲಿ ನಿಂತು ಪ್ರೀತಿ ವ್ಯಂಜಕ ಸ್ವರದಿಂದ—

"ಮಗು! ರಕ್ತಾಕ್ಷಿ! ಹೇಗಿದ್ದೀಯೆ?''

ರಕ್ತಾಕ್ಷಿ—"ಇನ್ನು ಹೇಗಿರುವೆನಜ್ಜಿ? ಸಾಯದೆ ಇದ್ದೇನೆ!''

ಅಜ್ಜಿ—ಚಿಃ! ಹಾಗೆನ್ನಬೇಡ! ಮಗು? ನಿನಗೇನಾಗಿದೆ ಹೇಳು?

ರಕ್ತಾಕ್ಷಿ—ನನಗೇನಾದರೂ ಆದರೆ ನಿನಗೆ ಸಂತೋಷ. ಹಾಳುದೈವವು ಇನ್ನೂ ಅಷ್ಟು ಮಾಡದೆ ಇದೆ.

ಅಜ್ಜಿ—ನಿಶೆಯನ್ನು ಕುರಿತು-''ಏನೇ-ನಿಶೆ; ಇವಳೇಕೆ ಹೀಗಿದ್ದಾಳೆ?''

ನಿಶೆ—ಏಕೆಂದರೆ-ಅವಳಿಗೆ ಕೋಪ!

ಅಜ್ಜಿ—ಕೋಪವೇಕೆ? ಯಾರಮೇಲೆ?

ನಿಶೆ—ಅಜ್ಜೀ! ಅವನಾವನೋ ದಿನವೂ ಬರುತ್ತಿದ್ದವನು ನಿನ್ನೆಯಿಂದ ಬರಲಿಲ್ಲವೆಂದೂ, ಅದಕ್ಕೆ ನಾನೇ ಕಾರಣಳೆಂದೂ-ನನ್ನ ಮೇಲೆ ರೇಗಿದ್ದಾಳೆ.

ಅಜ್ಜಿ—ಕೋಪದಿಂದ-'ನಿನಗಿದೇ ಹಗರಣವಾಯಿತೇ-ರಕ್ತಾಕ್ಷಿ! ದಿನವೂ ನಿನಗೀ ಹಾಡೇ ಹಾಡಾಗಿದೆಯೇ? ಅದಾವ ಗಂಟು ಕಳ್ಳನನ್ನು ಕುರಿತು ಅಳುತ್ತಿದ್ದೀಯೆ?'

ರಕ್ತಾಕ್ಷಿ--ನೀನು ನನ್ನಲ್ಲಿ ಮಾತನಾಡಬೇಡ-ನನ್ನ ಇಷ್ಟ. ಹೊರಟು ಹೋಗು.

ಅಜ್ಜಿ—ಚನ್ನಾಗಿದೆ-ನಾನು ಹೇಳಬೇಡವೇ ಚಂಡಾಳಿ! ನನ್ನಮೇಲೆಯೇ ತಿರುಗಿ ಬೀಳುವೆಯೊ? ಕುಲಕ್ಕೆ ಮೃತ್ಯುವಾಗಿ ಹುಟ್ಟಿದೆಯಲ್ಲವೇ?

ರಕ್ತಾಕ್ಷಿ—ಮಂಚದಮೇಲೆ ಕೈಕಾಲುಗಳನ್ನು ಬಡಿದು ರೋಷದಿಂದ- "ಸಾಕು, ಬಾಯಿಮುಚ್ಚು! ನನ್ನ ಮನೆಯಲ್ಲಿ, ನನ್ನ ಹಣದಲ್ಲಿ, ಇದ್ದು-ತಿಂದು-ತೇಗಿ ನನ್ನನ್ನೇ ಹೇಳುತ್ತಿರುವೆಯೊ? ಯಾರು- ಕುಲಕ್ಕೆ ಮೃತ್ಯು? ಈ ದಾರಿಯಲ್ಲಿ ನಡೆಯಲು ಪ್ರೇರಿಸಿದವರಾರು ? ಮೊತ್ತಮೊದಲು ಇದಕ್ಕಾಗಿ ಅಣಿಮಾಡಿಕೊಟ್ಟವರಾರು ? ನೀನಲ್ಲವೇ? ಆಗ ನಿನಗೆ ಬೇಕಾಗಿತ್ತಲ್ಲವೆ? ಸನ್ದೆತ್ತುವೆ? ಜೋಕೆ! ಹೊರಟುಹೋಗು, ನನ್ನ ಮನೆಯಲ್ಲಿನ್ನು ಕ್ಷಣವೂ ನಿಲ್ಲಕೂಡದು."

ಅಜ್ಜಿಯು ನೂರೆಂಟು ಬಗೆಯಾಗಿ ರಕ್ತಾಕ್ಷಿಯನ್ನು ಬಯ್ಯುತ್ತ ನಿಲ್ಲದೆ ಮನೆಯನ್ನು ಬಿಟ್ಟು ಹೊರಟು ಹೋದಳು. ಸಿಸಿ ಪಾಪ! ಮತ್ತೂ ಹೆಚ್ಚಿದ ಭಯದಿಂದ ಗಡಗಡನೆ ನಡುಗುತ್ತ ಒಂದು ಕಡೆಯ ಮೂಲೆಯಲ್ಲಿ ನಿಂತಳು.

ರಕ್ತಾಕ್ಷಿ ಆಗ್ರಹದಿಂದ ಮಂಚವನ್ನಿಳಿದು, ಕೆಳಗಿಳಿದು-ಮಹಡಿಯಿಂದ ಕೆಳಗಿಳಿಯಲು ಹಂತದ ಬಳಿಗೆ ಬಂದಳು; ನೋಡಿದಳು--ಮಹಡಿಯಮೇಲಿನ ಬಾಗಿಲಿಗೆ ಅಡ್ಡಲಾಗಿ ನಳಿನೀಕಾಂತನೂ-ಅವನಹಿಂದೆ, ಮರೆಯಾಗಿ ಮಧುಮಿತ್ರನೂ ನಿಂತಿದ್ದುದನ್ನು ಕಂಡಳು; ಕಿಡಿಕಿಡಿಯಾಗಿ ಕೇಳಿದಳು.

"ಇಲ್ಲಿಗೇಕೆ ಬಂದಿರಿ ? ನಿಮ್ಮನ್ನು ಬರಹೇಳಿದವರಾರು? ಒಳಗೆ ಬಿಟ್ಟವರಾರು?"

ನಳಿನೀ—ಕೈನೀಡಿ ಮುಗುಳುನಗೆಯಿಂದ—'ಓಹೋ! ದೇವಿಯರು ಇಂದೇಕೆ-ಇಷ್ಟು ಆವೇಶದಲ್ಲಿರುವುದು? ಅಜ್ಞೆಯನ್ನು ಅಟ್ಟಿದುದೇಕೆ?'

ರಕ್ತಾಕ್ಷಿ—ಹೇಳಿ-ಕೇಳುವುದಕ್ಕೆ ಇದೇನೂ ಸಮಯವಲ್ಲ. ಹೊರಟು ಹೋಗಬಹುದು.

ನಳಿನೀ—ಕೋಪಕ್ಕೆ ಕಾರಣವೇನೆಂಬುದನ್ನು ತಿಳಿಸದೆಯೇ ಹೋಗೆಂದರೆ-ಹೇಗೆ-ಯಾರಿಂದ ಅಪರಾಧವಾಯಿತು?

ರಕ್ತಾಕ್ಷಿ—ಹೋಗೆಂದರೆ ಹೊರಟುಹೋಗಬೇಕು? ಹೆಚ್ಚಿನಮಾತು-ನನಗೆ ಬೇಡ.

ನಳಿನೀ—ಸ್ವಲ್ಪ ಓರೆಯಾಗಿ—"ನಾನು ಹೋಗುತ್ತೇನೆ, ಆದರೆ ಕಟಾಕ್ಷಿಸಬಹುದು. ತಮ್ಮ ಪ್ರೇಮದ ನಿಧಿಯು ಇಲ್ಲಿಯೇ-ಇದಿರಾಗಿ ಬಂದು ನಿಂತಿದೆ. ನೋಡಿರಿ-ತಮ್ಮ-ಮಧುಮಿತ್ರ..."

ರಕ್ತಾಕ್ಷಿ—ಎಷ್ಟು ಬಾರಿ ಹೇಳಬೇಕು; ಈ ಕ್ಷಣವೇ-ಇಲ್ಲಿ ನಿಲ್ಲದೆ ಹೊರಟುಹೋಗಿರಿ.

ಮಧು—ಮೆಲ್ಲನೆ ಮುಂದೆ ಬಂದು-"ಏಕೆ ಇಷ್ಟೊಂದು ಆಗ್ರಹ?|ನಾವೇನು ಮಾಡಿದೆವು?"

ರಕ್ತಾಕ್ಷಿ—ಇನ್ನೇನು ಮಾಡಬೇಕು? ಎಲ್ಲವೂ ಆಯಿತು. ಹೊರಟು ಹೋಗಬಹುದು.

ಮಧು—ಒಂದು ದಿನವು ಮಾತ್ರ ತಪ್ಪಿದುದಕ್ಕೆ ಇಷ್ಟೊಂದು ಆಗ್ರಹವೇ?

ರಕ್ತಾಕ್ಷಿ—ನನಗೆ ಆಗ್ರಹವಿಲ್ಲ; ಅಗತ್ಯವೂ ಇಲ್ಲ. ಬೇಕಾದಲ್ಲಿಗೆ ಹೋಗದೆ ಇಲ್ಲಿಗೇಕೆ? ಇಲ್ಲೇನಿದೆ! ಹಣವಿದೆಯೆ? ಗುಣವಿದೆಯೆ?

ತುಣುಕುಮಿಣುಕಿದೆಯೆ? ಎಲ್ಲವೂ ಮುಗಿದುಹೋಯಿತು. ಅವೆಲ್ಲವೂ ಎಲ್ಲಿದೆಯೋ-ಅಲ್ಲಿಗೆ ಹೋಗಬಹುದು.

ಮಧು—ಹಾಗೆನ್ನಬೇಡ. ನೀನು ಹೀಗೆ ಹಾರಾಡುವದು ಸರಿಯಲ್ಲ. ನನಗೆ ನಿನ್ನೆ ನಿಜವಾಗಿಯೂ ಆರೋಗ್ಯವಿರಲಿಲ್ಲ. ಜಡತೆಯಿಂದ ಹೊರಗೆ ಎಲ್ಲಿಗೂ ಬಾರದೆ ಕುಳಿತಲ್ಲಿಯೇ ಒರಗಿದ್ದೆನು. ಈದಿನ ಎಂದಿನಂತೆ ಬಂದೆನು.

ರಕ್ತಾಕ್ಷಿ—ವಿಕೃತಸ್ವರದಿಂದ—'ಕೃತಘ್ನ ! ತೊಲಗತ್ತ-ಇನ್ನು ಮುಂದೆ ನಿನ್ನ ಮುಖಾವಲೋಕನವೂ ನನಗೆ ಬೇಡ. ನಾನಾಗಿ ನಿನ್ನನ್ನು ಕಾಡಿ ಬೇಡಿ-ಕರೆತರಲಿಲ್ಲ. ಆತುರಗೊಂಡು ನೀನಾಗಿ ಬಂದು ಕಾಲಿಗೆ ಬಿದ್ದು-ನನ್ನಲ್ಲಿ ಆಶ್ರಯವನ್ನು ಬೇಡಿದೆ ; ಬೇಕಾದಷ್ಟು ಸುಖವನ್ನೂ ಅನುಭವಿಸಿದೆ; ಈಗ ನಿನಗೆ ಬೇಡವಾಯಿತು, ವಂಚಿಸಿದೆ-ಇದೆಲ್ಲವನ್ನೂ ನಾನು ಕಾಣದವಳೆಂದು ನನ್ನಲ್ಲಿ ಬೊಂಕಿದೆ. ನನಗೀ ದ್ರೋಹವು ರುಚಿಸದು. ಹೋಗು-ಹೊರಟುಹೋಗು. (ನಳಿನೀಕಾಂತನನ್ನು ನೋಡಿ)-'ಹೋಗು ಹೋಗು! ನೀನೂ ಹೊರಟುಹೋಗು. ಇನ್ನು ಮೇಲೆ ನಿನ್ನ ಮಧ್ಯಸ್ಥಿಕೆಯೂ ನನಗೆ ಬೇಕಾಗಿಲ್ಲ.' ಮತ್ತೆ ನಾನು ಬರುವುದರೊಳಗೆ ನೀವು ತೊಲಗಿದ್ದರೆ ಸರಿ-ಇಲ್ಲವಾದರೆ-ಎಂದು ಹೇಳಿ, ನಿಲ್ಲದೆ-ಮಧುಮಿತ್ರ-ನಳಿನೀಕಾಂತರು ನೋಡುತ್ತಿದ್ದಂತೆಯೇ ಕೆಳಗಿಳಿದು ಹೊರಟುಹೋದಳು.

ಮಧುಮಿತ್ರ—ನಿಟ್ಟುಸಿರಿಟ್ಟು-'ನೋಡಿದೆಯಾ? ನಳಿನೀಕಾಂತ? ನಿನ್ನ ಬಲಾತ್ಕಾರದಿಂದ ನಾನು ಬಂದುದಕ್ಕೆ ನನಗಾದ ಸನ್ಮಾನವಿದು! ಇದಕ್ಕಲ್ಲವೇ ಕುಮುದಮಿತ್ರನು ನಿನ್ನೆ ಅಷ್ಟು ಬಗೆಯಾಗಿ ನನಗೆ ಹೇಳಿದುದು? ನಾವಾತನ ಹಿತಬೋಧೆಯನ್ನು ನಿರಾಕರಿಸಿ, ಕಳ್ಳ

ದಾರಿಯಿಂದ ಬಂದುದಕ್ಕೆ ನಮಗಿದಲ್ಲವೇ ಪ್ರತಿಫಲವು? ಇದನ್ನೇ ಅಲ್ಲವೇ-ನೀನು ಸುಖ-ಸುಖವೆಂದು ಹೇಳುತ್ತ ಕರೆತಂದುದು?

ನಳಿನೀ—ಅಷ್ಟಕ್ಕೇ ತಡೆದು ' ಸುಮ್ಮನಿರು, ರಕ್ತಾಕ್ಷಿಯು ಸ್ವಾಭಾವಿಕವಾಗಿ ಕೋಪಿಸಿಕೊಂಡಳೆಂದು ತಿಳಿಯಬೇಡ. ಬೇರೆ ಕಾರಣವೇನೋ ಇರಬೇಕು. ಹಾಗೂ ಒಂದುವೇಳೆ ಅವಳು ಕೋಪಿಸಿಕೊಂಡಳೆಂದೇ ಭಾವಿಸಿದರೂ ಮುಳುಗಿ ಹೋದುದೇನು? ಬೇರೆ ಯಾರೂ ಇಲ್ಲವೆ? '

ಮಧು —ಮತ್ತಾರ ಸಹವಾಸವೂ ನನಗೆ ಬೇಡ. ಇಷ್ಟಕ್ಕೇ ನನಗೆ ಸಾಕಾಗಿದೆ. ಇವಳ ಕೋಪಕ್ಕೆ ಕಾರಣವೆಂತಹದೆಂದು ತಿಳಿದರೆ ನನಗೆ ಸಾಕು.

ಈ ವರೆಗೆ ನಡೆಯುತ್ತಿದ್ದ ಮಾತುಗಳನ್ನು ಕೇಳುತ್ತಿದ್ದ ನಿಶೆಯು ಮುಂದೆ ಬಂದು-"ಅಪ್ಪ! ಮಧುಮಿತ್ರಬಾಬು! ಯಜಮಾನಿಯು ನನ್ನ ಮೇಲೆ ಮುರಿದುಬೀಳುತ್ತಿರುವಳು. ನೀವು ಬಾರದಿದ್ದುದಕ್ಕೆ ನಾನೇ ಕಾರಣಳೆಂದು ನನ್ನಮೇಲೆ ಆರೋಪಿಸಿರುವಳು. ದಯೆಯಿಟ್ಟು ಸ್ವಲ್ಪ ನಿಲ್ಲಿರಿ. ನಿಮಗೆ ಯಾವಭಾಗದಲ್ಲಿಯೂ ಕೊರತೆಯಾಗದಂತೆ ನಾನು ನೋಡಿಕೊಳ್ಳುವೆನು. ಯಜಮಾನಿಯ ಆಗ್ರಹವು ಇಷ್ಟರಲ್ಲಿ ಶಾಂತವಾಗುವುದು.'' ಎಂದು ಹೇಳಿ ಮೃದುಮಧುರವಾಣಿಯಿಂದ ಉಪ್ಪರಿಗೆಯ ಮೇಲ್ಗಡೆಯ ಕಿರುಮನೆಗೆ ಕರೆದುಕೊಂಡು ಹೋದಳು.

(ಇಬ್ಬರೂ-ನಿಶೆಯ ಹಿಂದೆಯೇ ಹೊರಟು ಹೋದರು.)

ಶ್ರೀಃ

ದಶಮ ಪರಿಚ್ಛೇದ

‘‘ತರುಣ ಶಕಲ ಮಿಂದೋರ್ ಬಿಭ್ರತೀ ಶುಭ್ರಕಾಂತಿಂ |
ಕುಚಭರ ನಮಿತಾಙ್ಗೀ ಸನ್ನಿಷಣ್ಣಾ ಸಿತಾಬ್ಜೇ ||
ನಿಜಕರ ಕಮಲೋದ್ಯಲ್ಲೇಖನೀ ಪುಸ್ತಕ ಶ್ರೀಃ|
ಸಕಲ ವಿಭವ ಸಿದ್ಧ್ಯೈ ಪಾತು ವಾಗ್ದೇವತಾ ನಃ ||’’
‘‘ಸರಸ್ವತೀ ಮಹಾ ಭಾಗೇ ವಿದ್ಯೇ ಕಮಲಲೋಚನೆ |
ವಿಶ್ವರೂಪೇ ವಿಶಾಲಾಕ್ಷೀ ವಿದ್ಯಾಂ ದೇಹಿ ನಮೋಸ್ತುತೇ || ’’
‘‘ಸರಸ್ವತ್ಯೈ ನಮೋನಿತ್ಯಂ ಭದ್ರಕಾಲ್ಯೈ ನಮೋನಮಃ |
ವೇದ ವೇದಾಂತ ವೇದಾಂಗ ವಿದ್ಯಾಸ್ಥಾನೇಭ್ಯ ಏವಚ ||’’

‘‘ಶಾಂತಿನಿಕೇತನವಿದ್ಯಾನಿಲಯದಲ್ಲಿ ಶಾರದಾಪೂಜಾ ಸಮಾರಂಭವು, ಶಾರದೆಯ ತಂದೆಯಾದ ಗೀತಾಚಾರ್ಯರು ಮಾಡುವ ಹಿತಬೋಧನೆ, ಭಾಸ್ಕರಾಚಾರ್ಯರು ವಿದ್ಯಾರ್ಥಿಗಳಿಗೆ ಮಾಡುವ ಉಪದೇಶ, ಮಧುಮಿತ್ರನ ಪರವಾದ ಪ್ರಸ್ತಾಪ, ಗುರುಗಳ ಪರಿತಾಪ ಮತ್ತು ಶ್ರೇಯಃ ಪ್ರಾರ್ಥನೆ.’’ —ಇತ್ಯಾದಿ-ಇತ್ಯಾದಿ—

‘ಭಗವತಿ ! ಭಾರತೀ ! ಭಕ್ತಪಾತ್ರವನ್ನು ಕಟಾಕ್ಷಿಸು-ಉದ್ಧರಿಸು.’

ಪ್ರಭಾನಗರದ ಶಾಂತಿನಿಕೇತನ ವಿದ್ಯಾನಿಲಯದಲ್ಲಿ ಇಂದು ಶಾರದಾ ಪೂಜಾಮಹೋತ್ಸವವು. ಹೊತ್ತು ಸುಮಾರು ಸಾಯಂಕಾಲ ನಾಲ್ಕು ಘಂಟೆ. ಪೂಜಾಕಾರ್ಯವೆಲ್ಲವೂ ಕ್ರಮವಾಗಿ ನಡೆದು ಮಂಗಳಾರತಿಯಷ್ಟಕ್ಕೆ ನಿಂತಿದೆ. ವಿದ್ಯಾರ್ಥಿಗಳೆಲ್ಲರೂ ಕೈಕಟ್ಟಿ, ಕುತೂಹ

ಲಾಧಿಕ್ಯದಿಂದ ಗುರುಗಳನ್ನೇ ನೋಡುತ್ತ ಕುಳಿತಿರುವರು. ಭಾಸ್ಕರಾಚಾರ್ಯರು ಸರಸ್ವತಿಯ ಮುಂದೆ ಬಲಗಡೆಗೆ ಕುಳಿತು, ಶಿಷ್ಯಮಂಡಲಿಯನ್ನು ಕೃಪಾದೃಷ್ಟಿಯಿಂದ ನೋಡುತ್ತಿದ್ದರು. ಶಾರದೆಯ ತಂದೆಯಾದ ಗೀತಾಚಾರ್ಯರು ಭಾಸ್ಕರಾಚಾರ್ಯರ ಮುಂದೆ ಕುಳಿತಿದ್ದರು. ಪೂರ್ಣಕಲೆ, ಶಾರದೆ, ಕುಮುದೆ ಈ ಮೂವರೂ ಭಾಸ್ಕರಾಚಾರ್ಯರಿಗೆ ಎಡಗಡೆಯಾಗಿ ಕುಳಿತಿದ್ದರು. ಕುಮುದೆಯ ತಂದೆ ತಾರಾಕಾಂತನು ಮಗಳ ಬಳಿಯಲ್ಲಿ ಕುಳಿತಿದ್ದನು.

ಶಾರದಾ ಉತ್ಸವವೆಂದರೆ ವಾರ್ಷಿಕೋತ್ಸವ ಅಥವಾ ಷಾಣ್ಮಾಸಿಕೋತ್ಸವಗಳಲ್ಲ; ಮತ್ತು ಬರಿಯ ಮಂಗಳಾಷ್ಟಕ, ಗೀತಾ–ಸ್ತುತಿಗಳಲ್ಲಿಯೇ ಪರ್ಯವಸಾನ ಹೊಂದುವದಿಲ್ಲ. ಪ್ರತಿ ಭಾನುವಾರವೂ, ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಸೇರಿ, ಶ್ರದ್ಧೆ, ಭಕ್ತಿ, ಗೌರವಗಳಿಂದ ಸಂಭ್ರಮವಾಗಿ ನಡೆಯಿಸುವ ಉತ್ಸವವಲ್ಲದೆ, ಅಧ್ಯಯನ, ಪಾರಾಯಣ, ಬೋಧನ, ಕೀರ್ತನ, ಸಮಾಲೋಚನಾದಿಗಳು ಸಾವಧಾನವಾಗಿ ನಡೆದು, ಶ್ರಾವಕರ, ವಿದ್ಯಾರ್ಥಿ ವರ್ಗೀಯರ, ಜಿಜ್ಞಾಸುಗಳ ಆತ್ಮವಿಚಾರ ಶಕ್ತಿಯನ್ನು ಹೆಚ್ಚಿಸಿ, ಉತ್ಸಾಹವನ್ನುಂಟುಮಾಡುವ ವಿಶ್ರಾಂತಿಸುಖಪ್ರದವಾದ ಕ್ರಿಯಾಕಲಾಪಗಳೂ ನಡೆಯುತ್ತಿವೆ.

ವಿಶ್ರಾಂತಿ ಅಥವಾ ವಿರಾಮ ದಿನವೆಂದು ನಮ್ಮವರಲ್ಲಿ ಕೆಲವರು ಆ ದಿನವನ್ನು ಅಷ್ಟು ವಿಚಾರದೃಷ್ಟಿಯಿಂದ ನೋಡುತ್ತಿಲ್ಲ. ಅಂದು ಅವರು ಮಾಡುವ ಕೆಲಸವೆಂದರೆ, ಹಗಲುನಿದ್ದೆ, ಎಲೆಯಾಟ, ಪಗಡೆ, ಲಲ್ಲೆ, ಚಲ್ಲಾಟ, ಇವೇ ಮೊದಲಾದ ಕ್ಷುಲ್ಲಕ ವ್ಯಾಪಾರಗಳಲ್ಲಿ ನಿರತರಾಗುವುದು, ಇಲ್ಲವೆ ಬರಿಯ ವಾದ,ವಿವಾದ, ವಿಹಾರ ಇವುಗಳಿಂದ ಕಾಲ ಕಳೆಯುವುದು ಇತ್ಯಾದಿ.

ಅವರು ಹಾಗೇಕೆ ಮಾಡುವರೆಂದು ವಿಚಾರ ಮಾಡುವುದಾದರೆ, ಬಹುಶಃ ಅವರ ಅಭಿಪ್ರಾಯದಲ್ಲಿ ತಾವು ಹಿಂದಿನ ದಿನಗಳಲ್ಲಿ ಬಲು ದುಡಿದುದಾಗಿಯೂ, ಅದು ಕೂಡಿ ಬರುವುದಕ್ಕಾಗಿ ಒಂದು ದಿನದ ವಿರಾಮವನ್ನು ಪಡೆಯಬೇಕೆಂದೂ ಎಂದರೆ ಆಟ, ನೋಟ, ಕೂಟ-ಸವಿಯೂಟಗಳಿಂದ ಕಾಲ ಕಳೆವುದೆಂದೂ ತಿಳಿದಿರುವಂತೆ ತರ್ಕಿಸಬೇಕಾಗುತ್ತದೆ. ಹಾಗೆ ಅವರು ಕಳೆಯುವ ಕಾಲವು ಅವರ ಜೀವನಕ್ಕೆ ಅಷ್ಟಾಗಿ ಹಿತಕಾರಿಯಲ್ಲವೆಂದಾಗಲೀ, ತಮ್ಮ ಈ ರೀತಿಯಾದ ವಿರಾಮವು ಸರಿಯಾದ, ಮನೋಲ್ಲಾಸಪ್ರದವಾದ ಮತ್ತು ಉತ್ಸಾಹಜನಕವಾದ ವಿಶ್ರಾಂತಿಯಲ್ಲವೆಂದಾಗಲೀ ಸ್ವಲ್ಪಕ್ಕೆ ಸ್ವಲ್ಪ ವಿಚಾರ ಮಾಡಿದ್ದರೂ ಅವರು ತಮ್ಮ ಊಹಾಪೋಹ ಶಕ್ತಿಯನ್ನು ಹೀಗೆ ಕೆಡಿಸಿಕೊಳ್ಳುತಿರಲಿಲ್ಲ! ಮತ್ತು ಅವರ ಈ ಬಗೆಯ ನಡೆವಳಿಕೆಯನ್ನು ನೋಡಿ ಅವರ ಕಿರಿಯರೂ ಅವರ ಚಾಳಿಯನ್ನು ಕಲಿತುಕೊಂಡು, ಜಡಜೀವಿಗಳೆಂಬ ಅಪವಾದಕ್ಕೆ ತುತ್ತಾಗುತ್ತಿರಲಿಲ್ಲ. ಮುಖ್ಯವಾಗಿ ಮೇಲೆ ಹೇಳಿದ ವ್ಯರ್ಥ ಕಾಲಕ್ಷೇಪವು ತೀಗಣ್ಣೆರೆದಿರುವೆವೆಂದು ಹೇಳಿಕೊಳ್ಳುತ್ತಿರುವ ಮತ್ತು ಉಪದೇಶಕ, ಅಧ್ಯಾಪಕ, ಶಿಕ್ಷಕ,ಸುಧಾರಕ,ಮಾಂಡಲಿಕ ವರ್ಗಗಳಲ್ಲಿ ಅಗ್ರಣಿಗಳೆಂದು ಅಭಿಮಾನದಿಂದ ಬೀಗಿರುವ ಮಹಾಶಯರೇ ಮೇಲೆ ಹೇಳಿದಂತೆ ತಮ್ಮ ಮಕ್ಕಳಿಗೆ ತಾವೇ ಈ ಬಗೆಯ ಮೇಲುಪಂಕ್ತಿಯನ್ನು ಹಾಕಿ ಕೊಡುತ್ತಿರುವರೆಂಬ ಮಾತು ಎಷ್ಟು ಶೋಚನೀಯವು ?

ಇರಲಿ, ಪ್ರಕೃತಕ್ಕೆ ಈ ಪ್ರಸ್ತಾಪವನ್ನೆತ್ತಿದೆವಾದರೆ ಮೊದಲೇ ನಮ್ಮ ಮೇಲೆ ಕಿಡಿಕಿಡಿಯಾಗಿ ಸಿಡಿದು ಬೀಳುತ್ತಿರುವ ಮಹಾಶಯರು, ಮುಂದೆ ನಮ್ಮನ್ನು ತಮ್ಮ ದ್ವೇಷಕ್ಕೆ ಆಹುತಿಯಾಗಿ ತೆಗೆದುಕೊಳ್ಳುವುದೇ ತಮ್ಮ ಪುರುಷಾರ್ಥವೆಂದು ಭಾವಿಸಿ, ತಮ್ಮ ಹಗೆತನವನ್ನು ಸಾಧಿಸುವುದಕ್ಕಾಗಿ ಉಳಿದಿದ್ದ ಅಲ್ಪಸ್ವಲ್ಪ ಕಾಲಧನವನ್ನೂ ಹಾಳುಮಾಡಿ

ಬಿಡುವರೆಂಬ ಶಂಕೆ, ನಮ್ಮ ಮುಂದೆ ಅಡ್ಡಯಿಸಿ ನಿಂತಿರುವುದು. ಆದುದರಿಂದ ಅದಕ್ಕೆ ಅವಕಾಶವನ್ನು ಕೊಡಲಾರದೆ ಆ ವಿಚಾರವನ್ನು ನಿಲ್ಲಿಸಿರುವೆವು.

ಬಾಂಧವರೇ! ಮುಳಿಪಿರೇನು? ಏಕೆ ಮುಳಿವುದು ? ನಿಮ್ಮಲ್ಲಿ ಅಂತಹ ಅಪರಾಧವಿದ್ದರೆ ಮಾತ್ರ ನೀವು ಮುಳಿಯಬೇಕು ? ಅದು ನಿಮ್ಮಲ್ಲಿಲ್ಲದಿದ್ದರೆ ನೀವೇಕೆ ಮುಳಿವುದು ? ಅಥವಾ ಹಳಿವುದು? ಏನೆನ್ನುವಿರಿ? ಅವಗುಣವಿದ್ದವರಿಗೆ ಆ ಮಾತು ಮುಳ್ಳಿನಂತೆ ಚುಚ್ಚುವುದರಿಂದ, ಅದನ್ನು ಹೇಳಿದುದಕ್ಕಾಗಿ ತಪ್ಪು ಕಾಣಿಕೆಯನ್ನೊಪ್ಪಿಸಬೇಕೆನ್ನುವಿರೋ? ಹಾಗೂ ಆಗಲಿ, ಅಪರಾಧವನ್ನೊಪ್ಪಿಕೊಳ್ಳುವೆವು. ಇದೋ ನಮ್ಮ ಆ ಮಹಾಪರಾಧ(?)ಕ್ಕಾಗಿ ಕಾಣಿಕೆಯನ್ನೂ ಒಪ್ಪಿಸುವೆವು. ಅದೇನು, ಎಂತು, ಎಂಬಿರೋ?

"ದಯಾಘನರೇ! ಶರಗೊಡ್ಡಿ ಬೇಡುವೆವು, ವಿಶ್ರಾಂತಿ ದಿನವೆಂದು ಬರಿಯ ಉಪಯೋಗಕ್ಕೆ ಬಾರದ ಚಲ್ಲಾಟಗಳಲ್ಲಿಯೇ ಕಾಲವ್ಯಯ ಮಾಡಿಬಿಡಬೇಡಿರಿ. ವಿಶ್ರಾಂತಿಯೆಂದರೆ ಅದಲ್ಲ;—ಕೇವಲ, ಪುರಸಂಚಾರ, ವಾತವಿಹಾರ, (?) ವಾಗ್ವ್ಯವಹಾರಗಳನ್ನು ನಡೆಯಿಸಿದ ಮಾತ್ರಕ್ಕೆ ನೀವು ಸರಿಯಾದ ವಿಶ್ರಾಂತಿ ಹೊಂದಿದರೆಂದು ಹೇಳಲೊಲ್ಲೆವು. ನಿಮ್ಮ ಹಿಂದಿನ ದಿನಗಳ ಕಾರ್ಯಭಾಗಗಳಲ್ಲಿ ನ್ಯೂನತೆಗಳಾವುದಾದರೂ ಸೇರಿದ್ದಿತೇನೆಂದು ವಿಚಾರಮಾಡಿ, ಮುಂದಿನ ಕಾರ್ಯಕಲಾಪವನ್ನು ಕ್ರಮಪಡಿಸಿಕೊಳ್ಳುವುದು ; ನಿಮ್ಮ ಕಿರಿಯರಿಗೆ ಹಿತವಾಗುವ ಮಾರ್ಗವಾವುದೆಂಬುದನ್ನು ಆಸ್ಥೆಯಿಂದ ತಿಳಿದು ನಿಮ್ಮ ನಿಮ್ಮ ಅನುಭವಾಂಶಗಳನ್ನು ನಿಮ್ಮ ಅನುಗಾಮಿಗಳಿಗೂ ಹಂಚಿಕೊಡುವುದು, ಹೀಗೆ ಮಾಡಿದರೆಯೇ ನಿಮಗೆ ವಿಶ್ರಾಂತಿಯ ನಿಜವಾದ ಸುಖಪ್ರಾಪ್ತಿಯಾಗುವುದು. ಇಂತಹ ವಿಶ್ರಾಂತಿ ಸುಖಾನುಭವದಿಂದಲೇ ನೀವು ಪಂಡಿತರೆನ್ನಿಸಬೇಕು ! ಹಾಗಿಲ್ಲದೆ ಹೆಸರಿನ

ಮುಂದೆ ಮೊಳದುದ್ದಕ್ಕೆ ಸಾಲಾಗಿ ಬಿರಿದಿನ ಪಟ್ಟಿಗಳನ್ನು ಧರಿಸಿದ್ದ ಮಾತ್ರದಿಂದಲೇ ಯಾರೂ ಪಂಡಿತರಾಗಲಾರರೆಂಬುದು, ನಮ್ಮ ಅಲ್ಪಾನುಭವದ ವಿಚಾರವು! ಇದನ್ನೇ ನಿಮಗಿಂದು ನಾವು ಅಪರಾಧಕಾಣಿಕೆಯಾಗಿ ಒಪ್ಪಿಸಲಿರುವೆವು. ನೀವೂ ಬಾಲಕರ ಅಕೃತ್ರಿಮ ವಿಶ್ವಾಸ ಗೌರವದ ಕಾಣಿಕೆಯಿದೆಂದು ತಿಳಿದು ಸ್ವೀಕರಿಸಿರಿ.''

ಸರಿ! ಇನ್ನು ನೀವು ಕ್ಷಮಿಸಿರಿ, ಬಿಡಿರಿ, ನಮಗದರ ಆತಂಕವೇನು! ನಮ್ಮ ಕೆಲಸವಿಲ್ಲಿಗೆ ಒಂದು ಹದಕ್ಕೆ ಬಂದಂತಾಯಿತು. ಇನ್ನು ಮುಂಬರಿವೆವು.

ಭಾಸ್ಕರಾಚಾರ್ಯರು ವಿದ್ಯಾರ್ಥಿವರ್ಗಕ್ಕೆ ಹಿತೋಪದೇಶ ಮಾಡುವುದರಲ್ಲಿ ನಿರತರಾಗಿ, ಶಿಷ್ಯಮಂಡಲಿಯ ಕಡೆಗೆ ಕೃಪಾದೃಷ್ಟಿಯಿಂದ ನೋಡುತ್ತಿದ್ದರೆಂದು ಹೇಳಿದೆವಷ್ಟೆ. ಭಾಸ್ಕರಾಚಾರ್ಯರು ಕ್ರಮಪ್ರಕಾರ ಶಿಷ್ಯಮಂಡಲಿಯನ್ನು ಕುರಿತು ''ಪ್ರಿಯಶಿಷ್ಯರೇ! ಎಂದಿನಂತೆ ನಮ್ಮ ಪರಮಪ್ರೀತ್ಯಾಸ್ಪದರಾದ ಗೀತಾಚಾರ್ಯರು ನಿಮಗೆ ಹೇಳುವ ಹಿತಬೋಧನೆಗಳನ್ನು ಕೇಳಿರಿ.'' ಎಂದು ನಿರೂಪಿಸಿ, ಗೀತಾಚಾರ್ಯರ ಮುಖವನ್ನು ನೋಡಿದರು. ಗೀತಾಚಾರ್ಯರು ಶಿಷ್ಯವರ್ಗವನ್ನು ಕುರಿತು ಹೀಗೆ ಹಿತಬೋಧೆಯನ್ನು ಮಾಡಿದರು. ''ನನ್ನ ಪರಮಪ್ರೀತ್ಯಾಸ್ಪದರಾದ ವಿದ್ಯಾರ್ಥಿಗಳೇ; ವಿದ್ಯಾರ್ಥಿನಿಯರೇ! ನೀವು ಕ್ರಮಪ್ರಕಾರ ವಿಶ್ರಾಂತಿಗಾಗಿ ಈ ದಿನದ ಉತ್ಸವದಲ್ಲಿ ನಿರತರಾಗಿರುತ್ತೀರಿ. ವಿರಾಮಕಾಲವೆಂದು ಸಾಮಾನ್ಯಜನರು, ವಿನೋದದಲ್ಲಿಯೇ ಕಾಲಕಳೆವಂತೆ, ನೀವೂ ವಿನೋದದಲ್ಲಿ ತಿರುಗದೆ, ವಿಚಾರಶಕ್ತಿಯನ್ನು ಉತ್ತೇಜನಗೊಳಿಸುವ ಉತ್ಸವಕಾರ್ಯಗಳಲ್ಲಿ ನಿರತರಾಗಿರುತ್ತೀರಿ, ಇಂದಿನ ವಿಶ್ರಾಂತಿಯನ್ನು ನೀವು ನಿಯಮದಿಂದ ಮತ್ತು ಸಾತ್ವಿಕಾಹಾರ, ಸಾತ್ವಿಕ ವಿಚಾರಗಳಿಂದ ಆತ್ಮಾವಲಂಬನೆಗೆ ಸಾಧನವಾಗಿ ಮಾಡಿಕೊಳ್ಳಬೇಕೆಂದಿರುವಿರಿ. ಅಹುದಷ್ಟೆ? ಹಾಗಾ

ದರೆ ಇದೇ ನಿಮಗೆ ಸ್ತುತ್ಯರ್ಹವಾದ ವಿರಾಮವು. ಏಕೆನ್ನುವಿರೋ ?

"ಪ್ರಿಯವಿದ್ಯಾರ್ಥಿಗಳೇ! ನೀವು ಇನ್ನೂ ವಿದ್ಯಾರ್ಥಿಗಳು; ಶಿಷ್ಯವೃತ್ತಿ ಗುರುಕುಲವಾಸದಲ್ಲಿರುವ ಬ್ರಹ್ಮಚಾರಿಗಳು! ಇಂತಹ ನಿಮ್ಮ ಸ್ವಭಾವ, ಭಾವನೆ, ವರ್ತನಗಳು ಕೂಡ, ಮೇಲಿನ ವಿದ್ಯಾರ್ಥಿ ನಿಯಮಕ್ಕೆ ಅನುಸಾರವಾಗಿ, ಶಿಷ್ಯವೃತ್ತಿ, ಗುರುಕುಲವಾಸಗಳ ಉದ್ದೇಶಕ್ಕೆ ತಕ್ಕಂತೆಯೂ, ಬ್ರಹ್ಮವರ್ಚಸ್ಸವನ್ನು ಹೆಚ್ಚಿಸುವಂತೆಯೂ ಇರಬೇಕು. ಹಾಗಾಗಬೇಕಾದರೆ ನಿಮ್ಮ ಸ್ವಭಾವವು, ಎಂದರೆ ಪ್ರಕೃತಿ ಗುಣವು, ಸಾತ್ವಿಕಭಾವನೆ, ಸಾರಾಸಾರ ವಿವೇಚನೆಗಳನ್ನೊಳಕೊಂಡಿರುವುದು ಅಗತ್ಯವಾಗಿದೆ. ಸಾತ್ವಿಕಭಾವನೆಯು ನಿಮ್ಮಲ್ಲಿರಬೇಕೆಂಬ ಆಶೆಯು ನಿಮಗಿದ್ದರೆ, ನೀವು ರಾಜಸ, ತಾಮಸ ವ್ಯಾಪಾರಗಳಲ್ಲಿ ಪ್ರವರ್ತಿಸಬಾರದೆಂದು ತಿಳಿಯಬೇಕಾದುದು ಮುಖ್ಯವು. ರಾಜಸ, ತಾಮಸ ವ್ಯಾಪಾರವೆಂದರೆ, ಏನೆಂದು ಕೇಳುವಿರೋ? ಹಾಗಿದ್ದರೆ ಸಂಗ್ರಹವಾಗಿ ಹೇಳುವೆನು. ಕೇಳಿರಿ,—ಸಾತ್ವಿಕವರ್ತನವೆಂದರೆ, ಪರಿಶುದ್ಧಾಂತಃಕರಣರಾಗಿ, ತಮ್ಮ ಆಶ್ರಮಕ್ಕೆ ನಿಯಮಿತವಾದ ಧರ್ಮದಲ್ಲಿ, ಕ್ರಮ ತಪ್ಪದೆನಡೆಯುವುದು. ತಾಮಸ, ರಾಜಸಗಳೆಂದರೆ, ಮನಸ್ಸನ್ನು ಕೆಡಿಸುವ ಕ್ಷುದ್ರ, ಅಥವಾ ಕ್ಷುಲ್ಲಕ ವಿಷಯಗಳಲ್ಲಿ ಎಂದರೆ ಅಂತರ್ದಾಹವನ್ನುಂಟುಮಾಡುವ ಆಹಾರ-ವಿಹಾರ-ವ್ಯವಹಾರಗಳಲ್ಲಿ ಪ್ರವರ್ತಿಸುವುದೆಂದು ಅರ್ಥವು. ಬ್ರಹ್ಮಚರ್ಯದಲ್ಲಿರಬೇಕಾದ ನಿಮಗೆ ಈ ಎರಡುಮಾರ್ಗವೂ ನಿಷಿದ್ಧವು. ನೀವು ಯಾವಾಗಲೂ ಶಾಂತಿ, ಸದಸದ್ವಿಚಾರ, ಸರಸಪ್ರಸಂಗಗಳಿಂದ ಮನಸ್ಸನ್ನು ವಿಕಸನಗೊಳಿಸುವ ಸತ್ಕ್ರಿಯಾಕಲಾಪಗಳಲ್ಲಿಯೇ ನಿರತರಾಗಿರಬೇಕು. ಮನಸ್ಸನ್ನು ಮತ್ತು ಬುದ್ಧಿಯನ್ನು ವಿಕಸನ ಪಡಿಸುವಂತಹ ವಿಶ್ರಾಂತಿಯೆಂದರೆ ಸಾಮಾನ್ಯವಾಗಿ ಭಗವನ್ನಾಮ ಸಂಕೀರ್ತನ, ಗುಣಕಥನಗಳನ್ನು ಮತ್ತು ಭಗವದ್ಭಕ್ತರಾದವರ ದಿವ್ಯಚರಿತೆಗಳನ್ನು

ಹೇಳಿ ಕೇಳುವದಕ್ಕೂ ಹೆಚ್ಚಿನ ಸುಖ-ಉತ್ಸಾಹ-ಸಮಾಧಾನಗಳು ಬೇರೆ ಇರಲಾರವು. ಆದುದರಿಂದಲೇ ಬಾಲಕರೆನ್ನಿಸಿರುವ ನಿಮ್ಮಲ್ಲಿ ಶಾಂತಿ ರಸವು, ಉತ್ತರೋತ್ತರಾಭಿವೃದ್ಧಿ ಹೊಂದುವಂತೆ ನೀವು ನಿಮ್ಮ ವಿಶ್ರಾಂತಿ ಕಾಲಗಳನ್ನು, ನಿಮ್ಮ ಮೇಧಾಶಕ್ತಿ, ಚಿತ್ತಶಕ್ತಿಗಳಿಗೆ ಉತ್ತೇಜನವು ದೊರೆವಂತೆ ಜಾಗರೂಕತೆಯಿಂದ ಉಪಯೋಗಿಸಿಕೊಳ್ಳಬೇಕು.

ಸಾಮಾನ್ಯವಾಗಿ ನೋಡಿದರೆ, ಹಾಸ್ಯ ವಿನೋದಗಳು, ಮಾನವನ ಬುದ್ಧಿ ಶಕ್ತಿಯನ್ನು ಹೆಚ್ಚಿಸುವದೆಂಬಭಾವವೂ, ಅದಕ್ಕೆ ಅನುಸಾರವಾದ ವ್ಯಾಪಾರಗಳೂ ನಮ್ಮವರಲ್ಲಿ ಬಹು ಭಾಗಗಳಲ್ಲಿ ತೋರಿ ಬರುತ್ತಿವೆ. ಪೂರ್ವಾಪರ ವಿಚಾರವುಳ್ಳವರಿಗೆ ಅಂತಹ ವ್ಯಾಪಾರಗಳು ಉಚಿತವಾಗಿ ಕಾಣುವುದಿಲ್ಲ. ಏಕೆಂದರೆ; ಅವೆಲ್ಲವೂ, ಮತ್ತಷ್ಟು ದುರಾಶೆಯನ್ನು ಹೆಚ್ಚಿಸತಕ್ಕ ದುರ್ಗುಣಗಳುಳ್ಳವುಗಳು. ದೃಷ್ಟಾಂತವು ಬೇಕೆಂದರೆ ನೋಡಿರಿ,—ಒಂದು ಬಾರಿ ನಾಟಕವನ್ನು ನೋಡಿ ಬಂದಿರೆಂದರೆ, ಮತ್ತೆ ಮತ್ತೆಯೂ ನಿಮಗೆ ನಾಟಕಾವಲೋಕನದ ಕುತೂಹಲವುಂಟಾಗುವುದು. ಒಂದು ತಡವೆ, ನೀವು, ಸ್ತ್ರೀಯರಲ್ಲಿ ಸರಸ ಸಲ್ಲಾಪವನ್ನು ನಡೆಯಿಸಿ ಬಂದಿರೆಂಡರೆ, ಅದು ಅಷ್ಟಕ್ಕೇ ನಿಮ್ಮ ಮನಸ್ಸನ್ನು ಬಿಟ್ಟು ಹೋಗುವುದಿಲ್ಲ. ಅಡಿಗಡಿಗೆ ಆ ನಿಮ್ಮ ಸಲ್ಲಾಪಗಳು ಮನಸ್ಸಿನಲ್ಲಿ ಹೊಳೆಹೊಳೆದು, ಒಂದು ಬಗೆಯ ಭ್ರಾಂತಿಯನ್ನು ಅಥವಾ ಆಹ್ಲಾದವನ್ನು ಉಂಟುಮಾಡುವುದು. ಹಾಗೆ ಉಂಟಾದ ಭ್ರಾಂತಿ, ಇಲ್ಲವೆ ಆಹ್ಲಾದಗಳ ಪ್ರೇರಣೆಯಿಂದ ನಿಮ್ಮ ಚಿತ್ತವು ಅಂತಹ ಸರಸ ಸಲ್ಲಾಪಗಳನ್ನು ಪುನಃಪುನಃ ನಡೆಯಿಸಬೇಕೆಂದು ಆತುರಗೊಳ್ಳುವುದಕ್ಕೂ ಹಿಂದೆಗೆಯುವದಿಲ್ಲ. ಹಾಗೆಯೇ ಒಂದುಸಲ ಬಹುಜನರೊಡನೆ ಸೇರಿ, ಎಂದರೆ ನಿಮ್ಮ ಧರ್ಮದಲ್ಲಿಯೇ ಇರುವವರಲ್ಲದೆ ಇತರ ಭಿನ್ನಭಿನ್ನಾಶ್ರಮಧರ್ಮದಲ್ಲಿರುವವರೆಲ್ಲರೂ ಬೆರೆದು ನಡೆಯಿಸುವ ವಿನೋದಕೂಟಗಳಲ್ಲಿ ಸೇರಿ, ಅವರಂತೆ ನಿಮ್ಮ ಆಶ್ರಮಧರ್ಮಕ್ಕೆ ವಿರೋ

ಧಗಳಾದ ಆಹಾರ ವ್ಯವಹಾರಗಳನ್ನು ನಡೆಯಿಸಿ ಬಂದರೆ ಸಾಕು; ಆಗಿನ ನಿಮ್ಮ ಚಿತ್ತವೃತ್ತಿ, ಮೊದಲಿದ್ದುದಕ್ಕೆ ವಿಪರೀತವಾಗಿ ತೋರುವುದು. ಆಗ ನಿಮಗೆ, ಮೊದಲಿನ ನಿಮ್ಮ ಚಿತ್ತವು, ಶೂನ್ಯಗೃಹದಂತೆ, ಭಾವನಾ ರಹಿತವಾಗಿದ್ದಂತೆಯೂ, ಮುಂದೆ ನೀವು ಮಾಡಿ ಬಂದ ವ್ಯವಹಾರಾದಿಗ ಳಿಂದ ಭಾವನಾಪೂರ್ಣವಾದಂತೆಯೂ ದುರಭಿಮಾನವು ಹುಟ್ಟುವುದು, ಇಂತಹ ದುರಭಿಮಾನವೇ ಮಾನವನ ಅಧೋಗತಿಗೆ ಕಾರಣವೆಂದಿಲ್ಲಿ ನಾನು ಹೇಳಬೇಕಾಗಿಲ್ಲ.

ನನ್ನ ಪ್ರಿಯಶಿಷ್ಯರೇ! ಪ್ರಥಮ ಆಶ್ರಮಧರ್ಮದಲ್ಲಿರುವ ನೀವು, ಈಗಲೇ ನಿಮ್ಮ ಚಿತ್ತಶಕ್ತಿಯನ್ನು ಬೆಳೆಯಿಸಿ, ಅಲ್ಲಿ ಶಾಂತಿ, ಧೃತಿ, ಭಕ್ತಿ, ಪ್ರೀತಿ, ಸತ್ಯಗಳೆಂಬ ಪಂಜರಾಗಗಳಿಂದ ಅದನ್ನು ಭದ್ರಪಡಿಸಿ ಕೊಳ್ಳಬೇಕಾದುದು ನಿಮ್ಮ ಆದ್ಯ ಕರ್ತವ್ಯವಾಗಿದೆ. ಇದನ್ನು ನಿಮ್ಮ ತಿಳಿವಿಗೆ ತರುವ ಉದ್ದೇಶದಿಂದಲೇ ನಿಮ್ಮ ಗುರುಗಳು ನಿಮಗೆ ಈ ವಿಶ್ರಾಂತಿ ದಿನದ ಉತ್ಸವವನ್ನು ಏರ್ಪಡಿಸಿರುತ್ತಾರೆ. ಈ ವಿಶ್ರಾಂತಿಯು ನಿಮ್ಮ ಆಚಾರ ವಿಚಾರಗಳಲ್ಲಿ ಅಜ್ಞಾತದೋಷಗಳಿಂದ ನಡೆದಿರಬಹುದಾದ ನ್ಯೂನಾತಿರೇಕಗಳನ್ನು ಕ್ರಮಪಡಿಸಿಕೊಡುವ, ಮತ್ತು ನಿಮ್ಮ ಹೃದಯ ದಲ್ಲಿ ಭಗವದ್ಭಕ್ತಿ ದೈವಿಕಪ್ರೇಮಗಳ ನಿರ್ಮಲ ಭಾವನೆಯುತ್ಪನ್ನವಾಗಿ, ನಿಮ್ಮ ಮಿದುಳಿನಲ್ಲಿ ಆಲೋಚನಾಶಕ್ತಿ ವೃದ್ಧಿಯಾಗುವಂತೆ ಮಾಡುವ, ಸಾಧನವಾಗಿರಬೇಕೆಂಬುದೇ ನಿಮ್ಮ ಗುರುದೇವರ ಉದ್ದೇಶವಾಗಿರುತ್ತದೆ. ಇಂತಹ ಪವಿತ್ರವಾದ ಉದ್ದೇಶವನ್ನು ನೀವು ತ್ರಿಕರಣಸಾಕ್ಷಿಯಾಗಿ ಪಾ ಲಿಸಿಕೊಂಡು ಬರಬೇಕೆಂಬುದೇ ನನ್ನ ಕೋರಿಕೆಯಾಗಿದೆ. ಇನ್ನು ಹಿಂದಿನ ವಾರದ ನಿಮ್ಮ ಆಚರಣೆಗಳ ಗುಣದೋಷ ನಿರೂಪಣವನ್ನು ಗುರುದೇವರ ಬಾಯಿಂದಲೇ ನೀವು ಕೇಳಬೇಕಾಗಿರುವುದರಿಂದ ಮತ್ತಷ್ಟು ಎಚ್ಚರಿಕೆ

ಹೊಂದಿ, ಆವರ ಉಪದೇಶಕ್ಕೆ ಗಮನ ಕೊಡಬೇಕೆಂದು ನಿಮಗೆ ಸೂಚಿಸುತ್ತಿರುವೆನು.

ಹೀಗೆ ಹೇಳಿ ಗೀತಾಚಾರ್ಯರು ಸುಮ್ಮನಾಗಿ ಕುಳಿತರು. ಶಿಷ್ಯರೆಲ್ಲರೂ ಗುರೂಪದೇಶವನ್ನು ಪಡೆಯಲು ಮತ್ತಷ್ಟು ಆತುರದಿಂದ ನೋಡತೊಡಗಿದರು.

ಭಾಸ್ಕರಾಚಾರ್ಯರು ಕರುಣಾವ್ಯಂಜಕಸ್ವರದಿಂದ—

''ಪ್ರಿಯಪುತ್ರರೇ! ಹೆತ್ತವರು, ಬುದ್ಧಿ ಕಲಿಸಿದವರು, ಆಪತ್ತಿನಲ್ಲಿ ಕಾಪಾಡಿದವರು, ಆಶ್ರಮವನ್ನಿತ್ತು ಮಾರ್ಗವನ್ನು ತೋರಿಸಿಕೊಟ್ಟವರು, ಮತ್ತು ಧರ್ಮಪ್ರಭುಗಳು—ಈ ಐವರೂ ನಿಮಗೆ ತಂದೆಗಳಾಗಿರುತ್ತಾರೆ. ನೀವು ಈ ಐವರಲ್ಲಿಯೂ ನಿಷ್ಕಲ್ಮಷವಾದ ಪ್ರೀತಿಗೌರವಗಳನ್ನಿರಿಸಿ, ಆವರ ಸಂದೇಶಕ್ಕೆ ವಿರೋಧವನ್ನಾಚರಿಸದೆ ಸರ್ವದಾ ಸರ್ವಾವಸ್ಥೆಗಳಿಂದಲೂ ಆವರಅನುಗ್ರಹವೇ ನಿಮ್ಮ ಪುರೋವೃದ್ಧಿ ಸಾಧನವೆಂದು ನಂಬಿ ಸತ್ಯಸಂಧರಾಗಿ ನಡೆಯುವುದು ನಿಮ್ಮ ಕರ್ತವ್ಯವಾಗಿದೆ. ಈ ನಿಮ್ಮ ಕರ್ತವ್ಯದಲ್ಲಿ ನೀವು ಎಳ್ಳಷ್ಟು ತಪ್ಪಿ ನಡೆದರೂ ನಿಮಗೆ ಈ ನಿಮ್ಮ ತಂದೆಗಳ ಅನುಗ್ರಹವು ಕಡಮೆಯಾಗಬಹುದಾಗಿದೆ. ಆದುದರಿಂದ ನಿಮ್ಮ ಮನಸ್ಸಿನಲ್ಲಿ ಮೇಲೆ ಹೇಳಿದ ಸದ್ಭಾವನೆಯು ದೃಢವಾಗಿರಬಹುದೆಂದು ನಾನು ನಂಬಿರುವೆನು.

ಮೇಲೆ ಹೇಳಿದಂತೆ ನೀವು ನಿಮ್ಮ ವಿದ್ಯಾ ಬೋಧಕ ಅಥವಾ ಜ್ಞಾನದಾಯಕರಾದ ಗುರುಗಳನ್ನು ತಂದೆಗಳೆಂದು ನಂಬಿರುವ ಪಕ್ಷದಲ್ಲಿ ನಾನು ನಿಮಗೆ ತಂದೆಯಾದೆನು. ನೀವು ನನಗೆ ಪುತ್ರರಾದಿರಿ. ಮಕ್ಕಳಾದ ನಿಮ್ಮ ಅಭ್ಯುದಯ ಚಿಂತನೆಯು ನನ್ನಲ್ಲಿ ಬಲವಾಗಿರುವುದು. ನಿಮ್ಮ ಸದ್ವರ್ತನೆಗಳನ್ನು ನೋಡಿ ತಂದೆಯಾದ ನನ್ನ ಮನಸ್ಸಮಾಧಾನವಾಗಬೇಕೆಂಬ ಕೃತಜ್ಞತಾ ಬುದ್ಧಿಯು ನಿಮ್ಮಲ್ಲಿರುವುದು. ಹೀಗೆ ಪರಸ್ಪರ ಸ್ನೇ

ಹಣೇಯವಾದ ಪ್ರೇಮಪಾಶವು ಉಭಯವರ್ಗವನ್ನು ಬಂಧಿಸಿಕೊಂಡಿರುವುದು. ಹಾಗೆಯೇ ಎಂದರೆ ನಾನು ನಿಮಗೆ ತಂದೆಯಾಗಿರುವಂತೆಯೇ ಗೀತಾಚಾರ್ಯರೂ ನಿಮಗೆ ತಂದೆ. ಅವರಿಂದಲೇ ನೀವು ವಿಶೇಷವಾಗಿ ಜ್ಞಾನ ಲಾಭ ಹೊಂದಬೇಕು. ಏಕೆಂದರೆ ಈ ದಿನದ ವಿಶ್ರಾಂತಿಗೂ, ವಿಶ್ರಾಂತಿಯ ನಿಜವಾದ ಫಲವನ್ನು ಪಡೆಯಲು ಈ ಉತ್ಸವ ಸಮಾರಂಭಕ್ಕೂ ಇವರೇ ಪ್ರೇರಕರು ಮತ್ತು ಕಾರ್ಯ ನಿರ್ವಾಹಕರು! ಇವರ ಹಿತಬೋಧನೆಯಿಂದಲೇ ನೀವು ನಿಮ್ಮ ಗುರುಕುಲವಾಸದ ಶ್ರಮವನ್ನು ಸಾಫಲ್ಯಗೊಳಿಸಿಕೊಳ್ಳಬೇಕಲ್ಲದೆ ನಿಮ್ಮ ನಿಮ್ಮ ಬ್ರಹ್ಮಚರ್ಯ,ವಿದ್ಯಾರ್ಥಿಕರ್ತವ್ಯಗಳ ಅಭ್ಯಾಸಗಳನ್ನು ಕ್ರಮತಪ್ಪದೆನಡೆಯಿಸಿ, ಅರ್ಥಸಿದ್ಧಿ ಹೊಂದುವಂತಾಗಬೇಕು. ಆದುದರಿಂದಲೇ ನಿಮ್ಮನ್ನು ಅವರ ಅಮೋಘವಾದ ಹಿತಬೋಧನೆಯಂತೆ ಜಾಗರೂಕರಾಗಿವರ್ತಿಸಬೇಕೆಂದು ಪುನಃ ಎಚ್ಚರಿಸುತ್ತಿದ್ದೇನೆ.

ಇರಲಿ, ಪ್ರಿಯಪುತ್ರರೇ! ಮೇಲೆ ಹೇಳಿದುದರಿಂದ ನಿಮಗೆ ನಾವೀರ್ವರೇ ತಂದೆಗಳೆಂದು ಹೇಳಿದಂತೆ ತಿಳಿಯಬಾರದು. ತಾರಾಕಾಂತ ಬಾಬುಗಳೂ ನಿಮಗೆ ತಂದೆಯಾಗಿದ್ದಾರೆ. ಅವರ ಆಜ್ಞೆಯನ್ನೂ ನೀವು ನಡೆಯಿಸಬೇಕಾಗಿದೆ. ಈ ವಿಷಯದಲ್ಲಿ ಸಂದೇಹವೆಳ್ಳಷ್ಟೂ ಇಲ್ಲ. ಆದರೆ ಒಂದು ವಿಚಾರದಲ್ಲಿ ಮಾತ್ರ ನಾನು ಈ ನಮ್ಮ ಪ್ರಿಯಬಂಧುಗಳಾದ ತಾರಾಕಾಂತರಲ್ಲಿಯೂ, ಮಕ್ಕಳಾದ ನಿಮ್ಮಲ್ಲಿಯೂ ಸೂಚಿಸಬೇಕಾಗಿರುವುದು. ಅದು, ಮತ್ತೇನೂ ಅಲ್ಲ. ಈ ನಮ್ಮ ಬಂಧುಗಳು ನಿನ್ನೆ ನಡೆಯಿಸಿದ ತಮ್ಮ ಜನ್ಮದಿನದ ಉತ್ಸವವು, ಸಂಭ್ರಮವಾಗಿ ನಡೆಯಿತೆಂದೂ, ಇವರು ತಮ್ಮ ಶಿಷ್ಯರಾದ ನಿಮ್ಮೆಲ್ಲರನ್ನೂ ಕರೆಯಿಸಿಕೊಂಡು ನಿಮಗಾಗಿ ಔತನ, ವಿನೋದ ಕೂಟ, ಸವಿನೋಟಗಳನ್ನು ಏರ್ಪಡಿಸಿ, ನಿಮ್ಮನ್ನು ಅತ್ಯಾದರದಿಂದ ಸತ್ಕರಿಸಿದರೆಂದೂ ತಿಳಿದು, ಇವರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಇಂತಹ ಉತ್ಸವಗಳನ್ನು ಅಡಿಗಡಿಗೂ ನಡೆ

ಯಿಸಿ ನಿಮ್ಮ ಮನಸ್ಸನ್ನು ಆಹ್ಲಾದಗೊಳಿಸುವುದು ಹಿರಿಯರಾದ ನಮಗೆ ಸಹಜವೇಸರಿ. ಆದರೂ ಆ ಉತ್ಸವದಲ್ಲಿ ಪ್ರಮಾದಗಳುಂಟಾಗದಂತೆ ನೋಡಿಕೊಳ್ಳಬೇಕಾದುದು ನಮ್ಮ ಕೆಲಸವಾಗಿರುತ್ತದೆ. ನಮ್ಮ ಮಕ್ಕಳ ಮನಸ್ಸು ಲಲ್ಲೆ-ಚಲ್ಲಾಟಗಳಿಂದ ಕೊಳೆತು ಹೋಗುವಂತಹ ಕೆಟ್ಟವ್ಯಾಪಾರಕ್ಕೆ ನಾವೇ ಅಣಿಮಾಡಿಕೊಡುವುದಾದರೆ ಮಕ್ಕಳಿಗೆ ನಾವೇ ಪ್ರಬಲ ಶತ್ರುಗಳಾಗುತ್ತೇವೆ.

ಹಿತಶತ್ರುತ್ವವೆನ್ನಿಸುವ ಇಂತಹ ಕೆಲಸವನ್ನು ಮಾಡಬೇಕೆಂಬ ಬುದ್ಧಿ, ನಮ್ಮ ಪ್ರಿಯಬಂಧುಗಳಾದ ತಾರಾಕಾಂತರಲ್ಲಿಲ್ಲವೆಂದು ನಾನು ಸಪ್ರಮಾಣವಾದ ಹೇಳಬಲ್ಲೆನಾದರೂ, ನಿನ್ನೆ ಅವರು ಈ ವಿದ್ಯಾನಿಲಯದ ಉದ್ದೇಶ, ವಿದ್ಯಾರ್ಥಿಗಳ ಕರ್ತವ್ಯ, ಶಿಷ್ಯರ ಪುರೋವೃದ್ಧಿ ಮಾರ್ಗಗಳ ವಿಷಯವಾಗಿ ಅಷ್ಟುದೂರ ವಿಚಾರಮಾಡದುದರಿಂದಲೋ, ಅಥವಾ ಅವರ ಇತರ ಮಿತ್ರ ವರ್ಗದವರ ಮನೋಲ್ಲಾಸಕ್ಕೆಂದು ಏರ್ಪಡಿಸಿದ ಉತ್ಸವದಲ್ಲಿ ಅಷ್ಟು ನಿಯಮ-ನಿರ್ಬಂಧಗಳಿರಬಾರದೆಂಬ ಭಾವನೆಯಿಂದಲೋ ಇಲ್ಲವೆ ವಿದ್ಯಾರ್ಥಿಗಳು ಏಕತ್ರಸೇರಿ ಇಂತಹ ವಿನೋದದಲ್ಲಿ ತೊಡಗಿದರೆ ಅವರು ಪರಸ್ಪರ ಐಕಮತ್ಯ, ಭ್ರಾತೃಸ್ನೇಹಗಳುಳ್ಳವರಾಗುತ್ತಾರೆಂಬ ಸದುದ್ದೇಶದಿಂದಲೋ ಯಾವಕಾರಣದಿಂದಲೋ ನಿನ್ನಿನ ಉತ್ಸವವನ್ನು ಹಾಗೆ ವಿನೋದಕೂಟವಾಗಿ ಮಾಡಿದ್ದರೆಂದು ತರ್ಕಿಸಬೇಕಾಗಿದೆ. ಹೇಗೂ, ಆ ಕೂಟದಲ್ಲಿ ಒಂದೆರಡು ವಿದ್ಯಮಾನಗಳಲ್ಲಂತೂ ಭಗವದ್ಭಕ್ತಿ ಮತ್ತು ಸಾಧುವಿಚಾರಗಳಿಗೆ ಆತಂಕವೆನ್ನಿಸುವ ಆಧುನಿಕ ನೃತ್ಯಗೀತ ವಾದನಗಳೂ, ಸಂಶಯಕ್ಕೆ ಕಾರಣವಾಗಬಹುದಾದ ಕೆಲವು ಸಂಭಾಷಣೆಗಳೂ,ನಡೆದುವೆಂದು ತಿಳಿಯುತ್ತೇವೆ. ಅಲ್ಲದೆ, ಆ ಸಂದರ್ಭದಲ್ಲಿಯೇ ನಮ್ಮ ವಿದ್ಯಾರ್ಥಿವರ್ಗದಲ್ಲಿ ಒಬ್ಬಿಬ್ಬರು ಮರ್ಯಾದೆಯನ್ನು ಮೀರಿ, ನಿರ್ಲಜ್ಜೆಯಿಂದ ಉಚ್ಛೃಂಖಲವರ್ತನದಲ್ಲಿ ಪ್ರವರ್ತಿಸಲೆತ್ನಿಸಿದರೆಂದೂ, ಆ ಕಾರಣದಿಂದ

ಹೆಣ್ಣುಹುಡುಗಿಯರು ತುಂಬಾ ಖತಿಗೊಂಡು ಬಂದರೆಂದೂ ತಿಳಿದು ತುಂಬಾ ವಿಷಾದಿಸುತ್ತಿದ್ದೇವೆ. ಇನ್ನು ಮುಂದೆ ನಮ್ಮ ಬಂಧುಗಳು ಇಂತಹ ಅಪವಾದಗಳಿಗೆ ಅವಕಾಶಕೊಡುವರಾಗಿಲ್ಲವೆಂದೂ ಆಶಿಸುತ್ತೇನೆ. ಏಕೆಂದರೆನಮ್ಮ ಮಿತ್ರವರ್ಗದವರಲ್ಲಿ ಕೆಲವರು ತಮ್ಮ ಶಿಷ್ಯವರ್ಗವನ್ನು ಅಡಿಗಡಿಗೆತಮ್ಮ ರಾಣಿವಾಸಕ್ಕೆ ಕರೆಯಿಸಿಕೊಳ್ಳುವುದೂ,ಅಲ್ಲಿ ಅವರಿಗೆ ತಮ್ಮ ಹೆಣ್ಣುಮಕ್ಕಳ ಮೂಲಕ ಉಪಚಾರವಮಾಡಿ ಉಬ್ಬಿಸಿಕಳುಹುವುದೂ, ಅಂತಹದರಿಂದ ಅವರು ಕೇವಲ ವಿಲಾಸಪ್ರಿಯರಾಗಿ, ತಮ್ಮ ತಮ್ಮ ಸ್ಥಿತಿ,ಕರ್ತವ್ಯ, ಧರ್ಮಗಳನ್ನು ಉಪೇಕ್ಷಿಸಿ, ಅಭ್ಯಾಸಯೋಗವನ್ನು ಹಾಳುಮಾಡಿಕೊಂಡು, ಅಧೋಗತಿಗೆ ಬೀಳುತ್ತಿರುವುದು, ನಮ್ಮ ಪ್ರಿಯ ಬಂಧುಗಳಾದ ತಾರಾಕಾಂತರಿಗೆ ತಿಳಿಯದ ಅಂಶವೇನೂ ಅಲ್ಲ. ಆದುದರಿಂದ ಇವರು ತಮ್ಮ ಮಕ್ಕಳನ್ನು ಮುಂದಕ್ಕೆ ತರಬೇಕಾದ ಕಾರ್ಯದಲ್ಲ ತಾವು ಸ್ವಲ್ಪ ಮಾತ್ರವೂ ಉಪೇಕ್ಷೆಮಾಡುವರಲ್ಲವೆಂದು ನಾನು ಭಗವಂತನನ್ನು ಸಾಕ್ಷಿಯಾಗಿಟ್ಟು ಹೇಳಬಲ್ಲೆನು.……….

ಗುರುಗಳು ಇನ್ನೂ ಏನನ್ನೋ ಹೇಳಬೇಕೆಂದಿದ್ದರು; ಅಷ್ಟರಲ್ಲಿಯೇ ಗೀತಾಚಾರ್ಯರು ಶಿಷ್ಯವರ್ಗವನ್ನು ನೋಡಿ, ಕುತೂಹಲದಿಂದ "ಮಧುಮಿತ್ರನೇಕೆ ಬಂದಿಲ್ಲ'?' ಎಂದು ಕೇಳಿದರು.

ಅಕ್ಷಯ--ಖಿನ್ನನಾಗಿ "ಆತನು ಬಂದಿಲ್ಲ, ನಿನ್ನೆ ರಾತ್ರಿಯಿಂದ ಅವನನ್ನು ನಾವಾರೂ ನೋಡಿಲ್ಲ."

ಗೀತಾ—ಏನು, ನಿನ್ನೆರಾತ್ರಿಯಿಂದ ನೋಡಿಲ್ಲವೆ? ಎಲ್ಲಿ ಹೋಗಿರಬಹುದು?

ಪ್ರಭಾ—ಎಲ್ಲಿ ಹೋಗಿರಬಹುದೆಂಬುದನ್ನು ನಾವು ಹೇಳಲಾರೆವು. ಹೇಗೂ ನಳಿನೀಕಾಂತನೊಡನೆ ನಿನ್ನೇರಾತ್ರಿಯಲ್ಲಿ ಮಂದಿರದಿಂದ ಹೊರಬಿದ್ದು ಹೋಗುತ್ತಿದ್ದುದನ್ನು ಕಂಡು ಕೂಗಿದೆನು. ಆದರೆ ಅವರು ಹಿಂದಿರುಗಿ ಬಂದುದನ್ನು ನಾನು ನೋಡಲಿಲ್ಲ.

ಭಾಸ್ಕರಾಚಾರ್ಯರು ತಮ್ಮ ಭಾಷಣವನ್ನು ಅಷ್ಟಕ್ಕೆ ನಿಲ್ಲಿಸಿ ನಿಟ್ಟು ಸಿರಿಟ್ಟು ಕೇಳಿದರು. ''ಏನು, ಮಧುಮಿತ್ರನು ಬಂದಿಲ್ಲ! ರಾತ್ರಿ, ಮಂದಿರವನ್ನು ಬಿಟ್ಟು ಹೋದನು,-ಜತೆಯಲ್ಲಿ ನಳಿನೀಕಾಂತನೂ ಇದ್ದನು.- ಇದು ನಿಜವೇ? ನಳಿನೀಕಾಂತನು ಇಲ್ಲಿಗೆ ಬಂದಿಲ್ಲವೆ. "—

ನಳಿನೀ—ಗುಂಪಿನಲ್ಲಿ ಕುಳಿತಿದ್ದವನು ಎದ್ದು ನಿಂತು, 'ನಿಜ, ನಾವಿಬ್ಬರೂ ರಾತ್ರಿ ಮಂದಿರವನ್ನು ಬಿಟ್ಟು ಹೊರಗೆ ಹೋಗಿದ್ದುದುಂಟು, ಆದರೆ ಬಹುದೂರ ಹೋಗಿರಲಿಲ್ಲ. ಹೊರಬಾಗಿಲಲ್ಲಿ ಸ್ವಲ್ಪ ಹೊತ್ತು ನಿಂತಿದ್ದು ಬಂದೆವು.'

ಭಾಸ್ಕರಾ—ಹಾಗಾದರೆ, ಮಧುಮಿತ್ರನು ಬಂದಿಲ್ಲವೇಕೆ? ಮತ್ತೆಲ್ಲಿರುವನು?

ನಳಿನೀ—ನನಗಾತನ ವರ್ತಮಾನವೇನೂ ತಿಳಿದಿಲ್ಲ. ಮತ್ತೆಲ್ಲಿಗಾದರೂ ಹೋಗಿರಬಹುದು.

ಭಾಸ್ಕರಾ—ಖತಿಯಿಂದ '' ಮತ್ತೆ ಸ್ವೈರ ವೃತ್ತಿಗೆ ಬಿದ್ದನೇ ? ಮತ್ತೆ ಅವನ ದುರುಳತನಕ್ಕೆ ಮೊದಲು ಮಾಡಿದನೇ ? ಅವನ ತಾಯಿಯ ನಿರೀಕ್ಷೆಗೆ ಭಂಗವುಂಟಾಗುವ ಗತಿಯಾಯ್ತೇ? ನನ್ನ ಅಭಯವೇನಾಯ್ತು ?''

ಗೀತಾಚಾರ್ಯರು ಮೆಲ್ಲನೆ '' ಚಿತ್ತಕ್ಷೋಭೆಗೆ ಅವಕಾಶ ಕೊಡಬಾರದು. ಸಾಧ್ವೀಮಣಿಯ ಸತ್ಸಂಕಲ್ಪವೂ ತಮ್ಮ ಸದುದ್ದೇಶ-ಸತ್ಯವಾಕ್ಯಗಳೂ ಹೇಗೂ ಸುಳ್ಳಾಗಲಾರವು. ಈಗ ಒಂದು ವೇಳೆ ಮಧುಮಿತ್ರನು ದುಸ್ಸಹವಾಸದಿಂದ ದುರ್ಮಾರ್ಗದಲ್ಲಿ ಕಾಲಿಟ್ಟಿರಬಹುದೆಂಬ ಶಂಕೆಗೆ ಅವಕಾಶವಿದ್ದರೂ, ಅವನಿಗೆ ಶ್ರೇಯಸ್ಸಾಗುವಂತೆ ಅನುಗ್ರಹಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.''

ಭಾಸ್ಕರಾ—ತಲೆದೂಗಿ, ಶಿಷ್ಯಮಂಡಲಿಯ ಕಡೆಗೆ ತಿರುಗಿ-''ಮಕ್ಕಳೇ ! ನಿಮಗೆ ಇನ್ನೂ ಎಷ್ಟೋ ವಿಚಾರಗಳನ್ನು ಹೇಳಬೇಕೆಂದಿದ್ದೆನು.

ಆದರೆ ಅಷ್ಟರಲ್ಲಿ ಮಧುಮಿತ್ರನ ವಿಚಾರವು ಅಡ್ಡಬಂದುದರಿಂದ ಮನಸ್ಸು ತುಂಬಾವ್ಯಾಕುಲಗೊಂಡಿದೆ. ಈಗ ಹೆಚ್ಚು ಹೇಳಲಾರೆ, ಮುಖ್ಯವಾಗಿ ನೀವೆಲ್ಲರೂ ಜಾಗರೂಕತೆಯಿಂದಲೂ, ಆಸಕ್ತಿಯಿಂದಲೂ ನಿಮ್ಮನಿಮ್ಮ ಅಭ್ಯಾಸಯೋಗವನ್ನು ಸಾಧಿಸಿಕೊಂಡು ಬರಬೇಕೆಂದು ಹೇಳುತ್ತೇನೆ. ನಿಮ್ಮಲ್ಲಿ ಆವ ಒಬ್ಬನು ದುರ್ಮಾರ್ಗಕ್ಕೆ ಬಿದ್ದರೂ ನಮಗೆ ಅಪಕೀರ್ತಿಯೂ ಅಂತಸ್ತಾಪವೂ ತಪ್ಪುವುದಿಲ್ಲ. ನೀವು ಸತ್ಕೀರ್ತಿವಂತರಾಗಿ ಅಭ್ಯುದಯವನ್ನು ಹೊಂದಿ ಪ್ರಕಾಶಿಸುವುದನ್ನು ನೋಡಬೇಕೆಂಬುದೇ ನಮ್ಮ ಗುರಿಯಾಗಿದೆ. ಈ ನಮ್ಮ ಗುರಿಯನ್ನು ತಪ್ಪಿಸದೆ ಸಾಫಲ್ಯಗೊಳಿಸುವುದೇ ನೀವು ನಮಗೆ ಕೊಡಬೇಕಾದ ಗುರುದಕ್ಷಿಣೆ! ಇದನ್ನು ಚನ್ನಾಗಿ ತಿಳಿದುಕೊಳ್ಳಿರಿ. ಮಧುಮಿತ್ರನ ಈ ದಿನದ ವಿಚಾರವು ನಿಮಗೆ ಎಚ್ಚರಿಕೆಗಾಗಿ ಬಂದಿರುವದೆಂದು ತಿಳಿಯಿರಿ!! ಮತ್ತು ಮಧುಮಿತ್ರನೊಬ್ಬನ ಅಪಚಾರದಿಂದ ಇಷ್ಟು ವ್ಯಾಕುಲಪಡುತ್ತಿರುವ ನಮ್ಮನ್ನು ನೋಡಿ ನಮ್ಮ ಮನಸ್ಸಮಾಧಾನಮಾಡುವಂತೆ ಮಾಡಲು ನೀವೆಲ್ಲರೂ ಸದ್ವರ್ತನವನ್ನು ಹಿಡಿಯಿರಿ ಭಗವತಿಯು ನಿಮಗೆ ಬೆಂಬಲವಾಗಿರಲಿ.

(ತಾರಾಕಾಂತ ಗೀತಾಚಾರ್ಯರೊಡನೆ ಶಾರದೆಯ ಕಡೆಗೆ ತಿರುಗಿ)

"ಹೇ, ಭಗವತಿ ! ಭಾರತಿ ! ಭಕ್ತವ್ರಾತವನ್ನು ಕಟಾಕ್ಷಿಸು ಉದ್ಧರಿಸು."—

ಎಂದು ಪ್ರಾರ್ಥಿಸಿದರು. ಆ ಬಳಿಕ ಗುರುಜನರ ಆಜ್ಞೆಯಂತೆ ಶಿಷ್ಯರೆಲ್ಲರೂ ಮಂಗಳ ಗೀತಗಳನ್ನು ಹೇಳಿದರು. ಉತ್ಸವಕಾರ್ಯವೂ ಸಾಂಗವೆನ್ನಿಸಿತು.

———o———

ವಿಶ್ವಸನೀಯರಾದ ಕರ್ಣಾಟಭಗಿನೀ-ಬಾಂಧವರೇ ?:—

ಹಿಂದೆ ಷಷ್ಠ ಪರಿಚ್ಛೇದ ವಿಲೇಖನದಿಂದ ನಮ್ಮ ದೇಶೀಯರನ್ನು ಸಿಟ್ಟಿಗೇರಿಸಿದ್ದೆವು. ಇಂದು ಮತ್ತೆ ಈ ದಶಮಪರಿಚ್ಛೇದ ವಿಲೇಖನದಿಂದ ಅವರ ಸಿಟ್ಟಿಗೆ ಧೂಪವನ್ನೂ ಹಾಕಬೇಕಾಗಿ ಬಂದುದಕ್ಕೆ ವಿಷಾದಿಸುವೆವು. ಆದರೆ ನಾವೇನು ಮಾಡುವ? ಈವರೆಗೆ ತಾಳ್ಮೆಯಿಂದ ನೋಡಿ-ನೋಡುತ್ತ ಸುಮ್ಮನಿದ್ದೆವು. ಇನ್ನು ನಮ್ಮ ತಾಳ್ಮೆಯು ನಮ್ಮ ಜನಾಂಗದ ಅಭ್ಯುದಯಕ್ಕೇ ಹಾನಿಕರವೆಂದು ನಮಗಿದೇ ಬೋಧೆಯಾಯಿತು. ನಮ್ಮ ಭಾಸ್ಕರಾಚಾರ್ಯರ ಮತ್ತು ಗೀತಾಚಾರ್ಯರ ಉಪದೇಶ ಪ್ರಭಾವದಿಂದ ನಮ್ಮ ಮನೋರಾಜ್ಯದಲ್ಲಿ ಕೋಲಾಹಲವೆದ್ದು ಈವರೆಗೆ ನಾವು ಹೃತ್ಕೋಶದಲ್ಲಿ ಅಡಗಿಸಿಕೊಂಡಿದ್ದ ಭಾವನೆಗಳನ್ನು ಉದ್ರೇಕಭರದಿಂದ ಈಗಲಿದೋ ಹೊರಗೆಡಹುತ್ತಿರುವೆವು. ಸಂಗ್ರಹಿಸುವುದೂ- -ಸಮಾಲೋಚಿಸುವುದೂ--ಅನುಕರಣೀಯವೆಂದು ತಿಳಿದು ಆಚರಣೆಗೆ ತರುವುದೂ ನಿಮಗೆ ಸೇರಿದ ಕೆಲಸವು. ಎಂದರೆ ಈ ಪರಿಚ್ಛೇದಾರಂಭದಲ್ಲಿಯೇ ನಿವೇದಿಸಿರುವಂತೆ ವಿಶ್ರಾಂತಿಯ ನಿಜವಾದ ಫಲವನ್ನು ನಮ್ಮ ನಮ್ಮ ಪ್ರಕೃತಿ, ಕೃತಿ-ವಿಚಾರಗಳಿಗೆ ತಕ್ಕಂತೆ ಉಪಭೋಗಿಸಿಕೊಳ್ಳುವದರಲ್ಲಿ ಜಾಗರೂಕತೆಯನ್ನು ವಹಿಸಬೇಕೆಂಬುದೇ ಸಾರಾಂಶವು. ಇಷ್ಟರಿಂದಲೇ-- 'ತಮ್ಮ ವಿಶ್ರಾಂತಿ-ವಿರಾಮಗಳಿಗೆ ಆತಂಕಪಡಿಸಿದೆವೆಂದೂ ಪಂಡಿತಂಮನ್ಯರಾದ ತಮಗೂ ಹೇಳಬಂದೆವೆಂದೂ ಆಗ್ರಹಿಸುವರಾದರೆ:—ಓ ನಮ್ಮ ದೇಶೀಯ ಸೋದರಿಯರೇ! ಇದೋ ಪ್ರಮಾಣಮಾಡಿಹೇಳುವೆವು. ಶ್ರೀಮಂತಿಕೆಯ ಅಟ್ಟಹಾಸವನ್ನು ಪ್ರಕಟಿಸಲು, ಮತ್ತು ನಿರುದ್ಯೋಗದ ಜಡಚಿತ್ತಕ್ಕೆ ಪ್ರಮೋದವನ್ನುಂಟುಮಾಡಿಕೊಳ್ಳಲು--ಮಾತ್ರವೇ ವಿಹಾರಭವನ-ಕ್ರೀಡಾವನ-ವ್ಯಾಯಾಮಸ್ಥಾನಗಳೆಂದು ಅಲ್ಲಲ್ಲಿಗೆ ಅಬಲಾಶ್ರಮ(?)ದ ಕೂಟಗಳನ್ನೇರ್ಪಡಿಸಿಕೊಂಡು, ಪುರುಷರನ್ನು ನಾಚಿಸುವ ವ್ಯಾಖ್ಯಾನ-ಅಂಗಸಾಧನಾಗಳಿಂದ ಕಾಲಧನವನ್ನೂ, ಜ್ಞಾನಭಂಡಾರವನ್ನೂ, ವಿವೇಚನಾಶಕ್ತಿಯನ್ನೂ ದುಂದುಮಾಡಿ, ಜಗತ್ತನ್ನೇ ಕೌತುಕದಿಂದ ಕಾಣಿಸುತ್ತಿರುವ ಆ ಮಹಾಶಯೆಯರಾಗಲೀ-ಅವರ ಪ್ರೋತ್ಸಾಹಕವರ್ಗದ ಮಹಾಶಯರಾಗಲೀ ಈ ಪರಿಚ್ಛೇದವನ್ನು ಅಥವ ಪೂರ್ಣವಾ ಗ್ರಂಥವನ್ನೇ ಅವಲೋಕಿಸಬೇಕಾದ ಅಗತ್ಯವಿಲ್ಲ.' ಹೀಗೆ ನಿವೇದಿಸಿ, ಈವರೆಗಿನ ನಮ್ಮ ಭಾಷಣದಿಂದ ಬೇಸತ್ತ ನಿಮಗೂ ವಿಶ್ರಾಂತಿಗೆ ಅವಕಾಶವಿತ್ತು ನಾವೂ ಸದ್ಯಕ್ಕೆ ವಿರಮಿಸಿರುವೆವು.

ಶ್ರೀ

ಏಕಾದಶ ಪರಿಚ್ಛೇದ.

ತಾರಾಕಾಂತನ ದುಗುಡ-ಕುಮುದಮಿತ್ರನು ಹೇಳುವ ಸಮಾಧಾನ, ಕುಮುದೆಯ ಪ್ರಾರ್ಥನೆ-ಕುಮುದೆಯ ತಾಯಿ (ತಾರಾಕಾಂತನ ಪತ್ನಿ)ಯ ಟೀಕೆ-ಕುಮುದಮಿತ್ರನು ತಾಯಿಗೆ ಹೇಳುವ ವಿವೇಕ-ತಾರಾಕಾಂತನ ಪ್ರಯಾಣ ಸನ್ನಾಹ-ಕಲಾಧರನ ಆಗಮನ-ಅಭಿನಂದನ-ಭಾಸ್ಕರಾಚಾರ್ಯರ ಆಹ್ವಾನ, ಇತ್ಯಾದಿ

"ಇದಕ್ಕೂ ಹೆಚ್ಚಿದ ಅಪಮಾನವುಂಟೇ? ಈಗಲೇ ಹೊರಡಿರಿ, ಮತ್ತೆಲ್ಲಿಗಾದರೂ ಹೋಗುವ.",

ಹೊತ್ತು ಮಧ್ಯಾಹ್ನ ಸುಮಾರು ಎರಡುಗಂಟೆಯಾಗಿರಬಹುದು. ತಾರಾಕಾಂತನು ತನ್ನ ಬರವಣಿಗೆಯ ಕಿರುಮನೆಯಲ್ಲಿ ಕೆಳಗೆ ಹಾಸಿದ್ದ ರತ್ನಕಂಬಳಿಯಮೇಲೆ ಮಲಗಿ, ಎಡಗಯ್ಯಿಂದ ತಲೆಯನ್ನು ಹಿಡಿದುಕೊಂಡು, ಬಲಗೈ ಬೆರಳುಗಳನ್ನು ತಿರುಗಿಸುತ್ತ-ಏನನ್ನೋ ಚಿಂತಿಸುತ್ತಿದ್ದನು. ತಾರಾಕಾಂತನ ಮುಖವು ಅತ್ಯಂತ ವ್ಯಾಕುಲಪೂರ್ಣಹೃದಯರ ಮುಖಭಾವದಂತೆ ಕಪ್ಪುಬಣ್ಣಕ್ಕೆ ತಿರುಗಿದಿತ್ತು. ಕಣ್ಣುಗಳಲ್ಲಿಕಾಂತಿಯು ಮಾಯವಾಗಿದ್ದಿತು. ಈತನಬಳಿಯಲ್ಲಿಯೇ ಒಂದು ಕಾಲುಮಣೆಯ ಮೇಲೆ ಕುಮುದಮಿತ್ರನು ಕುಳಿತು ತಂದೆಯ ಮುಖವನ್ನೇ ನೋಡುತ್ತ

ಉತ್ತರನಿರೀಕ್ಷೆಯಲ್ಲಿರುವಂತೆ ಕಾಣಿಸುತ್ತಿದ್ದನು. ಕುಮುದೆಯು ತಾರಾಕಾಂತನ ತಲೆಯಕಡೆಯಲ್ಲಿ ಕುಳಿತು ಆವುದೋ ಪತ್ರಿಕೆಯನ್ನು ಹಿಡಿದು ತಂದೆಯ ವ್ಯಸ್ತತೆಯನ್ನು ನಿವಾರಿಸುವ ಪ್ರಯತ್ನವನ್ನು ಹಿಡಿದಿದ್ದಳು. ಮತ್ತೋರ್ವ ನಾರಿಯು ತಾರಾಕಾಂತನ ಪಕ್ಕದಲ್ಲಿ, ರತ್ನಕಂಬಳಿಯಮೇಲೆಯೇ ಕುಳಿತು ಆವುದೋ ಪುಸ್ತಕಾವಲೋಕನದಲ್ಲಿ ನಿರತೆಯಾಗಿದ್ದಳು. ಈ ನಾರಿಯ ವೇಷ-ಭಾಷಾಸ್ಥಿತಿಗಳು, ಸುಧಾರಣಾವಾದಿಗಳೆನ್ನಿಸಿರುವ ಮಹಾಜನರಂತೆ ವಿದೇಶೀಯವಾಗಿಯೇ ತೋರುತಿದ್ದುವು. ಈಕೆಯೇ ಕುಮುದೆಯ ತಾಯಿ (ತಾರಾಕಾಂತನ ಪತ್ನಿ) ಯಾಗಿರಬೇಕೆಂದು ತೋರುವುದು.

ಕುಮುದ ಮಿತ್ರನು ನಾಲ್ಕಾರು ನಿಮಿಷಗಳವರೆಗೆ ನಿರೀಕ್ಷಿಸಿದನು ತಂದೆಯಿಂದ ಉತ್ತರವು ದೊರೆಯಲಿಲ್ಲ. ಮತ್ತೆ ಕಂಪಿತಸ್ವರದಿಂದ ಕೇಳಿದನು 'ಅಪ್ಪಾ! ಉತ್ತರವಿಲ್ಲವೇಕೆ? ನನ್ನ ಮಾತುಕೇಳಿಬರಲಿಲ್ಲವೆ? '

ತಾರಾ— ತಲೆಯೆತ್ತಿ 'ಇಲ್ಲ, ನನಗೆ ಕೇಳಿಸಲಿಲ್ಲ. ನನ್ನ ಮನಸ್ಸು ಈಗ ಸರಿಯಾಗಿಲ್ಲ'.

ಕುಮುದ— ಏಕೆ-ಏನಾಗಿದೆ!

ತಾರ— ಏಕೆ-ಏನಾಗಿದೆಯೆಂದು ಕೇಳಬೇಕಾಗಿಲ್ಲ. ಆದಿರಲಿ. ಮೊದಲು ನಿನ್ನ ವಿಚಾರವಾಗಲಿ

ಕು. ಮಿತ್ರ— ತಲೆಯನ್ನು ಮೇಲಕ್ಕೆತ್ತಿ ಕುತೂಹಲದಿಂದ ನನ್ನನ್ನು ಈದಿನ ವಿದ್ಯಾಲಯಕ್ಕೆ ಹೋಗಬೇಡವೆಂದು ತಡೆದು.. .....

ತಾರಾ— ಈ ದಿನ ಮಾತ್ರವೆಂದೇಅಲ್ಲ; ಇನ್ನು ಮುಂದೆಯೂ ನೀನು ಹೋಗಬೇಕಾಗಿಲ್ಲ.

ಕು. ಮಿ— ಕಾರಣವನ್ನು ತಿಳಿಯುವ ಕುತೂಹಲ ಬಹುವಾಗಿದೆ.

ತಾರಾ— ತಿಳಿದು ಮಾಡುವುದೇನು?

ಕು. ಮಿ—ಮತ್ತೇನು? ನನ್ನಿಂದ ಏನಾದರೂ ಅಪರಾಧವಾಗಿದ್ದರೆ ಎಚ್ಚತ್ತುಕೊಳ್ಳುವೆನಲ್ಲದೆ ಕ್ಷಮೆಯನ್ನು ಬೇಡುವೆನು.

ತಾರಾ—ಯಾರಲ್ಲಿ ಕ್ಷಮೆಯನ್ನು ಬೇಡಬೇಕು?

ಕು. ಮಿ—ಮತ್ತಾರಲ್ಲಿ? ಶಾಲಾಧ್ಯಕ್ಷರಲ್ಲಿಯೂ, ಮತ್ತು ತಮ್ಮಲ್ಲಿಯೂ.

ತಾರಾ—ಆತನಲ್ಲಿ ಬೇಡಬೇಕಾದಂತಹ ಅಪರಾಧವೇನೂ ನಡೆದಿಲ್ಲ. ಇನ್ನು ಮುಂದೆ ನಿನಗೆ ಇಲ್ಲಿಯ ವ್ಯಾಸಂಗವೂ ಬೇಡ.

ಕು. ಮಿ—ವಿಸ್ಮಯದಿಂದ-ಹಾಗೆಂದರೇನು?

ತಾರಾ—ಮತ್ತೇನೂ ಇಲ್ಲ. ಈ ಪ್ರಭಾನಗರಕ್ಕೂ ನಮಗೂ ಋಣಾನುಬಂಧವಿಂದಿಗೆ ಬಿಟ್ಟಿತು. ನಾವಿನ್ನು ಇಲ್ಲಿರುವವರಲ್ಲ.

ಕು. ಮಿ—ಇಲ್ಲಿಲ್ಲದೆ ಮತ್ತೆಲ್ಲಿಗೆ ಹೋಗಬೇಕು? ಯಾರುಯಾರು?

ತಾರಾ—ಎಲ್ಲಿಗೆ-ದೈವಪ್ರೇರಣೆಯಾದಲ್ಲಿಗೆ, ಎಲ್ಲರೂ ಹೊರಡುವುದು.

ಕು. ಮಿ—ಇಷ್ಟು ಜಿಹಾಸೆಗೆ ಕಾರಣವೇನಪ್ಪ?

ತಾರಾ—ಮಗು? ಮತ್ತೆ ಮತ್ತೆಯೂ ಕೇಳಿ-ನನಗೆ ವ್ಯಾಕುಲವನ್ನು ಹೆಚ್ಚಿಸಬೇಡ.

ಕು. ಮಿ—ಕ್ಷಮಿಸಿರಿ-ಅಪ್ಪ! ನನಗೆ ತಡೆಯುವಶಕ್ತಿಯಿಲ್ಲ. ತಾವು ಎಂದೂ ತೋರದಿದ್ದ ಚಿಂತೆಯನ್ನು ಇಂದು ತೋರಿಸುತ್ತ--ಅತ್ತಿತ್ತ ಕದಲದೆ ಮನೆಯಲ್ಲಿ ಕುಳಿತಿರುವುದೂ, ನೀವೂ ಹೋಗದೆ ನನ್ನನ್ನೂ ಶಾಲೆಗೆ ಹೋಗಕೂಡದೆಂದು ತಡೆದುಬಿಟ್ಟಿರುವುದೂ ನನಗೆ ಹುಚ್ಚು ಹಿಡಿಸುವಂತಾಗಿ ತಿರುಗಿವೆ. ಕಾರಣ........

ಕುಮುದೆ—ಅಣ್ಣಾ! ನನಗೂ ನಿನ್ನಂತೆಯೇ ಆಗಿದೆ. ಈದಿನದ ಬೆಳಗಿನಿಂದ ಒಬ್ಬರ ಮುಖವನ್ನೂ ನೋಡ**ದೆ** ಈಮನೆಯಲ್ಲಿ ಕುಳಿತು ಕುಳಿತು ಬೇಸರಿಕೆಯಾಗಿಹೋಗಿದೆ.

ತಾರಾ—ನಿಟ್ಟುಸಿರಿಟ್ಟು 'ತಾಯಿ' ! ಕುಮುದಾ! ಸ್ವಲ್ಪಸುಮ್ಮನಿರು. ಇನ್ನು ನಾಲ್ಕಾರುದಿನಗಳಲ್ಲಿ ನಾವು ಬೇರೆಕಡೆಗೆ ಹೋಗುವವರಾಗಿದ್ದೇವೆ. ಅಲ್ಲಿ ನಿನಗೆ ಬೇಕಾದಂತೆ ಆಡಿ ಪಾಡಲು ಅಣಿಮಾಡಿಕೊಡುತ್ತೇನೆ. ಕುಮುದಮಿತ್ರ, ನಿನಗೂ ಅದೇವೊತು ಇನ್ನೂ ಉತ್ತಮ ವರ್ಗದ ಕಲಾಶಾಲೆಗೆ ನಿನ್ನನ್ನು ಸೇರಿಸುವೆನು, ಸುಮ್ಮನಿರು.

ಕು. ಮಿ—ಇಷ್ಟು ಜಿಹಾಸೆಗೂ ಕಾರಣವೇನೆಂಬುದು ನನಗೆ ಈಗ ತಿಳಿಯಿತು. ಅಪ್ಪ! ತಾವೇನೋ ನನ್ನನ್ನು ಇನ್ನೂ ಘನಹೊಂದಿದ ಕಲಾಶಾಲೆ (College) ಯಲ್ಲಿ ಬಿಡುವಿರಿ; ಆದರೆ ವಿಚಾರ ಮಾಡಿನೋಡಿರಿ. ನಾನೂ ತಕ್ಕಮಟ್ಟಿಗೆ ದೇಶಾಟನೆಯನ್ನು ಮಾಡಿ ತಕ್ಕಷ್ಟು ವಿಷಯ ಸಂಗ್ರಹಮಾಡಿಯೇ ಬಂದಿರುತ್ತೇನೆ. ನಾನು ನೋಡಿ ವಿಚಾರಮಾಡಿ ಅನುಭವಕ್ಕೆ ತೆಗೆದುಕೊಂಡು ಬಂದಿರುವ ಮಹಾನಗರಗಳ ಮತ್ತು ಕಲಾಶಾಲೆಗಳ ವಿಚಾರವು ಬಾಹ್ಯರಂಗದಲ್ಲಿ ಸುಮನೋಹರವೂ ಸ್ತುತ್ಯವೂಆಗಿ ತೋರುತ್ತಿರಬಹುದಾದರೂ-ಈ ನಮ್ಮ ಶಾಂತಿನಿಲಯದಲ್ಲಿ ಕಾಣುತ್ತಿರುವ ಅಂತರಂಗ ಸೌಂದರ್ಯವೂ, ಈ ನಿರ್ಮಲ ಪ್ರೇಮಭಾಮವೂ ನನಗೆ ಅಲ್ಲೆಲ್ಲಿ ನೋಡಿದರೂ ಸಿಕ್ಕುವಂತೆ ಕಾಣಬರಲಿಲ್ಲ. ನನಗೆ ಮೋಜು ಬಲವಾಗಿದ್ದರೂ ಇರಬಹುದು. ಆದರೆ ಅವಿದ್ಯೆ ಎಂದರೆ ವಿಪರೀತ ಪ್ರಜ್ಞೆಯ ಅತ್ಯಾಚಾರವು ಬೇಕಾಗಿಲ್ಲ. ಇದಕ್ಕಾಗಿ ದಯೆಯಿಟ್ಟು ನನ್ನನ್ನು ನೋಡಿಯಾದರೂ ತಾವು ಶಾಂತಚಿತ್ತರಾಗಿ ಮೊದಲಿನಂತಿರಬೇಕೆಂದು ಪ್ರಾರ್ಥಿಸುವೆನು. ನಮ್ಮ ಅಧ್ಯಕ್ಷರ ವಿಷಯದಲ್ಲಿ ತಾವು ಇಷ್ಟು ಪರಸ........

ತಾರಾ—ಕರ್ಕಶಸ್ವರದಿಂದ ಕುಮುದಮಿತ್ರ! ನಿನಗೆ ಆ ನಿನ್ನ ಅಧ್ಯಕ್ಷ

ರಲ್ಲಿ ಅಷ್ಟು ಪ್ರೇಮವಿದ್ದರೆ ನೀನು ಅವರಲ್ಲಿಯೇ ವ್ಯಾಸಂಗಿಸು ತ್ತಿರು. ನನ್ನ ಅಡ್ಡಿಯಿಲ್ಲ. ನನಗಾತನ ಸ್ವಪ್ರತಿಷ್ಠಾಕಾಮನೆಯು ರುಚಿಸುವುದಿಲ್ಲ.

ಕು. ವಿ —ಆತುರದಿಂದ 'ಅಪ್ಪ! ಅವರಲ್ಲಿ ಪ್ರತಿಷ್ಠಾಕಾಮನೆಯಾವುದು?

ತಾರಾ—ಮತ್ತಾವುದು ಬೇಕು? ಸಮಾಸಸ್ಕಂಧರನ್ನು ಅಲ್ಪರಮುಂದೆ ಅನೆಹೇಳನ ಮಾಡುವುದೂ, ತಾವು ಮಹಾವಿರಕ್ತರಂತೆ ನಮಗೆ ಶಿಷ್ಯರೊಡನೆ ಸೇರಿಸಿ ಹಿತಬೋಧಮಾಡುವುದೂ, ಮತ್ತೇನಾಗಿರ ಬೇಕು?

ಕು. ವಿ—ಅಪ್ಪ! ಆ ವಿಚಾರವನ್ನೂ ಅವರು ದುಡುಕಿಯಾಗಲೀ-ಅಥವ ಸ್ವಪ್ರತಿಷ್ಠೆಗಾಗಿಯಾಗಲೀ ಮಾಡಿದುದೆಂದು ನಾನು ನಂಬ ಲಾರೆನು.

ತಾರಾ—ನಿನ್ನನ್ನು ನಂಬಲೇಬೇಕೆಂದು ನಾನು ನಿರ್ಬಂಧಿಸಲಿಲ್ಲ. ಮಗು! ಹೋಗು, ಅವರಲ್ಲ ನನಗೆ ದ್ವೇಷವಿಲ್ಲ. ಉದಾಸೀನವೂ ಇಲ್ಲ. ಅವರು ನನ್ನನ್ನು ತಮ್ಮ ಬಂಧುವರ್ಗದಲ್ಲಿ ಸೇರಿಸಿಕೊಂಡಿದ್ದ ಪಕ್ಷದಲ್ಲಿ ನನ್ನ ಅಜ್ಞಾತದೋಷಗಳನ್ನು ಆಪ್ತಭಾವದಿಂದ ಏಕಾಂ ತದಲ್ಲಿ ತೋರಿಸಿ ಎಚ್ಚರಿಸಬಹುದಾಗಿದ್ದಿತು, ಅದು ಅವರ ಇಷ್ಟ ವಲ್ಲ. ಅವರಾಗಿ ನಮ್ಮನ್ನು ಪರಕೀಯ ಭಾವನೆಯಿಂದ ನೋ ಡಿರುವರು. ನಾವಿನ್ನು ಇಲ್ಲಿರಲೇಕೆ ? ನಮಗೀ ಶಾತಿನಿಕೇತನದ ಹಂಗೇನು?

ಕು. ವಿ—ಬೇಡ; ಅಪ್ಪ ! ಅಷ್ಟುಕಾಠಿಣ್ಯವು ಬೇಡ, ಶಾಂತಿನಿಕೇತನ ವನ್ನು ಬಿಟ್ಟು ಮತ್ತೆಲ್ಲಿಗೆ ಹೋಗುವುದೂ ನನಗೆ ರುಚಿಸಲಿಕ್ಕಿಲ್ಲ.

ತಾರಾ— ತಾಯಿ ! ನಿನಗೆ ಈ ಶಾಂತಿನಿಲಯದಲ್ಲಿ ಅಷ್ಟು ಅಭಿಮಾನ ವಿದ್ದರೆ ನೀನೂ ನಿನ್ನ ಅಣ್ಣನೂ ಇಲ್ಲಿಯೇ ವ್ಯಾಸಂಗಿಸುತ್ತಿರ ಬಹುದು.

ಕು. ಮಿ—ತಮ್ಮನ್ನು ಬಿಟ್ಟು ನಾವಿಲ್ಲರಬೇಕೆಂಬ ಹಠವು ನಮಗೇನೂ ಇಲ್ಲ. ತಾವೂ ಶಾಂತಚಿತ್ತರಾಗಿ ಮೊದಲಿನಂತೆ ನಿಲಯದ ಕಾರ್ಯನಿರ್ವಾಹಕರಾಗಿದ್ದರೆಯೇ ನಾವೂ ಇರುವುದು ಇಲ್ಲವಾದರೆ–

ತಾರಾ—ಬಳಿಯಲ್ಲಿ ಕುಳಿತಿದ್ದ ಭಾಮಿನಿಯನ್ನು ಸಂಬೋಧಿಸಿ-ಕುತೂಹಲದಿಂದ "ರೋಹಿಣೀ! ನಿನ್ನ ಮಕ್ಕಳು ನನ್ನನ್ನು ನಿರ್ಬಂಧಿಸುತ್ತಿರುವರು, ನಾನು ಶಾಂತಿನಿಕೇತನದಲ್ಲಿಯೇ ಇರಬೇಕಂತೆ. ನಿನ್ನ ಅಭಿಪ್ರಾಯವೇನು?"

ರೋಹಿಣಿ—ಕೈಯಲ್ಲಿದ್ದ ಪುಸ್ತಕವನ್ನು ಕೆಳಗೆ ಬಿಸುಟು "ಏನದು! ಶಾಂತಿನಿಕೇತನ! ಎಂತಹ ಶಾಂತಿನಿಕೇತನ? ಈಗ ಇಲ್ಲಿರುವ ನಮ್ಮಲ್ಲಿ ಆರಿಗೆ ಎಷ್ಟೆಷ್ಟು ಶಾಂತಿಸುಖಾನುಭವವುಂಟಾಗಿದೆ? ಈವರೆಗೆ ಶಾಂತಿನಿಕೇತನದಲ್ಲಿದ್ದ ನಮಗೆ ಆದ ಫಲವಾದರೂ ಏನು?

ಕು. ಮಿ—ಅಮ್ಮ! ದುಡುಕಬಾರದು. ನಾವು ಶಾಂತಿನಿಲಯದ ನಿಯಮವನ್ನು ಅನುಸರಿಸಿ ನಡೆದಿದ್ದರೆ ನಮಗೆ ಅದರ ಸುಖಾನುಭವವು ದೊರೆತೇ.........

ರೋಹಿಣೀ—ಸಾಕು, ನಮಗೆ ಆ ನಿರ್ಬಂಧವೂ ಬೇಡ: ಆ ಕೈಲಾಗದ ಸೋಮಾರಿಗಳಂತೆ ದೈನ್ಯವೃತ್ತಿಯೂ ಬೇಕಾಗಿಲ್ಲ. ಉದಯದಿಂದ ಅಸ್ತಮಯ ಪರ್ಯಂತ ಗಂಟಲೊಡೆಯುವಂತೆ ಕೂಗಿಕೂಗಿ ಸಂಪಾದಿಸಬೇಕಾದ ಅಗತ್ಯವೂ ನಮಗಿಲ್ಲ. ಕುಳಿತಲ್ಲಿ ಕೈತುಂಬಿಸಿಕೊಂಡು ಸುಖಿಸಬಹುದಾದಷ್ಟು ವಿದ್ಯಾನೈಪುಣ್ಯ ಬಲಾಢ್ಯತೆಗಳಿದ್ದೂ–ಇಲ್ಲಿರಬೇಕೇಕೆ!

ಕುಮುದ— ಅಮ್ಮ! ಭಾವನೆಯನ್ನು ಹೀಗೆ ಏಕಲ್ಪಕ್ಕೆ ತರಬಾರದು. ಕೈ ತುಂಬಿಸಿಕೊಳ್ಳುವ ಉದ್ದೇಶದಿಂದಲೇ ದುಡಿಯುವದಾದರೆ ನಮ್ಮ ಇತಿಕರ್ತವ್ಯವನ್ನೇ ಮರೆತವರಾಗುವೆವು. ಅಪ್ಪನು

ತನ್ನ ಪಾಂಡಿತ್ಯ-ಅನುಭವ-ವಿಚಾರಗಳಿಂದ ತನ್ನ ಶಿಷ್ಯವರ್ಗ ವನ್ನು-ಅನುಚರರನ್ನು-ಆರ್ಯಸಮಾಜದಲ್ಲಿ ಸುಶಿಕ್ಷಿತ ಸಭ್ಯರ ನ್ನಾಗಿ ಮಾಡಬೇಕೆಂಬ ಉದ್ದೇಶದಿಂದಲೇ ಈ ಶಾಂತಿನಿಕೇತನಕ್ಕೆ ಬಂದು ಸೇರಿದರು.

ರೋಹಿಣಿ—ಬಂದು ಸೇರಿದುದಕ್ಕೂ ಆ ಉದ್ದೇಶಕ್ಕೂ ಆದ ಸನ್ಮಾನ ವಿದೇ ಅಲ್ಲವೆ?

ಕು. ಮಿ—ಮತ್ತೆಮತ್ತೆ ಆಕ್ಷೇಪಿಸಬಾರದು-ಅಮ್ಮ! ನಮ್ಮ ಅಭ್ಯುದ ಯಕ್ಕೆಂದೇ ಅವರು ಹಾಗೆ ಹೇಳಿದರಲ್ಲದೆ ನಮ್ಮನ್ನು ತಿರಸ್ಕರಿಸಿ ಕಳುಹಲು ಹೇಳಿದುದಲ್ಲ.

ರೋಹಿಣಿ—"ಅಷ್ಟುದೂರದ ತರ್ಕವು ನಮಗೆ ಬೇಕಾಗಿಲ್ಲ. ಮುಖ್ಯ ವಾಗಿ-ನಾವು ಅವರಂತೆ ಗೊಡ್ಡು ವೈದಿಕಯುಗಕ್ಕೆ ಸೇರಿದವರಾ ಗಿಲ್ಲ. ನಮ್ಮ ವೇಷ-ಭಾಷೆ-ಕ್ರಿಯಾ- ಕಲಾಪಗಳೂ- ಅವರಂತೆ ಅಸಂಸ್ಕೃತವಾಗಿಲ್ಲ. ಸುಧಾರಿಸಿದ ಸಮಾಜಕ್ಕೆ ಸೇರಿ-ನಾವು ನಮ್ಮ ಹುಡುಗಿಯನ್ನು ಸ್ವತಂತ್ರವಾಗಿ ಬೆಳೆಯಗೊಟ್ಟಿರುವು ದಕ್ಕೂ, ಇನ್ನೂ ನಮ್ಮ ಸ್ವಾಭಿಮಾನಕ್ಕೂ ಅವರು ಅಸೂಯಾ ದೃಷ್ಟಿಯುಳ್ಳವರಾಗಿದ್ದಾರೆ-ಹೆಚ್ಚುಮಾತೇಕೆ" (ಗಂಡನನ್ನು ನೋಡಿ) "ಹೀಗೆಯೇ ಕುಳಿತಿದ್ದರೆ ಹೊತ್ತುಮೀರುವುದಿಲ್ಲವೇನು? ಪ್ರಯಾಣಕ್ಕೆ ಸನ್ನಾಹಮಾಡುವುದಿನ್ನಾವಾಗ? ಇದಕ್ಕೂ ಹೆ ಚ್ಚಿದ ಅಪಮಾನವುಂಟೇ! ಈಗಲೇ ಹೊರಡಿರಿ-ಮತ್ತೆಲ್ಲಿ ಗಾದರೂ ಹೊರಡುವ" ಎಂದುಹೇಳಿ ಎದ್ದುಬಿಟ್ಟಳು.ಕುಮುದ ಮಿತ್ರನು ಚಿಂತಾಕುಲಿತಿಗಳಿಂದ ಮರುಮಾತಿಲ್ಲದೆ ಎದ್ದು ಹೊರಟು ಹೋದನು. ಕುಮುದೆಯು ಎದ್ದು ಕಂಬನಿದುಂಬಿ- 'ಅಪ್ಪ! ಹೊರಡುವುದಕ್ಕೆ ಮೊದಲು ಒಂದುಬಾರಿಯಾದರೂ ಪೂರ್ಣ

ಕಲಾ-ಶಾರದೆಯರನ್ನು ನೋಡಿ- ನುಡಿಯಿಸಿಬರುತ್ತೇನೆ ' ಎಂದು ಹೇಳಿ, ತಂದೆಯ ಉತ್ತರವನ್ನು ಕೇಳುವಷ್ಟು ಸಹನೆಯೂ ಇಲ್ಲದೆ ದುಗುಡದಿಂದ ಹೊರಟುಹೋದಳು. ತಾರಾಕಾಂತನು ನಿಟ್ಟುಸಿರಿಟ್ಟು - ಕುಳಿತಲ್ಲಿಂದ ಎದ್ದು- " ಇನ್ನಾಯಿತು, ಇಂದಿಗೆ-ಈ ಪ್ರಭಾನಗರ ಈ ಶಾಂತಿನಿಲಯಗಳಿಗೂ ನನಗೂ ಸಂಬಂಧವು ಕಡಿದಂತಾಯಿತು." ಎಂದು ಹೇಳುತ್ತ ಮುಂದಾದನು. ಅಷ್ಟರಲ್ಲಿ ಈತನ ಮಾತಿಗೆ ಉತ್ತರವಾಗಿ- "ಏಕೆ! ಅದೇಕೆ! ಹಾಗೆ ನಿರಾಶೆ! ಅಷ್ಟು ಆಕ್ರೋಶ! " ಎಂಬವಾಕ್ಯವು ಹೊರಟಿತು.

ತಾರಾ——ತಲೆಯೆತ್ತಿ ನೋಡಿದನು, ಕಲಾಧವಕುಮಾರನು ಮುಂದೆನಿಂತಿದ್ದನು. ತಾರಾಕಾಂತನ ಮುಖದಲ್ಲಿ ಸ್ವಲ್ಪ ಕಲೆಯೇರಿತು; ಕಲಾಧವನ ಕೈಹಿಡಿದು- " ಕಲಾಧವಕುಮಾರ! ಇದೇನಿದು ಅಪೂರ್ವದೃಶ್ಯ! ಪ್ರಾರ್ಥಿಸಿದರೂ ಬಾರದ ನೀನು-ಇಂದು..."

ಕಲಾ——ಕಂಪಿತಸ್ವರದಿಂದ-'ಆರ್ಯರೇ! ತಾವು ನನಗೆ ಅಷ್ಟು ಉಪಚಾರವನ್ನು ಹೇಳಬೇಕಾಗಿಲ್ಲ. ಗುರುಜನರ ಪಾದವಂದನೆ ಮತ್ತು ಸೇವೆಗಳಲ್ಲಿ ನಾನು ಯಾವಾಗಲೂ ಉತ್ಸಾಹದಿಂದ ನಿಂತೇ ಇರುವೆನು, ಆದರೆ ಆದಿನ ನಡೆದ ಉತ್ಸವವು ಮಾತ್ರ——

ತಾರಾ——ಹೋಗಲಿ-ಆಮಾತನ್ನು ಅಷ್ಟಕ್ಕೆ ಬಿಟ್ಟುಬಿಡು, ಈಗಿನಮಾತನ್ನು ಹೇಳು.

ಕಲಾ——ನಾನು ಹಿರಿಯರಿಗೆ ಏನನ್ನು ಹೇಳಲಿ? ತಾವು ಇಂದು ಶಾಂತಿನಿಲಯಕ್ಕೆ ಬಾರದಿರುವ ಕಾರಣವೇನು? ಕುಮುದಮಿತ್ರನೂ ಕೂಡ ಬಾರದೆ ನಿಂತುದೇಕೆ!

ತಾರಾ——ಮಕ್ಕಳನ್ನು ಕೆಡಿಸತಕ್ಕವರಾದ ನಮ್ಮಿಂದ ಶಾಂತಿನಿಕೇತನದ ಪ್ರತಿಷ್ಠೆ ಕೆಡಬಾರದೆಂದು ನಿಂತೆವು ; ಮತ್ತು ಮುಂದಕ್ಕೂ

ಹೊರಡಲು ಸಿದ್ಧರಾಗಿರುವೆವು. ಕುಮಾರ! ಈವರೆಗೆ ನನ್ನಿಂದ ನಿಮಗೇನಾದರೂ ಕೆಡುಕುಗಳಾಗಿದ್ದರೂ – ಅಥವಾ – ನಾನು ಮರ್ಯಾದೆ ಮೀರಿ ನಿಮ್ಮನ್ನು ಅಪಮಾನಪಡಿಸಿದ್ದರೂ ನೀವು ಅದನ್ನು ಮರೆತುಬಿಡಬೇಕಲ್ಲದೆ ನನಗೆ ಪಯಣಕ್ಕೆ ಅನುಮತಿ ಯನ್ನು ಕೊಡಬೇಕು.

ಕಲಾ—ಕೈಜೋಡಿಸಿ – ಗದ್ಗದಸ್ವರದಿಂದ- 'ಹಾಗೆಲ್ಲಾ ಆಡಬಾರದು. ತಮ್ಮನ್ನು ನಾವು ಹೇಗೂ ಬಿಡಲಾರೆವು. ಸುಧಾರಣಾ ವಿಚಾ ರದಲ್ಲಿ ಅಲ್ಪ ದೋಷಗಳೊಂದುವೇಳೆ ಕಂಡು ಬಂದಿದ್ದರೂ ತಮ್ಮ ಸುಗುಣಕ್ಕೆ ನಮ್ಮ ಶಿಷ್ಯವರ್ಗವು ಮಾತ್ರವೇಅಲ್ಲ-ನಮ್ಮ ಗುರು ಗಳೂ ಲುಬ್ಧರಾಗಿ ಹೋಗಿರುವರು. ಈ ಶಾಂತಿನಿಕೇತನಕ್ಕೆ ಬಲವಾದ ಶಕ್ತಿತ್ರಯರಾಗಿರುವ ನಿಮ್ಮ ಮೂವರಲ್ಲಿ ಯಾರು ಕೈಬಿಟ್ಟರೂ ಇದರ ಸತ್ವ ಕುಂದುವದರಲ್ಲಿ ಸಂದೇಹವಿಲ್ಲ.

ತಾರಾ—ಆತುರದಿಂದ–'ಕುಮಾರ! ನನ್ನಿಂದ ನಿಮಗೆ ಸಾಧಕವೇನಾ ದರೂ ಉಂಟೇ? ಬಾಧಕವೇನೂ ಇಲ್ಲವೇ? ಶಿಷ್ಯವರ್ಗವು ನನ್ನನ್ನು ವಿಶ್ವಸನೀಯನೆಂದು ನಂಬಿರುವುದು ನಿಜವೇ? ನಿಮ್ಮ ಅಧ್ಯಕ್ಷ- ಉಪಾಧ್ಯಕ್ಷರು ನನ್ನ ವಿಷಯದಲ್ಲಿ ಆಪ್ತಭಾವದಲ್ಲಿರುವರೆ- ನಂಬಲೇ ? ಏನಾದರೂ ಆಧಾರವುಂಟೇ?

ಕಲಾ—''ನನ್ನಮಾತಿನ ಆಧಾರವು ಸಾಕೆಂದರೆ ಸರಿ, ಇಲ್ಲವಾದರೆ ಈ ಪತ್ರಾವಲೋಕನದಿಂದಾದರೂ ನಂಬಬಹುದು. ಹೆಚ್ಚಿಗೆ ಹೇಳುವ ಶಕ್ತಿ ನನಗಿಲ್ಲ''. ಎಂದು ಹೇಳಿ, ತಾರಾಕಾಂತನ ಹೆಸರಿನಲ್ಲಿ ಬರೆದು ಅಂಟುಹಾಕಿದ್ದ ಪತ್ರವನ್ನು ತೆಗೆದು ಕೈಯಲ್ಲಿರಿಸಿದನು. ತಾರಾಕಾಂತನೂ ಅದನ್ನು ಆತುರದಿಂದ ಕೈಕೊಂಡು ಅದನ್ನು ಓದಿದನು. ಅದುಹೀಗೆ ಬರೆಯಲ್ಪಟ್ಟಿದ್ದಿತು,

"ವಿಶ್ವಸನೀಯಬಂಧು—ತಾರಾಕಾಂತಬಾಬು ! ಭಗವತ್ಸಾಕ್ಷಿಯಾಗಿ ಹೇಳುತ್ತಿರುವೆನು, ಸಂಶಯವು ಕೂಡದು. ನನ್ನ ವಿಷಯದಲ್ಲಿ ಪ್ರಕಾರಾಂತರವಾಗಿ ಭಾವಿಸದೆ ನಿಮ್ಮ ಜ್ಯೇಷ್ಠಭ್ರಾತೃವೆಂದೇ ಭಾವಿಸಿ, ನನ್ನಿಂದ ಏನಾದರೂ ತಪ್ಪು ನಡೆದಿದ್ದರೂ ಕ್ಷಮಿಸಿರಿ; ಅಗತ್ಯದ ವಿಚಾರವೊಂದಿದೆ, ನೀವು ಶಾಂತಿನಿಲಯಕ್ಕೆ ಬಾರದಿದ್ದುದನ್ನು ನೋಡಿ ನನಗೆ ಈದಿನ ಉತ್ಸಾಹಶಕ್ತಿಯೇ ಅದೃಶ್ಯವಾಗಿಹೋಗಿದೆ. ಗೀತಾಚಾರ್ಯರೂ ವ್ಯಾಕುಲಿತರಾಗಿದ್ದಾರೆ. ಶಿಷ್ಯವರ್ಗದಲ್ಲಿ ಮನಸ್ತಾಪ ವುಂಟಾಗಿದೆ. ಇಷ್ಟಾಗಿರುವುದರಿಂದ ಈ ದಿನದ ಶಾಲಾಕಾರ್ಯವನ್ನೇ ನಿಲ್ಲಿಸಿ ವಿದ್ಯಾರ್ಥಿವರ್ಗಕ್ಕೆ ಅಪ್ಪಣೆಯಿತ್ತು ಕಳುಹಿರುವೆನು. ಮನಸ್ಸಮಾಧಾನಕ್ಕೆ ನಿಮ್ಮಲ್ಲಿ ಸಂಭಾಷಣೆಯು ಅಗತ್ಯವಾಗಿದೆ. ಎಷ್ಟು ತೊಂದರೆಯಾಗಿದ್ದರೂ ಸಹಿಸಿ,ವಿಳಂಬಿಸದೆ ಇಲ್ಲಿಯವರೆಗೆ ಬರಲು ಕೋರುತ್ತೇನೆ !

ಇಂತಾಶಿಸುವ ನಿಮ್ಮ ಶ್ರೇಯೋಭಿಲಾಷಿ-ಧರ್ಮಬಂಧು ಭಾಸ್ಕರಾಚಾರ್ಯ."

ತಾರಾಕಾಂತನು ಪತ್ರಾಲೋಕನವಾದ ಬಳಿಕ ಮುಂದೇನುಮಾಡಬೇಕೆಂದರಿಯಲಾರದೆ "ಕುಮಾರ! ಈಗ ನಾನು ಮಾಡಬೇಕಾದುದೇನಿದೆ?ಹೇಳು-ನನಗೇನೂತೋರುವುದಿಲ್ಲ."

ಕಲಾ—ಈಗ-ಈಗಲೇ-ಅಧ್ಯಕ್ಷರ ಬಳಿಗೆ ಬರಬೇಕಾದುದೇ ಮಾಡುವುದು

ತಾರಾ—ಬಲಾತ್ಕಾರವುಂಟೇ ?

ಕಲಾ—ಬಲಾತ್ಕಾರವೆಂದರೆ ಮತ್ತೇನು ಹೇಳಲಿ! ದೈವೀಪ್ರೇಮದ ಬಲಾ

ತ್ಕಾರಕ್ಕೂ ಮಿಗಿಲಾದ ಬಲಾತ್ಕಾರವು ಬೇಕೇನು ?

ತಾರಾ—ಆಗಲಿ-ಕುಮುದಮಿತ್ರನನ್ನು ನೋಡಿದ್ದೆಯೇನು !

ಕಲಾ—ನೋಡಿದ್ದೆನು. ಹೊರಡಲು ಅನುಮತಿಯನ್ನು ಕೇಳಲು ಬಂದಿದ್ದನು. ಅವನನ್ನು ತಡೆದು ಅಕ್ಷಯಕುಮಾರನಲ್ಲಿ ಒಪ್ಪಿಸಿ, ನಾನಿಲ್ಲಿಗೆ ಗುರುವಾಕ್ಯಪ್ರೇರಿತನಾಗಿ ಬಂದೆನು.

ತಾರಾ—ಹಾಗಿದ್ದರೆ ನೀನು ಹೋಗಿ ಅಧ್ಯಕ್ಷರಲ್ಲಿ ನಾನಿಷ್ಟರಲ್ಲಿಯೇ ಬರುವೆನೆಂದು ನಿವೇದಿಸು, ಹೋಗು. ನಾನುಕೂಡ-ಪಯಣಕ್ಕೆ ಆತುರಗೊಂಡಿರುವ ನನ್ನ ಪತ್ನಿಯನ್ನು ಸಂತೈಸಿ ಈಗಲೇ ಹೊರಟುಬರುತ್ತೇನೆ.

ಕಲಾಧವನು ಕೈಮುಗಿದು ಹೊರಟುಹೋದನು. ತಾರಾಕಾಂತನೂ ಪತ್ನಿಯ ಪ್ರಯಾಣಸನ್ನಾಹವನ್ನು ತಡೆದು ಬರಲು ಹೊರಟನು.

ದ್ವಾದಶ ಪರಿಚ್ಛೇದ.

"ಭಾಸ್ಕರಾಚಾರ್ಯರ ಕ್ಷಮಾಗುಣ-ತಾರಾಕಾಂತನ ಅಸಮಾಧಾನ-ಭಾಸ್ಕರಾಚಾರ್ಯರು ಹೇಳುವ ಸಮಾಧಾನ-ಗೀತಾಚಾರ್ಯರ ಹಿತಸೂಚನೆ-ಪ್ರಭಾಕರ ಮತ್ತು ಕಲಾಧವರ ಪ್ರಾರ್ಥನೆ-ತಾರಾಕಾಂತನ ಪಶ್ಚಾತ್ತಾಪ-ಮತ್ತು ಕ್ಷಮಾಪ್ರಾರ್ಥನೆ-ಕುಮುದಮಿತ್ರನ ಮುಖದಿಂದ ಮಧುಮಿತ್ರನ ದುರ್ದಶಾ ವರ್ತಮಾನ-ರಕ್ತಾಕ್ಷಿಯ ಪತ್ರಾಲೋಕನ-ಭಾಸ್ಕರಾಚಾರ್ಯರ ಕ್ಲೇಶ-ಗೀತಾಚಾರ್ಯರ ಸಮಯೋಚಿತ ಸೂಚನೆ. ಅಕ್ಷಯಕುಮಾರ-ಪ್ರಭಾಕರ-ಕುಮುದಮಿತ್ರ ಇವರಿಗೆ ಗುರುಜನಾಜ್ಞೆ.

-ಇತ್ಯಾದಿ-

"ಸುಕುಮಾರರೇ! ಹೇಗಾದರೂ ಮಧುಮಿತನನ್ನು ಉದ್ಧರಿಸಲೇಬೇಕು. ಈಗಲೇ ವಿಪತ್ತಿಗೆ ಗುರಿಯಾಗಿರುವವನ್ನು ಬಿಡಿಸಿ ಕರೆತನ್ನಿರಿ, ವಿಳಂಬ-ವಿಳಂಬಿಸಬೇಡಿರಿ."

"ಇಷ್ಟೇಕೆ ಸಂತಾಪ!"

"ಸಂತಾಪವಲ್ಲವೇ-ತಮ್ಮಯ್ಯ ? ನಾನು ನಿನ್ನೆ ಹೇಳಿದ ಮಾತಿನಿಂದ ಓರ್ವ ವರ್ಚಸ್ವಿಯಾದ ಬ್ರಾಹ್ಮಣನ ತೇಜೋಭಂಗಮಾಡಿದಂತಾಗಲಿಲ್ಲವೇ? ತಾರಾಕಾಂತಬಾಬುಗಳಿಗೆ ವೃಥಾ ಮನಃ ಕಷಾಯವನ್ನುಂಟುಮಾಡಿದುದು ನನಗೆ ತಕ್ಕುದೇ? ನಾನೇಕೆ ಆಗ ನಾಲಿಗೆಯನ್ನು ತಡೆಯಲಿಲ್ಲ?"

"ಆಗ ತಡೆದಿದ್ದರೆ ಅವರ ಪರಾನುಕರಣದ ಹುಚ್ಚು ತಿಳಿದು-ಬುದ್ಧಿಯು ಹೀಗೆ ಹದಕ್ಕೆ ಬರುತ್ತಿತ್ತೆಂದು ನಂಬಬಹುದಾಗಿತ್ತೇ?"

"ಈಗಲಾದರೂ ಹದಕ್ಕೆ ಬಂತೆಂದು ಹೇಳಲು ಆಧಾರವೇನಿದೆ?"

"ಈಗ ಅವರು ಪಶ್ಚಾತ್ತಾಪವುಳ್ಳವರಾಗಿದ್ದಾರೆಂದು ಹೇಳಲು ಅವರ ನಡೆನುಡಿಯೇ ಸಾಕಷ್ಟು ಉದಾಹರಣವಾಗಿದೆ."

"ಹೇಗೆ? ದೇಶತ್ಯಾಗಮಾಡಿ ಹೋಗುವನಿಶ್ಚಯಮಾಡಿದುದಲ್ಲವೇ-ಅಣ್ಣಾ! ನೋಡು! ಅವರು ಹೊರಟುಹೋಗುವುದಾದರೆ ನಮ್ಮ ವಿದ್ಯಾರ್ಥಿಗಳಿಗೆ ನಾವೇ ಉತ್ಸಾಹಭಂಗ ಮಾಡಿದಂತಾಗುವುದಲ್ಲವೆ ? "

"ಅವರು ನಿಜವಾಗಿಯೂ ದೇಶತ್ಯಾಗ ಮಾಡಿಹೋಗುವರಾಗಿಲ್ಲ. ಒಂದುವೇಳೆ ಅವರು ಪೂರ್ವಾಪರ ವಿಚಾರಮಾಡದೆ ಇತರರ ಮೇಲಿನ ಆಗ್ರಹದಿಂದ ಜನ್ಮಭೂಮಿಯನ್ನು ದೇಶಮಾತೃಸೇವಾವೃತ್ತಿಯನ್ನು ತ್ಯಜಿಸಿ-ಹೋಗುವವರಾದರೆ ನಮ್ಮ ಅಡ್ಡಿಯೇನು? ಅಂಥವರ ಸಹವಾಸ

ಅಥವಾ ಏರಹಗಳಿಂದ ನಮ್ಮ ಶಿಷ್ಯವರ್ಗಕ್ಕೆ ಉತ್ಸಾಹ-ಅಥವಾ ನಿರಾಶೆ ಗಳುಂಟಾಗುವವೆಂತು?

''ತಮ್ಮಯ್ಯ! ಈಗ ನೋಡು. ಜಗತ್ತಿನ ಎಲ್ಲಾ ಪ್ರಾಣಿಗಳ ಲ್ಲಿಯೂ ಒಂದೊಂದು ಅವಗುಣವಿದ್ದೇ ಇರುತ್ತದೆ. ಲೇಶಮಾತ್ರವೂ ಅವಗುಣವಿಲ್ಲದ ಪ್ರಾಣಿಯು ಈ ಜಗತ್ತಿನಲ್ಲಿಯೇ ಇಲ್ಲ. ಆದರೂ ಅವ ಗುಣಗಳನ್ನು ಗಣಿಸದೆ ಗುಣಗಳನ್ನು ಗ್ರಹಿಸುವುದೂ, ಅವಗುಣವು ಸುಗುಣವಾಗಿ ತಿರುಗುವಂತೆ ಪ್ರಯತ್ನಪಡುವುದೂ ಉತ್ತಮವರ್ಗದ ಎಂದರೆ ಮಹನೀಯರ ಲಕ್ಷಣವು. ವಸ್ತು ಸ್ಥಿತಿ ಹೀಗಿರುವಾಗ ತಾರಾ ಕಾಂತಬಾಬುಗಳಲ್ಲಿ ಒಂದೆರಡು ಅವಗುಣವಿದ್ದಮಾತ್ರಕ್ಕೆ ಅವರಲ್ಲಿರುವ ಉತ್ಕಟವಾದ ದೇಶಭಕ್ತಿ-ಶಿಷ್ಯವಾತ್ಸಲ್ಯ, ವಾಚಾಲಕತೆ, ಕಲ್ಪನಾಚಾತು ರ್ಯಗಳೇ ಮೊದಲಾದ ಸದ್ಗುಣಗಳೂ, ಶಿಷ್ಯರ ಪ್ರಕೃತಿಮಾನವನ್ನರಿತು ಬೋಧಿಸುವಂತಹ ಸೂಕ್ಷ್ಮಪ್ರಜ್ಞತೆಯೂ, ಶಿಷ್ಯವರ್ಗವು ತಮ್ಮ ಬೋಧ ನೆಯಕಡೆಗೆ ಕಿವಿಕೊಟ್ಟು ತದೇಕಧ್ಯಾನದಲ್ಲಿ ಕುಳ್ಳಿರುವಂತೆ ಮಾಡುವ- ಆಕರ್ಷಣಾಶಕ್ತಿಯೂ ನಮ್ಮ ಸಂಭಾವನಾಯೋಗ್ಯವಲ್ಲವೆ? ಅವುಗಳಿಗೆ ನಾನು ಬೆಲೆ ಕಟ್ಟದೆ ದೋಷವನ್ನು ಉದ್ಘಾಟಿಸಿದುದು-ಹಾಗೂ ಶಿಷ್ಯ ಸಮೂಹದ ಮುಂದೆ-ಹೇಳಿದುದು ಅನ್ಯಾಯವಾದಂತಲ್ಲವೆ?''

"ನಿಜ, ಅದು ನ್ಯಾಯವನ್ನು ಮೀರಿದ್ದರೂ ಇರಬಹುದು-ಆದರೆ ಹಿಂದೆ ತಾವೇ ಎಷ್ಟುಬಾರಿ ಅವರ ಆಡಂಬರ-ಅನುಕರಣಶೀಲದ ಹುಚ್ಚಾ ಟಗಳನ್ನು ನಿಷೇಧಿಸಿರಲಿಲ್ಲ ? ಅದೇನಾದರೂ ನಿಂತಿದ್ದಿತೇ? ಅದರಲ್ಲಿಯೂ ಮೊನ್ನೆ ನಡೆಯಿಸಿದ ಆಟವೆಂತಹದು ? ಇದು ತಪ್ಪೆಂದೂ-ತಮ್ಮ ಆರ್ಯ ಸಮಾಜಕ್ಕೆ-ಆರ್ಯಧರ್ಮಕ್ಕೆ ಇದು ಅನುಚಿತವೆಂದೂ ಅವರು ತಿಳಿಯ ಬೇಕಾದ ಉಪಾಯವೆಂದರೆ ಮನಸ್ಸಿಗೆ ಕ್ಲೇಶವನ್ನುಂಟುಮಾಡುವುದೇ ಸರಿ! ಅದರಿಂದಲೇ ಅವರಲ್ಲಿ ಪಶ್ಚಾತ್ ಬುದ್ಧಿಯುಂಟಾಗುವುದು.''

"ಈಗೇನುಮಾಡುವುದು? ಅವರು ವಿಚಾರ ವಿಮರ್ಶೆಗೆ ಎಡೆಗೊಡದೆ, ದ್ವೇಷ ರೋಷಗಳನ್ನೇ ಹೊಂದಿ ಹೊರಟು ಹೋಗುವುದಾದರೆ ಗತಿಯೇನು? ''

''ಕುಮುದಮಿತ್ರನ ಮಾತಿನಿಂದ ತಾರಾಕಾಂತಬಾಬುವು ಪ್ರಯಾಣಸನ್ನಾಹದಲ್ಲಿದ್ದಂತೆ ತಿಳಿದೆನು. ಆದರೂ ಅವರ ಕ್ಷಣಮಾತ್ರದ ಕೋಪವನ್ನು ಶಮನಪಡಿಸುವುದು ಕಷ್ಟವಲ್ಲ. ಕುಮುದಮಿತ್ರ-ಕುಮುದೆ ಇವರಿಬ್ಬರೂ ಹಟಹಿಡಿದು ಬೇಡುತ್ತಿರುವುದೊಂದುಕಡೆಗಿರಲಿ; ವಿದ್ಯಾರ್ಥಿಗಳಿಗೆಲ್ಲಾ ಸೂಚಿಸಿ, ಅವರ ಮುಂದಾಗಾಗಿ ಕಲಾಧವನನ್ನೇ ಅವರಲ್ಲಿಗೆ ಕಳುಹಿರುವೆನು. ಕಲಾಧವನು ಆವಕೆಲಸಕ್ಕೂ ದುಡುಕಿ ಕಾಲಿಡುವವನಲ್ಲ. ಹಿಂದುಮುಂದು ನೋಡಿ ಅವನು ಕಾಲಿಟ್ಟಬಳಿಕ ಅದನ್ನು ಸಫಲಮಾಡಿಕೊಳ್ಳದೆ ಹಿಂತಿರುಗುವನಲ್ಲ. ತಾರಾಕಾಂತರನ್ನು ಒಲಿಸಿಕೊಳ್ಳುವ ಭಾರವು ಅವನನ್ನೇ ಸೇರಿರುವದರಿಂದ ಚಿಂತೆಪಡಬೇಕಾಗಿಲ್ಲ.''

"ಹಾಗಾದರೆ ಕಲಾಧವನೇ ನನ್ನ ಪತ್ರವನ್ನು ತೆಗೆದು ಕೊಂಡು ಹೋಗಿರುವನೇ''?

ಮೇಲೆಹೇಳಿದ ಉತ್ತರ ಪ್ರತ್ಯುತ್ತರಗಳು ಭಾಸ್ಕರಾಚಾರ್ಯ-ಗೀತಾಚಾರ್ಯರಿಗೆ ನಡೆಯುತ್ತಿದ್ದುವು. ಇಬ್ಬರೂ ಶಾಂತಿನಿಕೇತನ ವಿದ್ಯಾನಿಲಯದ ಶಾರದಾಮಂದಿರದ ಮುಂಗಡೆಯ ಅಂಗಳದಲ್ಲಿ ನೆಲದಮೇಲೆ ಕುಳಿತಿದ್ದರು. ಭಾಸ್ಕರಾಚಾರ್ಯರು ಅತ್ಯಂತ ವ್ಯಾಕುಲದಲ್ಲಿದ್ದಂತೆ ಅವರ ಮುಖಭಾವದಿಂದ ತಿಳಿಯುತ್ತಿದ್ದಿತು. ಅಂಗಳದ ಹೊರಗಡೆಯಲ್ಲಿ ಕಲಾಧವ ಪ್ರಭಾಕರರಿಬ್ಬರೂ ಜಾಗರೂಕತೆಯಿಂದ ನಿಂತು ಆಚಾರ್ಯರಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದರು. ಭಾಸ್ಕರಾಚಾರ್ಯರು, ಗೀತಾಚಾರ್ಯರು ಕಲಾಧವನ ವಿಷಯವಾಗಿ ಮಾಡಿದ ಶ್ಲಾಘನೆಗೆ ಹರ್ಷಿತರಾಗಿ; ''ಹಾಗಿದ್ದರೆ ನನ್ನ ಪತ್ರವನ್ನು ಆತನ ವಶಕ್ಕೆ ಒಪ್ಪಿಸಿದ್ದೀರಷ್ಟೆ!''

ಗೀತಾ—ಅಹುದು, ಕುಮಾರ-ಕಲಾಧವನನ್ನೇ ಕೇಳುತಿರುವೆನು. ಗೀತಾಚಾರ್ಯರ ಮಾತಿಗೆ ಉತ್ತರವಾಗಿ ಹೊರಗೆ ನಿಂತಿದ್ದ ಪ್ರಭಾಕರನಿಂದ ಉತ್ತರವು ಹೊರಟಿತು;—"ಕಲಾಧವನು ಕೃತಕಾರ್ಯನಾಗಿಯೇ ಬಂದಿರುತ್ತಾನೆ."

ಭಾಸ್ಕರಾ—ವಿಸ್ಮಯಕೌತುಕಗಳಿಂದ—'ಅದಾರು ಹೊರಗೆ? ಪ್ರಭಾಕರ! ಅಲ್ಲೇಕೆ ನಿಂತಿರಬೇಕು. ? '

(ಪ್ರಭಾಕರ-ಕಲಾಧವ ಕುಮಾರರು ಮುಂದೆ ಬಂದು ಕೈಕಟ್ಟಿನಿಂತರು.)

ಗೀತಾ—ಕುಮಾರ! ಬಾಬುಗಳೇನೆಂದರು? ವಿಚಾರವೇನು!

ಕಲಾ—ಎಲ್ಲವೂ ತಮ್ಮ ಸಂಕಲ್ಪದಂತೆಯೇ ಆಗಿದೆ. ಪ್ರಯಾಣದಲ್ಲಿದ್ದ ಬಾಬುಗಳು ನನ್ನಪ್ರಾರ್ಥನೆ-ಮತ್ತು ಸನ್ನಿಧಾನದ ಆಹ್ವಾನಪತ್ರಗಳನ್ನು ಪರಾಮರ್ಶಿಸಿ, ಕೇಳಿ ಶಾಂತರಾಗಿದ್ದಾರಲ್ಲದೆ-ಇಷ್ಟರಲ್ಲಿ ಇಲ್ಲಿಗೆ ಬರುತ್ತೇನೆಂದೂ ಹೇಳಿರುತ್ತಾರೆ.

ಭಾಸ್ಕರಾ—ಆನಂದದಿಂದ-'ಅಷ್ಟುಮಟ್ಟಿಗೆ ಮಾಡಿದರೆ ನಾನು ಉಪಕೃತನಾದೇನು ! "

ಇವರು ಹೀಗೆ ಮಾತನಾಡುತ್ತಿರುವಾಗಲೇ ತಾರಾಕಾಂತನ್ನು ಮಾತಿಲ್ಲದೆ ಸದ್ದುಮಾಡದೆ ಬಂದು,ಮೌನದಿಂದ ಭಾಸ್ಕರಾಚಾರ್ಯರಿಗೆ ನಮಸ್ಕರಿಸಿ ನಿಂತನು. ಭಾಸ್ಕರಾಚಾರ್ಯರು ಬೆದರಿ ಬೆರಗಾಗಿ, ತಾರಾಕಾಂತನ ಕೈಹಿಡಿದು ಬಳಿಯಲ್ಲಿಕುಳ್ಳಿರಿಸಿ-ಆನಂದಭಾಷ್ಪವನ್ನು ಸುರಿಸುತ್ತ ಹೇಳಿದರು. 'ತಾರಾಕಾಂತಬಾಬು! ಆಗ್ರಹವು ಸಮಾಧಾನವಾಯಿತೆ? ದಯೆಯಿಟ್ಟು ಕ್ಷಮಿಸುವಿರಾ?

ತಾರಾ—ಸ್ವಾಮಿ! ಕ್ಷಮಿಸುವ ಯೋಗ್ಯತೆ ನನಗೆಲ್ಲಿಯದು? ಆಗ್ರಹವಾರಲ್ಲಿ? ನನ್ನ ಆಗ್ರಹಾನುಗ್ರಹಗಳು ಆರಿಗೆ ಖೇದ ಮೋದಗಳನ್ನುಂಟುಮಾಡಬಹುದು ? ನಮ್ಮಂತಹರಿಂದ ಲೋಕಕ್ಕೆ ಏನೂ

ಉಪಕಾರವಿಲ್ಲ, ನಮ್ಮನ್ನು ನೋಡಿ ಶಿಷ್ಯವರ್ಗವೂ ಕೆಟ್ಟನಡತೆಗೆ ಬಿದ್ದಾರೆಂಬ ಶಂಕೆಯುಂಟಾಗಿದೆ. ಅದಕ್ಕಾಗಿ ತಮ್ಮಲ್ಲಿ ಅಪ್ಪಣೆ ಯನ್ನು ತೆಗೆದುಕೊಂಡುಹೋಗಲು ಬಂದಿರುತ್ತೇನೆ.

ಭಾಸ್ಕರಾ—ಬೆದರಿನೋಡುತ್ತ-ಅಸ್ಪಷ್ಟಸ್ವರದಲ್ಲಿ-''ಏನು-ಏನೆಂದಿರಿ!''

ತಾರಾ—ತಲೆತಗ್ಗಿಸಿ-"ಮತ್ತೇನೂ ಇಲ್ಲ; ಇಂದಿನವರೆಗೆ ನನ್ನಿಂದಾದ ತೊಂದರೆಗಳನ್ನೂ, ನನ್ನ ಅನೀತಿಯ ದೆಸೆಯಿಂದ ತಮ್ಮ ಶಿಷ್ಯವ ರ್ಗದ ಜ್ಞಾನ ಪ್ರಸಾರಕ್ಕೆ ಉಂಟಾಗುತ್ತಿದ್ದ ಅಭ್ಯಂತರಗಳನ್ನೂ ದಯೆಯಿಟ್ಟು ಕ್ಷಮಿಸಿರಿ;-ಮತ್ತು - ನನಗಿಂದು ಹೊರಡಲು ಅಪ್ಪಣೆಯಿತ್ತು - ಅಂತಃಕರಣ ಪೂರ್ವಕವಾಗಿ ಆಶಿರ್ವದಿಸಿ ಕಳುಹಿಕೊಡಿರಿ-ಇಷ್ಟೇ ನನ್ನ ಪ್ರಾರ್ಥನೆ.

ಭಾಸ್ಕರಾ—ಕಾತರಸ್ವರದಿಂದ-'ಏಕೆ? ತಾರಾಕಾಂತಬಾಬು! ನನ್ನನ್ನೇಕೆ ಕೊಲ್ಲುತ್ತಿರುವಿರಿ!'

ತಾರಾ—ಕೌತುಕದಿಂದ ನೋಡುತ್ತ ''ಹಾಗೆಂದರೇನು?ಕೊಂದೆನೆಂದರೆ-ಹೇಗೆ? ನಾನು ದೀನವದನನಾಗಿ ಪ್ರಾರ್ಥಿಸಿದೆನಲ್ಲದೆ. ಆಯುಧ ಹಿಡಿದು ಧೂರ್ತನಾಗಿಬಂದಿಲ್ಲ!''

ಭಾಸ್ಕರಾ—ತಾರಾಕಾಂತನಭುಜದಮೇಲೆ ಕೈಯಿರಿಸಿ-ಗದ್ಗದಸ್ವರದಿಂದ 'ಇದೇ ಸಾಲದೇ ಬಾಬು ? ನನ್ನನ್ನು ಕೊಲ್ಲಲು,ಇದಕ್ಕೂ ಹೆಚ್ಚಾದ ಆಯುಧವು ಬೇಕೇ? ಆಯುಧದಿಂದಾದ ಗಾಯವನ್ನು ಗುಣಪಡಿಸುವ ಔಷಧವುಂಟು, ಆದರೆ-ಮೊನೆವಾತಿಂದಾದ..."

ತಾರಾ—ಉತ್ತೇಜಿತ ಸ್ವರದಿಂದ- 'ಅಹುದಷ್ಟೆ? ವಾಗ್ಬಾಣದಿಂದಾದ ಗಾಯಕ್ಕೆ ಔಷಧವಿಲ್ಲವೆಂದು ತಿಳಿದರೆ-ದಯೆಯಿಟ್ಟು ನನ್ನನ್ನು ಬೀಳ್ಕೊಡಿರಿ—'

ಭಾಸ್ಕರಾ—ಮತ್ತೆ ಮತ್ತೆಯೂ ಅದೇಮಾತೇ? ಬಾಬು! ಮೊದಲೇ

ನಾನು ದುರ್ಬಲನು ; ಅದರಮೇಲೆ ನಿಮ್ಮ ವಿಯೋಗ-ಶ್ರೀಷರ ಮನೋವ್ಯಾಕುಲಗಳ ತಾಪವೂ ಮನಸ್ಸಿಗೆ ಹತ್ತಿದರೆ ನಾನು ಉಳಿಯುವ ಬಗೆ ಹೇಗೆ ? ಯೋಚಿಸಿರಿ ! ವೃದ್ಧನಮಾತಿನಲ್ಲಿ ಸ್ವಲ್ಪವಾದರೂ ವಿಶ್ವಾಸಪಡಿರಿ. ಆಕ್ರೋಶವನ್ನು ಹೆಚ್ಚಿಸಿಕೊಳ್ಳಬೇಡಿರಿ.

ತಾರಾ—ಸ್ವಾಮಿ! ಮನಸ್ಸಿನ ಖತಿಯನ್ನು ಹೋಗಲಾಡಿಸಲು ನಾನು ಅಶಕ್ತನಾಗಿದ್ದೇನೆ. ಈಗ ನನಗೆ ಕರ್ತವ್ಯಾಂಶವೇ ಗೊತ್ತಾಗುವಂತಿಲ್ಲ. ಮುಖ್ಯವಾಗಿ ತಮ್ಮ ನಿನ್ನೆಯ ಉಪದೇಶವಾಕ್ಯವೊಂದೇ ಮನಸ್ಸಿಗೆ ಹೊಳೆದು, ನನ್ನನ್ನು ದೇಶತ್ಯಾಗಮಾಡುವಂತೆ ಮಾಡಿರುತ್ತದೆ. ಇಷ್ಟಲ್ಲದೆ—

ಗೀತಾ—ತಾರಾಕಾಂತಬಾಬು ! ಅಭಿಮಾನವಂತರಿಗೆ ಜನರಮಾತು ಸಹನೆಯಾಗುವದಿಲ್ಲವೆಂಬುದು ಸಹಜ ; ಅಭಿಮಾನಶಾಲಿಗಳು ಅಮರ್ಯಾದೆಯ ಮಾತುಗಳನ್ನೆಂದಿಗೂ ಕೇಳಲಾರರೆಂಬುದೂ ನಮಗೆ ಗೊತ್ತಿದೆ. ಆದರೂ ಸ್ವಲ್ಪವಿಚಾರಮಾಡಿನೋಡಿರಿ! ನಿನ್ನೆ ಅಧ್ಯಕ್ಷರಾಡಿದ ಮಾತುಗಳಲ್ಲಿ ಒಂದೆರಡು ಮರ್ಯಾದೆಯನ್ನು ಮೀರಿರಬಹುದಾದರೂ ಅದು, ತಮ್ಮ ಪ್ರತಿಷ್ಠಾಭಂಗಕ್ಕೆಂದಲ್ಲ. ನಮ್ಮ-ನಿಮ್ಮ ಮತ್ತು ಶಿಷ್ಯವರ್ಗದವರ ಶ್ರೇಯಸ್ಸಾಧನೆಗಾಗಿಯೂ, ನಮ್ಮ ಶಾಂತಿನಿಕೇತನದ ಉದ್ದೇಶಸಾರ್ಥಕ್ಯತೆಗಾಗಿಯೂ ಹೇಳಿದುದು ಮಾತ್ರ ; ಅದನ್ನು ನೀವು ವಿರೋಧ ಭಾವನೆಯಿಂದ ನೋಡುವುದು ಕೂಡದು. ಏಕೆಂದರೆ, ಕೇಳಿರಿ—ಬಾಬುಗಳೇ ! ಅಧ್ಯಕ್ಷರು—ನಿಮ್ಮನ್ನು ಬೇರೆ, ಶಿಷ್ಯರನ್ನು ಬೇರೆಯೆಂದು ತಿಳಿದಿಲ್ಲ. ಎಲ್ಲರನ್ನೂ ತಮ್ಮ ಪರಿವಾರಕ್ಕೆ ಸೇರಿದ-—

ತಾರಾ—ನಿಜ! ಗೀತಾಚಾರ್ಯರೇ ? ಅದೆಲ್ಲವೂ ನನಗೆ ಗೊತ್ತಿದೆ. ಆದರೂ ಸ್ವಲ್ಪವಿಚಾರಮಾಡಿ ನೋಡಿರಿ, ಇಲ್ಲಿಯವಿದ್ಯಾರ್ಥಿಗಳು ನಮ್ಮ ಶಿಷ್ಯವರ್ಗಕ್ಕೂ ಒಳಪಟ್ಟಿರುವರಷ್ಟೆ! ಹಾಗೆಂದ ಬಳಿಕ ಅವರಿಗೆ ನಮ್ಮಲ್ಲಿ ಸಂಪೂರ್ಣ ಭಕ್ತಿ-ವಿಶ್ವಾಸ-ಗೌರವಗಳೂ ಇರಬೇಕಾಯಿತು. ಹಾಗೆ ಅವರಲ್ಲಿ ಆ ಗುಣಗಳಿರಬೇಕಾದರೆ ನಮ್ಮ ನಮ್ಮ ನಡೆನುಡಿಗಳಲ್ಲಿ ಕಲಂಕವಿಲ್ಲವೆಂಬ ಭರವಸೆಯೂ ಅವರಿಗೆ ಬಲವಾಗಿದ್ದೇ ಇರಬೇಕು. ಅದಿಲ್ಲವಾದರೆ ನಮ್ಮ ವಿಷಯವಾಗಿ ಅವರಿಗೆ ಆದರ ಭಾವವಿರುವುದಿಲ್ಲ. ಆದರವಿಲ್ಲವಾದರೆ ನಮ್ಮ ಬೋಧನ-ಅಥವಾ ಶಿಕ್ಷಣದಕಡೆಗೆ ಅವರ ಗಮನವಾಗಲಿ, ನಮ್ಮ ಶಿಕ್ಷಣ-ಬೋಧನಗಳಿಗೆ ಸಾರ್ಥಕತೆಯಾಗಲೀ ಆಗುವದಿಲ್ಲ. ಹೀಗಿರುವುದರಿಂದ ಒಂದುಬಾರಿ ನನ್ನ ವಿಷಯಕವಾಗಿ ಅನಾದರ-ಅಥವಾ ವಿಕಲ್ಪಾರ್ಥಕಲ್ಪನೆಯುಂಟಾಗಲು ಅವಕಾಶ ದೊರೆತ ಬಳಿಕ ನಾನಿಲ್ಲಿದ್ದು ಮಾಡುವದೇನಿದೆ ? ಆದರೆ ನನ್ನಲ್ಲಿ ಒಂದು ದುರ್ಗುಣವಿತ್ತೆಂದೇ ಭಾವಿಸಿರಿ ! ಆದರೂ ನಾನು ಎಲ್ಲಿ-ಯಾವ ವರ್ಗದಲ್ಲಿ-ನಿಲ್ಲಲುಳ್ಳವನು ? ನನಗೆ ಹಿತಸೂಚನೆಯು ಯಾವಬಗೆಯಿಂದಾಗಬೇಕು ? ಅದಕ್ಕೂ ಮರ್ಯಾದೆಯುಂಟಷ್ಟೆ? ಆಪ್ತಭಾವದಿಂದ ಕರೆದು ಏಕಾಂತದಲ್ಲಿ ನನ್ನನ್ನು ಕಡಿದುಹಾಕಿದ್ದರೂ, ನನಗೆ ಅಸಮಾಧಾನವಾಗುತ್ತಿರಲಿಲ್ಲ!.........

(ಭಾಸ್ಕರಾಚಾರ್ಯರು ಸ್ತಬ್ಧರಾಗಿ ಕುಳಿತುಬಿಟ್ಟರು)

ಗೀತಾ—ತಾರಾಕಾಂತನ ಕೈಹಿಡಿದು 'ಬಾಬು ! ಮೊದಲೇ ನಾನು ಹೇಳಿರುವೆನು, ತಾಳ್ಮೆಯನ್ನು ತೆಗೆದುಕೊಂಡು ಸ್ವಲ್ಪಕೇಳಿರಿ ! ನಮ್ಮ ದೇಶದ ಪದ್ಧತಿ, ದೇಶೀಯರ ಪ್ರಕೃತಿಧರ್ಮ-ಇದಕ್ಕೆ ಅನುಗುಣವಾಗಿ ನಾವು ಇದ್ದೇ ಇರಬೇಕು. ನಮ್ಮ ಪೂರ್ವಜರು ನಮಗೆ

ನಿಯಮಿಸಿರುವ ಶಾಸನಗಳನ್ನು ನಾವು ಅನುಸರಿಸಬೇಕು. ಅವನ್ನು ಬಿಟ್ಟು, ನಾವು ಬೇರೊಬ್ಬರ ಮಾದರಿಯನ್ನು ಮುಂದಿಟ್ಟು ನಡೆಯುವದು ನಮಗೆಶ್ರೇಯಸ್ಕರವಲ್ಲ, ನಮ್ಮ ಪೂರ್ವಜರ ಮಾದರಿಯೇ ನಮ್ಮ ಮುಂದಿದ್ದು, ನಮ್ಮ ನಡೆನುಡಿಗಳಲ್ಲಿ ಅಲ್ಪಸ್ವಲ್ಪ-ಅದೂ ದೇಶಾಭ್ಯುದಯಕ್ಕೆ ಅವಶ್ಯವೆಂದು ತೋರಿದರೆ ಮಾತ್ರ-ಸುಧಾರಿಸಿಕೊಳ್ಳುವುದು ಶ್ಲಾಘ್ಯವಿಚಾರವು! ಹಾಗಿಲ್ಲದೆ, ಸುಧಾರಿಸಿದ ಜನಾಂಗಕ್ಕೆ ಸೇರಬೇಕೆಂದು ಎಲ್ಲಾ ವಿಷಯದಲ್ಲಿಯೂ ವಿದೇಶೀಯರ ಮಾದರಿಯನ್ನೇ ಹಿಡಿದರೆ ಅನರ್ಥವೇ ಆದೀತು. ಅಷ್ಟಕ್ಕೆ ಅವಕಾಶ ಕೊಡಬಾರದೆಂದು ಅಧ್ಯಕ್ಷರು ತಮ್ಮಲ್ಲಿ ಹಲವುಬಾರಿ ಕೇಳಿಕೊಂಡಿರುವರು. ಆದರೂ ಅದು ತಮ್ಮ ಲಕ್ಷ್ಯಕ್ಕೆ ಬರಲಿಲ್ಲವಾದುದರಿಂದ ತಮ್ಮ ಮನಸ್ಸಿಗೆ ಚೆನ್ನಾಗಿ ಹತ್ತುವಂತಾಗಲೆಂದೂ ಶಿಷ್ಯರೂ ಎಚ್ಚತ್ತುಕೊಳ್ಳುವರೆಂದೂ ಭಾವಿಸಿ ಹಾಗೆ ಹೇಳಿದರು, ಅಷ್ಟೆ. ಅಭಿಮಾನಶಾಲಿಗಳ ಹೃದಯದಲ್ಲಿ ಅನುತಾಪವುಂಟಾಗಬೇಕಾದರೆ, ಅವರ ಕಾರ್ಯಭಾಗದ ದೋಷಲೋಪಗಳು ಮನಸ್ಸಿಗೆ ಹೊಳೆದು ಪಶ್ಚಾತ್ ಬುದ್ಧಿಯುಂಟಾಗುವಂತೆ ಮಾಡುವ ಪ್ರಸಂಗವನ್ನು ತರುವುದು ಅಗತ್ಯವೆಂಬುದನ್ನು ತಾವು ತಿಳಿಯದವರೇನೂ ಅಲ್ಲ....................

ತಾರಾ—ಹಾಗೂ ಆಗಲಿ—ಗೀತಾಚಾರ್ಯ! ನನಗೆ ಅಂತಹ ವಿವೇಕವುಂಟಾಗುವವರೆಗಾದರೂ ನಾನು ಬೇರೆಯಾಗಿದ್ದು ಆ ಬಳಿಕ ಬಂದು ಇಲ್ಲಿ ಸೇವೆಗೆ ನಿಲ್ಲುವೆನು?

ಭಾಸ್ಕರಾ—ನಾನು ಇನ್ನು ಹೆಚ್ಚಾಗಿ ಹೇಳಲಾರೆನು, ತಾರಾಕಾಂತ ಬಾಬು! ಮೊದಲಲ್ಲಿಯೇ ಕ್ಷಮಾಪಣೆಯನ್ನು ಕೇಳಿರುತ್ತೇನೆ.

ಮತ್ತೆಯೂ ಕೇಳುವೆನು ಕ್ಷಮಿಸಿರಿ ! ಅನ್ಯಾಯವಾಗಿ ಶಿಷ್ಯರ ಮತ್ತು ನನ್ನ ಆಶಾಛೇದನಮಾಡಿಬಿಟ್ಟು ಹೋಗಬೇಡಿರಿ!

ತಾರಾ—ನನಗೂ ಹಾಗೆ ಹೋಗಲು ಕಷ್ಟವೆನ್ನಿಸದಿಲ್ಲ, ಆದರೂ ನಾನೇನುಮಾಡಲಿ ? ನನ್ನ ಪತ್ನಿಯ ನಿರ್ಬಂಧಕ್ಕಾದರೂ ನಾನಿಲ್ಲಿಂದ ಹಿಂದಕ್ಕೆ ಕಾಲ್ತೆಗೆಯಬೇಕು.

ಕಲಾಧವ—ಸ್ವಾಮೀ | ಹಿರಿಯರ ಮಾತಿನ ನಡುವೆ ನಾವು ಮಾತನಾಡುವುದು ವಿಹಿತವಲ್ಲ, ಆದರೂ ಈಗ ನಮಗೆ ಹೇಳಲೇಬೇಕಾದ ಸಂದರ್ಭವಿದು, ದಯೆಯಿಟ್ಟು ಕ್ಷಮಿಸಿರಿ. ತಮ್ಮ ಪತ್ನಿಯು ಅಭಿಮಾನದಿಂದ ಒಂದು ವೇಳೆ ಹಾಗೆ ಮುಷ್ಕರವನ್ನು ಹಿಡಿದಿದ್ದರೂ ದೇಶಹಿತವನ್ನೂ ಸ್ವಕರ್ತವ್ಯವನ್ನೂ ಉಪೇಕ್ಷಿಸಿ ಬಿಡುವವರಲ್ಲವೆಂಬುದು ನಮ್ಮ ಭರವಸೆ ! ತಾವು ತಾಳ್ಮೆಯಿಂದ ತಮ್ಮ ದೇಶ-ಸಮಾಜಗಳ ಊರ್ಜಿತಾವಸ್ಥೆಯಲ್ಲಿ ಸಂಪೂರ್ಣ ಗಮನವಿರಿಸಿದ್ದೂ ಮತ್ತು ತಮ್ಮ ಶಿಷ್ಯವರ್ಗವನ್ನು ಸುಸ್ಥಿತಿಗೆ ತರಬೇಕೆಂಬ ಉದ್ದೇಶವುಳ್ಳವರಾಗಿದ್ದೂ ತಾವೇ ತಮ್ಮ ಪ್ರವೃತ್ತಿಮಾರ್ಗವನ್ನು ರೂಪಾಂತರಪಡಿಸಿಕೊಂಡರೆ ನಮ್ಮ ಗತಿಯೇನು ? ಇದನ್ನು ನಾವೇನೂ ಹೇಳಬೇಕಾಗಿಲ್ಲ, ಆದರೂ ತಮ್ಮಿಂದ ನಾವು ಕಲಿತಿರುವ ಈ ವಿಷಯವನ್ನು ಸಂದರ್ಭವಶದಿಂದ ಮರೆತಿರಬಹುದೆಂದು ತಮಗೆ ಜ್ಞಾಪಕಕ್ಕೆ ಕೊಡಬೇಕೆಂದಿಷ್ಟೇ ನಿವೇದಿಸಿರುವೆವು.

ತಾರಾ—ಉತ್ತರವಿಲ್ಲದೆ ಕಲಾಧವನನ್ನೇ ನೋಡುತ್ತ ನಿಂತಿದ್ದನು.

ಪ್ರಭಾ—ಏಕೆ-ಸ್ವಾಮೀ! ಇನ್ನೂ ನಮ್ಮ ಪ್ರಾರ್ಥನೆಯು ಅಂಗೀಕಾರಾರ್ಹವಾಗಲಿಲ್ಲವೇ ? ಅಧ್ಯಕ್ಷರ ಅನುನಯ, ಉಪಾಧ್ಯಕ್ಷರ ವಿಮರ್ಶಾಪೂರ್ವಕ ಸಮಾಧಾನ, ವಿದ್ಯಾರ್ಥಿಗಳ ಪರವಾಗಿ ಕಲಾಧ

ವನ ಪ್ರಾರ್ಥನೆ ; ಇಷ್ಟಾಗಿಯೂ ತಮಗೆ ಸಮಾಧಾನವಾಗಲಿಲ್ಲ ವೆಂದರೆ ಅದು ನಮ್ಮ ದುರದೃಷ್ಟವಲ್ಲವೆ? ಸ್ವಾಮಿನಾಥ! ವಿಶೇಷವಾಗಿ ಪ್ರಾರ್ಥಿಸಲು ಅಶಕ್ತರಾಗಿರುವೆವು; ಹಿರಿಯರಾದ ತಾವು ಕುಮುದಮಿತ್ರನ ಶ್ರೇಯಸ್ಕಾಮಿಗಳೂ ಕುಮುದೆಯ ಹಿತಚಿಂತಕರೂ, ಈ ಶಾಂತಿನಿಕೇತನ ಮತ್ತು ಇಲ್ಲಿಯ ವಿದ್ಯಾರ್ಥಿ-ವಿದ್ಯಾರ್ಥಿನೀ ವರ್ಗದವರ ಅಭ್ಯುದಯೇಚ್ಛುಗಳೂ ಆಗಿರುವಲ್ಲಿ ನಮ್ಮೆಲ್ಲರ ಪ್ರಾರ್ಥನೆಗಳನ್ನೂ ತೆಗೆದುಹಾಕಿ ಹೊರಡಲಾರಿರೆಂಬುದು ನನ್ನ ಪೂರ್ಣಭರವಸೆ!

ಪ್ರಭಾಕರನು ಹೇಳುತ್ತಿದ್ದಂತೆಯೇ ಕಲಾಧವನು ಒಮ್ಮೆ ತಲೆಯೆತ್ತಿನೋಡಿದನು ; ಭಾಸ್ಕರಾಚಾರ್ಯ-ಗೀತಾಚಾರ್ಯರ ಮುಖಲಕ್ಷಣಗಳು ವಿಜಾತೀಯವಾಗಿದ್ದವು. ತಾರಾಕಾಂತನಂತೂ ಚಲನವಿಲ್ಲದೆ ಕಳಿತಿದ್ದನು. ಆತನ ಎರಡು ಕಣ್ಣುಗಳಿಂದಲೂ ನೀರು ಸೋರುತ್ತಿದ್ದಿತು. ತುಟಿಗಳು ನಡುಗುತ್ತಿದ್ದುವು. ದೃಷ್ಟಿಯು ನೆಲದಮೇಲೆ ಬಿದ್ದಿತು. ಕಲಾಧವನು ಪ್ರಭಾಕರನನ್ನು ತಡೆದು-ಆಚಾರ್ಯತ್ರಯರಿಗೆ ನಮಸ್ಕರಿಸಿ ಗಂಭೀರಭಾವದಿಂದ "ಏನಿದು-ಸ್ವಾಮಿನಾಥ ! ಇದೇನಿದು ವ್ಯಾಪಾರ ? ಹೀಗೇಕೆ ? ಗುರುಜನರೇ ಹೀಗೆ ಕುಳಿತರೆ ಇನ್ನು ಶಿಷ್ಯವರ್ಗದವರ ಪಾಡೇನಾಗಬೇಕು ? ಅವರನ್ನು ಆದರಿಸುವದಕ್ಕೆ ಬರುವರಾರು ? ಸತ್ಪುರುಷರ ವಿರಹವು ಬಹು ತಾಪದಾಯಕವಾದುದೇ ಸರಿ. ಆದರೂ ಈಗ ವಿರಹವನ್ನು ಅನುಭವಿಸಬೇಕಾದಷ್ಟು ದುರ್ಭರಪ್ರಸಂಗವು ಬಂದಿರುವುದಿಲ್ಲ ; ಮತ್ತು ಭಗವತ್ಕೃಪೆಯಿಂದ ಬರುವುದೂ ಇಲ್ಲ. ಸಮಾಧಾನ-" ಕಲಾಧವನ ವಾಕ್ಯವು ಅಷ್ಟಕ್ಕೇ ನಿಂತಿತು. ಅಷ್ಟರಲ್ಲಿ ಖಿನ್ನವದನರಾಗಿ ಅಕ್ಷಯಕುಮಾರ—ಕುಮುದಮಿತ್ರರಿಬ್ಬರೂ ಮೆಲ್ಲನೆ ಬಂದು ಗುರುಗಳಿಗೆ ನಮಸ್ಕರಿಸಿ, ಕೈಕಟ್ಟಿ ನಿಂತರು.

ಗೀತಾ—ಕುತೂಹಲದಿಂದ—'ಇದೇಕೆ ? ಅಕ್ಷಯಕುಮಾರ ! ಇಬ್ಬರೂ ಹೀಗೇಕೆ ಖಿನ್ನರಾಗಿರುವಿರಿ ?

ಕುಮುದಮಿತ್ರ—ಕೈಯಲ್ಲಿ ಹಿಡಿದಿದ್ದ ಪತ್ರವನ್ನು ಮುಂದಿಟ್ಟು-ಇದೇ ರಕ್ತಾಕ್ಷಿಯೆಂಬ ಕುಲಟೆಯೊಬ್ಬಳ ಪತ್ರವು. ಇದೀಗಲೇ ನನಗೆ ಬಂದಿರುವುದು. ಇದನ್ನು ನೋಡಿದರೆ ವಿಚಾರವು ತಿಳಿದು ಬರುವುದು.

ಗೀತಾಚಾರ್ಯರು ಪತ್ರವನ್ನು ತೆಗೆದು ಕಲಾಧವನ ಮುಂದಿಟ್ಟು ವಾಚಿಸಲು ಹೇಳಿದರು. ಕಲಾಧವನು ಪತ್ರವನ್ನು ಕೈಕೊಂಡು ವಾಚಿಸಿದನು, ಪತ್ರವು ಈರೀತಿ ವಿಲಿಖಿತವಾಗಿದ್ದಿತು.

" ಕುಮುದಮಿತ್ರಬಾಬು !

ತಮ್ಮ ಸಹಾಧ್ಯಾಯಿಗಳಲ್ಲಿ ಒಬ್ಬನಾದ ಮಧುಮಿತ್ರನೆಂಬುವನು ಮಾರ್ಗವಶದಿಂದ ಇಲ್ಲಿಗೆ ಬಂದು ಹಾಸಿಗೆ ಹತ್ತಿ ಬಿದ್ದಿರುವನು, ತುಂಬಾ ಯಾತನೆಪಡುತ್ತಿರುವನು; ಸದಾ ತಮ್ಮನ್ನು ಸ್ಮರಿಸುತ್ತಿರುವನು. ನೀವಾಗಲಿ ನಿಮ್ಮ ಮಿತ್ರರಾದ ಪ್ರಭಾಕರ ಅಕ್ಷಯಕುಮಾರರಲ್ಲಿ ಯಾರೇ ಆಗಲೀ ಬಂದು ತನ್ನನ್ನು ಕರೆದೊಯ್ದು ತಾಯಿಯಬಳಿಯಲ್ಲಿ ಬಿಟ್ಟು, ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು ಪ್ರಾರ್ಥಿಸುತ್ತಿರುವನು. ವಿಳಂಬಿಸಿದರೆ ವಿಪತ್ತು ತಪ್ಪಲಾರದು. ಈ ಸಾಯಂಕಾಲದವರೆಗೆ ನಾವಿಲ್ಲಿ ಅವನಿಗೆ ಇರಲು ಅವಕಾಶ ಕೊಟ್ಟಿರುವೆವು. ಅಷ್ಟರಲ್ಲಿ ಯಾರೂ ಬಂದು ಕರೆದೊಯ್ಯದಿದ್ದರೆ ಮುಂದೆ ನಮ್ಮ ಇಚ್ಛೆಗೆ ಸರಿದೋರಿದಂತೆ ಮಾಡುವೆವು-ಎಚ್ಚರಿಕೆ!!

ತಾರಾಕಾಂತಬಾಬುವು ಎಚ್ಚರಹೊಂದಿ ಆಗ್ರಹದಿಂದ—ಏನಿದು! ಎಷ್ಟುಧೈರ್ಯ ? ಎಂತಹ ನಿರ್ಲಜ್ಜಾಪ್ರಕೃತಿ !! ಎಂತಹ ಕಲ್ಲೆದೆ ! ಅವಳಾರು-

ಗೀತಾ—ಅವಳಾರೇ ಆಗಿರಲಿ-ತಾರಾಕಾಂತಬಾಬು ! ಮಧುಮಿತ್ರನು ಅಲ್ಲಿಗೇಕೆ ಹೋಗಬೇಕು ? ಹುತ್ತಕ್ಕೆ ಕೈಯಿಟ್ಟರೆ ಹಾವು ಕಡಿಯದೆ ಬಿಡುವುದೇ ? ಮೂರ್ಖನಿವನೇಕೆ ಹೀಗೆ ಮಾಡಿದನೋ-

ತಾರಾ —ಇವನಲ್ಲಿಗೆ ಹೋಮುದೂ ಅವಳು ಇವನಲ್ಲಿ ಹೀಗೆ ನಡೆದುದೂ ಎರಡೂ ನಮ್ಮ ಸಮಾಜಕ್ಕೆ ಎಷ್ಟು—

ಭಾಸ್ಕರಾ —ತಾರಾಕಾಂತಬಾಬು ! ಆದಕ್ಕೆಂದಲ್ಲವೇ ನಾವಿಲ್ಲಿ ನಮ್ಮ ಶಿಷ್ಯವರ್ಗಕ್ಕೆ ಇಷ್ಟು ನಿಯಮಗಳನ್ನಿರಿಸಿರುವುದು ? ಶಿಷ್ಯರು ಈ ಗುರುಕುಲವಾಸದಲ್ಲಿ ಬ್ರಹ್ಮಚರ್ಯವ್ರತನಿಷ್ಠೆಯಿಂದ ತಮ್ಮ ಇಂದ್ರಿಯಗಳನ್ನು ಕಾಪಾಡಿಕೊಂಡು, ಮುಂದಿನ ಆಶ್ರಮಧರ್ಮ ಪರಿಪಾಲನೆಗೆ ಸಮರ್ಥರಾಗಬೇಕೆಂದಲ್ಲವೇ ಅವರನ್ನು ಸಾತ್ವಿಕಾಹಾರ, ಸಾತ್ವಿಕವಿಚಾರಗಳಲ್ಲಿಯೇ ನಿಲ್ಲಿಸಿ, ನಾವು ಜಾಗರೂಕರಾಗಿರಬೇಕೆಂದಿರುವುದು ! ಹೀಗಾಗಬಹುದೆಂಬ ಭೀತಿ, ನನಗೆ ಹಿಂದಿನಿಂದ ಇದ್ದೇ ಇದ್ದಿತು, ಅದಿಂದು ನಿಜವಾಯಿತು. ಬಾಬು ! ಕೋಪಿಸಬೇಡಿರಿ ! ಈಗ ಮುಕ್ತಕಂಠದಿಂದ ಹೇಳುವೆನು. ನಮ್ಮ ಮಕ್ಕಳನ್ನು ನಾವು ತಕ್ಕ ಮಟ್ಟಿಗೂ ಹದ್ದಿನಲ್ಲಿಟ್ಟು, ಕಾಲಕ್ಕೆ ತಕ್ಕಂತೆ ಲಾಲನ ಪಾಲನದಲ್ಲಿ ಗಮನವನ್ನು ತೆಗೆದುಕೊಳ್ಳದೆ ಅವರನ್ನು ಲೀಲೆಯಿಂದ ಬೆಳೆಯಿಸಿದರೆ, ಅಥವಾ ಅವರಿಗೆ ವಿದೇಶೀಯರ ಆಚರಣಾದ ಅನುಕರಣದ ಹುಚ್ಚನ್ನು ತಲೆಗೇರಿಸಿ ಕುಣಿಸಿದರೆ ಆದರ ಪರಿಣಾಮವು ಹೀಗೆಯೇ ವಿಪರೀತದಲ್ಲಿ ತಿರುಗುವುದು. ಮಧುಮಿತ್ರನ ತಾಯಿಯು ತಕ್ಕಮಟ್ಟಿಗೆ ಮಗನಿಗೆ ಶಿಕ್ಷಣವನ್ನು ಕೊಡುತ್ತಿದ್ದರೂ ಅದರಲ್ಲಿ ಲಾಲನೆಯು ಹೆಚ್ಚಾಗಿದ್ದು ದಕ್ಷತೆಯು ಕಡಮೆಯಾದುದರಿಂದ ಇಷ್ಟಕ್ಕೆ ಅವಕಾಶವುಂಟಾಯಿತು.

ಅಕ್ಷಯ—ಗುರುದೇವ ! ಮಧುಮಿತ್ರಕುಮಾರನು ಸ್ವೇಚ್ಛಾಪ್ರವೃತ್ತಿಯವನಾಗಿದ್ದರೂ ಅವನಿಗೆ ಅಗಮ್ಯಗಮನದ ವಿಷಮಸನ್ನಿಪಾತರೋಗವನ್ನು ಉಂಟುಮಾಡಿದವನು ನಳಿನೀಕಾಂತನು! ಆ ಧೂರ್ತನು ನಮ್ಮ ಹಿತವಚನವೆಳ್ಳಷ್ಟನ್ನೂ ಗಣಿಸದೆ ತಾನು ಕೆಟ್ಟುದಲ್ಲದೆ ಇವನನ್ನೂ ಹೀಗೆ ಹಾಳುಮಾಡುತ್ತಿರುವನು.

ತಾರಾ—ಭಾಸ್ಕರಾಚಾರ್ಯರಿಗೆ ನಮಸ್ಕರಿಸಿ ಎದ್ದು ನಿಂತು—

ಭ್ರಾತ ! ಈವರೆಗಿನ ನನ್ನ ತಪ್ಪುತಿಳಿವಳಿಕೆಗಳೆಲ್ಲವನ್ನೂದಯೆಯಿಟ್ಟು ಕ್ಷಮಿಸಿರಿ. ನನಗೆ ಪೂರ್ಣಪಶ್ಚಾತ್ತಾಪವುಂಟಾಗಿದೆ. ಈ ನನ್ನ ಪಶ್ಚಾತ್ತಾಪಕ್ಕೆ ಕಾರಣರಾದವರಲ್ಲಿ ತಮ್ಮ ಶಿಷ್ಯವರ್ಗೀಯನಾದ ಕುಮುದಮಿತ್ರನೇ ಮುಖ್ಯನೆನ್ನಬಲ್ಲೆನು. ಏಕೆಂದರೆ ತಾವು ನನಗೆ ಹೇಳಿದಂತೆ ನಾನು ವಿಚಾರಶೂನ್ಯತೆಯಿಂದ ಅವನು ಕುಮಾರ್ಗಕ್ಕೆ ಬೀಳಲು ಬೇಕಾದಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರೂ ಸುವಿಚಾರಪರನಾದಾತನು ಅದನ್ನು ಸನ್ಮಾರ್ಗಕ್ಕೆ ವಿನಿಯೋಗಿಸಿಕೊಂಡಿರುವುದಲ್ಲದೆ ಆತನು ವಿವೇಕದಿಂದ ನನಗೂ ಎಚ್ಚರವಿತ್ತನು. ಮತ್ತು ತಮ್ಮ ವಿಷಯದಲ್ಲಿ ವಿರೋಧಾರ್ಥವನ್ನು ಕಲ್ಪಿಸಿಕೊಂಡು ಪಯಣಸನ್ನಾಹದಲ್ಲಿದ್ದ ನನ್ನನ್ನು ತಡೆದವರಲ್ಲಿ ಕೂಡ ಅವನೇ ಮೊದಲನೆಯವನು. ಮಧುಮಿತ್ರನ ವಿಷಯದಲ್ಲಿ ನಾವು ಇಬರೂ ಅತ್ಯಂತ ವ್ಯಾಕಲಹೃದಯರಾಗಿದ್ದೇವೆ. ಅವನು ಇಷ್ಟು ದುರ್ಮಾರ್ಗಿಯಾಗಿದ್ದಾನೆಂದು ತಿಳಿದಿರಲಿಲ್ಲ.

ಭಾಸ್ಕರಾ—ತಲೆಯೆತ್ತಿ ನಿಟ್ಟುಸಿರಿಟ್ಟು “ ತಾರಾಕಾಂತಬಾಬು ! ಈಗ ಹೆಚ್ಚುಹೇಳಿ ಫಲವಿಲ್ಲ. ಬಂದುದನ್ನು ಅನುಭವಿಸಲೇ ಬೇಕು. ಮುಖ್ಯವಾಗಿ ಸತೀಮಣಿಯ ಸತ್ಸಂಕಲ್ಪದಿಂದಾದರೂ ಆತನಿಗೆ ಭಗವತಿಯು ಒಳ್ಳೆಯದನ್ನು ಮಾಡಲೆಂದಾಶಿಸುವೆನು. (ಪಕ್ಕಕ್ಕೆತಿರುಗಿ ಅಕ್ಷಯ, ಕಲಾಧವ, ಕುಮುದಮಿತ್ರ ಪ್ರಭಾಕರನನ್ನು ಕುರಿತು ಹೇಳಿದರು.)

“ ಸುಕುಮಾರರೇ ! ಹೇಗಾದರೂ ಮಧುಮಿತ್ರನನ್ನು ಉದ್ಧರಿಸಲೇಬೇಕು,ಆಪತ್ತಿಗೆ ಗುರಿಯಾಗಿರುವವನನ್ನು ಈಗಲೇ ಬಿಡಿಸಿ ಕರೆತನ್ನಿರಿ ಏಳಿರಿ—ವಿಳಂಬಿಸಬೇಡಿರಿ, ಶಾಂತಿನಿಕೇತನದ ಕೀರ್ತಿಯನ್ನೂ, ನಮ್ಮ ಗೌರವವನ್ನೂ ಉಳಿಸಿರಿ”

(ನಾಲ್ವರೂ ಕೈಮುಗಿದು ಗುರ್ವಾಜ್ಞೆಯನ್ನು ಶಿರಸಾವಹಿಸಿ ಹೊರಟುಹೋದರು.)

ಶ್ರೀ

ತ್ರಯೋದಶ ಪರಿಚ್ಛೇದ.

“ ಮಧುಮಿತ್ರನ ವಿಪನ್ನಾವಸ್ಥೆ-ನಳಿನೀಕಾಂತನ ದೈನ್ಯಪ್ರಾರ್ಥನೆ, ರಕ್ತಾಕ್ಷಿಯ ಭರ್ತ್ಸನೆ, ನಿಶೆಯಭೀತಿ ; ಅಕ್ಷಯಕುಮಾರ, ಪ್ರಭಾಕರ, ಕಲಾಧವ, ಕುಮುದಮಿತ್ರರ ಆಗಮನ, ಮಧುಮಿತ್ರನ ಆರ್ತತೆ, ಅಕ್ಷಯ-ಕಲಾಧವರ ಅನುಕಂಪನ, ಪ್ರಭಾಕರನ ನ್ಯಾಯನಿಷ್ಠುರಬೋಧೆ, ಕುಮುದಮಿತ್ರನ ಸಮಾಧಾನೋಕ್ತಿ, ರಕ್ತಾಕ್ಷಿಯ ಘರ್ಜನೆ ಪ್ರಭಾಕರನು ರಕ್ತಾಕ್ಷಿಯನ್ನು ಕುರಿತು ಮಾಡುವ ಧಿಕ್ಕಾರ,ಅಕ್ಷಯಕುಮಾರನು ಕೊಡುವ ಎಚ್ಚರಿಕೆ. ಕಲಾಧವನು ಮಧುಮಿತ್ರನಿಗೆ ಹೇಳುವ ಹಿತಬೋಧೆ, ಶಾಂತಿನಿಕೇತನವನ್ನು ಕುರಿತು ಹೊರಡುವಿಕೆ.

—ಇತ್ಯಾದಿ.—

“ದುಸ್ಸಹವಾಸದ ಫಲವಿದು-ಮಿತ್ರಾ !ಇನ್ನಾದರೂ ಪಶ್ಚಾತ್ತಾಪಪಡು ! ವಿಚಾರಮಾಡು !! ಏಳು.”

ರಕ್ತಾಕ್ಷಿಯ ಮನೆಯ ಉಪ್ಪರಿಗೆಯ ಮೇಲಿನ ಒಂದು ಕಿರು ಮನೆಯಲ್ಲಿ ಮುರುಕು ಮಂಚದ ಮೇಲೆ, ಹಳೆಯ ಹಾಸಿಗೆಯಲ್ಲಿ ಅಂಗ ಚಲನೆಗೂ ಅವಕಾಶವಿಲ್ಲದಷ್ಟು ವಿಪನ್ನ ಸ್ಥಿತಿಯಲ್ಲಿ ಮಧುಮಿತ್ರನು ಮಲ ಗಿದ್ದನು. ಮಿತ್ರನ ಸ್ಥಿತಿಯನ್ನು ನೋಡಿದ್ದರೆ, ಅವನಾನೊದಲಿನ ಶ ರೀರಸೌಷ್ಠವ, ಬಲಾಢ್ಯತೆ, ವರ್ಚಸ್ಸು, ಮೊದಲಾದವುಗಳೆಲ್ಲಿಯೋ ಮಾ ಯವಾಗಿ, ದೇಹದಲ್ಲಿ ಇಷ್ಟಾದರೂ ರಕ್ತಸಂಚಲನದ ಕುರುಹು ದೊರೆ ಯದೆ ಬಿಳುಪೇರಿ, ಕಂಗೆಟ್ಟು ಕೃಶವಾಗಿದ್ದ ಅವನ ಪ್ರಕೃತಿಸ್ಥಿತಿಯೂ, ಆ ಯಾತನಾವೇಗದಿಂದ ದೈನ್ಯವನ್ನು ತಾಳಿದ್ದ ಆ ಮುಖದ ವಿಕೃತಿಯೂ ಎಂತಹ ಕಲ್ಲದೆಯವರಿಗಾದರೂ ಕನಿಕರವನ್ನುಂಟು ಮಾಡದೆ ಇರುತ್ತಿರ ಲಿಲ್ಲ. ಮಧುಮಿತ್ರನು ಹಾಸಿಗೆ ಹತ್ತಿ ಬಿದ್ದು ಕೈಕಾಲುಗಳನ್ನು ಅಲ್ಲಾ ಗಿಸುವದಕ್ಕೂ ಆಗದೆ,ಅರೆಬಾಯಬಿಡುತ್ತ ಒಬ್ಬನೇಬಿದ್ದು ನರಳುತ್ತಿದ್ದನು. ಈತನು ಮಲಗಿದ್ದ ಕಿರುಮನೆಯ ಹೊರಗಡೆಯ ಮೂಲೆಯಲ್ಲಿ ನಳಿನೀ ಕಾಂತನು ಕುಳಿತು ತಲೆಯಮೇಲೆ ಕಯ್ಯಿರಿಸಿ ಅದೇನನ್ನೋ ಆಲೋಚಿ ಸುತ್ತಿದ್ದನು. ನಿಶೆಯು ಅಲ್ಲಿಗಿಲ್ಲಿಗೆ ತಿರುಗುತ್ತಿದ್ದಳು. ರಕ್ತಾಕ್ಷಿಯು ತನ್ನ ಶಯ್ಯಾಗೃಹದಲ್ಲಿ ಅದೇನೋ ಮಹತ್ತರವಾದ ಕೆಲಸದ ಗೊಂದಲ ದಲ್ಲಿದ್ದಳು.

''ಹೀಗಿರುವ ಸ್ಥಿತಿಯಲ್ಲಿ ಮಧುಮಿತ್ರನನ್ನು ಕೇಳುವರಾರು ? ಮಿತ್ರನಿಲ್ಲೇಕೆ ಬಂದು ಮಲಗಿರುವನು?ವ್ಯಾಧಿಯಾವುದು '' ? ಯಾರು, ಹೇಗೆ, ಏನು-ಎಂದು ಕೇಳುವದೇಕೆ ಸುಹೃದರೇ ! ನಳಿನೀ ಕಾಂತ— ರಕ್ತಾಕ್ಷಿಗಳನ್ನು ಬಿಟ್ಟು ಮತ್ತಾರನ್ನು ಕೇಳಬೇಕು ? ಅವರೇ ಸಾಲದೇ? ನೋಡಿರಿ ! ನಳಿನೀಕಾಂತನ ಸಹವಾಸದ ಫಲವಲ್ಲವೇ—ಆತನನಿರ್ಬಂಧ- ದುರ್ಬೋಧಗಳಲ್ಲವೇ ಮಧುಮಿತ್ರನನ್ನಿಲ್ಲಿಗೆ ಎಳೆದುತಂದುದು ? ಅನುಭ ವವೇ ಅಲ್ಲವೇ - ಹೀಗಿರುವುದು ? ಸುಹೃದರೆ ! ಕೇಳಿಲ್ಲವೇ ಸರ್ವನಾಶ

ಕರವಾದ ಕುಲಟಾಸಂಗದ ಮಹತ್ವವನ್ನು!ಅದರಿಂದ ಹಿಂದೆ ಆರಾರಿಗೆ ಏನೇನು ವಿಪತ್ತುಗಳುಂಟಾಗಿರುವುವೆಂಬುದನ್ನು ತಿಳಿಯಬಾರದೇ ! ಹೋ! ತಾಳಿರಿ, ಆದೇನು ಆರ್ತನಾದ ?—

"ಅಯ್ಯೋ! ಅಪ್ಪಾ!! ತಡೆಯಲಾರೆನೋ ? ಹಾ, ಉರಿ! ಉರಿ!! ಉರಿ !!! ಹೊಟ್ಟೆಯುರಿ ! ಹೋದೆ-ಏಳಲಾರೆ, ಹಿಡಿಯಿರೋ--ಹಿಡಿದೆತ್ತಿಕೊಳ್ಳಿರೋ—ಅಪ್ಪಾ-ಅಮ್ಮಾ --ಯಾರೂ ಇಲ್ಲವೇ ? ನಿಶೇ ! ನಿಶಾದೇವಿ !! ಅಯ್ಯೋ ! ಯಾರೂ ಇಲ್ಲವೇ ?

"ಯಾರು ಕೂಗುವರು? "ಮತ್ತಾರು ಮಧುಮಿತ್ರನೇ ಕೂಗುತ್ತಿರುವನು. ನಡೆಯಿರಲ್ಲಿಗೆ ಹೋಗಿನೋಡುವ. ನೋಡಿರಿ-ಕೇಳಿರಿ--ಅನುಭವಮಾಡಿಕೊಳ್ಳಿರಿ !

ಮಧುಮಿತ್ರನು ಮತ್ತೆಮತ್ತೆಯೂ ಕೂಗಿದನು. ನಿಶೆಯು ಬಂದು ಮುಂದೆ ನಿಂತಳು. ನೋಡಿದನು-ವಿಕೃತಸ್ವರದಿಂದ ಕೇಳಿದನು—

ನಿಶೆ ! ನಿನಗೆ ಪುಣ್ಯಬರುವದು, ನನ್ನನ್ನು ಸ್ವಲ್ಪ ಎತ್ತಿಕುಳ್ಳಿರಿಸಲಾರೆಯಾ ? ಅಯ್ಯೋ ದಯೆಯಿಲ್ಲವೆ ? ಇಷ್ಟು ಕಲ್ಲೆದೆಯೇ ? ನಿಶೆ! ನಿನ್ನ ಯಜಮಾನಿ ಎಲ್ಲಿ?ಅಯ್ಯೋ-ರಕ್ತಾಕ್ಷಿ ! ರಕ್ತಾಕ್ಷಿ !! ನಿನಗಿಷ್ಟು ಕಲ್ಲೆದೆಯೇ ? ನನ್ನ ಮರಣವೇ ನಿನಗೆ ವರವೇ ? ಬಾ, ಹಾ| ಉರಿ ಹೊಟ್ಟೆಯುರಿ ! ಮೈನೋವು-ಅಯ್ಯೋ - ಕೀಲುಗಳೆಲ್ಲಾ ಹಿಡಿದುಕೊಂಡಿವೆ. ಅಯ್ಯೋ ! ತಡೆಯಲಾರೆನೇ-ಹಾ_ಹಾ--ಹಾ —ನರಗಳೆಲ್ಲಾ ಹೊಡೆದುಕೊಳ್ಳುತ್ತಿವೆ ? ಅಯ್ಯಯ್ಯೋ—ಪಾಪಿ...ನಳಿನೀಕಾಂತ...'

ನಳಿನೀಕಾಂತನು ಬಂದು ಮುಂದೆ ನಿಂತನು. ರಕ್ತಾಕ್ಷಿಯೂ ಬಂದಳು. ನಳಿನೀಕಾಂತನು ಸುಮ್ಮನೆ ನೋಡುತ್ತ ನಿಂತಿದ್ದನು. ನಿಶೆಯೂ ಸ್ತಬ್ಧಳಾಗಿ ಹೋದಳು. ರಕ್ತಾಕ್ಷಿಯು ನೋಡಿದಳು, ಕಿಡಿಕಿಡಿಯಾದಳು. ಕೂಗಿ ಹೇಳಿದಳು.

'ಸದ್ದು, ಜೋಕೆ, ಎಷ್ಟು ಕೂಗಾಟ !! ಎಷ್ಟೊಂದು ಅಬ್ಬರ !

ಸಾಯುವಾಗ ಇಲ್ಲಿ ಬಂದು ಬಾಯ್ಬಿಟ್ಟರೆ ಕೇಳುವವರಾರು ? ಇಲ್ಲಿ ದಾಸಿಯರೇನಾದರೂ ಇರುತ್ತಾರೆಯೋ ? ಕೈಹಿಡಿದವಳೇನಾದರೂ ಇಲ್ಲಿ ಕಾದು ಬಿದ್ದಿರುವಳೋ ? ಯಾರನ್ನು ಕೂಗುವೆ ? ನಿನಗೆ ಬಂದು ಉಪಚರಿಸಲು ಕಾದಿರುವವರಾರು ? ಎಚ್ಚರಿಕೆ ? ಕೂಗಾಟವಿಲ್ಲಿ ಇನ್ನು ಸಾಗದು, ಉಸಿರೆತ್ತಿದರೆ ಬೀದಿಯ ಚರಂಡಿಯಲ್ಲಿ ಎಳೆಯಿಸಿ ಬಿಟ್ಟು ಬಿಡುತ್ತೇನೆ.

ನಳಿನೀಕಾಂತನು ನಡುವೆ ಬಾಯ್ದೆರೆದು ಕೇಳಿದನು.

' ದೇವಿ ! ಕೃಪೆಮಾಡು-ಅಷ್ಟುಕ್ರೂರಶಾಸನ.......... '

ರಕ್ತಾಕ್ಷಿ—ಹಲ್ಕಡಿದು-"ಮೂರ್ಖಾ ! ಹಾಗದಕಾಸಿಗೂ ಬಾಳದ ನೀ ನಿಲ್ಲಿಗೆ ಯಾವ ಮೋರೆಯನ್ನು ಹೊತ್ತುಬಂದೆ ? ಏನನ್ನು ತಂದೆ? ರೋಗದಮೋರೆಯನ್ನು ನೋಡಲಾರೆ-ತೊಲಗತ್ತ | ನಾಚಿಕೆಯಿಲ್ಲದೆ ಬಾಯ್ಬಿಡುತ್ತಿರುವೆ. ಹೋಗು-ಈ ರೋಗಿಯನ್ನು ಈಗಲೇ ಕರೆದುಕೊಂಡುಹೋಗು ; ಇಲ್ಲವಾದರೆ ನಿನ್ನನ್ನು ಸುಮ್ಮನೆ ಬಿಡುವವರಲ್ಲ. ಈಕ್ಷಣವೇ ಇವನನ್ನು ಹೊರಕ್ಕೆ ಸಾಗಿಸಬೇಕು. ಮನೆಗೆ ಯಾರಾದರೂ ಬಂದರೇನೆಂದಾರು ? ಈ ಹಾಳು ರೋಗದನವನ್ನು ನೋಡಲಾರಿಗೆ ಸಾಧ್ಯ ? ಈಗಲೆ—ನಿಶೆ ! ಯಾವನನ್ನಾದರೂ ಕರೆ............"

ನಿಶೆ—ಅಮ್ಮಯ್ಯಾ !ಯಾರನ್ನು ಬರಹೇಳಲಿ ? ಇವನೇನೋ ವಟವಟಿಸುತ್ತಿರುವನು. ಅವರಾರೋ ಸಹಪಾಠಿಗಳಂತೆ ! ಕೈಮುಗಿದು ಬೇಡುತ್ತಿರುವನು. ಅವರಿಗೆ—

ರಕ್ತಾಕ್ಷಿ—ಸಹಪಾಠಿಗಳೂ ಇಲ್ಲ-ಯಾರೂಇಲ್ಲ. ಅವರೆಲ್ಲರೂ ನಿನಾಮರಾದರಂತೆ ! ಇಷ್ಟುಹೊತ್ತಾದರೂ ಅವರು ಬಾರದಮೇಲೆ ಇನ್ನೇಕೆ ವಿಳಂಬ ? ಎಲ್ಲಿ ? ಜಾಗ್ರತೆ ಪಡಿಸು '' ನಿಶೆಯು

ಉತ್ತರವನ್ನು ಕೊಡಲಾರದೆ ನಡುಗಿದಳು, ನಿಲ್ಲಲಾರದೆ ಕುಳಿತು ಬಿಟ್ಟಳು. ಮಧುಮಿತ್ರನು ಆರ್ತಸ್ವರದಿಂದ-ರಕ್ತಾಕ್ಷಿಯನ್ನು ಕುರಿತು-ಪ್ರಾರ್ಥಿಸಿದನು.

'ಅಯ್ಯೋ ! ರಕ್ತಾಕ್ಷಿ ! ಇಷ್ಟೂ ಕನಿಕರವಿಲ್ಲವೆ ? ಹಳೆಯ ಸಂಬಂಧವನ್ನಾದರೂ ನೆನೆದು ಕೃಪೆಮಾಡು. ನನ್ನನ್ನು ಹಾದಿಯ ಹೆಣವನ್ನು ಮಾಡಬೇಡ. ನನ್ನನ್ನು ನನ್ನ ತಾಯಿಯ ಬಳಿಗಾದರೂ ಕಳುಹಿಸು,ಬೇಕಾಗುವ ವೆಚ್ಚವನ್ನು ಕೊಡಿಸುವೆನು—'

ಮಧುಮಿತ್ರನ ಪ್ರಾರ್ಥನೆಗೆ ಪುರುಷಕಂಠದಿಂದ
ಉತ್ತರವು ಹೊರಟಿತು.

''ಅಮ್ಮನಲ್ಲಿಗೆ ಹೋಗಬೇಕು ! ರಕ್ತಾಕ್ಷಿ, ಕಳುಹಬೇಕು. ಈಗಲ್ಲವೇ ಜ್ಞಾನೋದಯವು ?

ರಕ್ತಾಕ್ಷಿ —ನಳನೀಕಾಂತರು, ತಿರುಗಿನೋಡಿದರು, ಬಾಗಿಲ ಬಳಿಯಲ್ಲಿ ಪ್ರಭಾಕರನು ನಿಂತಿರುವದನ್ನೂ ಆತನ ಹಿಂದುಗಡೆಯಲ್ಲಿ, ಕಲಾಧವ-ಅಕ್ಷಯ-ಕುಮುದಮಿತ್ರರೂ ನಿಂತಿರುವದನ್ನು ಕಂಡಳು, ಬೆದರಿ ಬೆರಗಾದಳು. ಇವರಿಲ್ಲಿಗೆ ಯಾವಾಗ-ಹೇಗೆ-ಬಂದರು. ಎಂದು, ವಿಚಾರ ಮಾಡಿದಳು. ಹೇಳಿದಳು.

" ನೀವಾರು?ಹೇಳದೆ-ಕೇಳದೆ ಹೀಗೆ ಪ್ರವೇಶಿಸುವ
ಕಾರಣವೇನು "

ಪ್ರಭಾ—ಅಮ್ಮಾ ! ನಿಮ್ಮಂತಹ ಪ್ರಸಿದ್ಧಮಹಿಳೆಯರೆ,-ಪರೋಪಕಾರ ನಿರತ ವ್ರತಿಗಳಾದ ಮಧುಪ ವೃತ್ತಿಯಲ್ಲಿರುವ ಅಂಗನೆಯರ, ಮನೆಗೆ ಬರುವುದಕ್ಕೂ-ಹೇಳಿ ಕೇಳಬೇಕೇ ? ಹಾಗೆಯೇ ಬಂದರಾಗದೆ ? ನಾವಾರಾದರೆ ನಿಮಗೇನು ನಷ್ಟ ? ನಿಮಗೇನು ಬೇಕು ? ಕೊಬ್ಬಿದ ಪುರುಷರಾಗಿದ್ದರೆ ಸಾಕಷ್ಟೆ !

ರಕ್ತಾಕ್ಷಿಯಮುಖವು ತಗ್ಗಿತು. ನಾಲಿಗೆಯ ದ್ರವವಾರಿತು-ಆದರೂಕಷ್ಟದಿಂದ ಹೇಳಿದಳು.

ನಿಮ್ಮ ಕುಚೇಷ್ಟೆಯಿಲ್ಲಿ ರುಚಿಸುವುದಿಲ್ಲ. ಯಾರೆಂಬುದನ್ನು ಹೇಳಿರಿ, ನೀವೇ ಶಾಂತಿನಿಕೇತನದ ವಿದ್ಯಾರ್ಥಿಗಳಾಗಿದ್ದರೆ,-ಮಧುಮಿತ್ರನು ನಿಮ್ಮ ಸಹಪಾಠಿಯಾಗಿದ್ದರೆ, ಈಗಲೇ ಈ ಕ್ಷಣವೇ ಇವನನ್ನು ಕರೆದೊಯ್ಯಿರಿ ! ಇಷ್ಟೇಕೆ ವಿಳಂಬಮಾಡಿದಿರಿ ? ಸೂಚಿಸಿರಲಿಲ್ಲವೇ—

ಅಕ್ಷಯ—'ಹೋ-ಹೋ ! ತಾಳಿರಮ್ಮ. ತಾಳ್ಮೆಯನ್ನು ತೆಗೆದುಕೊಳ್ಳಿರಿ. ಅಷ್ಟು ಆತುರಪಟ್ಟರೆ ನೆಟ್ಟಗಾಗುವುದಿಲ್ಲ.' (ಮಧುಮಿತ್ರನನ್ನು ನೋಡಿ) 'ಏನಯ್ಯ ಮಧುಮಿತ್ರ ! ಹೇಗಿದೆ ? ವಾರುಣೀ ಸೇವೆ ! ಮಧುಪವೃತ್ತಿಯ ಫಲಾನುಭವ!! ಬಲು ಸೊಗಸಲ್ಲವೇ ?

ಮಧು—ವಿಕಾರಸ್ವರದಿಂದ—'ಇಲ್ಲ-ಇಲ್ಲ, ಇನ್ನು ತಡೆಯುವಂತಿಲ್ಲ. ಅಯ್ಯೋ—ಮಿತ್ರರೆ! ನಾನು ಇನ್ನು ಉಳಿಯುವಂತಿಲ್ಲ. ಸತ್ತೆ-ಸತ್ತೆ ! ಅಯ್ಯೋ-ಸಾಯುತ್ತಿದ್ದೇನೆ. ಉಳಿಸಿರಿ, ಪ್ರಾಣದಾನ ಮಾಡಿರಿ, ಕರೆದೊಯ್ಯಿರಿ ! ತಾಯಿಯಕಾಲಿಗೆ, ಗುರುಗಳ ಕಾಲ ಕೆಳಗೆ ಕೆಡಹಿಬಿಡಿರಿ-ಇಲ್ಲಿ ಬಿಡಬೇಡಿ ; ಮಿತ್ರರೇ! ಕೈಮುಗಿದೆನು. ನನ್ನನ್ನಿಲ್ಲಿ ಬಿಡಬೇಡಿರಿ—

ಕಲಾಧರ—ದಯಾರ್ದ್ರಹೃದಯನಾಗಿ ಕಣ್ಣೀರುತುಂಬಿ ಮಧುಮಿತ್ರನ ಬಳಿಗೆ ಬಂದು ಕಂಪಿತಸ್ವರದಿಂದ—'ಮಧುಮಿತ್ರ ! ಹಿಂದೆಯೇ ನಾನು ನಿನ್ನನ್ನು ಎಷ್ಟುಬಾರಿ ಎಚ್ಚರಿಸಿಲ್ಲ ? ನಮ್ಮೆಲ್ಲರಮಾತನ್ನೂ ಕಡ್ಡಿಗೆ ಕಡೆಮಾಡಿ, ನೀನು ಈ ಗತಿಗೆ ಬಂದುದೂ ಅಲ್ಲದೆ, ನಮ್ಮೆಲ್ಲರನ್ನೂ ಕ್ಲೇಶಕ್ಕೀಡುಮಾಡಿದೆಯಲ್ಲವೇ'?

(ಮಧುಮಿತ್ರನು, ಯಾತನೆಯಿಂದಲೂ ದುಃಖಾತಿಶಯದಿಂದಲೂ

ಮಾತನಾಡಲಾರದೆ ದೀನವದನನಾಗಿ ಕಲಾಧವನನ್ನೇ ನೋಡುತ್ತಿದ್ದನು. ಇವನ ಈಯವಸ್ಥೆಯನ್ನು ನೋಡಿ ಅಕ್ಷಯಕುಮಾರನು ಬಳಿಗೆ ಬಂದು ಮಧುಮಿತ್ರನ ಬಳಿಯಲ್ಲಿ ವೀರಮುಂಡಿಯೂರಿ ಕುಳಿತು)—'ಮಧುಮಿತ್ರ! ಕಡೆಗೂ ಈ ಹಾಳುಬಾವಿಯಲ್ಲಿ ಬಿದ್ದೇಬಿದ್ದೆಯಾ ? ನಳಿನೀಕಾಂತನ ಮಾತಿಗೆ ಮರುಳಾಗಿ ತಾಯಿಯನ್ನು—ಆ-ಸಾಧ್ವೀಮಣಿಯಾದ ಮಾತೃದೈವವನ್ನು-ದುಃಖಸಮುದ್ರದಲ್ಲಿ ಕೆಡಹಲೆಚ್ಛಿಸಿದೆಯಾ ? ಮಿತ್ರ ! ನಿನಗಾಗಿ-ನಿನ್ನನ್ನು ದಾರಿಗೆ ತರುವುದಕ್ಕಾಗಿ ಗುರುಗಳು ಎಷ್ಟುಪಾಡುಪಟ್ಟಿರುವರು ? ಅವರನ್ನು ಕೂಡ ವಂಚಿಸಿದೆಯಲ್ಲವೇ ?—

ಆಗಲೂ ಮಧುಮಿತ್ರನು ಮಾತನಾಡಲಾರದೆ ಅಳುತ್ತಿದ್ದನು.

ಪ್ರಭಾಕರ—ಈಗ ಅತ್ತು ಫಲವೇನು-ಮಧುಮಿತ್ರ ? ಈಗ ಅತ್ತು ಸಾಧಿಸುವದೆಂದರೆ ತಲೆಶೂಲೆ-ಕಣ್ಣೂರಿ-ಇವೆರಡನ್ನೇ ಹೊರತು,ಮತ್ತೇನನ್ನೂ ಸಾಧಿಸಲಾರೆ ? "ಕೆಡುವಕಾಲಕ್ಕೆ ಹಿತವಿಲ್ಲ. ಸಾಯುವಕಾಲಕ್ಕೆ ಮದ್ದಿಲ್ಲ." ವೆಂಬ ಗಾದೆಯಂತೆ ನಿನಗೆ ನಿನ್ನ ತಾಯಿಯ ಆದರ-ಹಿತಬೋಧೆ, ಗುರುಗಳ ಎಚ್ಚರಿಕೆ, ಹಿತಚಿಂತಕರಾದ ಆಪ್ತಮಿತ್ರರ ನಯನೀತಿವಚನ-ಇವುಗಳೆಲ್ಲವೂ ನಿನಗೆ ಅಹಿತವಾಗಿ ತೋರಿದವು. ನಳಿನೀಕಾಂತನ ಸಹವಾಸವು ರುಚಿಸಿತು. ಆಪ್ತರಾದವರೆಲ್ಲರನ್ನೂ ವಂಚಿಸಿ ಈ ದಾರಿಗೆ ಕಾಲಿಟ್ಟು, ವಿಷಯವೇಗಕ್ಕೆ ಬಲಿಬಿದ್ದು ಮುಂದೋರದೆ ಈ ಕಾಳರಾತ್ರಿಯ ಕಪಟಜಾಲದ ಹಾಳುಬಾವಿಯಲ್ಲಿ ಬಿದ್ದೆ. ಇನ್ನು ಅತ್ತು ಫಲವೇನು ?

ಮಧು—ಕಷ್ಟದಿಂದ ಉಗುಳು ನುಂಗಿ "ಕ್ಷಮಿಸು!ಪ್ರಭಾಕರ ! ಕ್ಷಮಿಸು !! ನಾನು ಪಾಪಿ, ನಿಜ. ಅಂಧನಾಗಿ ಈ ಕಾಳರಾತ್ರಿಯ ಕೋಪಕ್ಕೆ ಬಲಿಬಿದ್ದೆ.-

"ಹಿತರುಂ ಪರಹಿತರುಂ ಪಂ-
ಡಿತರು ಮೆನಿಪ್ಪವರ ಮಾತುಮಂ ಕೇಳದ ದು-
ರ್ಮತಿಯ ಪ್ಲವಂಗವಶ್ಯಂ-
ಸತತಂ ಕೇಡಾಗದಿರದು......" ಎಂಬುದನ್ನು ಈಗಲೀಗ ಅನುಭವಮಾಡಿಕೊಂಡೆನು. ಮಿತ್ರರೇ ! ಈಗಲೂ ನಿಮ್ಮ ಸಹಾನುಭೂತಿ ದೊರೆತರೆ ಬದುಕುವೆನೆಂದು ನಂಬಿರುವೆನು ; ಇಲ್ಲಿ ಬಿಟ್ಟು ಹೋಗಬೇಡಿರಿ! ನನ್ನನ್ನು ಶಾಂತಿನಿಕೇತನ— ಅಯ್ಯೋ— ಒಂದುಬಾರಿ—ಗುರುಗಳ-ಗುರುಪುತ್ರಿಯ-ದರ್ಶನವಾದರೂ ದೊರೆತರೆ-ಗುಣ—

ಕುಮುದಮಿತ್ರ—ನಳಿನೀಕಾಂತನನ್ನು ನೋಡಿ ಕಟಕಟನೆ ಹಲ್ಲಡಿದು-ಕೋಪದಿಂದ ಮೈಮರೆತು "ಉನ್ಮತ್ತ! ಮೊನ್ನೆಯರಾತ್ರಿ, ನೀನೇ ನೆಂದೆ? ರಕ್ತಾಕ್ಷಿಯ ಸಹವಾಸವು, ಸ್ವರ್ಗಭೋಗಕ್ಕೂ ಮಿಗಿಲಾದು ದೆಂದೆಯಲ್ಲವೇ ? ನಿನಗಿನ್ನೂ ಆ ಭೋಗಪ್ರಾಪ್ತಿಯಾಗಿಲ್ಲವೇಕೆ ? ನೀನೇಕೆ ಇನ್ನೂ ಆಸ್ಥಿತಿಗೆ ಬಂದಿಲ್ಲ. ಮಧುಮಿತ್ರನ ಮೇಲೆ ನಿನಗೇಕೆ ದ್ವೇಷ? ಮದಾಂಧ, ಇನ್ನೂ ಇಲ್ಲಿಯೇ ನಿಂತಿರುವೆಯಾ? ನಾಣ್ಗೇಡಿ! ಯಾವ ಮೋರೆಯಿಂದ ಶಾಂತಿನಿಕೇತನಕ್ಕೆ ಬರುವೆ? ಗುರುದ್ರೋಹ-ಆತ್ಮದ್ರೋಹ-ಮಿತ್ರದ್ರೋಹಗಳನ್ನು ಮಾಡಿದ ನಿನ್ನನ್ನು ಇನ್ನು ಆದರಿಸುವರಾರಾದರೂ ಇದ್ದಾರೆಯೇ ? ನಾಳೆಯೇ ನಿನಗಾಗುವ ಅವಸ್ಥೆ............"

ಕುಮುದಮಿತ್ರನು ಹೇಳುತ್ತಿದ್ದಂತೆಯೇ, ನಳನೀಕಾಂತನು ಮೆಲ್ಲನೆ ಸರಿದು ಕ್ಷಣಮಾತ್ರದಲ್ಲಿ ಉಪ್ಪರಿಗೆಯಿಂದ ಇಳಿದು ಹೊರಟುಹೋದನು. ಕುಮುದಮಿತ್ರನು ಕೋಪವನ್ನಡಗಿಸಿಕೊಂಡು ಮಧುಮಿತ್ರನ ಕಡೆಗೆ ತಿರುಗಿ-ಹೇಳಿದನು.

ಮಧುಮಿತ್ರ ! ಈಗಲೂ ಅವಕಾಶವಿದೆ ; ಬದುಕುವ ಆಶೆಯಿದೆ. ವಿಷವ್ಯಕ್ತಿಯ ಸಹವಾಸದಿಂದಾಗಿರುವ, ಇದೇ ಈಗ ಉಂಟಾಗಿರುವ-ಈ ನಿನ್ನ ಅನುಭವಕ್ಕೆ ಈಗಲೇ ಮಾಡಿದರೆ ಗುಣವಾಗಬಹುದಾದ ಚಿಕಿತ್ಸೆಯೂ ಇದೆ. ಆದರೆ ಹೇಳು, ಈಗ ಗುಣಹೊಂದಿದಮಾತ್ರಕ್ಕೆ ಫಲವಿಲ್ಲ. ಮುಂದೆಯಾದರೂ ಇಂತಹ ಕುತ್ಸಿತಮಾರ್ಗದಲ್ಲಿ ಪ್ರವೇಶಿಸುವುದಿಲ್ಲವೆಂದು ಶಪಥಮಾಡು ; ಹಾಗಾದರೆ ನಿನ್ನನ್ನು ಕರೆದೊಯ್ಯುವೆವು. ಇಲ್ಲವಾದರೆ-ಇಲ್ಲಿಯೇ —

ಮಧು —ಕುಮುದಮಿತ್ರ! ಈಗ ನನಗೆ ವಾಕ್ಯಕ್ತಿ ಸಾಲದು. ಬದುಕುವೆನೆಂಬ ಆಶೆಗೆ ಇನ್ನೂ ಅವಕಾಶವೇನಾದರೂ ಇದ್ದರೆ ದಯೆಯಿಟ್ಟು ಬದುಕಿಸಿರಿ,ನಿಮ್ಮ ಗುಂಪಿನಲ್ಲಿ ಸೇರಿಸಿಕೊಂಡು ಪುನೀತನನ್ನು ಮಾಡಿರಿ-ಇಂದೇ-ಈ ಹೆಮ್ಮಾರಿಯ ಸಹವಾಸ....

ರಕ್ತಾಕ್ಷಿ—ಆಗ್ರಹವ್ಯಗ್ರಳಾಗಿ ಘನಗರ್ಜನೆಯಿಂದ ಹೇಳಿದಳು—

'ಸಾಕು-ಸಾಕು ! ಹುಚ್ಚುನಾಯಿ ! ಒದರದೆ ಬಿದ್ದಿರು. ನಿನನ್ನು ಇಲ್ಲಿಗೆ ಕರೆದವರಾರು ? ಯಾಕೆ ನಿಂತಿರುವಿರಯ್ಯಾ ? ನಿಮ್ಮ ಹರಟೆಗಳಿಗೆ ಇದೇ ಸ್ಥಳವೊ ? ರೋಗಿಯನ್ನು ಈ ಕ್ಷಣವೇ ಹೊತ್ತುಕೊಂಡು ಹೋಗಿರಿ ! ಇಲ್ಲಿಯೇ ಪ್ರಾಣಬಿಡುತ್ತಿರುವಿರೇಕೆ ? ಹೇಳದಮಾತು ಲಕ್ಷ್ಯವಿಲ್ಲವೊ ? ಕಿವಿಯೇ ಮುಚ್ಚಿಹೋಗಿರುವುದೋ—? ಏನಾಗಿದೆ-ನಿಮಗೆ ?

ಕಲಾಧವ— ಅಕ್ಷಯ ಪ್ರಭಾಕರರ ಮುಖವನ್ನು ನೋಡಿ-"ಇನ್ನಿಲ್ಲಿ ನಿಲ್ಲಬಾರದು – ಈ ನಿರ್ಲಜ್ಜಾಪ್ರಕೃತಿಗಳ ಮನೆಯನ್ನು ಪ್ರವೇಶಿಸಿದುದೇ ತಪ್ಪು ; ಆದರೂ ಅನಿವಾರ್ಯಪ್ರಸಂಗದಿಂದ ಬಂದುದಾಯ್ತು, ಇನ್ನು ಯಾವಮಾತಿದ್ದರೂ ಮನೆಯಲ್ಲಿಯಾಗಲಿ—

ಪ್ರಭಾ—ರಕ್ತಾಕ್ಷಿಯ ಕಡೆಗೆ ತಿರುಗಿ ಗಂಭೀರಮುದ್ರೆಯನ್ನು ತಾಳಿ ದರ್ಶಿತಸ್ವರದಿಂದ ಹೇಳಿದನು. 'ರಕ್ತಾಕ್ಷಿ ! ಒಂದೇ ಬಾರಿಗೆ ಹೀಗೆ ನಿರ್ಲಜ್ಜಾ ಪ್ರಕೃತಿಯಾಗಿ ಹಾಳಾಗಬೇಡ. ಮೈಮರೆತು ಮಲೆತು ಹೀಗೆ ನಡೆಯುವುದು ಸರಿಯಲ್ಲ. ನೀನು ಎಂದೆಂದೂ ಹೀಗೆಯೇ ಇರುತ್ತೇನೆಂದು ತಿಳಿದಿರುವೆಯಾ ? ನಿನ್ನ ಯೌವನವು ಹೀಗೆಯೇ ಇದೆಯೆಂದು-ಯಾವಾಗಲೂ ಈ ನನ್ನ ಹಣವು ತುಂಬಿಯೇ ಇರುವುದೆಂದು – ನಂಬಿ ಹಾರಾಡುತ್ತಿರುವೆಯಲ್ಲವೆ ? ರಕ್ತಾಕ್ಷಿ ! ಎಚ್ಚರಿಕೆ ! ಇದೇ ಸಾವಿರಸಾರಿ ಹೇಳುತ್ತಿರುವೆನು-ನೆನಪಿನಲ್ಲಿಡು. ಮಧುಮಿತ್ರನನ್ನು ಇಂದು ಈ ಅವಸ್ಥೆಗೆ ತಂದೆನೆಂದು ಹಿಗ್ಗದಿರು. ಇಷ್ಟರಲ್ಲಿ ನಿನಗೂ ಇದರ ಅನುಭವವು ತಪ್ಪಿದುದಲ್ಲ. ವಟುಗಳನ್ನೂ ವಿದ್ಯಾರ್ಥಿಗಳನ್ನೂ ಗೃಹಸ್ಥರನ್ನೂ ಬ್ರಹ್ಮಚರ್ಯವ್ರತನಿಷ್ಠರಾಗಿದ್ದವರನ್ನೂ ಮಾಯಾಪಾಶದಿಂದ ಬಿಗಿದು ಕಟ್ಟಿ ಹಾಳುಭಾವಿಗೆ ಕೆಡಹಿದೆನೆಂದು ಹಿಗ್ಗಬೇಡ. ಕರ್ಮಕ್ಕೆ ತಕ್ಕ ಫಲವಿದ್ದೇ ಇದೆ. ಇನ್ನು ಅತ್ಯಲ್ಪಕಾಲದಲ್ಲಿಯೇ ನಿನ್ನ ಈ ಹಣವೆಲ್ಲಾ ಸೂರೆಯಾಗಿ, ಯೌವನವೂ ಹಾಳಾಗಿ, ಕಸಕ್ಕೂ ಕಡೆಯಾಗುವ ಸ್ಥಿತಿಯು ನಿನ್ನ ಹಿಡಿಯಲು ಇದಿರುನೋಡುತ್ತಿದೆಯೆಂದು ಚನ್ನಾಗಿ ತಿಳಿದುಕೊಳ್ಳುತ್ತಿರು !!! ನಿಶಾಚರಿ ! ನೀನೇಕೆ, ನಮ್ಮ ಸಮಾಜವನ್ನು ಕೆಡಿಸುವದಕ್ಕೆ ಹುಟ್ಟಿದೆ? ಇನ್ನಾದರೂ ಪಶ್ಚಾತ್ತಾಪಪಡು. ಈ ವರೆಗಿನ ದುಷ್ಕೃತ್ಯಕ್ಕೆ ಪರಮಾತ್ಮನಲ್ಲಿ ಕ್ಷಮೆ ಬೇಡು. ಸಾರಾಸಾರ ವಿಚಾರದಿಂದ ಮುಂದಿನ ಸದ್ಗತಿಯ ದಾರಿಯನ್ನು ಹಿಡಿಯುವ ಪ್ರಯತ್ನಮಾಡು. ವೃಥಾ ಹಾಳಾಗಬೇಡ ; ನಾನು ನಿನಗಿಷ್ಟು ದೂರ ಹೇಳುವ ಕಾರಣವಿಲ್ಲ. ಆದರೂ —ನಮ್ಮ ಬಂಧುವರ್ಗದಲ್ಲಿ ಜ

ನ್ನಿಸಿದೆಯೆಂದೂ-ಇನ್ನು ಮುಂದೆಯಾದರೂ ಜ್ಞಾನಸಂಪಾದನೆಯಿಂದ ಸುಖಿಸುವಂತಾಗುವೆಯೆಂದೂ ಭಾವಿಸಿ ಹೇಳಿದೆನು. ಇನ್ನು ನಿನ್ನ ಇಷ್ಟ.

ಪ್ರಭಾಕರನ ಮಾತಿಗೆ ರಕ್ತಾಕ್ಷಿಯು ಉತ್ತರವನ್ನು ಕೊಡಲಾರದೆ ಹೋದಳು. ಕೋಪವು ಮಿತಿಮೀರಿದ್ದರೂ ಪ್ರಕಟಿಸುವ ಶಕ್ತಿಯುಂಟಾಗಲಿಲ್ಲ. ಮುಂದೇನುಮಾಡಬೇಕೆಂಬುದನ್ನರಿಯದೆ ಮೆಲ್ಲಮೆಲ್ಲನೆ ಹಿಂದಕ್ಕೆ ಸರಿದು-ಶಯ್ಯಾಗೃಹದಕಡೆಗೆ ಹೊರಟುಹೋದಳು. ನಿಶೆಯೊಬ್ಬಳೇ ಕುಳಿತು ನಡುಗುತ್ತಿದ್ದಳು.

ಮಧು—ಒಣಗಿದ ತುಟಿಯನ್ನು ನಾಲಿಗೆಯಿಂದ ನೆನೆಯಿಸಿಕೊಳ್ಳುತ್ತ ಆರ್ತಸ್ವರದಿಂದ—'ಅಯ್ಯೋ-ಮಿತ್ರರೆ! ದಾಹ; ಸಂಕಟ! ಉರಿ !!-ಅಯ್ಯೋ-ತಡೆಯಲಾರೆ ? ಇನ್ನೂ ಇಲ್ಲೇ ಬಿಟ್ಟಿರುವರೆ? ಅಯ್ಯೋ-ಕರೆದೊಯ್ಯಲೊಲ್ಲಿರೆ ? ಬದುಕಿಸಲಾರಿರೇ ! ಆಗದು-ತಡೆಯಲಾಗದು....... ....'

ಅಕ್ಷಯ—ಮಧುಮಿತ್ರ ! ಕೂಗಬೇಡ. ನಿನ್ನನ್ನು ಕರೆದೊಯುವೆವು. ಧೈರ್ಯವಾಗಿರು. ಗಾಡಿಯೂ ಬಂದು ಬೀದಿಯಲ್ಲಿ ಸಿದ್ಧವಾಗಿರುವುದು. ನಿನಗೆ ದುರ್ನಾರಿಯರ ವ್ಯಾಪಾರದ ಮರ್ಮವನ್ನು ಸ್ಪಷ್ಟಪಡಿಸುವುದಕ್ಕೂ, ಇಂದ್ರಿಯನಿಗ್ರಹಮಾಡಲು ಪ್ರಯತ್ನಿಸದೆ, ವಿಷಯಾತುರಕ್ಕೆ ಬಲಿಬೀಳುವವನಿಗಾಗುವ ಫಲವೆಂತಹದೆಂಬುದನ್ನು ತಿಳಿಯಿಸುವುದಕ್ಕೂ ಸ್ವಲ್ಪ ಹೊತ್ತು ವಿಳಂಬಿಸಿದೆವು. ಈಗಲಾದರೂ ನಿನಗೆ ಸ್ಪಷ್ಟಪಟ್ಟಿತೇ ?

ಮಧು—ನನಗಿನ್ನೂ ತಿಳಿವುಂಟಾಗಿಲ್ಲ. ಇಲ್ಲಿದ್ದರೆ ನನಗೇನೂ ಆಗುವಂತಿಲ್ಲ-ಮೊದಲು ಕರೆದೊಯ್ಯಿರಿ.......................

ಕಲಾಧವ—ಕರೆದೊಯ್ಯುವೆವು, ಅದಕ್ಕೇ ಬಂದೆವು. ಗುರುಗಳೂ ನಿನ್ನನ್ನು ಕಟಾಕ್ಷಿಸಿ, ನಿನ್ನ ಅಪರಾಧವನ್ನು ಕ್ಷಮಿಸಿ, ನಿನ್ನನ್ನು ಪುನೀತನನ್ನಾಗಿ ಮಾಡಬುಳ್ಳವರಾಗಿರುವರು. ನಿನ್ನ ತಾಯಿಯನ್ನು ಕರೆತರಲು ಜನಗಳು ಹೋಗಿರುವರು, ನಿನ್ನನ್ನು ಗುರುಗಳು ತಮ್ಮ ತಾಯಿಯ ಪೋಷಣೆ-ವಿಚಾರಣೆಯಲ್ಲಿಯೇ ಬಿಡುವದೆಂದು ನಿಶ್ಚಯಿಸಿರುವರು. ಆದರೆ ಈಗ ಹೇಳು ಇಷ್ಟ್ಟು,ಯಾವುದರಫಲವೆಂದು ತಿಳಿದೆ ? ತಿಳಿಯಲಿಲ್ಲವೇ ? ದುಸ್ಸಹವಾಸದ ಫಲವಿದು,ಮಿತ್ರಾ! ಇನ್ನಾದರೂ ಪಶ್ಚಾತ್ತಾಪಪಡು. ವಿಚಾರಮಾಡು,ಭಗವಂತನಲ್ಲಿ ಭರವಸೆಯಿಡು,ಲೇಸಾಗುವುದು"

ಕುಮುದಮಿತ್ರನು ಎಲ್ಲರನ್ನೂ ತ್ವರೆಪಡಿಸಿದನು. ಅಕ್ಷಯಕುಮಾರ ಕಲಾಧವರಿಬ್ಬರೂ ಮಧುಮಿತ್ರನನ್ನು ಎತ್ತಿ ಹಿಡಿದು ಕೆಳಗೆ ಕರೆತಂದು ಗಾಡಿಯಲ್ಲಿ ಮಲಗಿಸಿದರು. ಪ್ರಭಾಕರ-ಕುಮುದಮಿತ್ರರು ಆತನ ಹಾಸಿಗೆ, ಹೊದಿಕೆ, ಉಡುಪುಮೊದಲಾದವುಗಳನ್ನು ತಂದು ಗಾಡಿಯಲ್ಲಿರಿಸಿದರು. ನಾಲ್ವರೂ ಕುಳಿತು-ಮೆಲ್ಲಮೆಲ್ಲನೆ ಗಾಡಿಯನ್ನು ಬಿಡುವಂತೆ ಹೇಳಿ ಶಾಂತಿನಿಕೇತನದ ಕಡೆಗೆ ತೆರಳಿದರು.

ಸುಹೃದರೇ !

ರಕ್ತಾಕ್ಷಿಯ ಅಂಶಾವತಾರಗಳು ಈಗಲೂ ಇಲ್ಲದೆ ಹೋಗಿಲ್ಲವೆನ್ನುವಿರಲ್ಲವೇ?ನಿಜ ! ಅಲ್ಲಿಗಲ್ಲಿಗೆ ರಕ್ತಾಕ್ಷಿಯರು ಕಾಣುತ್ತಿರುವರು. ಮಧುಮಿತ್ರ ನಳಿನೀಕಾಂತರೂ ತೋರಬರುತ್ತಿರುವರು. ಆದರೆ, ಮಧುಮಿತ್ರನ ಉದ್ಧಾರಕ್ಕಾಗಿ ಬಂದ ಕಲಾಧವಾದಿ ಮಿತ್ರವರ್ಗದವರಾಗಲೀ-ಭಾಸ್ಕರಾಚಾರ್ಯರಾದಿ ಗುರುಗಳಾಗಲೀ—ಈಗಿನ ಮಧುಮಿತ್ರರ ಉದ್ಧಾರಕ್ಕಾಗಿ ಒದಗುವರೆಂದು ಆಶ್ವಾಗಿ ಭರವಸೆಯಿಂದ ಹೇಳುವಂತಿಲ್ಲ! ಆಹು

ದಷ್ಟು. ಮಾಡುವದೇನಿಗೆ ? ನಾಗರಿಕತೆ ಹೆಚ್ಚಿತು ; ಜನರಲ್ಲಿ ನವಭಾವೋದಯಗಳೂ ಆಗುತ್ತ ಬಂದವು. ನವನವೀನಾಚಾರಗಳ ಹುಚ್ಚೂ ತಲೆಗೇರಿತು ; ಇಷ್ಟಪ್ರಗಳ ಫಲಾನುಭವಕ್ಕೆ ಸಹಕಾರಪಾತ್ರಗಳನ್ನು ಆರಿಸಿಕೊಳ್ಳಬೇಕಾದುದೂ-ಅಂತದರ ದೆಸೆಯಿಂದಾಗಬಹುದಾದ ಫಲಪ್ರಾಪ್ತಿಗೆ ಕುಣಿದು ಹೆಣಗಾಡುವುದೂ ಅವಶ್ಯಕವಾಗಿ ಬೇಕಾಯಿತು!!ಇಷ್ಟಾಗಿ ನಮ್ಮ ಆರ್ಯಸಮಾಜಕ್ಕಾದ ಸುಖ ಸಂತೋಷಗಳೆಂತಹವು ? ಅನುಮಾನ-ಅಸಮಾಧಾನ, ಅಭಿಸಂದಾನ-ದುರಭಿಮಾನ-ಇತ್ಯಾದಿ ಮಾನಗಳನ್ನು ಹೊತ್ತು ಜಡರಾಗಿ ನರಳುವವೇ!!! ಈ ಜಡರೋಗಕ್ಕೆ ಮದ್ದೆಲ್ಲಿರುವುದು ? ಕೊಡುವವರಾರು ? ಭಗವಂತ ! ಕೃಪೆಮಾಡು ! ನಮ್ಮವರ ಜಡರೋಗವನ್ನು ಪರಿಹರಿಸುವುದಕ್ಕಾಗಿ ಭಾಸ್ಕರಾಚಾರ್ಯ-ಗೀತಾಚಾರ್ಯ ಪ್ರಭೃತಿಗಳನ್ನು ನಿಯಮಿಸಿ-ಕಳುಹಿಸು, ಉದ್ಧರಿಸು. ಆರ್ಯಜನಾಂಗದಲ್ಲಿ ಉಂಟಾಗಿರುವ ಅಂತಸ್ತಾಪಗಳನ್ನು ಪರಿಹರಿಸಿ-ಅನುಗ್ರಹಿಸು! ಇಷ್ಟುಮಾತ್ರ ದಯಪಾಲಿಸು. (ಅಸ್ತು)

|| ಶ್ರೀಃ ||

ಚತುರ್ದಶ ಪರಿಚ್ಛೇದ

ಮಧುಮಿತ್ರನ ತಾಯಿ-ಸತೀಮಣಿಯ ದುಃಖ, ಪೂರ್ಣಕಲೆ ಮತ್ತು ಅವಳ ಅಜ್ಜಿಯು ಹೇಳುವ ಸಮಾಧಾನ, ಭಾಸ್ಕರಾಚಾರ್ಯರ ಆಗಮನ, ಸತೀಮಣಿಯ ದೈನ್ಯಾಲಾಪ, ಭಾಸ್ಕರಾಚಾರ್ಯರ ಹಿತೋಪದೇಶ-ಭರವಸೆ, ಮತ್ತು ಅವರ ಅಸಾಧಾರಣ ಶಿಷ್ಯವಾತ್ಸಲ್ಯ, ಮಧುಮಿತ್ರನ ದುರವಸ್ಥೆ, ಭಾಸ್ಕರಾಚಾರ್ಯರ ಆದರೋಪಚಾರ, ಗೀತಾಚಾರ್ಯ

ತಾರಾಕಾಂತ ಬಾಬುಗಳ ಆಗಮನ, ಗೀತಾಚಾರ್ಯರು ಮಧುಮಿತ್ರನಿಗೂ ಸತೀಮಣಿಗೂ ಹೇಳುವ ಬುದ್ಧಿವಾದ, ಮಧುಮಿತ್ರನ ತಾಪ-ತಾರಾಕಾಂತನ ಅಭಯಪ್ರದಾನ-ಇತ್ಯಾದಿ—ಇತ್ಯಾದಿ.—

"ಈಗಲೂ ವಿಾರಿಹೋಗಿಲ್ಲ. ಕುಮಾರ! ನಾನಿದ್ದೇನೆ. ಸರ್ವಪ್ರಕಾರದಿಂದಲೂ ನಿನ್ನನ್ನು ನಾನು ಮುಂದಕ್ಕೆ ತರುತ್ತೇನೆಂದು-ಇದೋ ಕಿಂಡಿ, ವಾಗ್ದಾನಮಾಡುತ್ತೇನೆ. ಇಂದಿನಿಂದ ನೀನು ನನ್ನ ಜಾಮಾತನೆನ್ನಿಸುವೆ. ಇನ್ನಾದರೂ ಸಮಾಧಾನ ಹೊಂದು"

"ಆರ್ಯಪುತ್ರ! ತಮಗೂ ಇಷ್ಟು ಕಾಠಿಣ್ಯವೇ? ಈ ದಾಸಿಯ ಅಪರಾಧವೇನು? ಕನಸು-ಮನಸ್ಸಿಂದಾದರೂ ನಾನು ತಮ್ಮಲ್ಲಿ ಆವ ಅಪರಾಧಮಾಡಿರುವೆನು? ತಮ್ಮ ಆಜ್ಞಾಪಾಲನಕ್ಕಾಗಿಯಲ್ಲವೇ ನಾನೀ ಪೃಥ್ವಿಯಲ್ಲಿ ಇನ್ನೂ ಉಳಿದಿರುವುದು? ಇಲ್ಲದಿದ್ದರೆ, ಸ್ವಾಮಿನಾಥ! ನಿಮ್ಮನ್ನು ಬಿಟ್ಟು ನನಗೀಪೃಥ್ವಿಯಲ್ಲಿ ಕಾರ್ಯವೇನಿದೆ? ಇವನನ್ನು ಸ್ಮರಿಸಿಯಾದರೂ ಈ ಅಭಾಗಿನಿಯಲ್ಲಿ ಕೃಪೆ ತೋರಬಾರದೆ? ವಂಶವರ್ಧನನೆಂದೂ—ನರಕೋದ್ಧಾರಕನೆಂದೂ, ನೀವಾತನನ್ನು ಕುರಿತು ಹೇಳುತ್ತಿದ್ದಿರೋ, ಆವನನ್ನು ಕುರಿತು 'ಪುತ್ರನಾಗಿ ಕುಲವನ್ನು ಉದ್ಧರಿಸುವನು ಇವನೊಬ್ಬನೇ, ಅಳಿದವರನ್ನು ನೆನೆದು ಹಂಬಲಿಸಿ ಸಾಯಬೇಡ-ನನಗಾಗಿ-ಈ ಪುತ್ರನನ್ನು ಕಾಪಾಡಿ, ಪ್ರವರ್ಧಮಾನನನ್ನಾಗಿ ಮಾಡು-'' ಎಂದು ನನಗೆ ಕಟ್ಟುಮಾಡಿದ್ದಿರೋ-ಆವನೇ-ಆ ನಿಮ್ಮ ಏಕಮಾತ್ರಪುತ್ರನೇ ಈಗ ಇಷ್ಟು-ವಿಪನ್ನಾವಸ್ಥೆಗೆ ಗುರಿಯಾಗಿದ್ದರೂ ನೀವು ಸುಮ್ಮನಿರುವಿರೇಕೆ?

ಇದೇ ಭಗವದಿಚ್ಛೆಯೋ ? (ನಿಟ್ಟುಸಿರಿಟ್ಟು) ಭಗವತಿ! ಈ ವೇಳೆಯಲ್ಲಿ ನೀನೂ ನಿರ್ದಯಳಾದೆಯಾ ? ಇದೇ ನಿನ್ನಿಚ್ಛೆಯೋ ? ತಾಯಿಾ ! ನಿನ್ನಲ್ಲಿಯೂ ನಾನು ದ್ರೋಹಿಯಾಗಿರುವೆನೇನು ? ಆವದ್ರೋಹವನ್ನು ಮಾಡಿದೆನು ? ಪತಿವಿಯೋಗ ದುಃಖವನ್ನೂ-ಪುತ್ರಶೋಕವನ್ನೂ ಸಹಿಸಿ, ಘೋರವಾದ ವೈಧವ್ಯಾನುಭವದ ಕ್ಲೇಶಗಳೆಲ್ಲವನ್ನೂ ನುಂಗಿ, ಈ ಒಬ್ಬ ಮಗನಾದರೂ ನಿನ್ನ ದಯೆಯಿಂದ ಮುಂದಕ್ಕೆ ಬಂದಾನೆಂದು ನಂಬಿದ್ದರೆ—'

''ತಾಯಿ ! ಅಳಬೇಡಿರಿ, ಕಾಯಿಲೆಯುವರ ಮುಂದೆ ಅತ್ತರೆ ಅವರಿಗೆ ಯಾತನೆ ಹೆಚ್ಚುವುದೆಂದೂ ಅವರೂ ಅತ್ತರೆ ಕಾಯಿಲೆಯು ವಿಪರೀತಕ್ಕೆ ತಿರುಗುವುದೆಂದೂ ನಮ್ಮ ಅಪ್ಪನೂ ಇತರ ಉಪಾಧ್ಯಾಯರುಗಳೂ ಹೇಳಿರುವರು. ಅದಲ್ಲದೆ ನಿಮ್ಮ ಮಗನಿಗೆ ಪ್ರಾಣಭಯವಿಲ್ಲವೆಂದು ನಮ್ಮ ಮಾವನೂ ಹೇಳಿ ಹೋಗಿರುವನು. ನೀವು ಹೀಗೆ ಅಳುವಿರೇಕೆ ? ''

" ಏನುಮಾಡಲೇ-ತಾಯಿ ! ಹಾಳು ಹೊಟ್ಟೆಯನ್ನು
ಹೇಗೆ ಹಿಡಿದು ಕಟ್ಟಲಿ ?....''

ಭಾಸ್ಕರಾಚಾರ್ಯರ ಮನೆಯ ಉಪ್ಪರಿಗೆಯ ಮೇಲಿನ ಪೂರ್ಣಕಲೆಯ ಕಿರುಮನೆಯಲ್ಲಿ ಮಂಚದಮೇಲೆ ಮಧುಮಿತ್ರನು ದೇಹಸ್ಮೃತಿ ತಪ್ಪಿ ಒರಗಿದ್ದನು. ರೋಗಿಯ ಉಪಚಾರಕ್ಕಾಗಿ ಔಷಧದ ಕುಪ್ಪಿಗಳೂ ಸೀಸೆಗಳೂ, ಹಾಲು-ಗಂಜಿಯನ್ನಿರಿಸಿದ್ದ ಪಾತ್ರೆಗಳೂ ರೋಗಿಯ ತಲೆಯ ಕಡೆಯಲ್ಲಿಡಲ್ಪಟ್ಟಿದ್ದುವು. ಮಂಚದ ಬಳಿಯಲ್ಲಿಯೇ ಸುಮಾರು ನಾಲ್ವತ್ತು ವರ್ಷ ವಯಸ್ಸಿನ ವಿಧವೆಯೊಬ್ಬಳು ಕುಳಿತು ದುಃಖಾತಿಶಯದಿಂದ ಮೇಲೆ ಹೇಳಿದಂತೆ ಹಂಬಲಿಸುತ್ತಿದ್ದಳು. (ಈಕೆಯೇ ಮಧುಮಿತ್ರನ ತಾಯಿ ಸತೀಮಣಿಯೆಂದು ನಾವು ಹೇಳಬೇಕಾಗಿಲ್ಲ) ಸತೀಮಣಿಯ ಎಡಗಡೆಗೆ ಪೂರ್ಣಕಲೆಯೂ, ಬಲಗಡೆಗೆ ಪೂರ್ಣಕಲೆಯ ಅಜ್ಜಿ

ಯೂ ಕುಳಿತು ಸಮಾಧಾನಪಡಿಸುತ್ತಿದ್ದರು. ಹೊತ್ತು ಮಧ್ಯಾಹ್ನ ಮೂರುಗಂಟೆಯಾಗಿರಬಹುದು.

ಪೂರ್ಣಕಲೆಯ ಅಕೃತ್ರಿಮವಾದ ಮೃಧುಮಧುರವಚನದಿಂದ ಸತೀಮಣಿಯ ಮನವಳಲು ಎಳ್ಳಷ್ಟೂ ಕಡಮೆಯಾಗಲಿಲ್ಲ. ಪೂರ್ಣಕಲೆಯ ಅಜ್ಜಿಯು ನೋಡಿದಳು ; ಧಿಕ್ಕಾರಮಾಡುತ್ತ ಕಡೆಗೆ ಗಟ್ಟಿಯಾಗಿ ಹೇಳಿದಳು.

' ಅತ್ತು ಅತ್ತು ನೀನೇನನ್ನು ಸಾಧಿಸಬಲ್ಲೆ ? ನಿನ್ನ ಅಳುವಿನಿಂದಲೇ ನಿನ್ನ ಮಗನ ರೋಗವು ನಿವಾರಣೆಯಾಗುವದೆಂದು ತಿಳಿದಿರುವೆಯಾ? ತಾಯಿ ! ವೃಥಾ ನಿನ್ನ ಸ್ವಾಮಿಯ ಮೇಲೆಯೂ-ದೈವದಮೇಲೆಯೂ ಅಪವಾದಹಿಡುವೆಯೇಕೆ ? ಅವರೇನು-ನಿನ್ನ ಮಗನನ್ನು ಬೇಕೆಂದು ವಿಪತ್ತಿಗೆ ಗುರಿಮಾಡಿದರೆ ? ಬೇಡಬೇಡನೆಂದು ಎಷ್ಟುಬಾರಿ ಹೇಳಿದರೂ- ಹಿತಚಿಂತಕರ ಕಣ್ಣಿಗೆ ಮಣ್ಣು ಹಾಕಿ, ನಿನ್ನ ಮಗನು ತಾನಾಗಿ ವಿಷದ ಮಡುವಿನೊಳಗೆ ಧುಮುಕಿದನು. ಈಗದರ ಅನುಭವವು ತಪ್ಪುವದೇ ?

ಸತೀಮಣಿ—ನಿಟ್ಟುಸಿರಿಟ್ಟು—'ಅಜ್ಜೀ! ನಾನಾರ ಮೇಲೆಯೂ ಅಪವಾದ ಹಿಡಲಿಲ್ಲ. ನನ್ನ ಪುರಾಕೃತವನ್ನು ಕುರಿತು ವ್ಯಸನಪಟ್ಟೆನು-ಅಷ್ಟೆ ! ನನ್ನ ಮಗನು ಸಚ್ಚರಿತ್ರನೆಂದು ನಾನು ಹೇಳಲಿಲ್ಲ; ಆದರೂ-ಅಜ್ಜಿ ! ಅವನೆಷ್ಟೇ ದುಷ್ಕರ್ಮಿಯಾಗಿರಲಿ, ಸತ್ಪುರುಷರ-ಭಗವದ್ಭಕ್ತರ-ಸತ್ಯವಾಕ್ಯವೂ, ಅವರ ಶಾಸನಗಳೂ, ನನ್ನ ಪಾಲಿಗೆ ನಿಷ್ಫಲವಾಗುವದೇನೆಂದು ....

ಸತೀಮಣಿಯ ದೈನ್ಯಾಲಾಪವು ನಡೆಯುತ್ತಿದ್ದಂತೆಯೇ ಅಲ್ಲಿಗೆ ಯಾರೋ ಬರುವಂತೆ ಕಾಲು ಸಪ್ಪಳವಾಯಿತು. ಪೂರ್ಣಕಲೆಯು ಉತ್ಸುಕತೆಯಿಂದ ನೋಡಿ ಬರುವರಿಂತಹರೆಂದು ತಿಳಿದು ಸಂಭ್ರಮದಿಂದ ಅಜ್ಜಿಯೊಡನೆ ಹೇಳಿದಳು:—"ಅಜ್ಜಿ! ಅಪ್ಪನೇ ಬರುವಂತಿದೆ."

ಸತೀಮಣಿಯು ಅಳುವನ್ನು ನಿಲ್ಲಿಸಿ, ಕಣ್ಣೊರಸಿಕೊಂಡು, ಸ್ಥಿರಭಾವದಲ್ಲಿ ಕುಳಿತಳು. ಭಾಸ್ಕರಾಚಾರ್ಯರು ಮೆಲ್ಲಮೆಲ್ಲನೆ ನಡೆತಂದು ರೋಗಿಯನ್ನು ಒಮ್ಮೆ ನೋಡಿ ತಾಯಿಯಬಳಿಯಲ್ಲಿ ಕುಳಿತು, ಮಗಳ ತಲೆಯ ಮೇಲೆ ಕೈಯಿರಿಸಿ ಮೆಲ್ಲನೆ ಕೇಳಿದರು—

"ಮಧುಮಿತ್ರನ ದೇಹಸ್ಥಿತಿ, ಹೇಗಿರುವದಮ್ಮಾ ?"

ಅಜ್ಜಿ—ಅಪ್ಪ! ನನಗೆ ತಿಳಿದಮಟ್ಟಿಗೆ ದೇಹಸ್ಥಿತಿ ಒಂದೇಸಮನಾಗಿರುವದೆಂದೂ ಹೆಚ್ಚುವಹಾಗೆ ಕಾಣುತ್ತಿಲ್ಲವೆಂದೂ ಹೇಳಬಲ್ಲೆ.

ಭಾಸ್ಕರಾ—ಸತೀಮಣಿಯನ್ನು ಕುರಿತು ಮೃದುವಾಗಿ ಕೇಳಿದರು—

"ತಾಯಿ ! ನಿನ್ನ ಮನಸ್ಸಿಗೆ ತೋರುವದೇನು ?"

ಸತೀ—ಉಗುಳುನುಂಗಿ ಕ್ಷೀಣಸ್ವರದಿಂದ—"ನಾನೇನುಹೇಳಲಿ? ನನ್ನ ಪುರಾಕೃತಫಲವು ಘೋರವಾಗಿರುವಂತೆ ಕಾಣುತ್ತಿದೆ. ನನ್ನ ಪಾಪಿಕಣ್ಣುಗಳಿಂದ ನಾನಿನ್ನೂ ಏನೇನನ್ನು ನೋಡಬೇಕೋ ತಿಳಿಯದು !

ಭಾಸ್ಕರಾ—ಕರುಣಸ್ವರದಿಂದ-'ತಾಯಿ ! ಪ್ರಜ್ಞೆಯನ್ನವಲಂಬಿಸು ! ಲೋಭಮೋಹಗಳ ಸಂಕಲೆಗಳಿಗೆ ಮನಸ್ಸನ್ನು ಒಳಪಡಿಸಬೇಡ. ಏನಾಗಿದೆಯೆಂಬುದನ್ನು ತಿಳಿಯಹೇಳು. ಆಹಾರವೇನಾದರೂ ಹೊಟ್ಟೆಗೆ ಹೋಯಿತೇ ? ಪ್ರಜ್ಞೆ ಚನ್ನಾಗಿದೆಯೇ ?

ಸತೀ—ಸ್ವಾಮಿಜೀ ! ಆಶೀರ್ವಾದಮಾಡಿರಿ ; ತಮ್ಮ ಆಶೀರ್ವಾದದಿಂದಲೇ ನನಗೆ ಪ್ರಜ್ಞೆಯುಂಟಾಗಬೇಕಲ್ಲದೆ, ನನ್ನ ಪ್ರಯತ್ನದಿಂದ ಅದು ಸಾಧ್ಯವಲ್ಲ. ಏನಾಗಿದೆಯೆಂದರೆ, ನಾನು ಏನು ಹೇಳಲಿ? ಬೆಳಗಾದುದು ಮೊದಲು ಮಧ್ಯಾಹ್ನ ಹನ್ನೆರಡು ಗಂಟೆಯುವರೆಗೆ ಹೊಟ್ಟೆಯುರಿ, ನರಗಳಹೊಡೆತ-ಸಂಕಟ-ಕೀಲುಕೀಲುಗಳಲ್ಲಿಯೂ

ಅಸಾಧ್ಯವಾದ ಯಾತನೆಗಳಿಗಾಗಿ ಅಳುತ್ತ, ಕ್ಷಣವೂ ಸುಮ್ಮನಿರದೆ ಒದರುತ್ತಿದ್ದನು. ೧೨ ಘಂಟೆಯಿಂದೀಚೆಗೆ ಎಂದರೆ ಒಂದೆರಡು ಬಾರಿ ಔಷಧವನ್ನು ಕುಡಿಸಿದಮೇಲೆ-"ಕೈಕಾಲು ಸೋತಂತಿದೆ. ಕಣ್ಣು ಎಳೆಯುತ್ತಿದೆ" ಎಂದು ಹೇಳಿ ಮಲಗಿದವನು ಇನ್ನೂ ಏಳಲಿಲ್ಲ. ಆಹಾರವೆಂದಮಾತ್ರಕ್ಕೆ ವಾಂತಿಮಾಡುತ್ತಿರುವನು ಹೊಟ್ಟೆಯುಬ್ಬರವೆಂದು ಬೇರೆ ಯಾತನೆಪಡುತ್ತಿದ್ದನು. ಉಸಿರು ಕೂಡ ಸ್ವಾಭಾವಿಕವಾಗಿಲ್ಲವೆಂದು ಕಾಣುತ್ತಿದೆ. (ಕಂಬನಿ ದುಂಬಿ-ತೊದಲು ನಾಲಿಗೆಯಿಂದ) ಇನ್ನೇನಾಗಬೇಕು ? ಸ್ವಾಮಿ ಜೀ ! ಆಶೆಯೇನಾದರೂ ಉಂಟೇ ?

ಭಾಸ್ಕರಾ—ತಾಯಿ ! ಭಯಪಡಬೇಡ;-ಭಗವತ್ಕೃಪೆಯು ನಿನ್ನಮೇಲೆ ಪೂರ್ಣವಾಗಿರುವುದು. ಧೈರ್ಯದಿಂದಿರು. ಸಾಧ್ವಿಯರ ಸಂಕಲ್ಪವು ನಿಷ್ಫಲವಾಗುವದಿಲ್ಲ. ನಿನ್ನ ಮಗನಿಗೆ ಜೀವಭಯವೇನೂ ಇಲ್ಲವೆಂದು ನಂಬು ! ಮನಸ್ಥೈರ್ಯದಿಂದ ಅವನ ಔಷಧೋಪಚಾರದಲ್ಲಿ ನಿರತಳಾಗಿದ್ದು, ಅವನನ್ನು ಅಡಿಗಡಿಗೆ ಇತರ ವಿಷಯಗಳಕಡೆಗೆ ತಿರುಗಿಸಿ, ಉತ್ಸಾಹಶಕ್ತಿಯುಂಟಾಗುವಂತಹ ಪ್ರೋತ್ಸಾಹವಾಕ್ಯಗಳನ್ನೂ ಹೇಳುತ್ತ ಬರಬೇಕಲ್ಲದೆ, ಅವನ ಮುಂದೆ ಕುಳಿತು ನೀನೂ ಕಣ್ಣೀರು ಬಿಡುವದು ಸರಿಯಲ್ಲ. ಅದರಿಂದ ಅನರ್ಥವು ತಪ್ಪುವಂತಿಲ್ಲ.

ಪೂರ್ಣ—ನಾನೂ ಹಾಗೆ ಹೇಳಿದೆನು. ಆದರೂ ಇವರು ಅಳುತ್ತಲೇ ಇರುತ್ತಾರೆ.

ಭಾಸ್ಕರಾ—ತಾಯಿಾ ! ರೋಗಿಗಳನ್ನು ಉಪಚರಿಸುವದು ಸುಲಭವಾದ ಕೆಲಸವಲ್ಲ. ಅದಕ್ಕೆ ಅತ್ಯಂತ ಪಾಂಡಿತ್ಯವಿರಬೇಕು. ಸ್ತ್ರೀಯರು ನಿಸರ್ಗಪಂಡಿತೆಯರೆಂದು ನೀತಿಯು ಹೇಳುತ್ತದೆಯಾದು

ದರಿಂದಲೇ ರೋಗಿಗಳ ಆರೈಕೆಗೆ ಸ್ತ್ರೀಯರೇ ಅರ್ಹರೆಂದು ಎಲ್ಲ ರೂ ಹೇಳುತ್ತಾರೆ. ಅವರು ತಮ್ಮನ್ನು ಹೊಂದಿರುವ ಗೌರ ವವನ್ನು ಉಳಿಸಿಕೊಳ್ಳಬೇಕೆಂದರೆ, ಮೊದಲು ಮನಸ್ಥೈರ್ಯ-ಸಹನಶೀಲತೆ-ದಯಾಪರತೆ, ಪರಾಭಿಪ್ರಾಯತತ್ವಜ್ಞತೆಗಳೆಂಬ ಮ ಹಾಗುಣಗಳನ್ನು ಅವಶ್ಯವಾಗಿ ಅಭ್ಯಸಿಸಲೇಬೇಕು. ಈ ಗುಣ ಗಳು ಪುರುಷವರ್ಗಕ್ಕೆ ಷಡ್ಗುಣಾಧಿಕವಾಗಿ ಸ್ತ್ರೀಯರಲ್ಲಿ ಅವರ ಜನ್ಮಸಹಜಗುಣಗಳೆಂಬಂತೆ ಅವರನ್ನು ಅನುಸರಿಸಿ ಬಂದಿರಬೇ ಕೆಂದು ಹೇಳಬಹುದು. ಹಾಗೆ ಅವರಲ್ಲಿ ಮೇಲೆ ಹೇಳಿದ ಗುಣ ಗಳು ಸಹಜವಾಗಿಲ್ಲದಪಕ್ಷದಲ್ಲಿ-''ಅಬಲಾ'' ಶಬ್ದ ಧಾರಣದಿಂದ ಅತ್ಯಂತ ಕೋಮಲಾಂಗಿಯರಾದ ಆ ಸ್ತ್ರೀಯರು, ಪುರುಷವರ್ಗ ದವರಿಂದ ನಿರ್ವಹಿಸಲಶಕ್ಯವಾದ ಗೃಹಕಾರ್ಯಭಾಗದ ಕಷ್ಟ ಕೆಲ ಸಗಳನ್ನು ಮಾಡುವದಕ್ಕೂ ಗೃಹಸಂಬಂಧವಾದ ಹಲವು ತಾಪ ಗಳೊದಗಿದರೂ-ಅವೆಲ್ಲವನ್ನೂ ನುಂಗಿ-ಸಮಾಧಾನಚಿತ್ತರಾಗಿ ಸ್ವ ಕರ್ತವ್ಯವನ್ನು ಪರಿಪಾಲಿಸುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ಅವರ ಹೃದಯವು ದಯೆಗೆ ಜನ್ಮಸ್ಥಾನವೇ ಆಗಿರುವದ ರಿಂದ ಆ ತಾಯಿಯರು ತಮ್ಮ ಮಕ್ಕಳು ಪರಿವಾರಮಾತ್ರವಲ್ಲದೆ ಇತರ ನೆರೆಹೊರೆಯವರಲ್ಲಿ ಯಾರಾದರೂ-ಆಪತ್ತಿಗೆಗುರಿಯಾದ ರೆಂದರೆ ಅಲ್ಲೇ ಕರಗಿ ಹೋದಂತಾಗಿ ಅವರ ಕ್ಷೇಮಚಿಂತನೆಯಲ್ಲಿ ತೊಡಗುವರು. ಮತ್ತು ಪರಾಭಿಪ್ರಾಯ ತತ್ವಜ್ಞತೆಯು ಅವ ರಲ್ಲಿರುವದೆಂಬುದಕ್ಕೆ ಅವರು ತಮ್ಮ ಪತಿರಾಜರ, ಗುರುಜನರ, ಮತ್ತು ಹಿತಚಿಂತಕರ ಮನಸ್ಸಿಗೆ ಅಹಿತವಾಗುವ ಕಾರ್ಯಗಳ ಗೊ ಡವೆಗೂ ಹೋಗದೆ, ಅವರಿಗೆ ಹಿತವೂ, ತಮಗೆ ವಿಹಿತವೂ, ಇತರ

ರಿಗೆ ಸಂತೋಷಪ್ರದವೂ ಆದ ಕಾರ್ಯಗಳನ್ನೇ ಮಾಡುತ್ತಿರುವದು ಸಾಕಾದ ನಿದರ್ಶನವಾಗಿವೆ.

ತಾಯಿ! ರೋಗಿಗಳನ್ನು ಆದರಿಸುವದಕ್ಕೆ ಮೇಲೆ ಹೇಳಿದಷ್ಟು ಗುಣಗಳು ಅವಶ್ಯವಾಗಿರಲೇ ಬೇಕು! ಕಾಲಕ್ಕೆ ಸರಿಯಾಗಿ ಅವರಿಗೆ ಮಾಡಬೇಕಾದ ಔಷಧ-ಆಹಾರ-ಉಡುಪು-ಹಾಸಿಗೆ-ಹೊದಿಕೆಗಳೇ ಮೊದಲಾದ ಉಪಚಾರಗಳಲ್ಲಿ ಬೇಸರವೂ ಕೂಡದು, ಅಥವಾ ರೋಗಿಗಳನ್ನು ಸುಮ್ಮನೆ ತೊಂದರೆ ಪಡಿಸುವೆವೆಂದು ಭ್ರಮೆಗೊಂಡು ಅನರ್ಥವಾದ ಮರುಕದಿಂದ ಅವರ ಉಪಚಾರವನ್ನು ಕಡಮೆಮಾಡುವದೂ ಕೂಡದು. ಮತ್ತು ರೋಗಿಗಳು ತಮ್ಮ ಯಾತನೆಯನ್ನು ತಡೆಯಲಾರದೆ ಅಳುವಲ್ಲಿ ಅವರನ್ನು ಸಮಯೋಚಿತವಾದ ಸವಿನುಡಿಗಳಿಂದಲೇ ಸಮಾಧಾನ ಪಡಿಸಬೇಕಲ್ಲದೆ, ಕಾಠಿಣ್ಯವನ್ನು ವಹಿಸಿ ಅವರನ್ನು ಬೆದರಿಸುವುದು, ಕರ್ಣಕಠೋರವಾದ ಕ್ರೂರವಾಕ್ಯಗಳಿಂದ ಅವರ ಮನಸ್ಸನ್ನು ನೋಯಿಸುವುದು, ಮತ್ತೂ ಮುಂದೆ ಬಂದರೆ-ಅವರನ್ನು ನಿರ್ದಯೆಯಿಂದ ಪ್ರಹರಿಸುವದು-ಇವೆಲ್ಲ ರೋಗೋಪಶಮನಕಾರ್ಯಗಳಾಗದೆ ರೋಗವನ್ನು ಹೆಚ್ಚಿಸತಕ್ಕುವಾಗಿವೆ. ಹಾಗೆಯೇ ರೋಗಿಗಳ ಮುಂದೆ ಕುಳಿತು ಅಧೈರ್ಯದಿಂದ ಅಳುವುದು, ನಿರಾಶೆಯನ್ನುಂಟುಮಾಡುವ ಮಾತುಗಳನ್ನು ರೋಗಿಗಳ ಮುಂದೆ ಹೇಳುವದು-ಇವು ಕೂಡ ರೋಗವನ್ನು ಹೆಚ್ಚಿಸುವಂಥವುಗಳೇ ಸರಿ! ಚನ್ನಾಗಿ ಕೇಳು, ಸಾಧ್ವೀಮಣಿ! ನೀನೇನೂ ತಿಳಿಯದವಳಲ್ಲ. ತಕ್ಕಷ್ಟು ವಿದ್ಯಾಧನವನ್ನು ಸಂಪಾದಿಸಿ, ಪ್ರಜ್ಞಾಬಲವನ್ನೂ ಹೊಂದಿ, ಲೋಕಾನುಭವವನ್ನು ತಿಳಿದವಳಾಗಿರುತ್ತೀಯೆ; ಹೀಗಿರುವ ನಿನ್ನಲ್ಲಿ ಪರಾಭಿಪ್ರಾಯತತ್ವಜ್ಞತೆಯು ಚನ್ನಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೂ ನೀನು ಸಾಮಾನ್ಯಗ್ರಾಮ್ಯಸ್ತ್ರೀಯರಂತೆ ಹೀಗೆ ಅಧೈರ್ಯಪಟ್ಟು ಕರ್ತವ್ಯವನ್ನು ಬಿಟ್ಟುಕುಳಿತರೆ ನಾನೇನು ಹೇಳಲಿ? ತಾಯಿ! ಎಚ್ಚರಿಕೆ ಹೊಂದು, ನಿನ

ಮಗನಿಗೆ ರೋಗವು ಹೆಚ್ಚಿತೆಂದು ತಿಳಿಯಬೇಡ. ಔಷಧದಬಲದಿಂದ ಶಾರೀರಕ್ಲೇಶವು ಕಡಮೆಯಾಗಿ, ಮೈಮರೆತು ಮಲಗಿರುವನು. ಇದು ನಿದ್ದೆಯಲ್ಲದೆ ಮತ್ತೇನೂ ಪ್ರಮಾದವೆಂದು ಗಾಬರಿಪಡಬಾರದು. ಮಲಮೂತ್ರಾದಿಗಳಿನ್ನೂ ಸರಿಯಾಗಿ ಕಳೆದಿಲ್ಲವಾದುದರಿಂದ ಆಹಾರದಲ್ಲಿ ಬೇಸರಿಕೆಯುಂಟಾಗಿದೆ-ಅಷ್ಟೆ. ಬೇಗ ಬೇಗ ಉಸಿರಾಡುವುದು ಕೂಡ ಹಾಗೆಯೇ ! ಹೊಟ್ಟೆಯಲ್ಲೆಲ್ಲಾ ವ್ರಣವಾಗಿರುವುದರಿಂದ ಎಚ್ಚರದಲ್ಲಿದ್ದಾಗ ಆ ಯಾತನೆಯನ್ನು ಸಹಿಸುವದು ಕಷ್ಟವಾಗಿ ತಡೆತಡೆದು ಉಸಿಗರೆಯುತ್ತಿದ್ದವನು, ಈಗ ನಿದ್ದೆಯಲ್ಲಿ ಸ್ವಲ್ಪ ಆತುರದಿಂದ ಉಸಿರಾಡುತ್ತಿರುವನು. ಅಷ್ಟಲ್ಲದೆ ಇವನಲ್ಲಿ ಮತ್ತಾವ ದುರ್ಗುಣಗಳೂ ಕಾಣುತ್ತಿಲ್ಲ. ಅಷ್ಟೇಕೆ ಭೀತಿ ! ತಂಗಿ, ಎಳು-ಅವನನ್ನು ಎಬ್ಬಿಸು. ನೋಡುವ—

ಸತೀಮಣಿಯು ಬಂದು ಮಗನ ಮುಖದಮೇಲೆ ಎಡಗೈಯಿರಿಸಿ ಬಲಗೈಯಿಂದ ಅವನ ಗಲ್ಲವನ್ನು ಹಿಡಿದು-'ಅಪ್ಪಾ, ಮಗು ! ಮಧು-ಮಧುಮಿತ್ರ!ಏಳಪ್ಪ-ಸ್ವಲ್ಪ ಕಣ್ದೆರೆ. ನೋಡು-ಗುರುಗಳು ಬಂದು ಕರೆಯುತ್ತಾರೆ-'' ಎಂದು ಕೂಗಿಹೇಳಿದಳು. ಮಧುಮಿತ್ರನು ಬೆದರಿ '' ಅಯ್ಯಯ್ಯೋ ! ಹೋದೆ-ಹೋದೆ! ದಮ್ಮಯ್ಯಾ!! ಬಿಡು-ಬಿಟ್ಟುಬಿಡು. ಇಲ್ಲ-ತಡೆಯಬಾರೆ-ಹೋದೆ-''ಎಂದು ಕೂಗಿಕೊಂಡನು.

ಸತೀ—ಮಗನ ಹಣೆಯಲ್ಲಿ ಸುರಿಯುತ್ತಿದ್ದ ಬೆವರನ್ನು ಒರಿಸಿ-ಮತ್ತೆ ಮೆಲ್ಲನೆ ಹೇಳಿದಳು-'ಅಣ್ಣ ! ಕೂಗಬೇಡ-ನಾನು, ಅಪ್ಪ ಕಣ್ದೆರೆ, ಗುರುಗಳು ಬಂದಿದ್ದಾರೆ-ನೋಡು-'

ಮಧು—ಕಣ್ಣುಬಿಟ್ಟು ತಾಯಿಯನ್ನು ನೋಡಿ ಗಟ್ಟಿಯಾಗಿ ಹೇಳಿದನು. ''ಅಮ್ಮಾ ! ಅಮ್ಮಾ!! ಎಬ್ಬಿಸು-ನನ್ನನ್ನು ಎಬ್ಬಿಸು ! ಅಯ್ಯೋ! ಹಿಡಿದೆತ್ತಿ ಕುಳ್ಳಿರಿಸು ''—

ಸತೀಮಣಿಯು ಹಿಡಿದೆತ್ತಿ ಕುಳ್ಳಿರಿಸಲು ಪ್ರಯಾಸಪಟ್ಟಳು, ಆ

ಗಲಿಲ್ಲ. ಮಧುಮಿತ್ರನು ಯಾತನಾಸ್ವರದಿಂದ—"ಹಾ ! ಹಾ ! ಆ ಗದು–ಅಯ್ಯೋ–ಗುರುದೇವ–ಗುರೂಜೀ! ಕ್ಷಮೆ, ಪಾಪಿ, ನಾನು ಪಾಪಿ..." ಎಂದು ಕೂಗಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದನು.

ಭಾಸ್ಕರಾಚಾರ್ಯರ ದಯಾರ್ದ್ರಹೃದಯವು ಮಧುಮಿತ್ರನ ಆರ್ತ ನಾದದಿಂದಲೂಮತ್ತು ಅವನ ಯಾತನಾವಸ್ಥೆಯಿಂದಲೂ–ಕರಗಿ ನೀರಾಗಿ ಕಣ್ಣುಗಳು ತುಂಬಿಬಂದುವು. ಕೊರಳು ಕಟ್ಟಿತು. ಮೈಮೇಲೆ ಮುಳ್ಳು ಗಳೆದ್ದಂತೆ ರೋಮಾಂಚನವಾಯಿತು ಭಾಸ್ಕರಾಚಾರ್ಯರು ಥಟ್ಟನೆ ಎದ್ದು ಮಧುಮಿತ್ರನಬಳಿಯಲ್ಲಿ ಕುಳಿತು ತನ್ನ ಕೈಯಿಂದಲೇ ಅವನಿಗೆ ಔಷಧವನ್ನೂ ಹಾಲನ್ನೂ ಕುಡಿಸಿ, ಬಳಿಕ ಕೀಲುಗಳಿಗೂ ಕೈಕಾಲುಗ ಳಿಗೂ ಹಚ್ಚಬೇಕೆಂದು ವೈದ್ಯನು ಕೊಟ್ಟದ್ದ ತೈಲವನ್ನು ತನ್ನ ಕೈಯಿಂ ದಲೇ ಹಚ್ಚಿ ಸ್ವಲ್ಪಹೊತ್ತು ಉಪಚರಿಸುತ್ತಿದ್ದು ಬಳಿಕ–ವಾತ್ಸಲ್ಯದಿಂದ ಮಧುಮಿತ್ರನ ಕೈಹಿಡಿದು ಹೇಳಿದರು.—

"ಮಧುಮಿತ್ರ ! ಇನ್ನಾದರೂ ವಿವೇಕಹೊಂದು. ಮನಸ್ಸನ್ನು ತಡೆದು ನಿಲ್ಲಿಸಲು ಪ್ರಯತ್ನಪಡು ; ಪಾಪಕ್ಕೆ ಇದೇ ಪ್ರಾಯಶ್ಚಿತ್ತವಾ ಯಿತು ! ಪ್ರಾಯಶ್ಚಿತ್ತ–ಪಶ್ಚಾತ್ತಾಪಗಳಿಂದ ಈಗ ನೀನು ಪಾಪನಿರ್ಮು ಕ್ತನಾದೆ. ಭಗವಂತನು ನಿನ್ನನ್ನು ಕ್ಷಮಿಸಿರುವನು : ಮತ್ತು ಆಪತ್ತ ನ್ನೂ ಪರಿಹರಿಸಿ ಕಾಪಾಡುವನು—"

ಮಧು—ಸಂತೋಷದಿಂದ ಗುರುಗಳ ಅಭಯಹಸ್ತವನ್ನು ಕಣ್ಣಿಗೊತ್ತಿ ಕೊಂಡು ಒಂದೇ ಉಸಿರಿನಿಂದ—'ದೇವ ! ತಾವು–ತಾವೇನು– ಪ್ರತ್ಯಕ್ಷ ಭಗವಂತನೇ ಅಲ್ಲವೇ ? ಹಾಗಲ್ಲದಿದ್ದರೆ–ಈ ನನ್ನ ಪಾಪ ಭೂಯಿಷ್ಠವಾಗಿ–ಪ್ರಾಯಶ್ಚಿತ್ತರೂಪದ – ವಾತಬಂಧಕ್ಕೊಳಪಟ್ಟಿ ದ್ದ ಈ ಕಯ್ಗಳು ಅಭಯಹಸ್ತ ಸ್ಪರ್ಶಮಾತ್ರದಿಂದಲೇ ಹೀಗೆ ಬಿಡುಗಡೆಯಾಗುತ್ತಿದ್ದಿತೇ ? ಗುರುದೇವ ! ಇಂತಹ ಪರಮಾತ್ಮ

ಸ್ವರೂಪರನ್ನು ವಂಚಿಸಿ, ಪಾತಕದ ಹೊರೆಯನ್ನು ಹೊತ್ತಿರುವ ನನಗೆ ಮುಂದೆ ಗತಿಯೇನು ?

ಭಾಸ್ಕರಾ—ಮಗು, ಮತ್ತೆಮತ್ತೆಯೂ ಹೀಗೆ ಆರ್ತನಾಗಿ ಧೈರ್ಯವನ್ನುಹಾಳುಮಾಡಿಕೊಳ್ಳಬೇಡ. ನಿನಗೆ ಗತಿಯೆಂದರೆ ಭಗವಂತನೇ. ಆತನಕೃಪೆಯೇ ನಿನ್ನನ್ನು ವಿಪತ್ತಿನಿಂದ ಉದ್ಧಾರಮಾಡುವದು. ಆತನ ಕೃಪೆಯನ್ನುಸಂಪಾದಿಸಲು ನಿನಗೆ ಮನೋಜಯವೂ, ಸಾಧನಬಲವೂ— ಅವಶ್ಯಕವಾಗಿರಬೇಕು. ಅವನ್ನು ಪಡೆಯಬೇಕೆಂದರೆ ಗುರ್ವನುಗ್ರಹವು ಮುಖ್ಯವಾಗಿರಬೇಕು. ಗುರ್ವನುಗ್ರಹವೆಂದರೆ ಮೊದಲು ತಾಯಿತಂದೆಗಳ ಸುಪ್ರಸನ್ನತೆ, ಆ ಬಳಿಕ ಜ್ಞಾನದಾಯಕನ ಮತ್ತು ದೀಕ್ಷಾದಾತಾರನ (ಕೃಪಾದೃಷ್ಟಿ) ಅನುಗ್ರಹಗಳನ್ನು ಹೊಂದಬೇಕು. ಇವುಗಳನ್ನು ಸಂಪಾದಿಸದೆ ಹೋದರೆ ನಿನಗೆ ಉದ್ಧಾರವಾಗುವದಿಲ್ಲ. ಹಾಗೆ ನೀನು ಉದ್ಧೃತನಾಗಬೇಕೆಂದಿದ್ದರೆ ಇನ್ನು ಮುಂದೆಯಾದರೂ ನಿನ್ನ ಸದ್ವರ್ತನದಿಂದ ತಾಯ್ತಂದೆಯರ ಮತ್ತು ಗುರುಜನರ ಸುಪ್ರಸನ್ನತೆಯನ್ನು ಪಡೆಯುವಂತೆ ಪ್ರವರ್ತಿಸುವೆನೆಂದು ಮನಸಾ ದೀಕ್ಷೆಯನ್ನು ವಹಿಸು. ಅದೇ ನಿನಗೆ ಮುಂದಿನ ಗತಿದಾಯಕಮಾರ್ಗವು ; ಕುಮಾರ ! ಅತ್ತನೋಡು ! ನಿನ್ನ ತಾಯಿ, ನೀರವವಾಗಿ ಕುಳ್ಳಿರುವಳು, ನಿನ್ನ ವಿಪನ್ನಾವಸ್ಥೆಯನ್ನು ನೋಡಿ ತನ್ನ ಜೀವನದ ಹಂಗುದೊರೆದು ಅನ್ನಾಹಾರ ನಿದ್ರೆಗಳನ್ನೂ ತೊರೆದು ಹಲುಬುತ್ತಿರುವಳು. ಆ ದೇವಿಯನ್ನು ನೋಡು ! ತಾಯಿಗೂ ಹೆಚ್ಚಿದ ದೈವವಾಗಲಿ, ಬಂಧುಗಳಾಗಲಿ ಜಗತ್ತಿನಲ್ಲಿಲ್ಲ. ಆರ್ಯಕುಲಸಂಭೂತರಾದ ನಮ್ಮೆಲ್ಲರಿಗೂ ಈ ಮಹತ್ತತ್ತ್ವವು ಚನ್ನಾಗಿ ತಿಳಿದಿರಬೇಕು.ಇದನ್ನು ತಿಳಿಯಲಾರದವನು ಆರ್ಯನಲ್ಲ ; ಆರ್ಯ

ಕುಲಕ್ಕೆ ಶತ್ರುವೇ ಸರಿ!!! ಇನ್ನಾದರೂ ಈ ಸಾಧ್ವೀಮಣಿಯ ಮನಸ್ಸಮಾಧಾನಹೊಂದುವಂತೆ ಸನ್ಮಾರ್ಗಕ್ಕೆ ಬಂದೆನೆಂದು ಆ ತಾಯಿಯ ಪಾದಸಾಕ್ಷಿಯಾಗಿ ಪ್ರಮಾಣಮಾಡಿ ಭರವಸೆಯನ್ನು ಕೊಡು. ಆದರಿಂದ ಅವಳ ಮನಸ್ತಾಪವು ಶಮನವಾಗುವುದು ; ನಿನಗೂ ಶೀಘ್ರವಾಗಿ ಗುಣವು ಲಭಿಸುವುದು.

ಮಧು—ಕಷ್ಟದಿಂದ ಎರಡು ಕಯ್ಗಳನ್ನೂ ಜೋಡಿಸಿ, ಕಂಪಿತಸ್ವರದಿಂದ ಹೇಳಿದನು–"ಭಗವತಿ ! ಈ ವೇಳೆಯಲ್ಲಿ ನಾನು ಯಾರುಯಾರಲ್ಲಿ ಕ್ಷಮೆಬೇಡಲಿ ? ನಾನು ಎಲ್ಲರಲ್ಲಿಯೂ ಅಪರಾಧಿ! ನನ್ನನ್ನು ಪುನೀತನನ್ನಾಗಿ ಮಾಡಬೇಕೆಂದರೆ ನಿನ್ನ ಹೊರತು ನನಗೆ ಗತ್ಯಂತರವಿಲ್ಲ. ನೀನೇ ತಾಯಿಯಾಗಿಯೂ, ಗುರುವಾಗಿಯೂ, ಮಿತ್ರರಾಗಿಯೂ ಬಂದು ನನ್ನನ್ನು ಕ್ಷಮಿಸಿ ಉದ್ಧಾರಮಾಡು ! ನಾನು ಮತ್ತೇನನ್ನೂ ಹೇಳಲು ಶಕ್ತನಲ್ಲ—''ಹೀಗೆ ಹೇಳಿ ಆಯಾಸದಿಂದ ಕಣ್ಣು ಮುಚ್ಚಿ ಮಲಗಿದನು. ಇದೇ ಸಮಯದಲ್ಲಿಯೇ ತಾರಾಕಾಂತ ಗೀತಾಚಾರ್ಯರು ಪ್ರವೇಶಿಸಿದರು.

ಭಾಸ್ಕರಾ—ಬನ್ನಿರಿ-ಬನ್ನಿರಿ ! ದೈವಾನುಗ್ರಹದಿಂದ ಸುಲಕ್ಷಣವೂ ಕಂಡಿವೆ.

ಪೂರ್ಣಕಲೆಯ ಅಜ್ಜಿಯೂ, ಸತೀಮಣಿಯೂ ಎದ್ದು ಹೋಗಿ ಒಂದು ಕಡೆಗೆ ಕುಳಿತರು. ಗೀತಾಚಾರ್ಯ, ತಾರಾಕಾಂತರಿಬ್ಬರೂ ಬಂದು ಭಾಸ್ಕರಾಚಾರ್ಯರ ಬಳಿಯಲ್ಲಿ ಕುಳಿತು ಕುತೂಹಲದಿಂದ ರೋಗಿಯಕಡೆಗೆ ನೋಡುತ್ತ ಆಚಾರ್ಯರನ್ನು ಕುರಿತು ಕೇಳಿದರು.

" ಮಧುಮಿತ್ರನು ನಿದ್ರಿಸುವಂತಿದೆ ? "

ಭಾಸ್ಕರಾ—ನಿದ್ದೆ ಇರಲಾರದು ;— ಈವರೆಗೆ ಮಾತನಾಡುತ್ತಿದ್ದು ಆಯಾಸದಿಂದ ಇದೇ ಕಣ್ಣುಮುಚ್ಚಿ ಮಲಗಿದನು. (ಎಂದು

ಹೇಳಿ ಮಧುಮಿತ್ರನನ್ನು ಕುರಿತು 'ಕುಮಾರ! ಕಣ್ತೆರೆ! ಗೀತಾಚಾರ್ಯರೂ ತಾರಾಕಾಂತರೂ ನಿನ್ನನ್ನು ನೋಡಬಂದು ಕರೆಯುತ್ತಿರುವರು.

ಮಧು—ಮೆಲ್ಲನೆ ಕಣ್ತೆರೆದು-"ಏಳಲಾರೆ, ಕೈಯಿನ್ನೂ ಸರಿಯಾಗಿ ಸ್ವಾಧೀನವಾಗಿಲ್ಲ. ಮಲಗಿದಂತೆಯೇ ಮನಸಾವಂದಿಸುತ್ತೇನೆ. ನನ್ನ ಅಪರಾಧವೆಷ್ಟಿದ್ದರೂ ಕ್ಷಮಿಸಬೇಕು."

ಗೀತಾ—ಎಡಗಯ್ಯಿಂದ ಮಧುಮಿತ್ರನ ಕೈಹಿಡಿದು ಬಲಗಯ್ಯಿಂದ ಅವನ ತಲೆಯಿಂದ ಹಿಡಿದು ಮೈಯೆಲ್ಲವನ್ನೂ ನೇವರಿಸಿ ವಾತ್ಸಲ್ಯದಿಂದ-'ಕುಮಾರ! ಇಷ್ಟು ದಿನದಮೇಲೆ ಈದಿನವಾದರೂ ನೀನು ಸುಸ್ಥಿತಿಗೆ ಬಂದುದಕ್ಕಾಗಿ ಸಂತೋಷಪಡುತ್ತೇನೆ. ಈದಿನವೀಗ ನಿಮ್ಮ ತಂದೆಯು ಪುನ್ನಾಮನರಕದಿಂದ ಉತ್ತೀರ್ಣನಾದನೆಂದೂ, ಈ ದಿನವೀಗ ನಿಮ್ಮ ತಾಯಿ, ಪುತ್ರವತಿಯೆನಿಸಿದಳೆಂದೂ ಭಾವಿಸುತ್ತೇನೆ. ಮಧುಮಿತ್ರ! ಒಂದುಬಾರಿ ಘೋರವಾದ ಹಾಳುಭಾವಿಗೆ ಬಿದ್ದು ಸದ್ಗುರುಕೃಪೆ, ಸನ್ಮಿತ್ರರ ಆಪತ್ಸಹಾಯ'ಳಿಂದ ಮೇಲಕ್ಕೇರಿ ಬಂದೆ. ಇನ್ನು ಮುಂದೆ ಎಂದೆಂದಿಗೂ ಆ ಕಡೆಗೆ ನೋಡುವುದಾಗಲೀ ಅಲ್ಲಿಗೆ ಎಳೆಯುಬರುವ ದುಸ್ಸಹವಾಸದಲ್ಲಿ ಸೇರುವುದಾಗಲೀ ಇಲ್ಲವೆಂದು ದೃಢವಾಗಿ ಸಂಕಲ್ಪಮಾಡು. ಹಿಂದೆ ತಾಯಿಯ ಸದ್ಬೋಧೆಯನ್ನು ನಿರಾಕರಿಸಿ, ಕಾಲವನ್ನೂ ಬುದ್ಧಿಯನ್ನೂ, ಅಮೌಲ್ಯವಾದ ದೇಹಾರೋಗ್ಯವನ್ನೂ ಹಾಳುಮಾಡಿಕೊಂಡು, ನಮ್ಮೆಲ್ಲರನ್ನೂ ಅಂತಸ್ತಾಪಕ್ಕೆ ಗುರಿಮಾಡಿದ್ದಂತೆ ಇನ್ನು ಮುಂದೆ ಮಾಡಲೊಲ್ಲೆನೆಂದು ಶಪಥಮಾಡು. ವತ್ಸ! ಹೇಳುವೆನು ಕೇಳು, ನೀನು ಈ ಶಾಂತಿನಿಕೇತನಕ್ಕೆ ಬಾರದೆಯೇ

ಇದ್ದಿದ್ದರೆ ನಿನ್ನ ಸ್ಥಿತಿಯು ನಮಗೆ ತಿಳಿಯುವುದಕ್ಕಾಗಲಿ, ನಿನ್ನ ಸ್ಥಿತಿಗತಿಗಳಿಗಾಗಿ ನಾವು ವಿಚಾರಪಡುವದಕ್ಕಾಗಲೀ ಕಾರಣವಿರುತ್ತಿರಲಿಲ್ಲ. ನೀನು ಇಲ್ಲಿಗೆ ಬಂದು ಅದರಲ್ಲಿಯೂ ನಮ್ಮ ಆಚಾರ್ಯವರ್ಯರ ಶಿಷ್ಯ-ಆಶ್ರಿತ ವರ್ಗಕ್ಕೆ ಒಪ್ಪಿಸಲ್ಪಟ್ಟುದರಿಂದ ನೀನು ನಮ್ಮೆಲ್ಲರಿಗೂ ಪುತ್ರಸದೃಶನೂ ಶಿಷ್ಯನೂ ಆಗಿರುವೆ. ಇಂತಹ ನೀನು ನಮ್ಮ ಶಿಷ್ಯಕೋಟಿಯಲ್ಲಿ ಒಪ್ಪುವಂತಿರದೆ ಕುಮಾರ್ಗಕ್ಕೆ ಬಿದ್ದು, ನೀನು ಕೆಟ್ಟುದಲ್ಲದೆ ಇತರರನ್ನು ಕೆಡಿಸುತ್ತ ಬರುವನೆಂಬ ಅಪವಾದಕ್ಕೆ ಪಾತ್ರನಾದರೆ ನಮ್ಮ ಮನಸ್ಸಿಗೆ ಎಷ್ಟು ವ್ಯಾಕುಲವಾಗಬಹುದು, ಯೋಚಿಸು! ಈಗ ಇದಕ್ಕೂ ಹೆಚ್ಚಾಗಿ ಹೇಳಿದರೆ ನಿನ್ನ ಮಿದುಳು ಚದರಬಹುದೆಂದು ಇಷ್ಟಕ್ಕೆ ನಿಲ್ಲಿಸುವೆನು, ಹಿಂದೆ ಆದುದಕ್ಕಾಗಿ ಅಳುತ್ತಿರದೆ ಮುಂದಿನ ಮಾರ್ಗವು ಸುಗಮವಾಗಲು ಇದು ಎಚ್ಚರಿಕೆ ಕೊಟ್ಟಂತೆ ತಿಳಿದು ಜಾಗ್ರತನಾಗು. ನಿನ್ನ ಅಪರಾಧವೆಷ್ಟಿದ್ದರೂ ಅದನ್ನು ನಾವು ಕ್ಷಮಿಸಬೇಕಾದುದು ಕರ್ತವ್ಯವೇ ಆಗಿದೆ. ಆ ವಿಚಾರದಲ್ಲಿ ನೀನೇನೂ ಕಳವಳಿಸಬೇಡ. ನಾವು ಮನಃಪೂರ್ವಕವಾಗಿ ನಿನ್ನ ಅಭ್ಯುದಯವನ್ನೇ ಹಾರೈಸುತ್ತಿರುವೆವು.

ಮಧುಮಿತ್ರನು ಕಣ್ಣುಗಳನ್ನು ಅರಳಿಸಿ ಗೀತಾಚಾರ್ಯರನ್ನೇ ನೋಡುತಿದ್ದನು.

ಗೀತಾ—ಸತೀಮಣಿಯನ್ನು ಕುರಿತು—ಅಮ್ಮಯ್ಯಾ! ಇಂದಿಗೆ ನಿನ್ನ ಹೃದ್ರೋಗವು ನಿವಾರಣೆಯಾಯಿತು. ಈದಿನವೀಗ ನೀನು ಪುತ್ರವತಿಯೆನ್ನಿಸಿದೆ. ಮಧುಮಿತ್ರನು ಇಂದು ಮತ್ತೊಂದು ಜನ್ಮವೆತ್ತಿದಂತೆ ಮೊದಲಿನ ದುರ್ಭಾವನೆಗಳೆಲ್ಲವನ್ನೂ ಬಿಟ್ಟು ಪರಿಶು

ದ್ಧನಾಗಿರುವನು. ಇನ್ನು ಚಿಂತಿಸಬೇಡ, ತಾಯಿಾ! ಮಧುಮಿತ್ರನ ಶಿಕ್ಷಣವಿಚಾರದಲ್ಲಿ ನೀನು ಬಾಲ್ಯದಿಂದಲೂ ಸ್ವಲ್ಪ ದಕ್ಷತೆಯನ್ನೂ ಜಾಗರೂಕತೆಯನ್ನೂ ವಹಿಸಿ, ಅವನು ದುಸ್ಸಹವಾಸದಲ್ಲಿ ಬೀಳದಂತೆ ನಯಭಯಗಳಿಂದ ಹಿಡಿತದಲ್ಲಿರಿಸಿಕೊಂಡು ಬಂದಿದ್ದರೆ ಅವನು ಹಾಗೆ ಕೆಡುತ್ತಿರಲಿಲ್ಲ. ನಿನ್ನಲ್ಲಿ ವಿದ್ಯಾಬುದ್ಧಿ ಕೌಶಲಗಳೆಷ್ಟಿದ್ದರೂ ಮಗನನ್ನು ನ್ಯಾಯ, ನಿಷ್ಠೂರ (ನಯಭಯ) ವಚನಗಳಿಂದ ವಿಧೇಯನನ್ನಾಗಿ ತಿದ್ದುವ ಶಕ್ತಿಯು ನಿನ್ನಲ್ಲಿಲ್ಲದೆ ಹೋದುದೇ ಇಷ್ಟಕ್ಕೆ ಕಾರಣವಾಯಿತು. ಇನ್ನದಕ್ಕೆ............

ಮಧು—ಕುತೂಹಲದಿಂದ ತಲೆಯೆತ್ತಿನೋಡಿ, ತಾರಾಕಾಂತಬಾಬುವನ್ನು ಕಂಡು ಏನನ್ನೋ ನೆನೆದು ಆತುರದಿಂದ—"ಸ್ವಾಮಿನಾಥಾ! ಈ ವಚನಭ್ರಷ್ಟನಲ್ಲಿ ದಯೆಯಿಡಬೇಕು–" ಎಂದು ಹೇಳಿ ಮುಂದೆ ಹೇಳಲಾರದೆ ಅತ್ತುಬಿಟ್ಟನು.

ತಾರಾ—ಮಧುಮಿತ್ರನ ಕೈಹಿಡಿದು—'ವತ್ಸ! ವಚನಭ್ರಷ್ಟತೆಯೆಲ್ಲಿ? ಹೀಗೇಕೆ ಹೆಂಗಸರಂತೆ ಅಳುತ್ತಿರುವೆ?

ಮಧು—ನನಗೇನಾಗಿದೆ, ಮೊದಲು ಹೇಳಿರಿ? ನನಗೆ ಜೀವಿತಾಶೆಯೇನಾದರೂ ಇದೆಯೇ–ಉಳಿಯುವೆನೆ? ಅದನ್ನು ಹೇಳಿದರೆ ಆಮೇಲೆ—

ತಾರಾ—ಅಣ್ಣಾ! ನಿನಗೆ ಕರುಳನ್ನು ಹಿಡಿಯುವ ಕೆಟ್ಟಪದಾರ್ಥವೊಂದು ಊಟದ ಪದಾರ್ಥದೊಡನೆ ಹೊಟ್ಟೆಗೆ ಹೋಗಿರಬೇಕಲ್ಲದೆ, ಕೆಟ್ಟು ಹಾಳಾದವಳ ಸಹವಾಸದ ಫಲವು ಅಷ್ಟಿವಿಷ್ಟಾಗಿ ಸೇರಿ ಹೀಗೆ ತಿರುಗಿತು. ಆದರೆ ಅದಕ್ಕೆ ಪ್ರಾರಂಭದಲ್ಲಿಯೇ ತಕ್ಕ ಚಿಕಿತ್ಸೆಯಾ

ಗಿರುವುದು. ಅದರ ವೇಗವೆಲ್ಲವೂ ನಿವಾರಣವಾಗಿರುವುದು. ಇನ್ನೇನೂ ಭಯವಿಲ್ಲ.

ಮಧು—"ಆಶೋತ್ತರದಿಂದ-ಹಾಗಾದರೆ ಬದುಕುತ್ತೇನೆಯೇ? ವಚನಭ್ರಷ್ಟನಾಗದೆ ಸತ್ಯವ್ರತನಾಗುವೆನೆ ? ನನ್ನನ್ನು ಉದ್ಧರಿಸುವ ಕೃಪೆ ಮಾಡುವಿರಾ ?

ತಾರಾ—ಕುಮಾರ ! ಹೇಳು, ನಿನ್ನ ಅಭಿಮತವೇನು ? ಏತರಿಂದ ಹೀಗೆ ಹೇಳುವೆ ? ನೀನು ಯಾರಿಗೆ ವಚನವನ್ನಿತ್ತೆ ? ಅದನ್ನು ಹೇಳು.

ಮಧು—ಆದಿನ ತಮ್ಮ ಜನ್ಮೋತ್ಸವದ ದಿನ ತಮ್ಮ ಪತ್ನಿಯು ನನ್ನನ್ನು ಬಹುವಾಗಿ ಆದರಿಸಿದರು. ಆ ವೇಳೆಯಲ್ಲಿ ನಾನು ಅವರ ಬಳಿಯಲ್ಲಿಯೂ ತಮ್ಮ ಸುಕುಮಾರಿಯಲ್ಲಿಯೂ ಅತ್ಯಂತ ಸಲಗೆಯಿಂದ ಮಾತನಾಡುತ್ತಿದ್ದೆನು. ಆಗ ಅವರು ತಮ್ಮ ಮಗಳನ್ನು ನನ್ನ ಹತ್ತಿರ ಕುಳ್ಳಿರಿಸಿ "ಇವಳ ಪಾಣಿಗ್ರಹಣಮಾಡಲು ನೀನೇ ತಕ್ಕವನು,-ಇವಳನ್ನು ಒಪ್ಪಿರುವೆಯ—" ಎಂದು ಮುಂತಾಗಿ ನನ್ನಲ್ಲಿ ವಾತ್ಸಲ್ಯಪೂರ್ವಕವಾದ ಭಾಷಣಮಾಡಿದರು. ಅದು ನೆನಪಿಗೆ ಬಂದು ಈಗ ನನ್ನನ್ನು ಅಂತಸ್ತಾಪಕ್ಕೆ ಗುರಿ ಮಾಡಿರುವುದು. ಸ್ವಾಮಿನಾಥ ! ಇಷ್ಟೇಅಲ್ಲ ; ನಾನು ಅಂದು ಗುರುಪುತ್ರಿಯ ವಿಷಯದಲ್ಲಿ ಮರ್ಯಾದೆ ಮೀರಿ ನುಡಿದು ಅವಳ ನಿಷ್ಠುರವಾಕ್ಯದಿಂದ ತಾಡಿತನಾದರೂ ಆ ನನ್ನ ಮರ್ಮವೇದನೆಯನ್ನು ಹೋಗಲಾಡಿಸಲು ತಮ್ಮ ಸುಕುಮಾರಿಪಟ್ಟ ಶ್ರಮವೂ, ಅವಳ ನಿಷ್ಕಲ್ಮಷಭಾವವೂ, ಅಕೃತ್ರಿಮಪ್ರೇಮವೂ ನನ್ನ ಹೃದಯಫಲಕದಲ್ಲಿ ಸ್ಥಿರರೂಪದಿಂದ ನಿಂತಿದೆ. ಅಲ್ಲದೆ ಆ ದಿನ ಅವಳಾಡಿದಮಾತುಗಳು ನನಗೆ ಹೇಗೂ ಮರೆಯ

ಲಾರದು ! ಪೂಜ್ಯತಮ ! ಇದ್ದ ಸಂಗತಿಯೆಲ್ಲವನ್ನೂ ವಿವರಿಸಿ ಬಿಟ್ಟೆನು, ತಾವು ನನ್ನನ್ನು ಕ್ಷಮಿಸಿದರೂ-ಕ್ಷಮಿಸದಿದ್ದರೂ- ನಾನೇನೋ ಈಗ ಅಂತ್ಯಕಾಲದಲ್ಲಿರುವೆನು. ಇನ್ನು ನನಗೆ ಆ ಸುಖಾಭಿಲಾಷೆಯು ಸ್ವಪ್ನವೇ ಸರಿ. ನನ್ನ ಅಂತ್ಯ ನಿವೇದನ ವನ್ನಾದರೂ ಆ-ದೇವಿಯರಲ್ಲಿ ಸಮರ್ಪಿಸುವೆನೆಂದುವಾಗ್ದಾನ· · ·

ಮಧುಮಿತ್ರನು ಮುಂದೆ ಹೇಳಲಾರದೆ ಸುಮ್ಮನಾದನು.

ಕುಳಿತಿದ್ದವರ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. ಸತೀಮಣಿಯು ತಡೆಯಲಾರದೆ ಅತ್ತುಬಿಟ್ಟಳು. ಭಾಸ್ಕರಾಚಾರ್ಯರು ಜಾಗ್ರತರಾಗಿ ಹೇಳಿದರು.—

" ತಾರಾಕಾಂತಬಾಬು ! ಈಗಮಾಡುವದೇನು ? ನಿಮ್ಮ ಅಭಿ ಮತವೇನಾಗಿದೆ ! "

ತಾರಾ—ಪೂಜ್ಯತಮ ! ತಮ್ಮ ಅಭಿಮತವೇ ನಮ್ಮ ಅಭಿಮತವು. ಇಚ್ಛಾನುಸಾರ ಇದೋ ಇನ್ನು ಮುಂದೆ ಈತನ ಆರೋಗ್ಯವಿ ಚಾರವು ನನ್ನದಾಗಿರಲಿ-ಚಿಂತಿಸಬೇಡಿರಿ! (ಮಧುಮಿತ್ರನ ಕೈಹಿ ಡಿದು)—"ಈಗಲೂ ಮೀರಿಹೋಗಿಲ್ಲ. ಕುಮಾರ! ನಾನಿದ್ದೇನೆ, ಸರ್ವಪ್ರಕಾರದಿಂದಲೂ ನಿನ್ನನ್ನು ನಾನು ಮುಂದಕ್ಕೆ ತರುವೆ ನೆಂದು ಇದೋ ಹಿಡಿ, ವಾಗ್ದಾನಮಾಡುತ್ತೇನೆ. ಇಂದಿನಿಂದ ನೀನು ನನ್ನ ಭಾವಿಜಾಮಾತನೆನ್ನಿಸುವೆ. ಇನ್ನಾದರೂ ಸಮಾ ಧಾನಹೊಂದು " ಎಂದು ಹೇಳಿದನು.

ಮಧುಮಿತ್ರನ ಮುಖವು ಪ್ರಸನ್ನವಾಯಿತು. ಎಲ್ಲರೂಸಮಾ ಧಾನಗೊಂಡು ತಮ್ಮ ತಮ್ಮ ಕಾರ್ಯಗಳಿಗೆ ಹೊರಟುಹೋದರು

——o——

|| ಶ್ರೀಃ ||

ಪಂಚದಶ ಪರಿಚ್ಛೇದ.

"ಕುಮುದೆ-ಪೂರ್ಣಕಲೆ, ಶಾರದೆಯರ ಸರಸ ಸಲ್ಲಾಪ, ಮಧುಮಿತ್ರನ ಆರೋಗ್ಯಲಾಭ, ಮತ್ತು ಸಖೀಜನರಲ್ಲಿ ಸಂಭಾಷಣೆ, ಸತೀಮಣಿಯ ಸಂತೋಷ, ಪೂರ್ಣಕಲೆಯ ಅಜ್ಜಿ, ಶಾರದೆಯತಾಯಿ-ಶಾಂತಿದೇವಿ, ಕುಮುದೆಯ ತಾಯಿ-ರೋಹಿಣಿಯರ ಆಗಮನ, ಅಭಿನಂದನ, ಮತ್ತು ಸ್ತ್ರೀಧರ್ಮ-ಸತೀಕರ್ತವ್ಯಗಳ ಸಮಾಲೋಚನೆ, ಪ್ರಭಾಕರ, ಕಲಾಧವ, ಅಕ್ಷಯ, ಕುಮುದಮಿತ್ರರ ಆಗಮನ-ಮಧುಮಿತ್ರನೊಡನೆ ಮಿತ್ರರಯ್ವರ ಸುಖಗೋಷ್ಠಿ, ಬೃಹತ್ಸೇನನ ಆಗಮನ, ಪ್ರಭಾಕರನ ಸ್ವಾಗತಾಭಿನಂದನ, ಪರಸ್ಪರ ವಾದವಿವಾದ-ಕುಮುದಮಿತ್ರನ ತಿರಸ್ಕಾರ, ಅಕ್ಷಯನ ನೀತಿ, ಕಲಾಧವನ ಪ್ರಾರ್ಥನೆ, ಮಧುಮಿತ್ರನ ಸ್ವಾನುಭವಪೂರ್ವಕ ವಿವೇಕಬೋಧೆ, ಬೃಹತ್ಸೇನನ ಪ್ರಯಾಣ, ಕುಮುದಮಿತ್ರನ ಪ್ರತಿಜ್ಞೆ, ಕಲಾಧವನ ಅನುಮೋದನ, ಅಕ್ಷಯಾದ್ಯರ ನಿರ್ಧಾರಣ—

—ಇತ್ಯಾದಿ—ಇತ್ಯಾದಿ—

"ಹೋಗು ಹೋಗು, ಎಂದಾದರೂ ನಿನ್ನನ್ನು
ಹಿಡಿದು ಕಟ್ಟಿ ಗುರುಪಾದದಲ್ಲಿ ಕೆಡಹದೆ ಬಿ
ಡುವವನು ನಾನಲ್ಲ"

"ಕುಮುದೆ, ಇನ್ನೂ ನೀನು ಮಾಡಬೇಕಾದ ಸತ್ಕಾರಕ್ಕೆ ಸಮಯವು ಬಂದಿಲ್ಲವೇನು ?"

"ಪೂರ್ಣಕಲಾ ! ನೀನೇಕೆ, ಇಷ್ಟು ಆತುರಪಡುತ್ತಿರುವೆ? ಪಾಪ! ಆಗಲೇ ನಿನಗೆ ಹೇಳಲಿಲ್ಲವೆ ! ಈಗಿನ ಉಪಚಾರವು ನಿನ್ನದೆಂದು ? ನನ್ನದಾಗಿರುವ ಕೆಲಸವನ್ನು ನೀನು ಮಾಡಲು ಇಷ್ಟೇಕೆ ಬೇಸರ?"

"ನನಗೇಕೆ ಬೇಸರವು ? ಶಾರದಕ್ಕ ! ಇದನ್ನು ನಾನು ಬೇಸರದಿಂದಾಡಿದುದೆಂದೇ ತಿಳಿದೆಯೋ ? ಹಾಗಲ್ಲ, ನನ್ನ ಕೆಲಸವನ್ನು ನಾನು ಮಾಡಿಯೇ ಮಾಡುವೆನು ; ನಾನು ಈಗ ಉಪಚರಿಸುವದಿಲ್ಲವೆಂದೆನೇನು? ನನಗೆ ಕುಮುದೆಯ ಅಣ್ಣನು ಹೇಗೋ—ಹಾಗೆಯೇ ಇವನೂ ! ಅಪ್ಪನುಮತ್ತು ನಿನ್ನ ತಂದೆಯೂ ಅಪ್ಪಣೇಮಾಡಿರುವಾಗ—ಮಾವನು ಬೋಧಿಸಿರುವಾಗ-ಅಜ್ಜಿಯು ಬೆಂಬಲಕ್ಕಿರುವಾಗ – ಕಾಯಿಲೆಯಲ್ಲಿರುವ ಅಣ್ಣನಿಗೆ ಉಪಚರಿಸಲೊಲ್ಲೆನೆಂದಾದರೂ ಹೇಳುವೆನೆ ! ನನ್ನ ಮಾತೂ ಬೇಡ, ನೀನುಕೂಡ ಬಂದು ನನಗೆ ಸಹಾಯಮಾಡುತ್ತಿಲ್ಲವೆ ? ಇವಳೇಕೆ ಬರಬಾರದು ?"

ಮೇಲಿನ ಉತ್ತರ ಪ್ರತ್ಯುತ್ತರಗಳು ಗುರುಪುತ್ರಿಯರು ಮೂವರಿಗೂ ನಡೆಯುತ್ತಿದ್ದವು. ಮೂವರೂ ಪೂರ್ಣಕಲೆಯ ಕಿರುಮನೆಯಲ್ಲಿ ಕುಳಿತಿದ್ದರು. ಮಧುಮಿತ್ರನು ಈಗ ಆ ಕಿರುಮನೆಯಲ್ಲಿಲ್ಲ. ಪಕ್ಕದ ಬೇರೊಂದು ಕಿರುಮನೆಯಲ್ಲಿ ಅವನಿಗೆ ಸ್ಥಳವೇರ್ಪಟ್ಟಿರುವದು. ಅವನಿಗೆ ತಾರಾಕಾಂತಬಾಬುವು ಅಭಯವಿತ್ತು ಇಂದಿಗೆ ಹದಿನೈದು ದಿನಗಳಾದುವು. ಅದು ಮೊದಲು ತಾರಾಕಾಂತನೇ ಸ್ವಂತವಾಗಿ ಬಂದು ಮಧುಮಿತ್ರನಿಗೆ ಔಷಧಗಳನ್ನು ಕೊಡುತ್ತಿರುವನು. ಈಗ ಆತನು ಮೆಲ್ಲ ಮೆಲ್ಲನೆ ತಿರುಗಾಡಬಹುದಾದ ಸ್ಥಿತಿಗೆ ಬಂದಿದ್ದರೂ ಭಾಸ್ಕರಾಚಾರ್ಯ

ಗೀತಾಚಾರ್ಯರು ಆವನನ್ನು ಮಂದಿರದ ಉಪ್ಪರಿಗೆಯನ್ನು ಬಿಟ್ಟು ಕೆಳಗಿಳಿಯಲು ಅವಕಾಶಕೊಟ್ಟಿಲ್ಲ.

ಭಾಸ್ಕರಾಚಾರ್ಯರು ತಮ್ಮ ವಿರಾಮಕಾಲವನ್ನೆಲ್ಲಾ ಮಧುಮಿತ್ರನು ಮಲಗಿರುವ ಕಿರುಮನೆಯಲ್ಲಿಯೇ ಕಳೆಯುವರು. ಅವಕಾಶದೊರೆತಾಗಲೆಲ್ಲಾ ಇವನಿಗೆ ಉತ್ಸಾಹ-ಜ್ಞಾನ-ಬುದ್ಧಿಶಕ್ತಿಗಳು ಹೆಚ್ಚುವಂತೆ ಆರ್ಯಮಹಸೀಯರ ಅದ್ಭುತ ಚರಿತ್ರೆಗಳನ್ನು ಹೇಳುತ್ತಿರುವರು. ಗೀತಾಚಾರ್ಯರು ಅವಕಾಶದೊರೆತಂತೆ ಬಂದು ಗುರುಶಿಷ್ಯರ ಪರಸ್ಪರಸಂಬಂಧ, ಶಿಷ್ಯನ ಕರ್ತವ್ಯ, ಪುರುಷಾಯುಃಪ್ರಮಾಣದಲ್ಲಿ ಅವರು ಮಾಡಬಹುದಾದ ಮತ್ತು ಮಾಡಬೇಕಾದ ಕಾರ್ಯಗಳ ಸ್ವರೂಪ, ಪರಮಾತ್ಮನ ಸಹಾಯ ಇತ್ಯಾದಿಗಳನ್ನು ಬೋಧಿಸುತ್ತಿರುವರು. ತಾರಾಕಾಂತಬಾಬುವು, ದೇಶದ ಪೂರ್ವಸ್ಥಿತಿ, ತಾತ್ಕಾಲಿಕ ಸ್ಥಿತಿ, ಮಾನವಪ್ರಕೃತಿಯ ಸದ್ಯಸ್ಥಿತಿಯ ದುರ್ಬಲತೆ, ಇವುಗಳನ್ನು ಮನಸ್ಸಿಗೆ ಹಿಡಿಯುವಂತೆಯೂ, ದೇಶಾಭಿಮಾನ, ಸ್ವಾತಂತ್ರ್ಯಪ್ರಿಯತೆ, ಗುರುದೈವಭಕ್ತಿ, ಪ್ರಾಣಿದಯೆ, ಮೊದಲಾದ ಗುಣಗಳು ಪ್ರಜ್ವಲಿಸುವಂತೆಯೂ ಆಡಿಗಡಿಗೆ ಬಂದು ವಿಮರ್ಶಾಪೂರ್ವಕವಾಗಿ ಹೇಳುತ್ತಿದ್ದರು. ಗುರುತ್ರಯರ ಆವದೇ ಬೋಧನೆಯಾಗಲೀ ಇತರ ಶಿಷ್ಯರನ್ನು ಮುಂದಿಟ್ಟುಕೊಂಡೇ ನಡೆಯಿಸಲ್ಪಡುತ್ತಿದ್ದಿತಲ್ಲದೆ ಪ್ರತ್ಯೇಕವಾಗಿ ನಡೆಯುತ್ತಿರಲಿಲ್ಲ.

ಉಳಿದ ಕಾಲದಲ್ಲಿ, ಪೂರ್ಣಕಲೆಯು, ಅವನ ಮನಸ್ಥಿತಿಗೆ ಬೇಸರವಾಗದಂತೆ ಲೇಖನ ವಾಚನಾದಿಗಳಿಂದಲೂ, ಕಾಲಕ್ಕೆ ಬೇಕಾದ ಆಹಾರಪಾನೀಯಗಳನ್ನು ಒದಗಿಸುವದರಿಂದಲೂ, ರೋಗಿಯ ಮನಸ್ಸನ್ನು ಆಪ್ಯಾಯನಗೊಳಿಸುವ ಕೆಲಸದಲ್ಲಿ ನಿಯೋಗಿಸಲ್ಪಟ್ಟಿದ್ದಳು, ಸತೀಮಣಿಯಂತೂ ಅಲ್ಲಿಯೇ ಇರಬೇಕಾಗಿದ್ದಿತು.

ಇರಲಿ, ಮೇಲಿನಉತ್ತರ ಪ್ರತ್ಯುತ್ತರಗಳು ನಡೆಯುತ್ತಿದ್ದಾಗ ಹೊತ್ತು ಮಧ್ಯಾಹ್ನಾತ್ಪರಮೂರುಘಂಟೆ. ಊಟಪಾಟಗಳೆಲ್ಲವೂ ನೆರವೇರಿ ವಿರಾಮಕಾಲವಾಗಿದ್ದುದರಿಂದ ಮೂವರೂ ಒಟ್ಟಾಗಿ ಕಲೆತು ಮಾತನಾಡುತ್ತಿದ್ದರು. ಪೂರ್ಣಕಲೆಯಮಾತಿಗೆ ಕುಮುದೆಯು ಉತ್ತರವನ್ನು ಕೊಡದೆ ತಲೆಬಾಗಿ ಕುಳಿತಳು. ಶಾರದೆಯು ಕಣ್ಣುಸನ್ನೆಮಾಡಿ, ಪೂರ್ಣಕಲೆಯ ಕೈಯನ್ನು ಚಿವುಟಿ (ಜಿಗುಟಿ) ಹೇಳಿದಳು.

‹‹ಪೂರ್ಣಕಲಾ ! ನೀನೂ ಸರಿಯೆ; ಒಳ್ಳೆ ಗಡಸುಗಾರ್ತಿಯಾಗಿದ್ದೀಯೆ. ಈಗಲೇ ಅವಳು ಪಾಲುಗಾರ್ತಿಯಾಗಿ ಬಂದು ನಿಲ್ಲಬೇಕೆನ್ನುವೆಯಲ್ಲ ! ಪಾಪ ! ಅವಳು, ‹‹ಮುಂದೆ ತಾನು ಮಾಡುವದಿದ್ದೇ ಇದೆ, ಇವರು ಈಗ ಎರಡೆರಡು ದಿನದ ಮಟ್ಟಿಗಾದರೂ ಅಣ್ಣಾನೊಡನೆ ಸಂತೋಷವಾಗಿ ಮಾತನಾಡುತ್ತಿರಲಿ" ಎಂದು ನಮ್ಮ ಮೇಲಿನ ದಯೆಗೇ ಹೀಗೆ ಸುಮ್ಮನಿರುವಳು. ಹಾಗಿಲ್ಲದಿದ್ದರೆ ಇವಳಾಗಲೇ ಅವನನ್ನು ತನ್ನಕಡೆಗೆ ತಿರುಗಿಸಿ, ನಮ್ಮನ್ನು ಬಳಿಗೂ ಬರಗೊಡದಂತೆ ಮಾಡಿಬಿಡುತ್ತಿದ್ದಳು.''

ಕುಮುದೆ—ಲಜ್ಜೆಯಿಂದ ಕೆಂಪೇರಿದ ಮುಖವನ್ನು ಪ್ರಯಾಸದಿಂದ ಮೇಲಕ್ಕೆತ್ತಿ ಕೃತಕ ಕೋಪದಿಂದ ‹‹ಏನು, ಬಜಾರಿಯಾದೆ, ಶಾರದೆ ! ಈಗಲೇ ಇಷ್ಟು ಕೊಂಕು-ಬಿಂಕಗಳೇನು ? ಕಣ್ಣುಸನ್ನಿಯೇನು, ಕಯ್ತಿರುಗಿಸುವುದೇನು-ಇದೆಲ್ಲಿಂದ ಕಲ್ತುಬಂದೆ ?''

ಶಾರದೆ—ಎಲ್ಲಿಂದಲೂ ಏಕೆ ಕಲ್ತು ಬರಬೇಕು? ನೀನೇ ಸಾಲದೇ-ನನ್ನಂತಹ ನೂರುಮಂದಿ ಶಾರದೆಯರನ್ನು ನಿಪುಣೆಯರನ್ನಾಗಿ ಮಾಡಲು ? ಇವೆಲ್ಲವೂ ನಿನ್ನ ಪ್ರಸಾದವೇ ! ಹೇಗಾದರೂ ಆಗಲಿ, ಆ ದಿನ ನೀನು ‹ಆತನು ಮಲಗಿದುದು ನನ್ನ ಉತ್ಸಾಹವೇ ಹೋದಂತಾಗಿದೆ. ಪ್ರತಿಕ್ಷಣವೂ ಅವನಮಾತೇ ನೆನಪಿಗೆ ಬರುತ್ತದೆ. ದೇವರು ಅವನಿಗೆ ಆರೋಗ್ಯಭಾಗ್ಯವನ್ನು ಕೊಟ್ಟರೆ–' ಹೀಗೆಂದು

ಹೇಳಿದೆಯಷ್ಟೆ. ಆರೋಗ್ಯವಾಯ್ತು, ಇನ್ನಾದರೂ ಉತ್ಸಾಹವಾಯ್ತೋ ?–ಇನ್ನೂ ಇಲ್ಲವೋ?

ಪೂರ್ಣ—ಎಲ್ಲಿ ಬಂತು? ಶಾರದೆ! ಅಣ್ಣನಲ್ಲಿ ಅವಳು ಒಬ್ಬಳೇ ಮಾತಾಡುವಂತಾದಮೇಲಲ್ಲವೇ–ಆ ಮಾತು? ಈಗೆಲ್ಲಿ? ಯಾವಾಗ ಬಂದು ನೋಡಿದರೂ ನಾವು ಇದ್ದೇ ಇರುತ್ತೇವೆ.

(ಇಷ್ಟರಲ್ಲಿ ಪಕ್ಕದ ಕಿರುಮನೆಯ ಕಡೆಯಿಂದ ಸಣ್ಣಕೂಗು ಕೇಳಿಸಿತು.)

"ಪೂರ್ಣಕಲಾ! ಪೂರ್ಣಕಲಾ!—"

ಪೂರ್ಣಕಲೆಯು ಎಚ್ಚತ್ತವಳಂತೆ ಧಿಗ್ಗನೆದ್ದು, ಶಾರದಾ-ಕುಮುದೆಯರ ಕೈಹಿಡಿದು–"ಬನ್ನಿರೆ ! ಅಣ್ಣನು ಕೂಗುತ್ತಿರುವನು, ಅಲ್ಲಿಗೇ ಹೋಗುವ." ಎಂದುಹೇಳಿ ಎಳೆದುಕೊಂಡು ಬಂದು ಮಧುಮಿತ್ರನ ಕಿರುಮನೆಯ ಒಳಹೊಕ್ಕಳು. ಮಧುಮಿತ್ರನು ಮಂಚದಮೇಲೆ ಆರೆಬಾಗಿ ಮಲಗಿದ್ದನು. ಕಿರುಮನೆಯ ಒಂದು ಮೂಲೆಯಲ್ಲಿ ಸತೀಮಣಿಯು ಆಯಾಸದಿಂದ ಮೈ ಮರೆತು ನಿದ್ರಿಸುತಿದ್ದಳು. ಪೂರ್ಣಕಲೆಯು ಪ್ರವೇಶಿಸಿ-"ಏನಣ್ಣ? ಕೂಗಿದೆಯೇಕೆ ?"

ಮಧು—ಏಕೆ, ತಾಯಿ! ಇದೇಕೆ, ಈದಿನ ಇಷ್ಟು ಉದಾಸೀನಮಾಡಿದೆ ! ದಿನದಿನಕ್ಕೆ ನೀನು ಬರುವುದನ್ನೇ ಕಡಮೆ ಮಾಡಿದಂತಿದೆ. ಬೇಸರವಾಗುವದೆಂದರೂ ಒಬ್ಬರೂ ಮಾತನಾಡುವವರಿಲ್ಲ. ಹೀಗೇಕೆ ?

ಶಾರದೆ—ಅಣ್ಣ! ಅಷ್ಟೇಕೆ ನಿಷ್ಠುರವಾಡುವೆ? ಪೂರ್ಣಕಲೆಯನ್ನು ನಿಲ್ಲಿಸಿ ತಡೆಕಟ್ಟಿದ್ದವಳನ್ನು ಇದೋ ಹಿಡಿತಂದಿರುವೆವು. ಇವಳನ್ನೇ ಕೇಳು; ಹೇಳುವಳು. ಇವಳೇ–ಈ ನಮ್ಮ ಅತ್ತಿಗೆಯೇ—ನಿನ್ನ ಬೇಸರಕ್ಕೆ ಕಾರಣಳಾಗಿದ್ದರೆ—

ಮಧು—ಕುಮುದೆಯನ್ನು ನೋಡಿ ಸ್ಥಿರಭಾವದಿಂದ ಕುಳಿತು– ಶಾರದಾ!

ಆಕೆಯನ್ನು ಈಗಲೇ ಕುಚೇಷ್ಟೆಮಾಡಬೇಡಿರಿ, ನಾನು ಈಗ ಗುರು ವಾಕ್ಯದಲ್ಲಿ ಬದ್ಧನಾಗಿದ್ದೇನೆ. ಸರಸಪ್ರಸಂಗವೇನೂ ಈಗ ಆಗ ಬಾರದೆಂದು ಅವರ ಅಪ್ಪಣೆ! ಎಲ್ಲಿ, ಎಲ್ಲರೂ ಕುಳಿತು ಏನನ್ನಾದ ರೂ ಓದಿ-ಹಾಡಿ-ಮನಸ್ಸಿಗೆ ಉತ್ಸಾಹವುಂಟುಮಾಡಿರಿ!

ಶಾರದಾ—ಆಗಲಿ, ಆದರೆ ಇದೇನು ತಾಯಿಯು ಇಷ್ಟುಹೊತ್ತಿನಲ್ಲಿ ಮ ಲಗಿರುವರು ?

ಮಧು—ನನ್ನ ಕಾಯಿಲೆಗಾಗಿ ೨೦ ದಿನಗಳಿಂದ ಸರಿಯಾಗಿ ಊಟನಿದ್ರೆ ಯೊಲ್ಲದೆ ಪೇಚಾಡುತ್ತಿದ್ದು, ಪಾಪ! ಈಗ ಮೈಮರೆತು ಮಲ ಗಿದ್ದಾಳೆ. ಮಲಗಿರಲಿ.

ಪೂರ್ಣ—ಅವರು ಮಲಗಿದುದರಿಂದಲೇ ನಾವಿಲ್ಲಿ ಮಾತನಾಡಿದರೆ ಎಚ್ಚ ರವಾಗುವದೆಂದು ನನ್ನ ಕಿರುಮನೆಯಲ್ಲಿಯೇ ಕುಳಿತಿದ್ದೆವು.

ಪೂರ್ಣಕಲೆಯ ಮಾತು ಮುಗಿವುದಕ್ಕೆ ಮೊದಲೇ ಸತೀಮಣಿ ಯು ಗಾಬರಿಗೊಂಡೆದ್ದು ಕುಳಿತು, ಸುತ್ತಲೂ ನೋಡಿದಳು. ಮುಂದೆ ಮಂಚದಮೇಲೆ ಕುಳಿತಿದ್ದ ಮಗನನ್ನೂ ನಿಂತಿದ್ದ ಮೂವರು ಸುಕುಮಾರಿ ಯರನ್ನೂ ನೋಡಿ ಸಂತೋಷದಿಂದ ಎದ್ದು ಬಂದು ಕುಮುದೆಯ ಮುಡಿ ದಡಹಿ–"ತಾಯಿ! ಭಾಗ್ಯಲಕ್ಷ್ಮಿ! ನಿನ್ನಪುಣ್ಯ,–ನಿನ್ನತಂದೆಯ ಅಮೃ ತೋಪಮವಾದ ಔಷಧ; ಪೂರ್ಣಕಲೆ ಶಾರದೆಯರ ಆದರೋಪಚಾರ, ಗುರುಗಳ ಆಶೀರ್ವಾದ–" ಇವೆಲ್ಲ ಸೇರಿ ನನ್ನ ಮಗನು ಉಳಿದನು. ಬಾ, ತಾಯಿ, ಕುಳಿತುಕೊ-ನೀವೂ ಬನ್ನಿ–ತಾಯಿಯರೆ,

ಪೂರ್ಣ—ಶಾರದೆ–'ಇಲ್ಲ–ಇಲ್ಲ! ಈಗ ನಾವು ಬರುವುದಿಲ್ಲ. ನಾವು ಶಾರದಾಪೂಜೆಗೆ ಹೂ ಮಾಲೆಗಳನ್ನು ಕಟ್ಟಲು ಹೋಗಬೇಕು. ಕುಮುದಕ್ಕನು ಇಲ್ಲಿರುವಳು,' ಎಂದು ಹೇಳಿ ಹೊರಟುಹೋ ದರು. ಕುಮುದೆಯು ಸಂಕುಚಿತಸ್ವರದಿಂದ–"ನಾನೂ ಹೋಗಿ

ಬರುವೆನು.'' ಎಂದುಹೇಳಿ ಅಪ್ಪಣೆ ಪಡೆದು ಹೊರಟುಹೋದಳು. ಮಧುಮಿತ್ರನು ನಸುನಗುತ್ತ-"ಅಬ್ಬ ! ಹುಡುಗಿಯರು ಎಷ್ಟು ಕುಶಲೆಯರು-ನೋಡಿದೆಯಾ ? ಅಮ್ಮ !''

ಸತೀ—ಜನ್ಮಸ್ಥಾನವೆಂತಹದು! ಶಿಕ್ಷಣಾಕ್ರಮ, ಅಭ್ಯಾಸ, ಸಹವಾಸ ಬಲವೆಂತಹವು ?

ಇಷ್ಟರಲ್ಲಿ ಹೊರಗಿನಿಂದ-'ಏಕೆ ಓಡಿಬಂದಿರೆ ? ಒಳಗೆ ಮಧುಮಿತ್ರನ ತಾಯಿ ಇದ್ದಾಳೆಯೆ ?'' ಎಂಬ ಪ್ರಶ್ನೆಯೂ-"ನಾವು ತೋಟಕ್ಕೆ ಹೂಬಿಡಿಸಲು ಹೋಗುತ್ತೇವೆ. ಹೋಗಿರಿ, ಒಳಗಿದ್ದಾರೆ.'' ಎಂಬ ಉತ್ತರವೂ ಕೇಳಿಸಿತು. ಸತೀಮಣಿಯು ಉತ್ಸಾಹದಿಂದ-'ಅಜ್ಜಿಯು ಬಂದಂತೆ ತೋರುತ್ತದೆ '' ಎಂದು ಎದ್ದುಬಂದು ಬಾಗಿಲಬಳಿ ನಿಂತಳು. ಪೂರ್ಣಕಲೆಯ ಅಜ್ಜಿಯು ಮತ್ತಿಬ್ಬರು ಅಂಗನಾಮಣಿಯರೊಡಗೊಂಡು ಬಂದಳು. ಸತೀಮಣಿಯು ಅಜ್ಜಿಗೆ ನಮಸ್ಕರಿಸಿ-"ಅಜ್ಜಿ, ಕುಳಿತುಕೊಳ್ಳಿರಿ, ತಂಗಿಯರೇ ಕುಳ್ಳಿರಿ....'' ಎಂದು ಮೂವರನ್ನೂ ಕೈಹಿಡಿದು ಕುಳ್ಳಿರಿಸಿಕೊಂಡು ತಾನೂ ಕುಳಿತಳು.

ಅಜ್ಜಿ—ಮಗಳೇ ! ಇಂದಿಗಾದರೂ ನಿನ್ನ ಮುಖದಲ್ಲಿ ನಗೆಯನ್ನು ಕಂಡೆವಲ್ಲ ! ಅಷ್ಟೇ ಸಾಕು.

ಸತೀ—ಅಜ್ಜಿ ! ಹಿರಿಯರಾದ ತಮ್ಮ ಆಶೀರ್ವಾದದಿಂದ ಆ ಭಾಗ್ಯ ವುಂಟಾಯಿತು !

ಶಾಂತಿ—ನಿಜ, ಅಜ್ಜಿಯವರ ತಪಃಪ್ರಭಾವವು ಬಲವತ್ತರವಾದುದು. ಆದುದರಿಂದಲೇ ಅವರಿಗೆ ನಮ್ಮ ಗುರುಗಳು ಪುತ್ರರಾಗಿ ಜನ್ಮಿಸಿದರು. ಸಿದ್ಧಪುರುಷರಾದ ಈ ಪುತ್ರರ ದೆಸೆಯಿಂದ ಇವರಿಗೆ ಜಗತ್ತೇ ವಶೀಭೂತವಾಗಿದೆಯೆನ್ನಬೇಕು.

ಅಜ್ಜಿ—ಹೇಗಾದರೂ ಹೇಳಿಕೊಳ್ಳಿರಿ, ಮಧುಮಿತ್ರನ ನೆವದಿಂದಾದರೂ

ನಮ್ಮ ಕುಟೀರದವರೆಗೆರೋಹಿಣೀದೇವಿಯು ಬರುವಂತಾಯಿತಲ್ಲ!!

ರೋಹಿಣಿ—ಅದೇಕೆ ? ಅಜ್ಜಿ ! ಇಲ್ಲದಿದ್ದರೆ ಬರಕೂಡದಾಗಿತ್ತೇನು ?

ಅಜ್ಜಿ—ನಾನೇನುಬಲ್ಲೆನು-ತಾಯಿ ? ನಾನು ನಿಮ್ಮಂತೆ ನಾಗರಿಕತೆಯು ಗಾಳಿಗೆ ಸಿಕ್ಕಿ ಬಿದ್ದಿರುವಳಲ್ಲ;—ನಾಜೂಕು-ಗೀಜೂಕುಗಳೊಂದೂ ನನಗೆ ತಿಳಿಯವು. ವೇಷಧಾರಣೆಯೋ ಸುಧಾವಣೆಯೋ ಅದಾವುದೇ ಒಂದರ ಮರ್ಮವೂ ನನಗೆ ತಿಳಿಯದು. ಹೀಗಿರುತ್ತ ಕೇವಲ ಪೂರ್ವಾಚಾರ, ಪುರಾತನ ಸಂಪ್ರದಾಯ, ಸನಾತನತತ್ವ-ಹೀಗೆಂದು ಹಲುಬುತ್ತಿರುವ ನಮ್ಮ ಸಹವಾಸ-ಸಂಭಾಷಣೆಗಳು ನಿಮಗೆ ರುಚಿಸಬೇಕೆಂದರೆ-ಹೇಗೆ ? ಇದಲ್ಲದೆ ನಿಮ್ಮ ಮನೆಯಂತೆ ನಮ್ಮಲ್ಲಿ ವಿದೇಶೀಯಾಚರಣಕ್ಕೆ ತಕ್ಕಂತೆ ಗೃಹವ್ಯವಸ್ಥೆಯು ಕೂಡ ಇಲ್ಲ. ಇಂತಹ ಸ್ಥಳಕ್ಕೆ ನೀವು ಬರುವುದೆಂದರೆ ಹೇಗೆ ?

ರೋಹಿಣಿ—ಅಜ್ಜಿ ! ಹೋಗಲಿ, ಆ ಮಾತನ್ನು ಅಷ್ಟಕ್ಕೆ ಬಿಟ್ಟುಬಿಡಿರಿ. ಅದೊಂದು ಹುಚ್ಚು. ಎಲ್ಲಕ್ಕೂ ಪರಿಮಿತಿ-ಕಾಲನಿರ್ಣಯಗಳುಂಟಷ್ಟೆ. ಆ ಹುಚ್ಚಿಗೂ ಕಾಲಮಿತಿಗಳು ತೀರಿಹೋದವು. ಅವೆಲ್ಲವೂ ಈಗ ಬೇಕೆಂದರೆ ಆದೀತೇ ? ಈಗಿನ ಮಾತನ್ನು ಹೇಳಿರಿ.

ಶಾಂತಿ—ಈಗಿನಮಾತೆಂದರೆ ಪುಟಕ್ಕೆ ಹಾಕಿದ ಚಿನ್ನವೇ ಅಹುದು! ಈಗಲೇನು-ಹುಡುಕಿ-ತೆಗೆಯಬೇಕೆಂದರೂ ಇಷ್ಟು ಕಸಕಡ್ಡಿಗಳೂ ಸಿಕ್ಕುವುದಿಲ್ಲ, ನಮ್ಮಂತೆಯೇ-ಏಕೆ-ನಮ್ಮೆಲ್ಲರಿಗೂ ಹೇಳಿಕೊಡುವಂತೆ ಆರ್ಯರಮಣಿಯಾಗಿರುತ್ತೀಯೆ.

ರೋಹಿಣಿ—ತಂಗಿ ! ಈಗಲೀಗ ಹೇಳುವೆನು—" ಮನಸ್ಸನ್ನು ಕೆಡಿಸುವುದು ಮತ್ತು ಉತ್ಸಾಹಪಡಿಸುವದು ; ವೇಷ ಮತ್ತು ಭಾಷೆ

ಗಳೇ ಸರಿ! ಅವೆರಡೂ, ವ್ಯಕ್ತಿ-ಮತ್ತು ಪ್ರಕೃತಿಗಳಿಗೆ ತಕ್ಕಂತೆ ಹಿರಿಯರಿಂದ ಗೊತ್ತುಮಾಡಲ್ಪಟ್ಟು, ಪರಂಪರಾಗತವಾಗಿ ಬಂದಿರುವ-ಆಚಾರವಿಚಾರಗಳಿಗೆ ಒಪ್ಪುವಂತೆ-ಇರಬೇಕಲ್ಲದೆ, ಇತರರ ಮೇಲಿನ ಹುರುಡಿಂದ ಅವೆರಡನ್ನೂ ಬದಲಾಯಿಸುವದರಿಂದ, ಕಿರುಬನನ್ನು ನೋಡಿ ಅದರಂತೆ ತಾನೂ ಆಗುತ್ತೇನೆಂದು ಮೈಸುಟ್ಟುಕೊಂಡು, ಹಾಗೂ ಕೆಟ್ಟು, ಹೀಗೂ ಕೆಟ್ಟು ಸತ್ತ ನರಿಯಂತೆಯೇ ನಮ್ಮ ಅವಸ್ಥೆಯಾಗುವದು '' ಇದನ್ನು ಈಗ ನಾನು ಅನುಭವಮಾಡಿಕೊಂಡೆನು. ಈ ವರೆಗೂ ಸ್ವರೂಪ ಜ್ಞಾನವಿಲ್ಲದೆ, ಧರ್ಮಸೂಕ್ಷ್ಮವನ್ನರಿಯಲಾರದೆ ನಾನೂ ವೇಷ ಧಾರಣಮಾತ್ರದಿಂದಲೆ, ರಜತಮುಖಿಯಾದೇನೆಂದು ವಿಚಾರಾಂಧತೆಯಿಂದ ಉಬ್ಬಿಹೋಗಿದ್ದೆನು. ಒಳಗೆ ಹುರುಳಿಲ್ಲದಿದ್ದರೂ ಮೇಲೆ ಮೇಲೆ ಸಾಧಾರಣೆಯ ಹುಚ್ಚಾಟದ ನಾಲ್ಕಾರು ಜಂಭದ ಮಾತುಗಳಿಂದ ನಮ್ಮವರೆಲ್ಲರನ್ನೂ ಚುಚ್ಚಿನುಡಿದೆನು. ದೊಡ್ಡವರೆನ್ನದೆ, ಚಿಕ್ಕವರೆನ್ನದೆ, ದೈವವೆನ್ನದೆ, ನಾಸ್ತಿಕಬುದ್ಧಿಯಿಂದ ನಮ್ಮ ಪೂರ್ವಸಂಪ್ರದಾಯವನ್ನೆಲ್ಲಾ ಬಿಟ್ಟಿದ್ದೆನು. ನನ್ನಲ್ಲಿ ನಾನೇ ಪಟ್ಟಭದ್ರೆಯಾದ ಪ್ರೌಢವಿದ್ಯಾವತಿಯೆಂದೂ, ನನಗೆ ಸ್ತ್ರೀಪುರುಷರಿಂದ ವಿಶೇಷ ಸನ್ಮಾನಗಳುಂಟಾಗಬೇಕೆಂದೂ, ನನ್ನ ಆಡಳಿತಗಳೇ ಏಳಿಗೆಗೆ ಬರಬೇಕಾದ ನಾರಿಯರಿಗೆ ಮಾದರಿಯಾಗಿರುವುದೆಂದೂ ಗುಣಿಸಿ-ಗುಣಿಸಿ, ಹಿಗ್ಗಿಹೋಗುತ್ತಿದ್ದೆನು. ನನ್ನ ತಂದೆಯು ನನಗೆ ಪ್ರೌಢಶಿಕ್ಷಣವನ್ನು ಕೊಡಿಸಿದುದು ಉತ್ತಮವಾಯಿತೆಂದೂ, ಇದರಿಂದ-ಈ ನನ್ನ ವಿದ್ಯಾಸಂಪನ್ನತೆಯಿಂದ-ನನಗೆ ಅನುರೂಪನಾದ ಸ್ವಾಮಿಯನ್ನು ಪಡೆದೆನೆಂದೂ ತಿಳಿದಿದ್ದೆನು. ಹೆಚ್ಚೇಕೆ, ಶಾಂತೀದೇವಿ! ನನ್ನ ಸ್ವಾಮಿಯನ್ನೂ

ಕೂಡ ನನ್ನ ಆಜ್ಞೆಗೆ ಒಳಪಟ್ಟಿರಬೇಕೆಂದು ಎಷ್ಟೋವೇಳೆಪ್ರತಿಭಟಿಸಿ-ತೊಂದರೆ ಪಡಿಸಿಬಿಟ್ಟಿರುವೆನು. ಈಗ ಅವೆಲ್ಲವೂ ನನಗೆ ಭಯೋತ್ಪಾದಕಗಳಾದ ಸ್ವಪ್ನವಿಚಾರಗಳೇ ಸರಿಯೆಂದು ತೋರುವುದು.

ಶಾಂತಿ—ಅಕ್ಕ ! ಹಾಗೆ ನೀನು ಸ್ತ್ರೀ ಸ್ವಾತಂತ್ರ್ಯ, ಸಮಾನಾಧಿಕಾರಗಳಿಗಾಗಿ ಹೊಡೆದಾಡುತ್ತಿದ್ದುದು ನಿನ್ನ ಸ್ವಾಮಿಯ ಮನಸ್ಸಿಗಾಗಲೀ ನಿನ್ನ ಮಗನ ಮನಸ್ಸಿಗಾಗಲಿ ಹಿತವಾಗುತ್ತಿದ್ದಿತೇ?

ರೋಹಿಣಿ—ಹಿತವೋ-ಅಹಿತವೊ-ಅದನ್ನು ವಿಮರ್ಶಿಸುವಷ್ಟು ಸಹನೆ, ನನಗಿರಲಿಲ್ಲ. ಅವರು ಕೆಲವುವೇಳೆ ಮೌನದಿಂದಲೂ ಕೆಲವುವೇಳೆ ಹುಸಿನಗೆಯಿಂದಲೂ ಮತ್ತೆ ಕೆಲವುವೇಳೆ ಹುಂಕಾರ ಮಾತ್ರದ ಗರ್ಜನೆಯಿಂದಲೂ-ಇನ್ನು ಕೆಲವುವೇಳೆ ಒಂದೆರಡು ಕಠಿಣೋಕ್ತಿಗಳಿಂದಲೂ, ನನ್ನ ಸ್ವತಂತ್ರಾಧಿಕಾರಕ್ಕೂ-ಭಾಷಣಕ್ಕೂ, ಆತಂಕಪಡಿಸುತ್ತಿದ್ದರು. ಆದರೇನು ? ತಮ್ಮನ್ನು ಬಿಟ್ಟು ಸ್ವತಂತ್ರವಾಗಿರಲು ಹೊರಟುಹೋದಾಳೆಂಬ ಭೀತಿಯಿಂದ ಅವರು ಮುಂಬರಿದು ಬಂದು ನನ್ನನ್ನು ಹೇಗೂ ದಂಡಿಸಲಸಮರ್ಥರಾಗಿ ಹೆಚ್ಚು ಮಾತನಾಡದೆ ನನ್ನ ಮುಖೋಲ್ಲಾಸಕ್ಕೆ ಬೇಕಾದುದೆಷ್ಟೋ-ಅಷ್ಟನ್ನೇ ಮಾಡುತ್ತಿದ್ದರು. ಮಗನು ಮಾತ್ರ ಹಾಗಿರಲಿಲ್ಲ. ಅವನಾವಾಗಲೂ, ಪ್ರತಿಭಟಿಸುತ್ತಿದ್ದನು. ಸ್ತ್ರೀಯರಿಗೆ ಸನ್ಮಾನ ಉಪಚಾರಗಳುಮಾತ್ರ ವಿಶೇಷವಾಗಿ ದೊರೆಯುವಂತಿರಬೇಕೆಂದೂ, ಉಳಿದ ಸ್ವಾತಂತ್ರ್ಯ-ಸಮಾನಾಧಿಕಾರಗಳೆನ್ನಿಸುವ ಸ್ವೇಚ್ಛಾಪ್ರವೃತ್ತಿಗೆ ಅವರಲ್ಲಿ ಅವಕಾಶವಿದ್ದರೆ ಅವರು ಧರ್ಮಚ್ಯುತೆಯರಾಗಬಹುದೆಂದೂ, ನಮ್ಮ ಆರ್ಯಮಹಿಳೆಯರು ಅದನ್ನು ತಾವಾಗಿ ತಮ್ಮ ಸಂತೋಷದಿಂದಲೇ ತಮ್ಮ ಪುರುಷರ ವಿಚಾರಣೆಗೆ ಒಪ್ಪಿಸಿ ತಾವು ನಿರಾತಂಕದಿಂದ ಸ್ವಧರ್ಮ

ವನ್ನು ಸಂರಕ್ಷಿಸಿಕೊಂಡು ಬರುವುದೇಮೇಲೆಂದೂ ಇನ್ನೂ ಹ ಲವು ಬಗೆಯಾಗಿ ಹೇಳಿ ಅಡ್ಡಿ ಪಡಿಸುತ್ತಿದ್ದನು.

ಶಾಂತಿ—ಈಗಲೋ ? ಈಗ ಕುಮುದಮಿತ್ರನು ಏನೆನ್ನುವನು ? ನಿನ್ನ ಸ್ವಾಮಿ ಏನೆನ್ನುವರು ?

ರೋಹಿಣಿ—ಅವರು ಈ ವರೆಗೆ ತಾವು ಸಂಸಾರಿಕವಿಚಾರದಲ್ಲಿ ಶಾಂತಿಯಿಷ್ಟನ್ನೂ ಕಾಣದಿದ್ದುದಾಗಿಯೂ, ಈಗಲೀಗ ತಮಗೆ ಚಿತ್ತಶಕ್ತಿ, ಮನೋಲ್ಲಾಸಗಳುಂಟಾಗಿ ಸುಖಾನುಭವ ಮಾಡುತ್ತಿರುವುದಾಗಿಯೂ,ಇದೇ ಸುಖವೆ–ಈ ಶಾಂತಿಯೇ ನಿಜವಾದುದೆಂದೂ,ಈ ವರೆಗೆತೋರುತಿದ್ದುದೆಲ್ಲವೂ ಕನಸಿನ ಕನವರಿಕೆಯಂತೆ ಕೇವಲ ಹಾಹಾಕಾರಕ್ಕೆ ಬೇಕಾದುದಷ್ಟನ್ನು ಮಾತ್ರ ತೋರ್ಪಡಿಸುತ್ತಿದ್ದ ವಿದ್ಯಮಾನವೆಂದೂ ಹೇಳುವರು. ಮಗನು, ಈಗ ನನ್ನನ್ನೂ ಕುಮುದೆಯನ್ನೂ ನೋಡಿ, "ಇದೀಗ ನಿಜವಾದ ಅಭಿಮಾನ, ಈಗಲೀಗ ನೀವು ಯಥಾರ್ಥವಾಗಿ ಆರ್ಯನಾರಿಯರು ; ನಿಮ್ಮ ವಿದ್ವತ್ತೆಯ ಪ್ರಚಾರಕ್ಕೆ ಇದೇ ತಕ್ಕರೀತಿ.'' ಹೀಗೆಂದು ಹೇಳುತ್ತಿರುವನಲ್ಲದೆ ತಂದೆಯು "ಈಗಲೀಗ ಆರ್ಯಸಮಾಜಕ್ಕೆ ಅಲಂಕಾರಪ್ರಾಯರಾದ ಧೀರಪುರುಷರಾದರೆಂದೂ ಇನ್ನು ತಮ್ಮ ಮನೆತನವು ಉತ್ತಮೋತ್ತಮವೆನ್ನಿಸಿ ಸರ್ವತೋಮುಖವಾದ ಸ್ತುತಿಗೆ ಪಾತ್ರವಾಗುವುದೆಂದೂ, ಹಿಗ್ಗುತಿರುವನು.

ಅಜ್ಜಿ—ಅಹುದು, ತಾಯಿ! ಕುಮುದಮಿತ್ರನ ನುಡಿಯು ಸತ್ಯವಾದುದು. ಅದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಸ್ತ್ರೀಸಾಮಾನ್ಯ ಧರ್ಮವೇ ಅದು. ಹೆಂಗಸರು ಸ್ವೇಚ್ಛೆಯಿಂದ ನಡೆಯುವಂತೆ ಸ್ವತಂತ್ರವನ್ನು ಪಡೆದರೆ ಅವರಿಗೆ ಹೆಜ್ಜೆಹೆಜ್ಜೆಗೂ ವಿಪತ್ತುಗಳು ಅಡ್ಡಯಿಸಿ ಬರುವುವು. ಅವುಗಳಲ್ಲಿಯೂ ಹೆಂಗಸರ ಸರ್ವಸ್ವ

ವಾದ ಶೀಲ-ಸತ್ಕೀರ್ತಿಗಳನ್ನು ನುಂಗಲು ಬರುವ ವಿಪತ್ತುಗಳಂ ತೂ ಅತಿ ಭಯಂಕರದವುಗಳೇ ಸರಿ. ಒಂದುವೇಳೆ ಈ ಭಯಂ ಕರ ವಿಪತ್ತುಗಳುಂಟಾಗದೆ ಅವರು ಧೀಮತಿಯರೇ ಆಗಿದ್ದರೆಂದು ಭಾವಿಸುವಲ್ಲಿ ಕೂಡ, ಅವರಿಗೆ ಸ್ವಪ್ರತಿಷ್ಠಾ ಕಾಮನೆಯ ದುರ ಭಿಮಾನವೊಂದು ಬಲವಾಗಿ, ಸತೀಜನಕ್ಕೆ ಭೂಷಣವಾದ ವಿನಯ ಶೀಲತೆಯನ್ನು ನುಂಗಿ, ದೌರ್ಜನ್ಯದ ವಿಷವನ್ನು ತುಂಬುವುದು.

ಶಾಂತಿ—ಅಜ್ಜಿಯಮಾತು ಯಥಾರ್ಥವು. ಮೊದಲೇ,ದೌರ್ಜನ್ಯದ ಅಪ ವಾದವು ನಮ್ಮ ಸ್ತ್ರೀಜನಾಂಗವನ್ನು ಆಕ್ರಮಿಸಿಕೊಂಡಿರು ವುದು. ಅದರ ಆಕ್ರಮಣವನ್ನು ತಪ್ಪಿಸಿ ನಮ್ಮನ್ನು ನಿರ್ಮಲ-ನಿರ್ಬಾಧಿಕ - ಸ್ಥಾನದಲ್ಲಿ ಪ್ರಕಾಶಪಡಿಸುವ ಮಹತ್ಕಾರ್ಯದಲ್ಲಿ ಅವಿಶ್ರಾಂತರಾಗಿ ಆರ್ಯಮಹನೀಯರು ಹೊಡೆದಾಡುತ್ತಿರುವ ರು. ಈ ಸಂದರ್ಭದಲ್ಲಿ ನಾವು ಅವರ ಉದ್ದೇಶಸಾಫಲ್ಯವೆಸಿ ಸುವಂತೆ ಮಾಡಲು ನಮ್ಮನಮ್ಮ ಸ್ವರೂಪ-ಧರ್ಮಗಳ ಕಡೆಗೆ ನಾವು ಗಮನಿಸಿ, ಜಾಗರೂಕತೆಯನ್ನು ವಹಿಸದೆ ಹೋದರೆ,ನಮ್ಮ ಜನಾಂಗದ ವಿನಾಶಕಾಲವೇ ಸರಿ. ಅಕ್ಕ ! ನಿನಗೆ ನಾನೇನನ್ನೂ ಹೇಳಬೇಕಾದುದಿಲ್ಲ ; ಆದರೂ ಮಾತನಾಡುವಾಗ ಬಿಡೆಯಿಲ್ಲದೆ ಹೇಳಿಬಿಟ್ಟೆನು, ಕೋಪಿಸಬೇಡ.

ಸತೀಮಣಿ—ಕೋಪಿಸುವದಕ್ಕೆ ಅವರು ಮೂರ್ಖರಲ್ಲ! ತಂಗಿ, ನನ್ನ ಸ್ವಾಮಿಯು ನನಗೆ "ಸತಿಯರಿಗೆ ಸಾರಾಸಾರ ವಿವೇಚನೆ, ಕಾಲ-ದೇಶ ವರ್ತಮಾನಗಳ ಮತ್ತು ಪಾತ್ರಾಪಾತ್ರ ವಿಚಾರಗಳ ಜ್ಞಾ ನಗಳುಂಟಾಗಿರುವುದೇ ಪಾಂಡಿತ್ಯವಲ್ಲದೆ ಭಾಷಾಶಾಸ್ತ್ರ ಪರಿಶ್ರಮ ದಿಂದಲೇ ಪಾಂಡಿತ್ಯವುಂಟಾಗುವದಿಲ್ಲವೆಂದು" ಬೋಧಿಸುತ್ತಿದ್ದ ರು. ಅವರ ಬೋಧನೆಯ ಬಲದಿಂದಲೇ ನಾನು ಇಷ್ಟು ಕ್ಲೇಶ

ಗಳನ್ನೂ ಸಹಿಸಿಕೊಂಡು ಅವರ ಸ್ಮರಣೆಯಿಂದ ಜೀವಿಸುತ್ತಿರುವೆನು............

ಇಷ್ಟರಲ್ಲಿ ಮಹಡಿಯ ಹಂತದ ಕಡೆಯಿಂದ ಧ್ವನಿಯು ಹೊರಟಿತು. "ಅಜ್ಜಿ ! ಸಮಾಲೋಚನೆಯು ಸಾಂಗವಾಯ್ತೆ ? ನಮ್ಮನ್ನು ಒಳಗೆ ಬರಗೊಡುವಿರಾ ?"

ಸಮಾಲೋಚನೆಯಲ್ಲಿದ್ದ ಸಾಧ್ವಿಯರಿಗೆ ಈ ಮಾತು ಕೇಳಬರಲ್ಲ. ಆದರೆ ಅದೇ ನಿರೀಕ್ಷಣೆಯಲ್ಲಿದ್ದ ಮಧುಮಿತ್ರನಿಗೆ ಸ್ಪಷ್ಟವಾಗಿ ಕೇಳಿಸಿದುದರಿಂದ ಅವನು ಗಟ್ಟಿಯಾಗಿ ಕೂಗಿ ಹೇಳಿದನು.

"ಅಮ್ಮ! ನಮ್ಮ ಮಿತ್ರರು ಬಂದು ಹಂತದ ಬಳಿಯಲ್ಲಿ ನಿಂತು ಕಾದಿರುವರು. ಅವರಿಗೆ ಅವಕಾಶ ಕೊಟ್ಟರೆ—"

ಅಜ್ಜಿಯು ತಟ್ಟನೆ ಎದ್ದು ನಿಂತು—'ಓಹೋ ! ಆಗಲೇ ಅಯ್ದು ಗಂಟೆಯಾಗುತ್ತ ಬಂದಿತು.' ಎಂದು ಹೇಳಿ ಹೊರಹೊರಡಲು ಸಿದ್ಧವಾದಳು. ಉಳಿದ ಮೂವರೂ ಎದ್ದು ಮಧುಮಿತ್ರನಿಗೆ ಹೊರಡುವೆವೆಂದು ಹೇಳಿ ಅಜ್ಜಿಯ ಹಿಂದೆಯೇ ಹೊರಟರು. ಇವರು ಹಂತದ ಬಳಿಗೆ ಬರುವಷ್ಟರಲ್ಲಿ ಅಕ್ಷಯಕುಮಾರನು ಕಲಾಧರ, ಪ್ರಭಾಕರ, ಕುಮುದಮಿತ್ರರೊಡನೆ ಮುಂದೆ ಬಂದು ಸಂತೋಷದಿಂದ ಕಯ್ಜೋಡಿಸಿ-ನಮಸ್ಕರಿಸಿದನು. ಅಜ್ಜಿಯು ನಾಲ್ವರನ್ನೂ ಆಶೀರ್ವದಿಸಿ ಹೊರಟುಹೋದಳು.

ಅಕ್ಷಯಕುಮಾರ ಪ್ರಭೃತಿಗಳು ಬಂದು ಮಧುಮಿತ್ರನ ಕಿರುಮನೆಯೊಳಹೊಕ್ಕರು. ಮಧುಮಿತ್ರನು ಸಂಭ್ರಮದಿಂದ ಎದ್ದು ಮುಂದೆ ಬಂದು ಹಸ್ತಲಾಘವಪೂರ್ವಕವಾಗಿ ಮಿತ್ರರ ಸುಖಾಗಮನವನ್ನು ಕೋರಿದನು. ಅಯ್ವರೂ ಪರಸ್ಪರ ಸ್ನೇಹಾಧಿಕ್ಯದಿಂದ ಬೆನ್ನಮೇಲೆ ಅಪ್ಪಳಿಸಿ ನಗುತ್ತ ಮಂಚದಮೇಲೆ ಕುಳಿತರು. ಮಿತ್ರರಯ್ವರ ಸುಖಗೋಷ್ಟಿಯಲ್ಲಿ ಸಂಭಾಷಣೆಗೆ ಮೊದಲಾಯಿತು.

ಮಧು—ಅಕ್ಷಯಕುಮಾರ ! ಇದೇನಿದು, ಇಷ್ಟು ವಿಳಂಬವಾಯಿತು ? ಈ ಮಿತ್ರನನ್ನು ಮರೆತಿದ್ದಿರೋ ? ಅಥವಾ ನಮ್ಮ ಕಲಾಧವ ಕುಮಾರನೇನಾದರೂ ಬರಲೊಲ್ಲನೆಂದು ಹಟ ಹಿಡಿದು ನಿಂತಿದ್ದನೋ-? ಹೇಗೆ ?

ಕಲಾಧವ— ಕಲಾಧವನ ಮೇಲೇಕೆ ವೃಥಾರೋಪಣೆಯನ್ನು ಮಾಡುವೆ ? ಈಗ ಇವನು ನಿನ್ನಲ್ಲಿ ಉದಾಸೀನವನ್ನು ತೋರುತ್ತಿರುವನೆಂದು ಹೇಳಲು ಪ್ರಮಾಣವೇನಾದರೂ ಇರುವುದೋ ?

ಮಧು—ಕಲಾಧವಕುಮಾರ ! ಕ್ಷಮಿಸು, ನನ್ನ ಭಾವನೆ ತಪ್ಪಾಗಿರಬಹುದು. ಆದರೆ ಮತ್ತಾವಕಾರಣ ?

ಪ್ರಭಾಕರ—ನಗುತ್ತ-ಕಾರಣವೋ ? ಮಧುಮಿತ್ರನು ಮಧುಪಾನದಿಂದ ಉನ್ಮತ್ತನಾಗಿ,-ಮಧುಪವೃತ್ತಿಯಲ್ಲಿ ತಲ್ಲೀನನಾಗಿ ಹೋಗಿರಬಹುದೆಂದೂ, ಈ ವೇಳೆಯಲ್ಲಿ ನಾವು ಅವನನ್ನು ನೋಡುವುದರಿಂದ ಅವನ ಏಕಾಂತ ಸುಖಕ್ಕೆ ಆತಂಕವಾಗಬಹುದೆಂದೂ ಭಾವಿಸಿ ಸುಮ್ಮನಿದ್ದೆವು. ಮತ್ತೇನು ?

ಮಧು.—ಪ್ರಭಾಕರನ ಬೆನ್ನುತಟ್ಟಿ'-ಪ್ರಭಾಕರ ! ನೀನು ಒಳ್ಳೆ ಮಾರ್ಮಿಕನೂ ವಾಗ್ಮಿಯೂ ಆದ ಪಂಡಿತನೇ ಸರಿ ! ಆದರೆ, ಹೀಗೆ ಹಿಂದೆ ನಡೆದುಹೋದ ವಿಚಾರವನ್ನು ನೆನಪಿಗೆ ತಂದು ನನ್ನನ್ನು ನೋಯಿಸಬಾರದೆಂದು ನಾನು ಪ್ರಾರ್ಥಿಸುವೆನು.

ಕುಮುದಮಿತ್ರ—ಮತ್ತೆ ಮತ್ತೆಯು ಒತ್ತಿ ಒತ್ತಿ ಹೇಳದಿದ್ದರೆ ಚಿತ್ತಶುದ್ಧಿಯಾಗುವದು ಹೇಗೆ ?

ಕಲಾಧವ—ನಿಜ ! ಕೆತ್ತಿಸಿಕೊಳ್ಳದೆ ವಿಗ್ರಹವಾಗಲಾರದು. ಸುತ್ತಿಗೆಯಪೆಟ್ಟು ತಿನ್ನದೆ-ಸುಡಿಸಿಕೊಳ್ಳದೆ ಚಿನ್ನ ಬೆಳ್ಳಿಗಳು ತೊಡವೆನ್ನಿಸವು. ಹಾಗೆಯೇ ನಮ್ಮ ವಿಚಾರವೂ ಆಗಿದೆ.

ಅಕ್ಷಯ—ಒಪ್ಪಬೇಕು; ಸಾರಾಸಾರವಿವೇಚನೆ ಮನಸ್ಥೈರ್ಯಗಳುಂಟಾಗುವವರೆಗೂ ನಾವು ಕಾಡುಕಲ್ಲುಗಳು;-ಇಂತಹ ನಾವು ಸಲಕ್ಷಣಗಳಾದ ಮೂರ್ತಿಗಳಾಗಲು ಮಾಡುವ-ಎಂದರೆ ನಮ್ಮ ಹಿರಿಯರು ನಮ್ಮ ನಮ್ಮ ತಪ್ಪುಗಳನ್ನು ಎತ್ತಿ ತೋರಿಸಿ, ನಮ್ಮನ್ನು ಪರಿಶುದ್ಧಮಾರ್ಗದಲ್ಲಿ ನಿಲ್ಲಿಸಬೇಕೆಂಬ ಉದ್ದೇಶದಿಂದ ಸಾಮ-ದಾನ-ದಂಡ ನೀತಿಗಳನ್ನು ಅನುಸರಿಸಿ ಕೊಡುವ,ಶಿಕ್ಷಣವೇ ನಮ್ಮನ್ನು ಮೂರ್ತ ಸ್ವರೂಪಕ್ಕೆ ತರುವ ಸುತ್ತಿಗೆಯ ಪೆಟ್ಟುಗಳು. ಆ ಶಿಕ್ಷಣವನ್ನು ಕೊಡಲು ಹಿತೈಷಿಗಳಾದ ಮಿತ್ರರೂ ಬಾಧ್ಯರು.

ಮಧು—ಹಾಗಿದ್ದರೆ ಮತ್ತೆಮತ್ತೆಯೂ ಕೆತ್ತಿ ಕೆತ್ತಿ ಸುಸ್ವರೂಪಕ್ಕೆ ತನ್ನಿರಿ, ಬೇಡವೆನ್ನುವದಿಲ್ಲ. ಅದುಸರಿಯೆ, ಅಕ್ಷಯಕುಮಾರ! ನಳಿನೀಕಾಂತನ ವಿಚಾರವೇನಾಯಿತು ?

ಕುಮುದ—ಏಕೆ? ಪುನಃ ರಕ್ತಾಕ್ಷಿಯಬಳಿಗೆ ಕರೆದೊಯ್ಯಬೇಕೆಂದೊ ?

ಕಲಾ—ಆ ಮಾತನ್ನೆತ್ತಿ ಹೃತ್ತಾಪವನ್ನು ಹೆಚ್ಚಿಸಬೇಡ, ಅದೆಲ್ಲವನ್ನೂ ಮರೆತುಬಿಡು.

ಕುಮುದ—ನಗುತ್ತ-'ಓಹೋ ! ನೀನು ಸಹಾಯಕನಾಗಿ ಬಂದೆಯೋ ? ಹಾಗಾದರೆ ಇಷ್ಟಕ್ಕೆ ಅದನ್ನು ಬಿಟ್ಟುಬಿಟ್ಟೆನು. ಇನ್ನು ಮುಂದೆಯಾದರೂ ಎಚ್ಚರದಿಂದರಲಿ! ನಳಿನೀಕಾಂತನ ಸಹವಾಸ ಮಾಡುವದಿಲ್ಲವೆಂದು ಶಪಥಮಾಡಲಿ ! (ನಗುತ್ತಾ) ಅವನು ಇಲ್ಲಿದ್ದರಲ್ಲವೆ ಸಹವಾಸದ ಚಿಂತನೆ ! ಪಾಪ! ಅವನು ದೇಶಭ್ರಷ್ಟನಾಗಿ ಹೋಗಲು ನಾನೇ ಕಾರಣನಾದೆನು.

ಮಧು—ಏನು? ದೇಶಭ್ರಷ್ಟನಾದನೆ ? ನಿರ್ಧಾರವಾಯಿತೆ ? ಹೇಗೆ ?

ಕುಮುದ—ಹೇಗೆಂದರೆ ಅವನು ತಾನು ಈಗ ವಿರಕ್ತಸನ್ಯಾಸವೇಷವನ್ನು

ಧರಿಸಿ ದೇಶಯಾತ್ರೆಗೆ ಹೊರಟಿರುವದಾಗಿ ಅವನಿಂದ ಊರು, ತಿಥಿ, ವಾರಗಳೊಂದೂ ತಿಳಿಯದ ಒಂದು ಪತ್ರವು ನನಗೆ ಈ ದಿನವೇ ಬಂದಿದೆ.

ಕಲಾ—(ಪ್ರಭಾಕರನ ಕಡೆಗೆ ತಿರುಗಿ)-''ಮಿತ್ರ! ನೀನು ಇದಿರುಗೊಳ್ಳಲಿಕ್ಕೆಂದು ಹೋಗಿದ್ದೆಯಲ್ಲ, ಆಯಿತೇ—

ಪ್ರಭಾ—ಇಲ್ಲ, ಅವನು ಅಷ್ಟರಲ್ಲಿ ರೈಲಿನಿಂದ ಬಂದು ಮತ್ತೆಲ್ಲಿಗೋ ಹೋಗಿದ್ದನು.

ಮಧು—ಇದಿರಿಗೊಳ್ಳುವುದಾರನ್ನು ?

ಪ್ರಭಾ—ನಮ್ಮ ರಸಿಕಾಗ್ರೇಸರ ಚಕ್ರವರ್ತಿಯನ್ನು !

ಮಧು—ಹಾಗೆಂದರೆ ಯಾರೆಂಬುದು ತಿಳಿಯಲಿಲ್ಲ.

ಪ್ರಭಾ—ಮತ್ತಾರು ? ನಮ್ಮ ಬೃಹತ್ಸೇನಕುಮಾರನೇ.—

''ಆಗಲಿ ಆಗಲಿ, ನಾನೇ ರಸಿಕಾಗ್ರೇಸರ ಚಕ್ರವರ್ತಿ ! ಚಕ್ರವರ್ತಿಗೆ ಇಷ್ಟುನುಟ್ಟಿಗೆ ಸನ್ಮಾನವಾಯಿತಲ್ಲ!! ಭೇಷ್!-''

ಹೊರಗಿನಿಂದ ಹೊರಟುಬಂದ ಉತ್ತರದಿಂದ ಕುಳಿತಿದ್ದವರೆಲ್ಲರೂ ಬೆಜ್ಜರಗೊಂಡು ಸುತ್ತಲೂ ನೋಡಿದರು. ಯಾರೂ ಕಾಣಲಿಲ್ಲ. ಪ್ರಭಾಕರನು ತಲೆದೂಗಿ ನಕ್ಕು 'ಆಗಲಿ, ರಸಿಕಾಗ್ರೇಸರನೆಂದರೆ ಸಾಲದು. ತಂತ್ರಶಿರೋಮಣಿಯೆನ್ನಿಸಬೇಕೆಂದಲ್ಲವೆ ಅಭಿಮತವು' ಎಂದು ಹೇಳುತ್ತ, ಎದ್ದು ಬಂದು ಕಿರುಮನೆಯ ಹೊರಗಡೆಗೆ ಬಂದು ನಾಲ್ಕು ಕಡೆಯನ್ನೂ ನೋಡಿದನು; ಒಂದು ಕಂಬದ ಮರೆಯಲ್ಲಿ ನಿಂತಿದ್ದ ಮೋಜುಗಾರ ತರುಣನನ್ನು ನೋಡಿದನು. ತರುಣನು ಇದೇ ತಲೆಯನ್ನು ಚನ್ನಾಗಿ-ನುಣ್ಣಗೆ ಬಾಚಿ, ಓರೆ ಬೈತಲೆಯನ್ನು ತಿದ್ದಿ, ಹಣೆಗೆ ಹುಬ್ಬಿನ ನಡುವೆ ಸಣ್ಣ ಸಾದಿನ ಬಟ್ಟೆರಿಸಿಕೊಂಡು, ತಾಂಬೂಲರಾಗದಿಂದ ತುಟಿಗಳನ್ನು ರಂಜನಗೊಳಿಸಿಕೊಂಡಿದ್ದನಲ್ಲದೆ ಬಲಗಯ್ಯಲ್ಲಿ ಸಣ್ಣಗಿರುವ ಬೆತ್ತವನ್ನೂ,

ಎಡಗೈಯ್ಯಲ್ಲಿ ತಲೆಗೆ ಹಾಕಿಕೊಂಡಿದ್ದ ಟೊಪ್ಪಿಗೆಯನ್ನೂ ಹಿಡಿದು ಅಚ್ಚ ಟೊಪ್ಪಿಗೆ ಸಾಹೇಬರಂತೆ ಉಡುಪನ್ನು ಧರಿಸಿ ಮೆರೆಯುತ್ತಿರುವುದನ್ನು ಕಂಡು ಪ್ರಭಾಕರನು ತಲೆದೂಗಿ ನಕ್ಕು ನಿಂತಿದ್ದವನ ಕೊರಳಮೇಲೆ ಕಯ್ಯಿರಿಸಿ, ನಗುತ್ತ-'ಸಾಹೇಬರೇ ! ಬರಿಗಾಲಿಂದ ಬಂದಿರುವಂತಿದೆ ! ಹಾಗೇಕೆ ? ಅಗ್ನಿಹೋತ್ರವನ್ನು ಮಾಡುತ್ತಿರುವಿರೋ ? ಇಲ್ಲ-ಬಿಟ್ಟು ಬಿಟ್ಟಿರುವರೋ ?

ತರುಣ—ಅಹುದಯ್ಯ, ನೀವು ವೈದಿಕಸಾರ್ವಭೌಮರಾಗಿರುವಿರಿ. ನಿಮ್ಮನ್ನು ನೋಡಲು ಬರಬೇಕಾದರೆ ಬೂಟುಗಳನ್ನು ಬಿಟ್ಟು ಬರಬೇಕಾಯ್ತಲ್ಲವೆ ? ಅಗ್ನಿಹೋತ್ರವೆಂದರೆ ಅದನ್ನು ಹೇಗೆ ಬಿಡಲಾದೀತು ? ಈಗಿನ ಸೋಮಯಾಜಿ ವಂಶದವರು, ದೀಕ್ಷಿತವರ್ಗದವರು, ಅವಧಾನಿಗಳು, ಸಿದ್ಧಾಂತಿಗಳು ಮೊದಲಾದವರೆಲ್ಲಾ ಈಗ ಉಂಡಾಡಿಭಟ್ಟರಾಗಿ ಹೊಟ್ಟೆಹೊರೆಯುತ್ತಿರುವವರಾದರೆ, ಅಗ್ನಿಹೋತ್ರ. ಸೋಮಪಾನಗಳನ್ನು ಪಾಲಿಸುವವರಾರು ?ಅವು ಅನನ್ಯ ಶರಣ್ಯಾಭಾವದಿಂದನಮ್ಮನ್ನೇ ಆಶ್ರಯಿಸಿದವು. ಮತ್ತೇನು?

ಇಷ್ಟರಲ್ಲಿ ಕಿರುಮನೆಯಲ್ಲಿ ಕುಳಿತಿದ್ದ ಕುಮುದಮಿತ್ರನು ಅಲ್ಲಿಗೆ ಬಂದು ಇಬ್ಬರನ್ನೂ ತನ್ನೆರಡು ತೋಳುಗಳಿಂದ ಬಿಗಿದಪ್ಪಿ, 'ಬನ್ನಿರಿ, ಸಾಹೇಬರೆ-ವೈದಿಕಮಹಾಶಯರೆ' ಎಂದು ಹೇಳುತ್ತ ಇಬ್ಬರನ್ನೂ ತ್ವರೆಗೊಳಿಸಿ ಕರೆತಂದು ಅಕ್ಷಯ ಕಲಾಧರವರ ಮುಂದೆ ನಿಲ್ಲಿಸಿ ಹಾಸ್ಯದಿಂದ ಹೇಳಿದನು.-"ಏಕೆ ನೋಡುವಿರಿ ? ಮಿತ್ರರೆ ! ತಿಳಿಯಲಿಲ್ಲವೆ ? ಇವರೇ ರಸಿಕಾಗ್ರೇಸರಚಕ್ರವರ್ತಿ ಮಹಾಶಯರಾದ ಬೃಹತ್ಸೇನಮಹಾರಾಜರು! ಹೀಗೇಕೆ ನೋಡುವಿರಿ ? ಸ್ವಾಗತಿಸುವದಿಲ್ಲವೆ ? "

ಪ್ರಭಾಕರ—ನಾನೇ ನಿಮ್ಮೆಲ್ಲರ ಪ್ರತಿನಿಧಿಯಾಗಿ ಸ್ವಾಗತವನ್ನು ಕೋರಿರುವೆನು. ಸಾಹೇಬರು ಅದಕ್ಕೆ ಪ್ರತಿಯಾಗಿ ನಿಮ್ಮಲ್ಲಿ ನಾನು

ಭೂತಿಯನ್ನು ಪ್ರದರ್ಶಿಸಲು ಬಂದಿರುವರು; (ಬೃಹತ್ಸೇನನ ಕಡೆ ತಿರುಗಿ) ಏಕೆ ನಿಂತಿರುವಿರಿ ? ಸಾಹೇಬರೇ ? ಕುಳಿತುಕೊಳ್ಳಲು ಇದು ಸರಿಯಾದ ಸ್ಥಾನವಲ್ಲವೆ ? ಅಥವಾ ಇವರಾರೂ ಸಮಾನ ಪಾತ್ರರಲ್ಲವೊ ?

ಬೃಹತ್ಸೇನ—ಕೊರಳುಕೊಂಕಿಸಿ-ಹಾಗೆಂದೇ ಹೇಳು, ಬಾಧಕವೇನು ? ಸಮಾನ ಪಾತ್ರರಲ್ಲವೆಂದು ಹೇಳಬೇಕೊ ? ನೀವು ಶುದ್ಧ ಬ್ರಹ್ಮಚಾರಿಗಳು, ನಾನು ಬ್ರಹ್ಮಚರ್ಯವ್ರತದಿಂದ ಕೃತಸ್ನಾತನಾಗಿ ಮುಂದೆ ಬಂದಿರುವೆನು. ಅಸ್ಥಾನವೆಂಬುದಕ್ಕೆ ಕೂಡ ಉತ್ತರ ವಿಲ್ಲದಿಲ್ಲ, ಅದೇನೆಂದೆಯೊ ? ವೇಳೆ, ಗುಣ, ಪಾತ್ರ, ಸುತ್ತ ಮುತ್ತಲ ಸ್ಥಿತಿಗಳನ್ನು ನೋಡದೆ ಮಂಚದ ಮೇಲೆ ಕುಳಿತು ಕೊಂಡೇನು ಫಲ ?

ಕುಮುದಮಿತ್ರ—ಬೃಹತ್ಸೇನ ! ತಡೆದುಹೇಳು, ನಾಲಿಗೆಯನ್ನು ಅಷ್ಟು ಸಡಲಿಸಿ ಬಿಡಬೇಡ.

ಬೃಹ—ನಾಲಿಗೆಯನ್ನು ತಡೆಯಲೇಕೆ ಕುಮುದ ? ಅಂತಹ ಹಂದೆ ತನವು ನನಗೀ ಜನ್ಮನಲ್ಲಿಯೇ ಬರುವಂತಿಲ್ಲ. ಅದಿರಲಿ, ಪ್ರಭಾಕರ! ನೀನೇನು ಈಗಾಗಲೇ ಒಂದು ತೊಡಕಿಗೆ ಬಿದ್ದೆಯಂತೆ ! ಅದೆಂತಹುದು ? ಕಾಡುಬಳ್ಳಿಯದೊ ! ಅಥವಾ ಚಿನ್ನಬೆಳ್ಳಿಯದೊ ?

ಪ್ರಭಾ—ಚಿನ್ನಬೆಳ್ಳಿಯವಾದರೆ ಅವಕ್ಕೆ ಕಳ್ಳಕಾಕರ, ಪುಂಡು ಪೋಟರ ಭಯವುಂಟು. ಕಾಡುಬಳ್ಳಿಗೆ ಭಯವೇ ಇಲ್ಲ, ನನ್ನ ತೊಡಕು, ಮನೋಜಯನಂದನದಲ್ಲಿ, ನಿರ್ಮಲಪ್ರದೇಶದಲ್ಲಿ, ವನಲಕ್ಷ್ಮಿಯು ಪ್ರೀತಿಪಾತ್ರವಾಗಿ ಬೆಳೆಯಿಸಿದ ಲತಾವಿಶೇಷವು. ಅದು ಕೂಡ, ಸ್ವೇಚ್ಛೆಯಿಂದ ತೊಡಕಿಕೊಳ್ಳಲಿಲ್ಲ. ವಿಧಿಪೂರ್ವಕವಾಗಿ ನಿರ್ಮಾಪಕರ ಆಜ್ಞಾನುಸಾರವಾಗಿ—

ಭೂತಿಯನ್ನು ಪ್ರದರ್ಶಿಸಲು ಬಂದಿರುವರು; (ಬೃಹತ್ಸೇನನ ಕಡೆ ತಿರುಗಿ) "ಏಕೆ ನಿಂತಿರುವಿರಿ ? ಸಾಹೇಬರೇ ? ಕುಳಿತುಕೊಳ್ಳಲು ಇದು ಸರಿಯಾದ ಸ್ಥಾನವಲ್ಲವೆ ? ಅಥವಾ 'ಇವರಾರೂ ಸಮಾನ ಪಾತ್ರರಲ್ಲವೊ ?

ಬೃಹತ್ಸೇನ—ಕೊರಳುಕೊಂಕಿಸಿ-"ಹಾಗೆಂದೇ ಹೇಳು, ಬಾಧಕವೇನು ? ಸಮಾನ ಪಾತ್ರರಲ್ಲವೆಂದು ಹೇಳಬೇಕೊ ? ನೀವು ಶುದ್ಧ ಬ್ರಹ್ಮಚಾರಿಗಳು, ನಾನು ಬ್ರಹ್ಮಚರ್ಯವ್ರತದಿಂದ ಕೃತಸ್ನಾತನಾಗಿ ಮುಂದೆ ಬಂದಿರುವೆನು. ಅಸ್ಥಾನವೆಂಬುದಕ್ಕೆ ಕೂಡ ಉತ್ತರ ಇಲ್ಲದಿಲ್ಲ, ಅದೇನೆಂದೆಯೊ ? ವೇಳ, ಗುಣ, ಪಾತ್ರ, ಸುತ್ತಮುತ್ತಲ ಸ್ಥಿತಿಗಳನ್ನು ನೋಡದ ಮಂಚದ ಮೇಲೆ ಕುಳಿತುಕೊಂಡೇನು ಫಲ ?

ಕುಮುದಮಿತ್ರ—ಬೃಹತ್ಸೇನ ! ತಡೆದುಹೇಳು, ನಾಲಿಗೆಯನ್ನು ಅಷ್ಟು ಸಡಲಿಸಿ ಬಿಡಬೇಡ.

ಬೃಹ—ನಾಲಿಗೆಯನ್ನು ತಡೆಯಲೇಕೆ ಕುಮುದ ? ಅಂತಹ ಹಂದೆ ತನವು ನನಗೀ ಜನ್ಮದಲ್ಲಿಯೇ ಬರುವಂತಿಲ್ಲ. ಅದಿರಲಿ, ಪ್ರಭಾಕರ! ನೀನೇನು ಈಗಾಗಲೇ ಒಂದು ತೊಡಕಿಗೆ ಬಿದ್ದಿಯಂತೆ ! ಅದೆಂತಹುದು ? ಕಾಡುಬಳ್ಳಿಯದೊ ! ಅಥವಾ ಚಿನ್ನಬೆಳ್ಳಿಯದೊ ?

ಪ್ರಭಾ—ಚಿನ್ನಬೆಳ್ಳಿಯದಾದರೆ ಅವಕ್ಕೆ ಕಳ್ಳಕಾಕರ, ಪುಂಡು ಪೋಟರ ಭಯವುಂಟು. ಕಾಡುಬಳ್ಳಿಗೆ ಭಯವೇ ಇಲ್ಲ, ನನ್ನ ತೊಡಕು, ಮನೋಜಯನಂದನದಲ್ಲಿ, ನಿರ್ಮಲಪ್ರದೇಶದಲ್ಲಿ, ವನಲಕ್ಷ್ಮಿಯು ಪ್ರೀತಿಪಾತ್ರವಾಗಿ ಬೆಳೆಯಿಸಿದ ಲತಾವಿಶೇಷವು. ಅದು ಕೂಡ, ಸ್ವೇಚ್ಛೆಯಿಂದ ತೊಡಕಿಕೊಳ್ಳಲಿಲ್ಲ. ವಿಧಿಪೂರ್ವಕವಾಗಿ ನಿರ್ಮಾಪಕರ ಆಜ್ಞಾನುಸಾರವಾಗಿ—

ನಾನಾಗಿದ್ದರೆ ಹೀಗೆ ಮಾಡುತ್ತಿರಲಿಲ್ಲ. ಅಂತಹ ಕಾಯಿಲೆಗ ಳಿಗಾಗಿಯೇ ಲಕ್ಷಗಟ್ಟಲೆಯ ವೈದ್ಯರು ಪ್ರಸಿದ್ಧರಾಗಿರುವರು. ಪ್ರತಿ ಯೊಂದು ಪತ್ರಿಕೆಯಲ್ಲಿಯೂ ನೂರಾರು ಔಷಧಗಳ ಹೆಸರು ದೊರೆ ಯುವುವು........

ಅಕ್ಷಯ—ಬೃಹತ್ಸೇನ ! ನಿನ್ನ ಹೆಸರನ್ನು ಉಳಿಸಿಕೊಳ್ಳುವ ಯೋಚನೆ ಮಾಡು. ಈವರೆಗೆ ಕೆಡಿಸಿಕೊಂಡಿರುವುದು ಸಾಕು. ಹಾಳು ಪ್ರಕಟನೆಗೆ ಹಿಗ್ಗಿ, ಸಿಕ್ಕಿದ ಕುತ್ಸಿತ ವೈದ್ಯರ ಸಹಾಯವನ್ನು ಸಂಪಾದಿಸಿ, ಸರ್ವನಾಶಕರವಾದ ಹೇಯವೃತ್ತಿಗೆ ಹೋಗುವುದು ಸರಿಯಲ್ಲ. ಮಧುಮಿತ್ರನಿಗೆ ಮೊದಲು ಬುದ್ಧಿಮಾಂದ್ಯವಾಗಿ ದ್ದಿತಾದರೂ ಅವನು ಬುದ್ಧಿ ತಿಳಿದೇ ಇಲ್ಲಿಗೆ ಬಂದು ಸೇರಿ ಬದು ಕಿದನು, ನಿನ್ನ ಕರ್ತವ್ಯವೂ ಅದೇ ಆಗಿರುವುದು.

ಕಲಾಧವ—ಬೃಹತ್ಸೇನ ! ನಾನು ನಿನಗೆ ಇದೇ ಪರಿಚಿತನಾದವನು. ನನ್ನ ಮಾತಿನಲ್ಲಿ ನಿನಗೆ ಆದರವುಂಟಾಗದಿರುವದೇನೂ ಅತಿಶಯ ವಲ್ಲ; ಹಾಗೆಂದೂ ನಾನು ಸುಮ್ಮನಿರುವಂತಿಲ್ಲ. ನನ್ನ ಕರ್ತ ವ್ಯವನ್ನು ನಾನು ಮಾಡಲೇಬೇಕು.

ಬೃಹ—ಪ್ರಸ್ತಾವನೆ ಮುಗಿದಿದ್ದರೆ ಕರ್ತವ್ಯವೇನೋ ಅದನ್ನು ಮಾಡ ಬಹುದು.

ಕಲಾ—ಕರ್ತವ್ಯವೆಂದರೆ ಪ್ರಾರ್ಥಿಸುವದು! ಕೇವಲ ನಮ್ರಭಾವದಿಂದ ಬೇಡಿಕೊಳ್ಳುವೆನು,-ನಮ್ಮ ಆರ್ಯಧರ್ಮವನ್ನು ಊರ್ಜಿತಪಡಿ ಸುವ ಕೆಲಸವು ನಮ್ಮ ಪಾಲಿಗೆ ಬಿದ್ದಿರುವುದು. ಹೀನ-ದುರ್ಬ ಲಸ್ಥಿತಿಯಲ್ಲಿರುವ ನಮ್ಮ ದೇಶಮಾತೆಯನ್ನು ಉನ್ನತಸ್ಥಿತಿಗೆ ತರಲು ನಾವೇ ಮುಂದೆ ನಿಲ್ಲಬೇಕು. ಹಾಗೆ ನಿಲ್ಲಬೇಕಾದರೆ ನಾವು ದೃಢಕಾಯರೂ, ಜಿತೇಂದ್ರಿಯರೂ ಧೀಮಂತರೂ ಆಗಿರ

ಬೇಕು. ಹಾಗಾಗುವುದಕ್ಕೆ ಈ ನಮ್ಮ ಗುರುಕುಲವಾಸ, ಬ್ರಹ್ಮ ಚರ್ಯೆ, ವಿದ್ಯಾಭ್ಯಾಸ-ಇವೇ ಮೂಲಮಂತ್ರಗಳು. ಈ ಮಂತ್ರವು ನಮಗೆ ಅಜ್ಞಾನತಿಮಿರಾಂಧಕಾರ ವಿಧ್ವಂಸರಾದ ಸದ್ಗುರುಗಳ ಅನುಗ್ರಹವನ್ನೇ ಆಶ್ರಯಿಸಿರುವುದರಿಂದ ನಾವು ಸರ್ವಪ್ರಯತ್ನದಿಂದಲೂ ಅಂತಹ ಸದ್ಗುರುಗಳನ್ನು ಸಂಪಾದಿಸಬೇಕು. ನಾವು ನೋಡಿದುದರಲ್ಲಿ ಅಂತಹ ಗುರುರಾಜರೆಂದರೆ, ನಮ್ಮ ಗುರುಗಳೇ! ನೀನೂಕೂಡ ಗುರುಸನ್ನಿಧಿಯಲ್ಲಿ ಆಶ್ರಯವನ್ನು ಹೊಂದಬೇಕೆಂಬುದೇ ನನ್ನ ಪ್ರಾರ್ಥನೆ.

ಪ್ರಭಾಕರ—ನಾನು ಅದನ್ನು ಅನುಮೋದಿಸಿರುವೆನು.

ಬೃಹ—ನೀನು ಅನುಮೋದಿಸಿದ್ದರೆ ಅದನ್ನು ಅನುಸರಿಸುವವರು ಅನುಸರಿಸಲಿ! ಭ್ರಮರನ್ಯಾಯದಲ್ಲಿ ವರ್ತಿಸುತ್ತಿರುವ ನನಗೇಕೆ, ಆ ಮಾತು ?

ಮಾಘ—ಅಣ್ಣಾ! ನನ್ನ ಪ್ರಾರ್ಥನೆಯೊಂದು! ಭ್ರಮರನ್ಯಾಯದಲ್ಲಿ ನಾನೂ ವರ್ತಿಸಿ ನೋಡಿರುವೆನು. ಅದರಲ್ಲಿ ಅಷ್ಟಕ್ಕಷ್ಟಕ್ಕೂ ಯಾತನೆಗಳೇಇವೆಯಲ್ಲದೆ, ಶಾಂತಿ-ಸಂತೋಷಗಳ ಆಶೆಯೇ ಇಲ್ಲದೆ ಅಂಧಕಾರದಲ್ಲಿ ಸಿಕ್ಕಿದಂತೆ ಕೊರಗಿ ಕೊರಗಿ ಕಡೆಗೆ ಇಲ್ಲಿಗೆ ಬಂದೆನು. ಈಗ ನನ್ನ ಅಂಧಕಾರದ ಅಂತಸ್ತಾಪವೆಲ್ಲಾ ನಿವಾರಣೆಯಾಯಿತು; ಈಗ ನನ್ನ ಮನಸ್ಸು ಪ್ರಸನ್ನವಾಗಿ, ತಾಯಿ-ತಂದೆ-ಗುರು, ಬಂಧು ಮಿತ್ರರ ಆಪ್ತ ವಾಕ್ಯವನ್ನು ಸಂಗ್ರಹಿಸುವುದರಲ್ಲಿಯೇ ಉತ್ಸುಕವಾಗಿರುತ್ತದೆ. ಇವೆಲ್ಲವೂ ಕಲಾಧವನು ಹೇಳಿದಂತೆ ಗುರುಕೃಪೆಯಿಂದಾದುದು. ಆದುದರಿಂದ ಆ ಗುರುಕೃಪೆಯನ್ನು ಹೊಂದಲು ನೀನು ಪ್ರಯತ್ನಪಡಬೇಕಲ್ಲದೆ ತೃಷ್ಣಾತುರದಲ್ಲಿ ಬಿದ್ದು ವ್ಯರ್ಥಜೀವಿಯೆನ್ನಿಸಬಾರದು.

ಬೃಹ--ಅಷ್ಟಕ್ಕೆ ತಡೆದು, ಕರ್ಕಶಸ್ವರದಿಂದ ಆಂಗ್ಲಭಾಷೆಯಲ್ಲಿ ಮನಸ್ಸಿ ಬಯ್ಯುತ್ತ ಸರ್ರನೆ ತಿರುಗಿ "ಪ್ರಭಾಕರ! ಬಾಲ್ಯಮಿತ್ರನನ್ನು ನೋಡಬಂದ ನನಗೆ ಸನ್ಮಾನವಿದೇ ಸಾಕಾಯಿತು. ನನಗೀ ಅನಾಗರಿಕರ-ಶುದ್ಧಮೂರ್ಖರಾದವರ-ಸಂಭಾಷಣೆ ಬೇಕಾಗಿಲ್ಲ. ನನ್ನನ್ನು ಗೌರವಿಸುವುದಕ್ಕೇನು ? ಎಂತೆಂತಹ ಸಮರ್ಥ ವಿದ್ವನ್ಮಣಿಗಳೆಲ್ಲರೂ ಗೌರವಿಸುತ್ತಾರೆ. ನಿಮಗಿದೋ ನಮಸ್ಕಾರ,-ನಮಸ್ಕಾರ!" ಎಂದುಹೇಳಿ ಹೊರಟು ಹೋದನು.

ಕಲಾ—ಸಂಭಾಷಣೆಯು ಮುಗಿಯುವುದಕ್ಕೆ ಮೊದಲೇ ಹೊರಟು ಹೋದನು.

(ಪ್ರಭಾಕರನು ಕೂಗಿದನು. ಬೃಹತ್ಸೇನನು ಹಿಂದಿರುಗಲಿಲ್ಲ.)

ಕುಮುದ—ನಕ್ಕು "ಹೋಗು ಹೋಗು ! ನಿನ್ನನ್ನು ಹಿಡಿದು ಕಟ್ಟಿ ಗುರುಪಾದದಲ್ಲಿ ಕೆಡಹದೆ ಬಿಡುವವನು ನಾನಲ್ಲ." ಎಂದು ಗಟ್ಟಿಯಾಗಿ ಕೂಗಿ ಹೇಳಿದನು.

(ಆಗಲೂ ಬೃಹತ್ಸೇನನು ಹಿಂತಿರುಗದೆ "ಹಾಗೆಯೇಮಾಡು" ಎಂದು ಹೇಳಿ ಹೊರಟುಹೋದನು.)

ಕಲಾ—-ನಿನ್ನ ಪ್ರತಿಜ್ಞೆಯು ಸದ್ಗುರುಕೃಪೆಯಿಂದ ಸಫಲವಾಗಬೇಕೆಂದು ಪ್ರಾರ್ಥಿಸುವೆನಲ್ಲದೆ, ಈ ವಿಚಾರದಲ್ಲಿ ನಾನು ನಿನಗೆ ಕೈಪಿಡಿಯಾಗಿದ್ದು ಸಹಾಯಮಾಡುವೆನು.

ಅಕ್ಷಯ—ಪ್ರಭಾಕರ—ಮಧುಮಿತ್ರರೂ ಏಕವಾಕ್ಯದಿಂದ "ನಾವೂ ಈ ನಿನ್ನ ಪ್ರತಿಜ್ಞಾಪಾಲನೆಗೆ ಸಹಕಾರಿಗಳಾಗಿರಲು ಪ್ರಮಾಣ ಮಾಡುವೆವು."

ಕುಮುದ—"ಹಾಗಾದರೆ ನಾನು ಕೃತಕೃತ್ಯನೇ ಸರಿ. ಸದ್ಗುರು ಕೃಪೆ

ಯು ನಮ್ಮ ಮೇಲಿರಲಿ.'' ಎಂದು ಹೇಳಿ ಎದ್ದು ಹೊರಡಲು ಅನುವಾದನು.

ಸಂಧ್ಯಾಕಾಲವಾದುದರಿಂದ ಎಲ್ಲರೂ ಸಂಧ್ಯೋಪಾಸನೆಗೆ ತೆರಟುಹೋದರು.

—— o ——

ಸುಹೃದರೆ !

ಷಷ್ಠಪರಿಚ್ಛೇದದಲ್ಲಿ ನಿಮ್ಮನ್ನು ಸಿಟ್ಟಿಗೇರಿಸಿ, ದಶಮಪರಿಚ್ಛೇದದಲ್ಲಿ ಧೂಪವನ್ನು ಹಾಕಿದ್ದೆವು. ಈ ಪಂಚದಶಪರಿಚ್ಛೇದದಿಂದ ಕೋಪಾಗ್ನಿಗೆ ಆಜ್ಯಾಹುತಿ ಮಾಡಿಬಿಟ್ಟಿರುವೆವು. ಕೋಪಿಸಿರಿ ! ಕುಪಿತರಾಗಿಯಾದರೂ ಎದ್ದುಬಂದು ಮಾತೃಜೀರ್ಣೋದ್ಧಾರ ಕಾರ್ಯದಲ್ಲಿ ಬದ್ಧಕಂಕಣರಾಗಿ ನಿಲ್ಲಿರಿ ! ಆಗ ನಾವು ನಿಮ್ಮನ್ನು ಪುನಃ ಪುನಃ ಧನ್ಯವಾದಗಳಿಂದ ಹುರಿಗೊಳಿಸಿ ಅಭಿನಂದಿಸುವೆವು. ಭಗವತ್ಕೃಪೆಯಿಂದ ಹಾಗಾಗಲಿ.

|| ಶ್ರೀಃ ||


—ಸದ್ಗುರು ಸಹಾಯ—

ಷೋಡಶ ಪರಿಚ್ಛೇದ.

" ಭಾಸ್ವದ್ರತ್ನಾಢ್ಯಮೌಲಿಃ ಸ್ಫುರದಧರರುಚಾ ರಂಜಿತಶ್ಚಾರುಶೋಭಾ | ಭಾಸ್ವಾರ್ನ್ ಯೋ ದಿವ್ಯತೇಜಾಃ ಕರಕಮಲಯುತಃ ಸ್ವರ್ಣವರ್ಣ ಪ್ರಭಾಭಿಃ||ವಿಶ್ವಾಕಾಶಾವಕಾಶಗ್ರಹಪತಿಶಿಖರೇ ಭಾತಿಯಶ್ಚೋ

ಶ್ರೀ.

ಸಂಪುಟ ೩	ಸತೀಹಿತೈಷಿಣಿ.	ಸಂಚಿಕೆ ೨
ನಳಸಂ॥	ತ್ರೈಮಾಸಿಕ	ಮಾರ್ಗಶಿರ



ಶಾಂತಿನಿಕೇತನಂ—Shantiniketanam.

ದಯಾದ್ರೌ | ಸರ್ವಾನಂದ ಪ್ರದಾತಾ ಹರಿಹರನಮಿತಃ ಪಾತುಮಾಂ ವಿಶ್ವಚಕ್ಷುಃ || ”

ಶಾಂತಿನಿಕೇತನದಲ್ಲಿ ವಿಜಯೋತ್ಸವ.

---o---

ಅರುಣೋದಯಸಮಯ. ಶಾಂತಿನಿಲಯದಲ್ಲಿ ಇಂದು ವಾರ್ಷಿಕೋತ್ಸವದ ವಿಜಯೋತ್ಸಾಹವನ್ನು ಸೂಚಿಸುವಂತೆ ನಿಲಯದ ಸುತ್ತುಮುತ್ತಲೂ ತಳಿರು ತೋರಣ, ಬಾಳೆಯ ಕಂಬಗಳೂ, ಅಲ್ಲಲ್ಲಿಗೆ ವಿಜಯ ಪತಾಕೆಗಳೂ ಅಲಂಕೃತವಾಗಿವೆ. ಶಾಂತಿನಿಕೇತನದ ಶಾರದಾಸನದ, ವಿದ್ಯಾರ್ಥಿಮಂದಿರ, ಗುರುಭವನಗಳಲ್ಲೆಲ್ಲಲ್ಲಿಯೂ ಸಾರಣೆಕಾರಣೆಗಳೂ, ಮತ್ತು ವಿವಿಧ ರಂಗವಲ್ಲಿಗಳ ಚಿತ್ರಗಳೂ ಕಂಗೊಳಿಸುತ್ತಲಿವೆ. ವಾರ್ಷಿಕೋತ್ಸವದ ದಿನವಾದುದರಿಂದ ಇಂದು ನಿಲಯಾಧಿದೇವತೆಯಾದ ಶಾರದೆಗೆ ಅಭಿಷೇಕವು ನಡೆಯಬೇಕಾಗಿದೆ.

ದೇವಿಗೆ ಅರುಣೋದಯಕ್ಕೆ ಅಭಿಷೇಕವು ನಡೆದು ಸೂರ್ಯೋದಯಕ್ಕೆ ಸರಿಯಾಗಿ ಮಹಾಮಂಗಳಾರತಿಯು ನಡೆಯುವಂತೆ ನಿಶ್ಚಿತವಾಗಿದೆ. ಗುರುವರ್ಯ ಭಾಸ್ಕರಾಚಾರ್ಯರು ದೇವಿಯಮುಂದೆ ಧ್ಯಾನಾಸಕ್ತರಾಗಿ ಕುಳಿತಿರುವರು. ಗೀತಾಚಾರ್ಯರು ದೇವಿಯನ್ನು ಅಭಿಷೇಕಕ್ಕಾಗಿ ಆಹ್ವಾನಪೂರ್ವಕವಾಗಿ ಕೀರ್ತಿಸುತ್ತಿರುವರು. ತಾರಾಕಾಂತರು ಅಭಿಷೇಕ ಮಹೋತ್ಸವದ ಮತ್ತು ಮುಂದಿನ ಉತ್ಸವದ ಕಾರ್ಯಕಲಾಪಗಳಿಗಾಗಿ ಶಿಷ್ಯವರ್ಗವನ್ನು ತಕ್ಕಂತೆ ನಿಯೋಗಿಸುವ ಕಾರ್ಯಗೌರವದಲ್ಲಿರುವರು. ವಿದ್ಯಾರ್ಥಿಗಳೆಲ್ಲರೂ ಗುರುಗಳ-ಮತ್ತು ಭಗವತಿಯ ಸೇವಾಕಾರ್ಯದಲ್ಲಿ ಶ್ರದ್ಧಾಭಕ್ತಿಗೌರವವನ್ನಿರಿಸಿ ಜಾಗರೂಕತೆಯಿಂದ ತಮ್ಮ ತಮ್ಮ ಕಾರ್ಯಗಳನ್ನು ನೆರವೇರಿಸುತ್ತಿರುವರು. ಕಲಾಧವ, ಅಕ್ಷಯಕ

ಮಾರ, ಪ್ರಭಾಕರ, ಕುಮುದಮಿತ್ರ, ಮಧುಮಿತ್ರರು, ಅಭಿಷೇಕಕ್ಕಾಗಿ ಶುದ್ಧೋದಕವೇ ಮೊದಲಾದ ಸಾಹಿತ್ಯಗಳನ್ನು ಒದಗಿಸುವುದರಲ್ಲಿ ನಿರತ ರಾಗಿದ್ದರು. ಶಾಂತಿನಾಥನು ದೇವಿಯ ಪೂಜೋಪಕರಣಗಳನ್ನು ಸಿದ್ಧ ಪಡಿಸಿ, ದೇವಿಯ ಮುಂದೆ ಕೈಕಟ್ಟಿ ನಿಂತಿರುವನು. ಇವರೆಲ್ಲರಿಗೂ ಪ್ರಾತಃಸ್ನಾನ-ಜಪ-ತಪಾನುಷ್ಠಾನಗಳು ಸಾಂಗವಾಗಿ ನಡೆದಿದ್ದವು.

ಪೂರ್ಣಕಲೆಯ ಅಜ್ಜಿ, ಶಾಂತಿದೇವಿ, ರೋಹಿಣೀದೇವಿ, ಸತೀ ಮಣಿಯರು ಶುಚಿರ್ಭೂತರಾಗಿ ಬಂದು ನಿಯಮಿತಕಾರ್ಯಗಳನ್ನು ನೆರೆ ವೇರಿಸಿ, ದೇವೀಸಂದರ್ಶನಕ್ಕಾಗಿ ಬಂದಿದ್ದ ಮಹಿಳೆಯರನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು, ದೇವಿಗೆ ಪುಷ್ಪಾಲಂಕಾರಕ್ಕಾಗಿ ಮಾಲೆ, ಕಿರೀಟ, ಹಸ್ತಾಭರಣಗಳನ್ನು ವಿವಿಧ ಪರಿಮಳ ಪುಷ್ಪಗಳಿಂದ ರಚಿಸುತ್ತಿರುವರು. ಪೂರ್ಣಕಲಾ, ಶಾರದೆ, ಕುಮುದೆಯರು,ಶ್ರದ್ಧಾ-ಭಕ್ತಿ – ಕೀರ್ತಿಗಳು ಮೂರ್ತೀಭವಿಸಿದಂತೆ ಶುಭ್ರವಸನ ಧಾರಿಣಿಯರಾಗಿ ದೇವಿಗೆ ಇದಿರಾಗಿ ಕುಳಿತು ಗುರುಜನಾಜ್ಞೆಯಂತೆ ವೀಣಾಪಾಣಿಯರಾಗಿ ಉದಯರಾಗ ದಿಂದ ದೇವಿಯ ಗುಣಸಂಕೀರ್ತನೆಗಳನ್ನು ಮನೋಹರವಾಗಿ ಗಾನ ಮಾಡುತ್ತಿರುವರು.

ಅರುಣೋದಯವಾಯಿತು. ಗೀತಾಚಾರ್ಯರು ಎದ್ದುನಿಂತು ಘಂ ಟಾಧ್ವನಿ ಮಾಡಿದರು. ಘಂಟಾಧ್ವನಿಯನ್ನು ಕೇಳಿ ಎಲ್ಲರೂಕೃತಕಾ ರ್ಯರಾಗಿ ಬಂದು ದೇವಿಯಮುಂದೆ ಎರಡು ವರಸೆಯಾಗಿಸಾಲುಕಟ್ಟಿ ನಿಂತರು ಭಾಸ್ಕರಾಚಾರ್ಯರು ಧ್ಯಾನವನ್ನು ಪೂರ್ಣಗೊಳಿಸಿ ಎದ್ದು ದೇವಿಯನ್ನು ವಂದಿಸಿ, ಸೇವಾಕಾರ್ಯದಲ್ಲಿ ಉದ್ಯುಕ್ತರಾದರು.

ದೇವಿಯ—ಅರ್ಚಾರೂಪಿಯಾಗಿದ್ದ ಮಾತೆಯ – ಅಭಿಷೇ ಕೋತ್ಸವವು ಗುರುಗಳ ವೇದ, ಉಪನಿಷತ್ ಪಾರಾಯಣಗಳ ದಿವ್ಯ ಘೋಷಗಳಿಂದಲೂ ವಿದ್ಯಾರ್ಥಿವರ್ಗೀಯರ ಸುಪ್ರಭಾತಸ್ತುತಿವಚನ

ಗಳಿಂದಲೂ ಬಾಲೆಯರ ಮಂಜುಳವಾದ ಉದಯರಾಗದ ವೀಣಾಗಾನ ದಿಂದಲೂ ಸಾಧ್ವೀಮಣಿಯರ ಭಕ್ತಿ ಗೀತೆಗಳಿಂದಲೂ ಸಂಭ್ರಮವಾಗಿ ನೆರವೇರಿತು. ಅಲಂಕಾರವೇ ಮೊದಲಾದ ಷೋಡಶೋಪಚಾರಗಳೂ ಯಥಾಕ್ರಮವಾಗಿ ನೆರವೇರುವುದಕ್ಕೆ ಸರಿಯಾಗಿ ದೇವಿಯ ಮುಖ ಪದ್ಮದಮೇಲೆ, ಉದಯಾದ್ರಿಯಲ್ಲಿ ಉಪಸ್ಥಿತನಾದ ಭಗವಾನ್ ಭಾಸ್ಕರನ ಪ್ರಭಾತರಾಗದ ದಿವ್ಯಕಿರಣಗಳು ಪಸರಿಸಿ, ದೇವಿಯ ಜಗನ್ಮೋಪಕ ಮುದ್ರೆಯನ್ನು ಪ್ರದರ್ಶಿಸಿ, ಭಕ್ತವರ್ಗದ ಆನಂದೋತ್ಸಾಹಗಳನ್ನು ದ್ವಿಗುಣಿತವಾಗಿ ಮಾಡಿತು.

ಭಾಸ್ಕರಾಚಾರ್ಯರು ದೇವಿಯ ಮುಖಬಿಂಬವನ್ನೇ ನೋಡುತ್ತ ಭಕ್ತಿಪರವಶರಾಗಿ ಹೀಗೆ ಸ್ತುತಿಸಿದರು.

" ನಮೋಸ್ತು ಸೂರ್ಯಾಯ ಸಹಸ್ರರಶ್ಮಯೇ-ಸಹಸ್ರಶಾಖಾನ್ವಿತ ಸಂಭವಾತ್ಮನೇ | ಸಹಸ್ರಯೋಗೋದ್ಭವಭಾವಭಾಗಿನೇ - ಸಹಸ್ರಸಂಖ್ಯಾಯುಗ ಧಾರಿಣೇನಮಃ || "

" ಯನ್ಮಂಡಲಂ ಜ್ಞಾನಘನಂತ್ವಗಮ್ಯಂ|ತ್ರೈಲೋಕ್ಯಪೂಜ್ಯಂ ತ್ರಿಗುಣಾತ್ಮರೂಪಂ || ಸಮಸ್ತತೇಜೋಮಯ ದಿವ್ಯರೂಪಂ | ಪುನಾತು ಮಾಂ ತತ್‌ಸವಿತುರ್ವರೇಣ್ಯಂ || "　(ಆದಿತ್ಯಸ್ತೋತ್ರಂ)

" ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾಸನಾತನೀ |
ಸರ್ವವಿದ್ಯಾಧಿದೇವೀ ಯಾ-ತಸ್ಯೈವಾಣ್ಯೈನಮೋನಮಃ ||"
(ಸರಸ್ವತೀಸ್ತೋತ್ರಂ)

ಭಾಸ್ಕರಾಚಾರ್ಯರು ಮೇಲೆ ಹೇಳಿದಂತೆ ಜಗಚ್ಚಕ್ಷುವಾದ ಭಗವಾನ್ ಭಾಸ್ಕರನನ್ನೂ ಜಗದುಜ್ಜೀವಿನಿಯಾದ ಜ್ಞಾನಾಧಿದೇವಿಯನ್ನೂ ಸ್ತುತಿಸಿ, ಆ ಬಳಿಕ ಶಿಷ್ಯವರ್ಗವನ್ನು ನೋಡಿ ಪ್ರಸನ್ನಮುದ್ರೆಯಿಂದ ಹೀಗೆ ಹೇಳಿದರು.

"ಪ್ರಿಯಬಂಧುಗಳೇ ! ಆಪ್ತ ಶಿಷ್ಯರೇ !! ಮಾನ್ಯ ಮಹಿಳೆಯರೆ !!!

ಎಲ್ಲರೂ ನಿರ್ಮಲದೃಷ್ಟಿಯಿಂದ ಭಗವತಿಯಕಡೆಗೆ ನೋಡಿರಿ ! ಜಡನಿದ್ರೆಯನ್ನು ತಿಳಿದೆಚ್ಚತ್ತು,ಸುಪ್ರಭಾತದ ಶುಭೋದಯವನ್ನು ಸಂದರ್ಶಿಸಿ ನವಚೈತನ್ಯದಿಂದ ಉತ್ತೇಜಿತವಾಗುವಂತೆ ಲೋಕಬಂಧುವಾದ ಭಗವಾನ್ ಭಾಸ್ಕರನು ಉದಯಾದ್ರಿಯಲ್ಲಿ ಉಪಸ್ಥಿತನಾಗಿ ನಮ್ಮೆಲ್ಲರನ್ನೂ ಅನುಗ್ರಹಿಸುತ್ತಿರುವುದನ್ನು ಸಂದರ್ಶಿಸಿ ಧನ್ಯರಾಗಿರಿ ; ಮತ್ತು, ನಮ್ಮೆಲ್ಲರಲ್ಲಿಯೂಆರ್ಯಭಾವದ ಪವಿತ್ರ ರಕ್ತಸಂಚಲನವಾಗಿ, ನವಶಕ್ತಿಯುತ್ಪನ್ನವಾಗುವಂತೆಯೂ ನಾವೆಲ್ಲರೂ ಪವಿತ್ರವಾದ ಆರ್ಯಭೂಮಿಯಲ್ಲಿ,ಉತ್ತಮವರ್ಗದಲ್ಲಿ, ಶ್ರೇಷ್ಠವರ್ಣದಲ್ಲಿ,-ಜನ್ಮವೆತ್ತಿದುದರ ಸಾರ್ಥಕ್ಯವನ್ನು ಹೊಂದುವಂತೆಯೂ ಬಾಲಭಾಸ್ಕರದ್ಯುತಿಯಿಂದ ವಿಶೇಷವಾಗಿ ಪ್ರಕಾಶಿಸುವ ದೇವಿಯ ಮುಖಮುದ್ರೆಯನ್ನು ಮತ್ತೆಮತ್ತೆಯೂ ನೋಡಿರಿ,-ಧನ್ಯರಾಗಿರಿ.''

ಹೀಗೆ ಹೇಳಿ ಭಾಸ್ಕರಾಚಾರ್ಯರು ದೇವಿಯ ಮುಖಮುದ್ರೆಯನ್ನು ನೋಡುತ್ತ ನಿಂತರು. ಗೀತಾಚಾರ್ಯರು ಕೈಯೆತ್ತಿ—'' ವಿಶ್ವಸನೀಯರೇ ! ವಿಶ್ವಪಿತನ ವಾತ್ಸಲ್ಯದಿಂದ ನಾವು ಇಂದಿನ ವಾರ್ಷಿಕೋತ್ಸವ ಸಮಾರಂಭದ ಸುಪ್ರಭಾತವನ್ನು ಕಂಡು ಕೃತಾರ್ಥರಾದೆವು. ಶಾಂತಿನಿಕೇತನ ಪುಣ್ಯಾಶ್ರಮ ನಿರ್ಮಾಪಕರಾದ ನಮ್ಮ ಆಚಾರ್ಯರ ಸತ್ಸಂಕಲ್ಪ-ಸದುದ್ಯಮಗಳು ಈಗಲೀಗ ಸಾಫಲ್ಯಹೊಂದಿದುವು.

ಸಮಸ್ತ ಶಿಕ್ಷಣಾಲಯ-ಶಿಕ್ಷಣಸಂಸ್ಥೆಗಳಿಗೂ ಈ ನಮ್ಮ ಶಾಂತಿನಿಕೇತನ ವಿದ್ಯಾಪೀಠವು ಗುರುಸ್ಥಾನದಲ್ಲಿದ್ದು, ಇಲ್ಲಿ ಶಿಷ್ಯವರ್ಗಕ್ಕೆ ಕೊಡಲ್ಪಡುವ ಶಿಕ್ಷಣ-ಅಭ್ಯಾಸಗಳು ಸರ್ವಜನಾದೃತವೂ ಆದರ್ಶಯೋಗ್ಯವೂ ಆಗಿ, ಇಲ್ಲಿ ಬಂದು ವ್ಯಾಸಂಗಿಸಿ, ಸುಶಿಕ್ಷಿತರಾಗಿ ತೆರಳುವ ವಿದ್ಯಾರ್ಥಿಗಳು, ದೂರದರ್ಶಿಗಳೂ, ವಾಗ್ಮಿಗಳೂ ಸತ್ಯಸಂಧರೂ ಜಿತೇಂ

ದ್ರಿಯರೂ, ದಯಾಪರರೂ,ಕರ್ತವ್ಯದಕ್ಷರೂ, ಶಾಸ್ತ್ರಸಂಪನ್ನರೂ, ಗುರು ದೈವಭಕ್ತರೂ, ಆರ್ಯಧರ್ಮಪ್ರಸಾರಕರೂ, ನಿರಲಸರೂ ಆಗಿ ಸರ್ವ ಪ್ರಕಾರದಿಂದಲೂ ದೇಶಸೇವೆಯನ್ನು ಮಾಡಿ, ವಿಧ್ಯುಕ್ತರೀತಿಯಿಂದ ದೇವಋಣ, ಋಷಿಋಣ, ಪಿತೃಋಣಗಳಿಂದ ಮುಕ್ತರಾಗಿ ದುರ್ಲಭ ಮಾನುಷಜನ್ಮವನ್ನು ಧರಿಸಿದುದರ ಸಾಫಲ್ಯಮಾಡಿಕೊಳ್ಳುವಂತಾಗಬೇಕೆಂಬುದೇ ನಮ್ಮ ಆಚಾರ್ಯವರ್ಯರ ಮತ್ತು ನಮ್ಮೆಲ್ಲರ ಧ್ಯೇಯವಾಗಿದೆ.

ಇಂತಿಷ್ಟು ಮಹತ್ವಾಕಾಂಕ್ಷೆಯನ್ನು ಹೊಂದಿರುವ ಈ ಪುಣ್ಯಾಶ್ರಮದಲ್ಲಿ ವಸಿಸುವವರೆಲ್ಲರೂ ಸಂಶಯ, ಕ್ಲೇಶ, ಕೃತ್ರಿಮಸಂಧಾನ, ದುರಭಿಮಾನ, ಪರಸ್ಪರ ಅಸೂಯೆ, ಕಲಹ, ದ್ವೇಷಸಾಧನೆಗಳೆಂಬ ಕುತ್ಸಿತಗುಣಗಳನ್ನು ಸ್ವಪ್ನದಲ್ಲಿಯೂ ಸಮೀಪಕ್ಕೆ ಬರಗೊಡದಂತೆ ಪರಸ್ಪರ ಸೌಹಾರ್ದ ಸೌಜನ್ಯಭಾವದಿಂದಿದ್ದು ತಮ್ಮ ಗುರುಕುಲವಾಸದ ಅವಧಿಯು ಪೂರೈಸುವವರೆಗೂ, ಗುರುಜನಗಳಿಂದ ಅನುಜ್ಞಾಪತ್ರಗಳನ್ನು ಪಡೆಯುವವರೆಗೂ ಅವರ ನಿರ್ದಿಷ್ಟ ಕರ್ಮಕಲಾಪಗಳ ಅಭ್ಯಾಸದಲ್ಲಿ ಕ್ರಮತಪ್ಪದೆ ಪರಿಶುದ್ಧಾಂತಃಕರಣರಾಗಿ ವರ್ತಿಸುತ್ತಿರಬೇಕಾದುದು ಅತ್ಯಾವಶ್ಯಕ ವಿಚಾರವೆಂಬುದನ್ನು ಮತ್ತೆಮತ್ತೆಯೂ ಹೇಳುವುದು ನನ್ನ ಕರ್ತವ್ಯವಾಗಿರುವುದು. ಇದನ್ನು ಶಿಷ್ಯರಾದ ನಿಮಗೆ ಮಾತ್ರವೇ ಹೇಳಿದುದಲ್ಲ. ನಮ್ಮೆಲ್ಲರಿಗೂ ಉಪದೇಶವೆಂದು ಭಾವಿಸಬೇಕು. ''

ಇಷ್ಟರಲ್ಲಿ ಭಾಸ್ಕರಾಚಾರ್ಯರು ದೇವಿಗೆ ಘಂಟಾನಾದಪೂರ್ವಕವಾಗಿ ಮಂಗಳಾರತಿ ಮಾಡಿದರು. ಶಿಷ್ಯರೆಲ್ಲರೂ ಅಂಜಲಿಬದ್ಧರಾಗಿ ದೇವಿಯನ್ನು ಮಂಗಳಾಷ್ಟಕಗಳಿಂದ ಸ್ತುತಿಸಿದರು. ತಾರಾಕಾಂತರು ಆನಂದಭರದಿಂದ ಶಿಷ್ಯಮಂಡಲಿಯನ್ನು ಕುರಿತು ಹೀಗೆ ಹೇಳಿದರು,

'ಆಪ್ತರೇ ! ನಮ್ಮ ಮಾತೃಭೂಮಿಯಲ್ಲಿ ಅಲ್ಲಲ್ಲಿಗೆ ಕಲಾಶಾಲೆಗಳೂ, ಎಷ್ಟೋ ವಿದ್ಯಾಪೀಠಗಳೂ, ಎಷ್ಟೆಷ್ಟೋ ಆಶ್ರಮಗಳೂ ಇರುವವು. ಅವುಗಳಲ್ಲಿ ಅಸಂಖ್ಯಾತರಾದ ವಿದ್ಯಾರ್ಥಿಗಳೂ ಅನೇಕಾನೇಕ ವಿದ್ಯಾಬೋಧಕ-ಗುರುವರ್ಗೀಯರೂ ಇರುವರು. ಸಾಂಪತ್ತಿಕ ದೃಷ್ಟಿಯಿಂದಲೂ, ವ್ಯಾವಹಾರಿಕ ದೃಷ್ಟಿಯಿಂದಲೂ ಅವುಗಳೆಲ್ಲವೂ ವರ್ತಮಾನಸ್ಥಿತಿಯಲ್ಲಿ ಅತ್ಯುಚ್ಚ ಪದದಲ್ಲಿರುವಂತೆಯೂ ಹೆಸರ್ಗೊಂಡಿರುವವು. ಆದರೆ, ನಾನು ನೋಡಿರುವುದರಲ್ಲಿ, ನನ್ನ ಅನುಭವಕ್ಕೆ ಬಂದಿರುವ ವಿಚಾರಗಳಲ್ಲಿ ಈ "ಶಾಂತಿನಿಕೇತನ" "ಪುಣ್ಯಾಶ್ರಮದಲ್ಲಿ ಲಭಿಸುವ ಶಮ, ದಮ, ಉಪರತಿ, ತಿತಿಕ್ಷಾ, ಸಮಾಧಾನ ಶ್ರದ್ಧಾ" ಎಂಬ ಷಡ್ವಿಧಸಂಪತ್ತಿಯು ಮಾನುಷಜನ್ಮಧಾರಣದ ಸಾರ್ಥಕತೆಗೆ ಅತ್ಯಾವಶ್ಯಕವಾಗಿ ಅನುಷ್ಠೇಯವಾದ, ಅದರಲ್ಲಿಯೂ ಆರ್ಯಕುಲೋತ್ಪನ್ನರಿಗೆ ಸಾರಭೂತವೂ – ಆಧಾರವಸ್ತುವೂ ಆಗಿ ಪ್ರಕಾಶಿಸುವ – ಆ ದಿವ್ಯಸಂಪತ್ತಿಯು ,ಮತ್ತೆಲ್ಲಿಯೂ ಲಭಿಸುವುದೆಂದು ನಾನು ನಂಬಲಾರೆನು. ಎಂದರೆ ಅವೆಲ್ಲವೂ ನಿರರ್ಥಕವೆಂದು ಹೇಳಿದಂತಲ್ಲ. ಜೀವನ ನಿರ್ವಾಹಕ್ಕೆ ಬೇಕಾಗುವ ಔದ್ಯೋಗಿಕ–ಮತ್ತು ವ್ಯಾವಹಾರಿಕ ವಿಚಾರಕ್ಕೆ ಅವುಗಳು ಅತ್ಯಂತ ಸಹಕಾರಿಗಳೇ ಸರಿ, ಆದರೂ, ಅಲ್ಲಿ ಆತ್ಮಸಮಾಧಾನಕ್ಕೆ ಆಧಾರವಾಗಿರುವ ದೃಢವಿಶ್ವಾಸವೂ, ಧರ್ಮಶ್ರದ್ಧೆಯೂ, ಸದಸದ್ವಿವೇಚನೆಯೂ, ಅಷ್ಟು ಪ್ರಧಾನವಾಗೆಣಿಸಲ್ಪಡುವವರೆಗೆ ಅವು ಸಾರ್ಥಕವೆನಿಸುವಂತಿಲ್ಲ. ಹಾಗೆ ಅವು ಸಾರ್ಥಕವೆನಿಸಬೇಕಾದರೆ ಶಾಂತಿನಿಕೇತನದ ಶಿಕ್ಷಣಾಕ್ರಮವನ್ನು ಅವೂ ಆಚರಣೆಗೆ ತರಲು ಹೇಳಿದರೆ ತಪ್ಪಾಗುವಂತಿಲ್ಲ. ಏಕೆಂದರೆ—

" ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ |
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇನಮಃ ||"

ಹೀಗೆ ಅಜ್ಞಾನಾಂಧಕಾರ ವಿಧ್ವಂಸಕನಾದ ಮಹಾನುಭಾವನೇ ಗುರುವೆನ್ನಿಸಲು ಅರ್ಹನು ಅಂತಹ ಗುರುವಿಗೋಸ್ಕರ ನಮಸ್ಕಾರವು ಹೇಗೆಂದರೆ—'ಗು-ಕಾರಶ್ಚಾಂಧಕಾರಃ ಸ್ಯಾದ್ರುಕಾರಸ್ತೇಜ ಉಚ್ಯತೇ ಅಜ್ಞಾನಧ್ವಂಸಕಂ ಬ್ರಹ್ಮ ಗುರುರೇವನಸಂಶಯಃ ||' ಎಂಬೀ ಸೂತ್ರವೇ ಸಾಕಷ್ಟು ಸಮಾಧಾನವನ್ನು ಕೊಡುತ್ತಿದೆ. ಮತ್ತು—

"ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ |
ದುರ್ಲಭಃ ಸದ್ಗುರುರ್ದೇವಿ ಶಿಷ್ಯಸಂತಾಪಹಾರಕಃ ||"

ಎಂಬ ಈಶ್ವರವಾಕ್ಯದಂತೆ ಶಿಷ್ಯರ ಹೃತ್ತಾಪಗಳನ್ನು ನಿವಾರಿಸಿ, ಶಾಂತಿ-ಸಮಾಧಾನಗಳನ್ನುಂಟುಮಾಡುವ ಗುರುವು ದುರ್ಲಭನೆಂದರೆ ಅತ್ಯುಕ್ತಿಯಾಗದು. ಇಲ್ಲಿ ನಮ್ಮೆಲ್ಲರ ಪೂರ್ವಪುಣ್ಯಫಲದಿಂದಲೂ,ಭಗವದನುಗ್ರಹದಿಂದಲೂ ನಮಗೆ ಅಂತಹ ಸದ್ಗುರುದೇವರು ಸುಲಭರಾಗಿದ್ದಾರೆಂದ ಬಳಿಕ ನಮ್ಮ ಭಾಗ್ಯೋದಯುವನ್ನೆಷ್ಟೆಂದು ವರ್ಣಿಸಬಹುದು? ಹೀಗೆ ನಮ್ಮೆಲ್ಲರ ದೃಢಭಕ್ತಿ ಭರವಸೆಗಳಿಗೂ ಆಶ್ರಯ, ಸ್ಥಾನರಾಗಿರುವ ನಮ್ಮ ಆಚಾರ್ಯವರ್ಯರು,

"ಸರ್ವಶಾಸ್ತ್ರ ಪರೋ ದಕ್ಷಃ ಸರ್ವಶಾಸ್ತ್ರಾರ್ಥ ವಿತ್ ಸದಾ | ಸುವಚಃ ಸುಂದರಃ ಸ್ವಂಗಃ ಕುಲೀನಃ ಶುಭದರ್ಶನಃ || ಜಿತೇಂದ್ರಿಯಃ ಸತ್ಯವಾದೀ ಬ್ರಾಹ್ಮಣಃ ಶಾಂತಮಾನಸಃ | ಪಿತೃ ಮಾತೃ ಹಿತೇ ಯುಕ್ತಃ ಸರ್ವಕರ್ಮ ಪರಾಯಣಃ || ಆಶ್ರಮೀ ದೇಶವಾಸೀ ಚ ಗುರುರೇವಂ ವಿಧೀಯತೇ ||" ಎಂದರೆ ಸರ್ವಶಾಸ್ತ್ರದರ್ಶಿಯೂ ಕಾರ್ಯದಕ್ಷನೂ ಶಾಸ್ತ್ರಗಳಿಗೆ ಯಥಾರ್ಥವಾದ ಅರ್ಥವನ್ನು ಹೇಳುವನೂ, ಸುಭಾಷಿಯೂ ಸುರೂಪನೂ, ಅವಿಕಲಾಂಗನೂ, ಕುಲೀನನೂ ದರ್ಶನಮಾತ್ರದಿಂದ ಕಲ್ಯಾಣವನ್ನುಂಟುಮಾಡುವವನೂ , ಹಾಗೆಯೇ ಜಿತೇಂದ್ರಿಯನೂ ಸತ್ಯವಾದಿಯೂ, ಬ್ರಾಹ್ಮಣ್ಯಶೀಲಬ್ರಾಹ್ಮಣನೂ ಶಾಂತಚಿತ್ತನೂ, ಮಾ

ತಾಪಿತರಿಗೆ ಹಿತವನ್ನುಂಟುಮಾಡುವುದರಲ್ಲಿ ನಿರತನೂ,ಸರ್ವಕರ್ತವ್ಯಾನುಷ್ಠಾನಶೀಲನೂ, ಆಶ್ರಮಿಯೂ ಮತ್ತು ದೇಶವಾಸಿಯೂ ಆಗಿರುವ ಮಹಾ ಪುರುಷನನ್ನೇ ಗುರುವಾಗಿ ವರಿಸಬೇಕು '' ಎಂಬೀ ಸೂಕ್ತಿಯಂತೆ ಸರ್ವಲಕ್ಷಣಸಂಶೋಭಿತರಾಗಿ, ತಮ್ಮ ಲೋಕೋತ್ತರ ಗುಣಗಳನ್ನು ತಮ್ಮ ಶಿಷ್ಯವರ್ಗಕ್ಕೂ ಪ್ರಸಾದಿಸಿ,-"ಗುರುವಿನಂತೆ ಶಿಷ್ಯರು'' ಎಂಬ ಉಕ್ತಿಯನ್ನು ಸಾರ್ಥಕ್ಯಗೊಳಿಸಲು ತತ್ಪರರಾಗಿರುವರು. ದಯಾಘನರಾದ ಇಂತಹ ಸದ್ಗುರುಗಳಲ್ಲಿ ಶಿಷ್ಯವೃತ್ತಿಯನ್ನು ಕೈಕೊಂಡಿರುವವರು ಕೂಡ.

''ಅಲುಬ್ಧಃ ಸ್ಥಿರಗಾತ್ರಶ್ಚ ಆಜ್ಞಾಕಾರೀ ಜಿತೇಂದ್ರಿಯಃ | ಆಸ್ತಿಕೋ ದೃಢಭಕ್ತಿಶ್ಚ ಗುರೌ ಮಂತ್ರೇ ಚ ದೈವತೇ | ಏವನ್ವಿಧೋ ಭವೇತ್ ಶಿಷ್ಯ ಇತರೋ ದುಃಖಕೃತ್ ಗುರೋಃ || '' ಎಂದರೆ-"ನಿರ್ಲೋಭನೂ ಸ್ಥಿರದೇಹನೂ, ಗುರುಗಳ ಆಜ್ಞಾಕಾರಿಯೂ ಜಿತೇಂದ್ರಿಯನೂ ಆಸ್ತಿಕನೂ, ಮತ್ತು ಗುರು, ಮಂತ್ರ, ದೈವಗಳಲ್ಲಿ ದೃಢ ಭಕ್ತಿಯುಕ್ತನೂ ಆದವನೇ ನಿಜವಾದ ಶಿಷ್ಯನೆನ್ನಿಸುವನು. ಉಳಿದವರು ಗುರುವಿಗೆ ದುಃಖವನ್ನುಂಟುಮಾಡುವವರೇ ಸರಿ." ಎಂಬಂತೆ ನಿಜವಾದ ಶಿಷ್ಯಧರ್ಮದಲ್ಲಿ ವರ್ತಿಸಬೇಕಾದುದು ಆವಶ್ಯಕವೇ ಆಗಿರುವುದು. ಈ ವಿಚಾರದಲ್ಲಿ ನಿಮಗೆ ನಾನು ಹೇಳಬೇಕಾದುದಿಲ್ಲವಾದರೂ, ಈವರೆಗೆ ಪ್ರಕಾರಾಂತರ ಭಾವದಲ್ಲಿರುತ್ತಿದ್ದು ಈಗಲೀಗ ನಿಜಸ್ಥಿತಿಗೇರಿಬಂದಿರುವ ನಾನು, ನಿಮ್ಮನ್ನು ಸ್ವಾನುಭವ ಪೂರ್ವಕವಾಗಿ ಎಚ್ಚರಿಸುತ್ತಿರುವೆನು."

ತಾರಾಕಾಂತಬಾಬುಗಳ ಗಂಭೀರ ಮತ್ತು ಕರುಣಾಪೂರಿತವಾಕ್ಯಗಳು, ಶಿಷ್ಯರೆಲ್ಲರ ಹೃದಯವೂ ಆನಂದೋತ್ಸಾಹದಿಂದ ಉಬ್ಬಿ ಆನಂದ ಬಾಷ್ಪವನ್ನು ಸುರಿಸುವಂತೆ ಮಾಡಿದುವು.

ಹಾಗೆ ಆನಂದಬಾಷ್ಪವನ್ನು ಸುರಿಸುತ್ತ ಕೈಕಟ್ಟಿ ನಿಂತಿರುವ ಶಿಷ್ಯವರ್ಗವನ್ನು ನೋಡಿ ಭಾಸ್ಕರಾಚಾರ್ಯರು ಹೀಗೆ ಹೇಳಿದರು. "ಕೃತಾರ್ಥನಾದೆನು, ಪ್ರಿಯಶಿಷ್ಯರೇ ! ವಿಶ್ವಸನೀಯ ಬಾಂಧವರೇ ! ಈಗಲೀಗ ಕೃತಾರ್ಥನಾದೆನು. ನನಗೆ ಇದಕ್ಕೂ ಹೆಚ್ಚಾದ ಸುಖಸಂಗತಿಯೇನಿದೆ ? ಆವ ಮಕ್ಕಳು ಅಭ್ಯುದಿತರಾಗುವುದನ್ನು ನೋಡಬೇಕೆಂಬ ಆಶೆ, ನನಗೆ ಬಲವಾಗಿದ್ದಿತೋ-ಆ ನೀವೆಲ್ಲರೂ ಅಭ್ಯುದಯ ಪ್ರಾಸಾದವನ್ನೇರಲು ಅರ್ಹರಾಗಿ ನಿಂತು ಪ್ರಕಾಶಿಸುತ್ತಿರುವುದನ್ನು ನೋಡುವುದಕ್ಕೂ ಮಿಗಿಲಾದ ಸಂತೋಷವು ನನಗೆ ಇನ್ನಾವುದಿರುವುದು ? ಶಾಂತಿನಿಕೇತನದ ಯಶಶ್ಚಂದ್ರಿಕೆಯನ್ನು ದಿಙ್ಮಂಡಲವನ್ನು ವ್ಯಾಪಿಸುವಂತೆ ಮಾಡಲು ಕೃತನಿಶ್ಚಯರಾಗಿ ನಿಂತಿರುವ ನಮ್ಮ ಪ್ರಿಯಬಂಧು-ತಾರಾಕಾಂತರನ್ನು ಕಣ್ಮನವಾರೆ ನೋಡಿ ಧನ್ಯನಾದೆನೆಂದು ಅಭಿಮಾನಪಡುವುದಕ್ಕೂ ಹೆಚ್ಚಾದ ಅಪೂರ್ವದೃಶ್ಯವಿನ್ನಾವುದಿದೆ ? ಸಾಕು; ನನಗಿಷ್ಟೇ ಸಾಕು ! ಎಂದರೆ, ಇದಕ್ಕೂ ಹೆಚ್ಚಿದ ಸುಖ-ಸಮಾಧಾನಗಳು ಬೇಡವೆಂದು ಹೇಳಿದಂತೆ ಭಾವಿಸಬಾರದು. ಸುಖ-ಆನಂದ-ಕೀರ್ತಿಗಳು ಎಷ್ಟೆಷ್ಟು ಮೇಲೇರಿ ನಡೆಯುತ್ತ ಬಂದರೆ, ಅಷ್ಟಷ್ಟೂ ಉತ್ಸಾಹವೇ ಸರಿ.

ಪ್ರಿಯಬಾಂಧವರೇ! ಶಾಂತಿನಿಕೇತನವನ್ನು ಆಕ್ರಮಿಸುವುದರಲ್ಲಿದ್ದ ಮಲಿನತೆ, ಭಗವತ್ಕೃಪೆಯಿಂದ ಈಗ ಪರಿಹಾರವಾಯಿತೆಂಬ ಆನಂದವು ನನ್ನಿಂದ ವಿವರಿಸಲ್ಪಡುವಂತಿಲ್ಲ ; ಅಷ್ಟೇ ಅಲ್ಲ. ನನ್ನ ಪರಮಪ್ರಿಯ ಬಂಧು-ತಾರಾಕಾಂತರಿಗೆ ನನ್ನಲ್ಲಿ ಅಚ್ಛೇದ್ಯವಾದ ವಿಶ್ವಾಸವುಂಟಾಗಿರುವುದೂ, ದುಸ್ಸಹವಾಸದಿಂದ ಅಧಃಪಾತಾಳಕ್ಕಿಳಿದು ಹೋಗುತ್ತಿದ್ದ ಮಧುಮಿತ್ರನು ಸತ್ಸಹವಾಸಬಲದಿಂದ ಉದ್ಧೃತನಾಗಿ ಬಂದು, ಪಶ್ಚಾತ್ತಾಪ ಪ್ರಾಯಶ್ಚಿತ್ತದಿಂದ ಪರಿಶುದ್ಧನಾಗಿ, ಆಶ್ರಮದ ಪರಮಾಪ್ತ ಶಿಷ್ಯಕೋಟಿಯಲ್ಲಿ ಪರಿಗಣಿತನಾದುದೂ, ಮುಖ್ಯವಾಗಿ,ನಮ್ಮ ಮಾನ್ಯಸೋದರ

ಯಾದ ರೋಹಿಣೀದೇವಿಯು ಆರ್ಯಧರ್ಮ, ಸ್ತ್ರೀಪ್ರಕೃತಿ ಸಹಜ ಧರ್ಮ, ಕರ್ತವ್ಯಗಳನ್ನು ಪರಿಷ್ಕಾರವಾಗಿ ತಿಳಿದು, ನಮ್ಮ ಆರ್ಯಮಹಿಳಾಮಂಡಲಿಗೆ ಆದರ್ಶ-(ಮಾರ್ಗದರ್ಶ) ಯೋಗ್ಯವಾದ ಸುಧಾರಣೆಯನ್ನು ಕೈಕೊಂಡು, ತಮ್ಮ ಅಭಿಮಾನ, ವಿದ್ಯಾವೈಭವ, ಬುದ್ಧಿಕೌಶಲಗಳನ್ನು ನಾರೀಗಣಕ್ಕೆ ಹಿತವಾಚರಿಸುವುದರಲ್ಲಿ ವಿನಿಯೋಗಿಸಲು ಸಂಕಲ್ಪಿಸಿರುವುದೂ ಸಾಮಾನ್ಯವಾದ ವಿಚಾರಗಳಲ್ಲ. ಇಷ್ಟು ಉತ್ಸಾಹಾಮೋದಗಳುಂಟಾದ ಈ ಸುಪ್ರಭಾತದ ಸುಖಾನುಭವದಲ್ಲಿದ್ದರೂ-ನನಗೆ, ಒಂದು ಭಾಗದಲ್ಲಿ ಮಾತ್ರ ಕೊರತೆ, ತಪ್ಪಲಿಲ್ಲ-”

(ಶಿಷ್ಯರೆಲ್ಲರೂ ಭಯ ಕೌತುಕಗಳಿಂದ ಆಚಾರ್ಯವರ್ಯರ ಮುಖವನ್ನು ನೋಡಿದರು.)

ಭಾಸ್ಕರಾ—ಮಕ್ಕಳೇ! ಭಯಪಡಬೇಡಿರಿ, ನನ್ನ ಕೊರತೆಯು ನಿಮ್ಮ ನಡೆನುಡಿಗಳಿಗೆ ಸಂಬಂಧಿಸಿದುದೇನೂ ಅಲ್ಲ. ಒಬ್ಬ ತಂದೆಗೆ ನೂರುಮಂದಿ ಮಕ್ಕಳಿದ್ದು ಅವರಲ್ಲಿ ಒಬ್ಬನು ದುರ್ಮಾರ್ಗಿಯಾಗಿ ೯೯ ಮಂದಿ ಸುಗುಣಾತ್ಮರಾಗಿದ್ದರೂ ಆ ತಂದೆಯ ಮನಸ್ಸು ಆ ಒಬ್ಬನಿಗಾಗಿ ದುಃಖಿಸದೆ ಬಿಡುವುದಿಲ್ಲ. ಹಾಗೆಯೇ ನನ್ನ ಶಿಷ್ಯಸಮುದಾಯವೆಲ್ಲವೂ ಸದ್ವರ್ತನ-ಸದ್ಗುಣಗಳಿಂದಲಂಕೃತರಾಗಿ ನನ್ನನ್ನು ಸಂತೋಷಪಡಿಸುತ್ತಿದ್ದರೂ ಮಾರ್ಗ ತಪ್ಪಿಹೋಗಿರುವ ನಳಿನೀಕಾಂತನೊಬ್ಬನನ್ನು ಕುರಿತು ಅತಿಯಾಗಿ ವ್ಯಾಕುಲಪಡುತ್ತಿರುವುದು. ಅವನೂ ಸನ್ಮಾರ್ಗಕ್ಕೆ ತಿರುಗಿ ಇಂದಿನ ಆನಂದದಲ್ಲಿ ಭಾಗಿಯಾಗಿದ್ದರೆ ನನಗೆ ಕೊರತೆಯೆಲ್ಲಿದ್ದಿತು? (ಭಾಸ್ಕರಾಚಾರ್ಯರ ಕೊರಳು ಕಟ್ಟಿತು.)

ಕಲಾಧವ—ಕೈಜೋಡಿಸಿ-‘ ಗುರುದೇವ ! ಆಜ್ಞಾಧೀನನು, ನಳಿನೀಕಾಂತನ ಉದ್ಧಾರಕಾರ್ಯವಿಚಾರದಲ್ಲಿ ದೀಕ್ಷೆಯನ್ನು ವಹಿಸಲು

ಅಪ್ಪಣೆ ಬೇಡುತ್ತಿರುವನು ” ಎಂದು ನಿವೇದಿಸಿದನು.

ಭಾಸ್ಕರಾ—ಅವನೆಲ್ಲಿರುವನು-ಹೇಗಿರುವನು-ಜೀವಿಸಿರುವನೋ- ಅಥವಾ ಮಾನಭಯದಿಂದ ಆತ್ಮಹತ್ಯೆಮಾಡಿಕೊಂಡನೋ ಇದೊಂದೂ ತಿಳಿಯಲಿಲ್ಲವೇ ವತ್ಸ !

ಕುಮುದ—ನನಗೆ ತಕ್ಕಮಟ್ಟಿಗೆ ತಿಳಿದಿರುವುದು, ಗುರುದೇವ ! ಶ್ರೀ ಪಾದಮಹಿಮೆಯೊಂದು ನಮ್ಮ ಬೆಂಬಲಕ್ಕಿದ್ದರೆ ನಾವಿಬ್ಬರೂ ಸೇರಿ, ನಳಿನೀಕಾಂತನನ್ನು ಪಾದಾಕ್ರಾಂತನಾಗುವಂತೆ ಮಾಡು ವುದಲ್ಲದೆ 'ಬೃಹತ್ಸೇನ'ನೆಂಬ ಮತ್ತೊಬ್ಬನನ್ನು ಕಟ್ಟಿ ಹಿಡಿ ತಂದು ಪಾದಪ್ರದೇಶದಲ್ಲಿ ಕೆಡಹಬೇಕೆಂದು,ಇಂದೇ, ಶಪಥಮಾಡಿ ರುವೆವು. ಸಫಲವಾಗುವಂತೆ ಆಶೀರ್ವದಿಸಿ ಅನುಗ್ರಹಿಸಬೇಕು.

ಭಾಸ್ಕರಾ—ಸುಕುಮಾರರೇ ! ನಿಮ್ಮ ಸಂಕಲ್ಪಕ್ಕೆ ಭಗವಂತನು ಸಹಾ ಯಕನಾಗಲೆಂದಾಶಿಸುವೆನು. ಇಂದಿಗೆ ನಿಮ್ಮ ಗುರುಕುಲವಾಸ, ಶಿಷ್ಯವೃತ್ತಿ, ಬ್ರಹ್ಮಚರ್ಯಗಳ ಸಮಯನಿಬಂಧವು ಪೂರ್ಣವಾದಂ ತಾಯಿತು. ಇಲ್ಲಿ ನೀವು ಮಾಡಬೇಕಾಗಿದ್ದ ಅಭ್ಯಾಸ-ವ್ಯಾ ಸಂಗದಲ್ಲೆಲ್ಲಾ ನೀವು ಐಯ್ವರು (ಎಂದರೆ–ಕಲಾಧವ, ಅಕ್ಷಯ ಪ್ರಭಾಕರ, ಕುಮುದಮಿತ್ರ-ಮಾಧವಮಿತ್ರರು) ಜಯಶಾಲಿಗಳಾಗಿ ಇಂದಿನವರೆಗೆ ನೀವು ಮಾಡಿರುವ ಮನೋಜಯ, ಅಧ್ಯಯನ, ಬ್ರಹ್ಮಚರ್ಯಗಳಿಂದ ನೀವು ಮುಂದೆ ದೃಢಗಾತ್ರರೂ, ಸಮಾಹಿತ ಚಿತ್ತರೂ ದೀರ್ಘಾಯುರಾರೋಗ್ಯಸಂಪನ್ನರೂ ಆಗಿ ಯಾವಜ್ಜೀ ವವೂ ದೇಶ-ಸಮಾಜ-ಧರ್ಮಗಳಿಗೆ ಹಿತವಾಗುವ ಮಹತ್ಕಾರ್ಯ ನನ್ನು ನಿರ್ವಹಿಸಲು ತಕ್ಕಮಟ್ಟಿಗೂ ಸಮರ್ಥತೆಯನ್ನು ಹೊಂ ದಿರುವಿರಿ. ಇನ್ನು ನೀವು ನಿಮ್ಮ ನಿಮ್ಮ ಮಾತಾಪಿತೃ ಬಂಧು ಬಾಂಧವರ ಸಮೀಪವನ್ನು ಸೇರಿ ಅವರ ಅಭೀಷ್ಟಸಿದ್ಧಿಗಾಗಿ ಗೃ

ಹಸ್ಥಾಶ್ರಮ ಸ್ವೀಕಾರಮಾಡಲು ನಿಮಗೆ ಇದೋ ಭಗವತಿಯು ಆಜ್ಞೆಯನ್ನು ಕೊಟ್ಟಿರುವಳು.

ಕಲಾ—ಪೂಜ್ಯಪಾದರೆ! ಈ ದೀನನಿಗೆ ಮಾತಾಪಿತೃ ಬಂಧುಬಾಂಧವರೇ ಮೊದಲಾದ ಸಮಸ್ತರೂತಾವೇ ಆಗಿರುವಿರಿ. ಶ್ರೀ ಪಾದ ಸೇವೆಯೊಂದು ನಿರಂತರವೂ ಲಭಿಸುತ್ತಿದ್ದರೆ ಈ ದೀನನು ಈ ಪರಮಾನಂದದ ಮುಂದೆ ಮತ್ತಾವ ಸುಖವನ್ನೂ ಅಪೇಕ್ಷಿಸು ವವನಾಗಿಲ್ಲ.

ಭಾಸ್ಕರಾ—ವತ್ಸ ನಿನ್ನ ಗುರುಭಕ್ತಿಯು ಅನ್ಯಾದೃಶವಾದುದು ಮಾತ್ರವೇ ಅಲ್ಲ. ನಿನ್ನೀ ಮನೋನಿಗ್ರಹ ಸಾಮರ್ಥ್ಯವೂ ಸದಸದ್ವಿವೇಚನೆಯೂ, ವಿದ್ಯಾರ್ಥಿಲಕ್ಷಣವೂ ಲೋಕಾದರಣೀಯಂಗಳಾಗಿರುವುವು. ಈ ನಮ್ಮ ಶಾಂತಿನಿಕೇತನದ ವಿದ್ಯಾರ್ಥಿಗಳಲ್ಲೆಲ್ಲಾ ನೀನು ನಾಯಕರತ್ನದಂತೆ ಪ್ರಕಾಶಿಸುತ್ತಿರುವೆಯೆಂದೂ, ಇಲ್ಲಿಯ ನಿಯಮಗಳಿಗೂ ಅಧಿಕವಾದ ನಿಯಮದಿಂದ ನೀನು ನಿನ್ನ ಈ ವರೆಗಿನ ಗುರುಕುಲವಾಸವನ್ನು ಸಾಂಗಗೊಳಿಸಿ, ನಿನ್ನ ಸಹಾಧ್ಯಾಯಿಗಳ ಮತ್ತು ಆಚಾರ್ಯರ ಮನಸ್ಸನ್ನು ನಿನ್ನದಾಗಿ ಮಾಡಿ ಕೊಳ್ಳುವವನಾದೆಯೆಂದೂ ತಿಳಿದು, ನಾನು ನಿನ್ನನ್ನು ಮನಃಪೂರ್ವಕವಾಗಿ ಆಶೀರ್ವದಿಸುವುದಲ್ಲದೆ, ಮುಂದೆ ಈ ನಿಕೇತನದ ಕಾರ್ಯನಿರ್ವಾಹಕಸ್ಥಾನದಲ್ಲಿ ನಿನ್ನನ್ನು ನಿಯಮಿಸಬೇಕೆಂದಾಗಿ ರುವ ಭಗವತ್ಪ್ರೇರಣೆಯನ್ನು ನಿನಗಿದೋ ಸೂಚಿಸಿರುವೆನು. (ಎಲ್ಲ ರೂ ಕರತಾಡನ ಮಾಡಿದರು.)

ಕುಮುದಮಿತ್ರ—ಗುರುದೇವ! ಮೇಲಿನ ತಮ್ಮ ಆಜ್ಞೆಯು ನಮಗೆ ಅನುಲ್ಲಂಘ್ಯವು. ಆದರೂ ಶ್ರೀಪಾದ ಸನ್ನಿಧಾನದಲ್ಲಿ ಗೃಹಸ್ಥಾಶ್ರಮ ಸ್ವೀಕಾರದಲ್ಲಿ ಈಗಲೇ ನಮ್ಮನ್ನು ನಿರ್ಬಂಧಿಸಬಾರದೆಂ

ದೂ, ನಾವು ಈಗತಾನೇ ಸನ್ನಿಧಾನದಲ್ಲಿ ಮಾಡಿರುವ ಶಪಥವನ್ನು ಸಫಲಗೊಳಿಸಿಕೊಂಡು ಬರುವವರೆಗೆ, ನಮಗೆ ಇದೇ ಸ್ಥಿತಿಯ ಲ್ಲಿರುವುದಕ್ಕೆ ಅವಕಾಶ ಕೊಡಬೇಕೆಂದೂ ಪ್ರಾರ್ಥಿಸುವೆವು.

ಭಾಸ್ಕರ—ಸಂತೋಷದಿಂದ-"ಸುಕುಮಾರರೇ! ನಿಮ್ಮ ಪ್ರಾರ್ಥನೆಯನ್ನು ನಾವು ಅಂಗೀಕರಿಸಿರುವೆವು. ಅದರಂತೆಯೇ ನಿಮ್ಮೀರ್ವರ ಪ್ರತಿಜ್ಞಾಪಾಲನೆಗಾಗಿ ನಿಮಗೆ ಒಂದು ವರ್ಷದವರೆಗೂ ಅವಕಾಶವನ್ನು ಕೊಟ್ಟಿರುವೆವು. ಅಗತ್ಯವಾದರೆ ನಿಮ್ಮಂತೆಯೇ ಅಕ್ಷಯಕುಮಾರನಿಗೂ ಅದು ಅನ್ವಯವಾದಂತೆ ಭಾವಿಸಬಹುದು.

ಅಕ್ಷಯ—ಸ್ವಾಮಿಜೀ ! ನನ್ನ ಅಭೀಷ್ಟವೂ ಅದೇ ಆಗಿರುವುದು. ನಾವು ಆಯ್ವರೂ ದೇಶಯಾತ್ರಾವ್ಯಾಜದಿಂದ ಉದ್ದೇಶಸಿದ್ಧಿಗಾಗಿ ಹೊರಡ—

ಭಾಸ್ಕರಾ—ಕುಮಾರ ! ಅರ್ಧ್ವರಲ್ಲಿಯೇ ವಾಕ್ಯವನ್ನು ನಿಲ್ಲಿಸುವುದೇಕೆ ? ನಿನ್ನ ಅಭಿಮತವನ್ನು ನಾನು ಅನುಮೋದಿಸಿರುವೆನು. ಹಾಗೆ ಮಾಡುವುದೂ ಈಗ ಅಗತ್ಯವು. ಏಕೆಂದರೆ, ಈ ವರೆಗೆ ನೀವು ಕಠಿಣ ನಿಯಮಗಳಿಂದ ಇತರ ವಿಚಾರಗಳಿಗೆ ಅವಕಾಶವನ್ನು ಕೊಡದೆ ವ್ಯಾಸಂಗಿಸುತ್ತಿದ್ದುದರಿಂದ ಈವರೆಗಣ ನಿಮ್ಮ ಪರಿಶ್ರಮಕ್ಕೆ ದೇಶಸಂಚಾರಮಾಡಿ, ಅಲ್ಲಲ್ಲಿಯ ವಿದ್ಯಮಾನ ವಿಶೇಷಗಳನ್ನು ಸಂಗ್ರಹಿಸಿ, ಆ ಮೂಲಕ ನಿಮ್ಮ ಆಲೋಚನಾಶಕ್ತಿ, ಲೋಕಾನುಭವಗಳು ಹೆಚ್ಚುವಂತೆ ಮಾಡುವುದು ಅಗತ್ಯವು. ಹಾಗೆ ಮಾಡುವುದರಿಂದ ನಿಮ್ಮ ಮನಸ್ಸು ಮತ್ತಷ್ಟು ಉತ್ಸಾಹವನ್ನೂ ಹೊಂದಬಹುದಾಗಿದೆ.

ಗೀತಾಚಾರ್ಯ—ಆಚಾರ್ಯ ! ಶಿಷ್ಯರು ಒಂದುವರ್ಷದೊಳಗಾಗಿ ಹಿಂದಿ

ರುಗಿಬಂದು ತಮ್ಮ ಮುಂದಿನ ಕರ್ತವ್ಯವನ್ನು ಕೈಕೊಳ್ಳುವಂತೆ ಸೂಚಿಸಲು;—

ಭಾಸ್ಕರಾಚಾರ್ಯರು—ಒಮ್ಮೆ ಸುತ್ತಲೂ ನೋಡಿ, ಬಳಿಕ ಮೇಲೆ ನೋಡಿ ಬಳಿಕ ಕೆಲವು ಹೊತ್ತು ಶಾರದಾದೇವಿಯ ಮುಖವನ್ನೇ ದೃಷ್ಟಿಸುತ್ತಿದ್ದು ಅನಂತರ ಶಿಷ್ಯವರ್ಗವನ್ನು ಕುರಿತು ಹೀಗೆ ನಿರೂಪಿಸಿದರು.

"ಸುಕುಮಾರರೇ! ನೀವು ಈಗ ದೇಶಸಂಚಾರಕ್ಕೆ ಹೊರಟಿರುವಿರಿ, ನಿಮ್ಮ ಪ್ರಯತ್ನಕ್ಕೆ ಸರ್ವತೋಮುಖವಾಗಿ ಫಲಗಳುಂಟಾಗುವುದರಲ್ಲಿ ಸಂಶಯವಿಲ್ಲ. ಹಾಗೆ ನೀವು ವಿಜಯೋತ್ಸಾಹದಿಂದ ಬಂದ ಬಳಿಕ ಇಲ್ಲಿ ನಿಮಗಾಗಿ ಕಾದಿರುವ ರತ್ನಗಳನ್ನೂ ನೀವು ಧಾರಣಮಾಡಬೇಕಾದುದು ಅತ್ಯಗತ್ಯವಾಗಿದೆ. ಈ ವಿಷಯದಲ್ಲಿ ನೀವು ಆತಂಕಪಡುವ ಕಾರಣವಿಲ್ಲ. ಆರ್ಯರಾದ ನಮಗೆ ಮಾತೃದೈವವೇ ಪರಮಪೂಜ್ಯವಸ್ತುವೆಂದು ನಮ್ಮ ಶಾಸ್ತ್ರಗಳು ಹೇಳುತ್ತಿರುವುದರಿಂದ ಆ ಮಾತೃವಾಕ್ಯಪರಿಪಾಲನೆಗಾಗಿ ನಾವು ನಿಮ್ಮಲ್ಲಿ ಕಲಾಧವನಿಗೆ ಪೂರ್ಣಕಲೆಯನ್ನೂ ಅಕ್ಷಯಕುಮಾರನಿಗೆ ಶಾರದೆಯನ್ನೂ ಸಹ ಧರ್ಮಚಾರಿಣಿಯರಾಗಿ ಮಾಡಲು ಪ್ರೇರಿತರಾಗಿರುವೆವು. ಮಧುಮಿತ್ರನಿಗೆ ಕುಮುದೆಯೂ ಸಹಧರ್ಮಿಣಿಯಾಗಲು ಅಂದೇ ನಿಶ್ಚಿತವಾಗಿರುವುದು. ಇನ್ನು ಕುಮುದಮಿತ್ರನಿಗೂ ಬೇರೆ ಕಡೆ ಗೊತ್ತಾಗಿಯೇ ಇರುವುದು. ನಮಗೆ ನಮ್ಮ ಮಾತೃವಾಕ್ಯವು ಹೇಗೆ ಮಾನ್ಯವೋ-ಹಾಗೆಯೇ ನಿಮಗೆ ನಮ್ಮ ಆಜ್ಞೆಯು ಅನುಲ್ಲಂಘನೀಯವಾಗಿರುವುದು.

(ನೆರದೆದ್ದವರೆಲ್ಲರೂ ಮತ್ತೊಮ್ಮೆ ಕರತಾಡನ ಮಾಡಿದರು.)

ಅಕ್ಷಯ ಕಲಾಧವರು ಮರುನುಡಿಯಿಲ್ಲದೆ ನಿಂತಿದ್ದರು—

ಪ್ರಭಾಕರ—ಗುರುದೇವ! ನಮ್ಮ ಸಹಾಧ್ಯಾಯಿಗಳಿಗೆ ದೇಶಯಾತ್ರೆ

ಗಾಗಿ ಅಜ್ಞೆಯಿತ್ತುದರಲ್ಲಿ ನನಗೂ ಅಜ್ಞೆಯಾಯ್ತೆಂದು ಭಾವಿಸಿರುವೆವು. ನಾನೂ ಸನ್ನಿಧಿಯ ಆಶೀರ್ವಾದವನ್ನು ಪಡೆದು ನಮ್ಮ ಸಹಾಧ್ಯಾಯಿಗಳ ಪ್ರತಿಜ್ಞಾ ಪರಿಪಾಲನೆಯಲ್ಲಿ ಪಾಲುಗಾರನಾಗಿ ಹೋಗಿ ನಿಲ್ಲಲು ಸಂಕಲ್ಪಿಸಿರುವೆನು. ಆದರೆ, ಗುರುಮಹಾರಾಜ ! ಅಪ್ಪಣೆಯಾಗಬೇಕು, ಗುರುದಕ್ಷಿಣೆಯಾವುದೆಂಬುದನ್ನೂ—

ಭಾಸ್ಕರಾ—ತಿರುನಗೆಯಿಂದ—'' ವತ್ಸ ! ಪ್ರಭಾಕರನೆಂಬ ನಿನ್ನ ನಾಮವು ನಿನ್ನೀಪ್ರತಿಭೆಯಿಂದ ಅನ್ವರ್ಥನಾಮವೆನ್ನಿಸಿರುವುದು. ಪ್ರತಿಭಾಸಂಪನ್ನನಾದ ನಿನ್ನ ಸಹಾಯವು ನಿನ್ನ ಸಹಾಧ್ಯಾಯಿಗಳಿಗೆ ಮಾತ್ರವೇ ಅಲ್ಲ; ನಮಗೂ ಅವಶ್ಯಕವಾಗಿರುವುದು. ಆಗಲಿ, ಕುಮಾರ ! ಗುರುದಕ್ಷಿಣೆಯೇನೆಂದೆಯಲ್ಲವೆ ? ಆಗಲಿ, ಗುರುದಕ್ಷಿಣೆಗಾಗಿ ಹಿಂದೆ ಕೃಷ್ಣದೇವನು ಸಾಂದೀಪನಿಗೆ ಮೃತಪುತ್ರನನ್ನು ಪುನಃ ತಂದಿತ್ತನು. ಪಾರ್ಥನು ಪಾಂಚಾಲರಾಯನನ್ನು ಗುರುದ್ರೋಣನ ಮಂಚದ ಕಾಲಿಗೆ ಬಿಗಿದು ಹಾಕಿದನು. ನೀವು ನಮಗೆ ಸಲ್ಲಿಸಬೇಕಾಗಿರುವ ಗುರುದಕ್ಷಿಣೆಯೆಂದರೆ ಹಿಂದೆ ಹೇಳಿದ ಕಾರ್ಯವಲ್ಲದೆ ಮುಖ್ಯವಾದುದಿಷ್ಟು—

* " ಆತ್ಮಾನಂ ರಥಿನಂ ವಿದ್ಧಿ | ಶರೀರಂ ರಥಮೇವತು | ಬುದ್ಧಿಸ್ತು ಸಾರಥಿಂ ವಿದ್ಧಿ | ಮನಃಪ್ರಗ್ರಹಮೇವಚ || ಇಂದ್ರಿಯಾಣಿ

---

* ಆತ್ಮನೇ ರಥಿಕನಾಗಿಯೂ, ಶರೀರವೇ ರಥವಾಗಿಯೂ ಬುದ್ಧಿಯೇ ಸಾರಥಿಯಾಗಿಯೂ ಮನಸ್ಸೇ ಸಾರಥಿಯ ಕೈ ಹಗ್ಗವಾಗಿಯೂ ತಿಳಿಯಬೇಕು. ಹಾಗೆಯೇ ಇಂದ್ರಿಯಗಣವೇ ಅಶ್ವವಾಗಿಯೂ ವಿಷಯವ್ಯೂಹವೇ ಅವುಗಳ ಪಥವಾಗಿಯೂ ತಿಳಿಯಬೇಕು. ಮತ್ತು ಶರೀರ ಮನೋ ಬುದ್ಧಿಗಳಿಂದ ಕೂಡಿದ ಆತ್ಮನೇ ಭೋಗಕರ್ತೃವಾಗಿ

ಗೀತಾಚಾರ್ಯರನ್ನು ಸದಸದ್ವಿವೇಚನೆಯ ಸಾರಥಿಯಾಗಿಯೂ, ಕಲಾಧವ ಪ್ರಭೃತಿಗಳನ್ನು ರಥಾಶ್ವಗಳೆಂದೂ ಭಾವಿಸಿರಿ. ಅಲ್ಲಿಂದ ಮುಂದೆ ಬಂದರೆ, ಜ್ಞಾನಕ್ಕೆ ಅಧಿದೇವತೆಯಾದ ಶ್ರದ್ಧೆಯೇ ಗುರುವರ್ಯರ ಮಾತೃದೇವತೆಯೆಂದೂ, ಶ್ರದ್ಧಾ ಜ್ಞಾನಲಾಭದಿಂದ ದೊರೆಯುವ ಆನಂದ ಸುಧಾರಸವೇ ಗುರುಪುತ್ರಿ ಪೂರ್ಣಕಲೆಯೆಂದೂ ಸುಧಾಸೌರಭ್ಯ-ಮಾಧುರ್ಯಗಳೇ ಶಾರದಾ-ಕುಮುದೆಯರೆಂದೂ ಭಾವಿಸಿರಿ, ಮತ್ತು ವಿಜ್ಞಾನವನ್ನು ಗ್ರಹಣ ಮತ್ತು ಅವಧಾರಣ ಶಕ್ತಿಯು ಅನುಸರಿಸಿರುವುದೆಂದೂ, ಸದಸದ್ವಿವೇಚನೆಯನ್ನು ಶಾಂತಿಯು ಆಶ್ರಯಿಸಿರುವನೆಂದೂ ಧೃತಿಯು ಇವೆಲ್ಲವನ್ನೂ ಆಶ್ರಯಿಸಿರುವುದೆಂದೂ ಇವೆಲ್ಲವನ್ನೂ ಆಶ್ರಯಿಸಿ ಜೀವಿಸುವದು ಭಕ್ತಿಯೆಂದೂ ತಿಳಿಯಿರಿ. ಆಗಲೇ ನಿಮಗೆ ರೋಹಿಣೀದೇವಿ, ಶಾಂತೀದೇವಿಯರು ತಾರಾಕಾಂತ ಗೀತಾಚಾರ್ಯರ ಅರ್ಧಾಂಗಿಯರಾಗಿರುವುದರ ಮತ್ತು ಸತೀಮಣಿಯು ಇವರ ಸಖ್ಯವನ್ನು ಹೊಂದಿರುವದರ ತತ್ವವನ್ನೂ ನೀವು ತಿಳಿಯುವಿರಲ್ಲದೆ, ಈ ಶಾಂತಿನಿಕೇತನದ ಗುರುಪ್ರಭೃತಿ-ಶಿಷ್ಯರವರೆಗೆ - ಎಲ್ಲರನ್ನೂ ಸೇವಿಸುತ್ತಿರುವ ನನ್ನನ್ನೇ ದಾಸಾನುದಾಸನಾದ ಭಕ್ತಿಯೆಂದೂ ತಿಳಿಯಬಲ್ಲಿರಿ. ಮತ್ತೇನುಹೇಳಲಿ, ಪ್ರಿಯರೇ! ನನ್ನ ಈ ವಯಸ್ಸಿನಲ್ಲಿ ನಾನು ಸುತ್ತದೆ, ನೋಡದೆ, ವಿಚಾರಿಸದೆ ಬಿಟ್ಟಿರುವ ಸ್ಥಳವು ಬಹುಶಃ ನಮ್ಮ ಆರ್ಯಾವರ್ತದಲ್ಲಿರಲಾರದು. ಆದರೆ, ಅಲ್ಲೆಲ್ಲಿಯೂ ನನ್ನ ಮನಸ್ತೃಪ್ತಿಯಾಗುವ ಶಾಂತಿಸುಧಾರಸವು ನನಗೆ ಲಭಿಸಲಿಲ್ಲವಾದುದರಿಂದ ನಾನಿಲ್ಲಿಗೆ ಬಂದು ನೆಲಸಿದೆನು. ಇಲ್ಲಿ ನನಗೆ ಯಥೇಷ್ಟವಾದ ಶಾಂತರಸವು ಲಭಿಸುತ್ತಿರುವುದು. ಈ ನನ್ನ ಬ್ರಹ್ಮಾನಂದದಲ್ಲಿ ನೀವೂ ಭಾಗಿಗಳಾಗಬೇಕಾಗಿದ್ದರೆ, ಎಲ್ಲಿ? ನಮ್ಮ ಪ್ರಿಯ ಶಾಂತಿನಿಕೇತನ ಶಿಷ್ಯರೇ! ಭಗವತೀ ವಾಗ್ದೇವಿಯನ್ನು ಸಾಕ್ಷಿಯಾಗಿಟ್ಟು, ತ್ರಿಜಗತ್ಪಾವನನಾದ-ಪರಂಜ್ಯೋತಿಸ್ವರೂಪಿಯಾದ-ಕರ್ಮಸಾಕ್ಷಿಯನ್ನು ಸಾ